ಜಯಂತಿ

೨೦ನೆಯ ಸಂಚಿಕೆ

ಕನ್ನಡಿಗರಿಗೆ ತನ್ನ ೨೦೦ ಸಂಚಿಕೆಗಳನ್ನು ಸಮರ್ಪಿಸಿದ ಜಯಂತಿ
ಎಲ್ಲ ಓದುಗರ ಒಲವಿನ ಪರಕೆ-ಪ್ರಾರ್ಥನೆಗಳನ್ನು ಕೋರುವುದು.

ಕೂಡಿಂಬೀ ಬಾಳುನ— ಕೂಡಿಯೀ ತಿನ್ನುನ—
ಕೂಡಿಂಬೀ ಪುರುಳುಳ್ಳ ಕಾರ್ಯಗಳಂ ಗೆಯ್ಯುನ—
ಪಡಮುದಲ್ಲನ್ನು ಬೆಳಕಿನಿಂದ ಕೂಡಿರಲಿ....
ನಮ್ಮೊಳಂದೂ ದ್ವೇಷ ಸುಳಿಯದಿರಲಿ!
ಇದುವೆ ಶಾಂತಿಯ ದಾರಿ, ಇದುವೆ ಕಾಂತಿಯ ದಾರಿ,
ಬರೆಯುವೆನೆ ಕೃತಿನಾಗೆ ಸಾರಿ ಸಾರಿ!

ಭದ್ರಂ ತುಭ್ಯಂ ಮಂಗಲಂ!

ಈ ಸಂಚಿಕೆಯಲ್ಲಿ :

●

ಜಯಂತಿಯ ೨೦೦ನೆಯ ಸಂಚಿಕೆ (ಸಂಪಾದಕೀಯ)

ಸಂಪಾದಕರು ೨೮೫

ಸರ್ವಧರ್ಮ ಸಮ್ಮೇಳನ (ವಿಚಾರಪ್ರಚೋದಕ ವರದಿ)

ಶ್ರೀಮತಿ ಸರೋಜಿನಿ ಮಹಿಷಿ ಎಂ. ಎ. ಬೆಳಗಾಂವಿ ೨೮೭

ಹಡೆದು ಬಂದಿರಬೇಕು (ಒಂದು ಸಾಮಾಜಿಕ-ರೂಪಕ)

ಶ್ರೀ. ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ ೨೮೯

ಅತಿಯು ಬಹೆನು (ಕವನ)

ಶ್ರೀ. ಎಂ. ಗೋಪಾಲಕೃಷ್ಣಭಟ್ಟ, ನೀರ್ಚಾಲ (ದ. ಕ.) ೩೦೩

ವಿದ್ಯಾಪೀಠ (ಕವನ)

ಶ್ರೀ. ಎನ್. ಎಸ್. ಗದಗಕರ ಬಿ ಎ ಧಾರವಾಡ ೩೦೩

ಕ್ರಾಂತಿಕಾರಿ ವಾಲ್ಟೇಯರ್ (ವ್ಯಕ್ತಿಪರಿಚಯ)

ಶ್ರೀ. ಬ. ಲ. ನೆಲ್ಲಿ, ಮಣಿಪಾಳ (ದ. ಕ.) ೩೦೪

ಆರು ? ? (ಕವನ)

ಶ್ರೀ. ಉಳುವೀಶ (ಕಿತ್ತೂರನಾಡು) ೩೦೯

ಹೃದಯದ ಹಂಬಲ (ನೆನಹುಗಳು)

ಶ್ರೀ. ಬಳ್ಳೂರ ಸುಬ್ಬರಾಯ ಅಡಿಗ, ಗಂಗೊಳ್ಳಿ ೩೧೦

ವಿಜ್ಞಾನಮಯಕೋಶ (ಆಧ್ಯಾತ್ಮಿಕ ಪ್ರಬಂಧ)

ಶ್ರೀ. ಆರ್. ಜಿ. ಕುಲಕರ್ಣಿ (ಬೆನಕಟ್ಟಿ) ಬಿ. ಬಿ. ಎ. ಧಾರವಾಡ ೩೧೫

ಹನ-ಆ-ನೋ (ಸಣ್ಣಕತೆ)

ಶ್ರೀ. ವೆಂ. ಮು: ಜೋಶಿ, ಧಾರವಾಡ ೩೧೯

—ಗೆ; (ನವ್ಯಕವನ)

ಶ್ರೀ. ಶಾಂತಿನಾಥ ದೇಸಾಯಿ ಎಂ. ಎ. ಮುಂಬಯಿ ೩೨೪

ಸಾದರ ಸ್ವೀಕಾರ .... ಕವರಿನ ೩ನೆಯ ಪುಟ

ಜಯಂತಿ

ಸಂಪುಟ ೧೭ ಸಂಚಿಕೆ ೬

ಕುಟುಂಬದಲ್ಲಿಯ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ವ್ಯವಸ್ಥಾಪಕರು:
ಮತ್ತು
ಪ್ರಕಾಶಕರು:
ಶ್ರೀ. ಡಿ. ಶರತ್‌ಕುಮಾರ

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೬ ಆಣೆ

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

●

ಜಯಂತಿಯ ೨೦೦ನೆಯ ಸಂಚಿಕೆ

ಇದೀಗ ಜಯಂತಿಯ ೨೦೦ನೆಯ ಸಂಚಿಕೆಯನ್ನು ಅದರ ವಾಚಕವರ್ಗದ ಕೈಯಲ್ಲಿರಿಸಲು ಒಂದು ಬಗೆಯಿಂದ ಸಮಾಧಾನವೆನಿಸುತ್ತದೆ. ಒಬ್ಬರೇ ಸಂಪಾದಕರ ಕೈಯಲ್ಲಿದ್ದು ೨೦೦ನೆಯ ಸಂಚಿಕೆಯನ್ನು ಕಂಡ ಕನ್ನಡ ಮಾಸಪತ್ರಿಕೆಯೆಂದರೆ ಜಯಂತಿ ಒಂದೇ ಒಂದು— ಎಂದು ಹೇಳಿದರೆ ತಪ್ಪೇನೂ ಎನಿಸದೆಂದು ತೋರುವುದು. ಜಯಂತಿಯನ್ನು ನಡಿಸಿಯೆ ತೀರಬೇಕೆಂದು ದೃಢಸಂಕಲ್ಪ, ಚಲಗಾರಿಕೆಗಳು ಸಂಪಾದಕರಲ್ಲಿ ಇಲ್ಲದೆ ಹೋಗಿದ್ದರೆ, ಇದು ಅಸ್ತವಾಗಿ ಎಷ್ಟೋ ವರ್ಷಗಳಾಗಬಹುದಾಗಿತ್ತು.

ಜಯಂತಿ ಹುಟ್ಟಿದ ಮೂರನೆಯ ವರ್ಷದಲ್ಲಿಯೆ ಪ್ರಪಂಚದ ಮಹಾಯುದ್ಧ ಪ್ರಾರಂಭವಾಯಿತು. ಪತ್ರಿಕೆಗಳ ಮುಖ್ಯೋಪಕರಣವಾದ ಕಾಗದಕ್ಕೇ ತತ್ವಾರ ಬಂದು ಕುಳಿತಿತು. ಆಹಾರದ ಮುಗ್ಗಟ್ಟಿನಿಂದ ಜೀವನದ ವೆಚ್ಚವು ೧೫೫ ರಷ್ಟು ಹೆಚ್ಚಿದುದರಿಂದ, ಪತ್ರಿಕೆಯ ಮಿಕ್ಕ ಎಲ್ಲ ಸಲಕರಣೆಗಳ ಬೆಲೆಯೂ ಏರಿನಿಂತಿತು. ಅಂತಹ ವಿಪತ್ತಿನಿಂದಲೂ ಜಯಂತಿ ದಾಟಮುಂದೆ ಹೆಜ್ಜೆ ಇರಿಸಿತು. ಆದರೆ ಸಂಪಾದಕರ ತಲೆಯ ಮೇಲೆ ಆರ್ಥಿಕ ಭಾರವನ್ನೇನೋ ಸಾಕಷ್ಟು ಹೊರಿಸಿತು.

ಯುದ್ಧ ನಿಂತುಹೋಯಿತು. ಭಾರತಕ್ಕೆ ಸ್ವಾತಂತ್ರ್ಯ ಬಂದಿತು. ಅದರೊಂದಿಗೆ ನಾಡಿಗರ ಆರ್ಥಿಕ ಬಿಕ್ಕಟ್ಟು ಹೆಚ್ಚುತ್ತ ನಡೆಯಿತು. ಯುದ್ಧ ನಿಂತಮೇಲೆ ಒಳ್ಳೆಯ ಕಾಲವನ್ನು ಕಂಡೇನೆಂಬ ಜಯಂತಿಯ ನಿರೀಕ್ಷೆ ಸಂಪೂರ್ಣ ಸುಳ್ಳಾಗಿ ಹೋಯಿತು. ಇತ್ತೀಚೆಗೆ ಪತ್ರಿಕೆಗಳಿಗೆ ಬೇಕಾಗುವ ಸಲಕರಣೆಗಳ ಬೆಲೆಯು ತಗ್ಗಿದೆಯಾದರೂ, ಅದರೊಂದಿಗೆ ಜಯಂತಿಯಂತಹ ಪತ್ರಿಕೆಗಳನ್ನು ಕೊಂಡು ಓದುವವರ ಸಂಖ್ಯೆಯೂ ತಗ್ಗುತ್ತ ನಡೆದಿರುವುದು ದುರ್ದೈವದ ಸಂಗತಿಯಾಗಿದೆ.

ಜಯಂತಿಯನ್ನು ಕೊಂಡು ಓದುವ ವಾಚಕವರ್ಗ ಇಲ್ಲವೇ ಇಲ್ಲವೆಂದಲ್ಲ. ಇರುವಷ್ಟು ಜನರು ಜಯಂತಿಯನ್ನು ತುಂಬ ಪ್ರೀತಿಸುತ್ತಾರೆ. ಇದು ಬಹುಕಾಲ ಬಾಳಬೇಕೆಂದು ಮನವಾರೆ ಅಪೇಕ್ಷಿಸುತ್ತಲೂ ಇದ್ದಾರೆ. ಆದರೆ ಈ ಜನರಷ್ಟೇ ಕೊಡುತ್ತಿರುವ ಹಣವು ಜಯಂತಿಯ ಹೊಟ್ಟೆಬಟ್ಟೆಗೆ ಸಾಲದಂತಾಗಿದೆ. ಈ ಮಾತನ್ನು ಆಗಾಗ ಕನ್ನಡಿಗರೆದುರು ಇಡುತ್ತಲೇ ಬಂದಿದ್ದೇನೆ. ಅದರೂ ನಮ್ಮ ಕೂಗು ಕಾಡಿನೊಳಗಿನ ಕೂಗೇ ಆಗಿದೆ

'ಕನ್ನಡದಲ್ಲಿಯ ಒಂದು ಒಳ್ಳೆಯ ಪತ್ರಿಕೆ ಜಯಂತಿ' ಎಂದು ಬಹುಜನ ಕನ್ನಡಿಗರು ಒಪ್ಪುತ್ತಾರೆ. ಆದರೆ ಆ ಒಳ್ಳೆಯ ಪತ್ರಿಕೆಯು ಒಳ್ಳೆಯ ರೀತಿಯಿಂದ ಬದುಕುವ ಬಗೆಯನ್ನು ಕುರಿತು ಯಾರೂ ವಿಚಾರ ಮಾಡುತ್ತಿಲ್ಲವೆಂಬುದು ನಮ್ಮ ಅನುಭವದ ಸಂಗತಿಯಾಗಿದೆ. ಮೊದಲಿನಿಂದ ಇಲ್ಲಿಯ ವರೆಗೆ, ನಮ್ಮ ಅನೇಕ ಏಜಂಟರು ಮುಳುಗಿಸಿಕೊಂಡು ಹೋದ ಹಣವು ೩೫೦೦ ರೂಪಾಯಿಗಳನ್ನು ಮಿಕ್ಕುವುದು. ಚಂದಾದಾರರಾಗಿ ಇದ್ದು ವರ್ಷದ ೧೨ ಸಂಚಿಕೆಗಳನ್ನೂ ಪಡೆದ ಅನೇಕ ಜನರು ಹಣ ಕೊಡದೆ ಹೋದುದರಿಂದ, ಜಯಂತಿ ಸುಮಾರು ೨೦೦೦ ರೂ. ಗಳಿಗೆ ಎರವಾಗಬೇಕಾಯಿತು. ಜಾಹಿರಾತುಗಾರರು ಇದುವರೆಗೂ ಕೊಡದೆ ಇರುವ ಹಣವು ೨೦೦೦ ರೂಪಾಯಿಗಳಷ್ಟಿದೆ. ಇವೆಲ್ಲ ಸಕಾಲಕ್ಕೆ ನಮಗೆ ಬರುತ್ತ ಹೋಗಿದ್ದರೆ, ಜಯಂತಿಯ ತಲೆಯ ಮೇಲೆ ಭಾರವಾಗಿ ನಿಂತ ಆರ್ಥಿಕ ನಷ್ಟವು ಅದೆಷ್ಟೋ ಕಡಿಮೆಯಾಗಬಹುದಿತ್ತು. ಆದರೆ ಅದು ಬರಲಿಲ್ಲ- ವಿಷ್ಟೇ ಅಲ್ಲ; ಬರುವ ಆಶೆಯನ್ನೂ ಉಳಿಸಿಲ್ಲ.

ಹುಟ್ಟಿ ಇಷ್ಟು ವರ್ಷಗಳ ವರೆಗೆ ಕಾರ್ಯಮಾಡಿರುವ ಜಯಂತಿಯಂತಹ ಪತ್ರಿಕೆಯು ಇನ್ನು ಮುಂದೆಯೂ ಬಹುಕಾಲ ಬದುಕಿ ಕಾರ್ಯಮಾಡುತ್ತಿರಬೇಕೆಂದು ನಮ್ಮ ಅಪೇಕ್ಷೆ

ಜಯಂತಿ ನಿಂತುಹೋದರೆ, ಕನ್ನಡದಲ್ಲಿ ಮತ್ತೆ ಈ ಬಗೆಯ ಪತ್ರಿಕೆಯು ಹುಟ್ಟುವುದಕ್ಕೆ ಎಷ್ಟು ಕಾಲ ಬೇಕೋ ಏನೋ! ಇದ್ದುದನ್ನು ಕಳೆದು ಕೊಂಡು ಇನ್ನೊಂದರ ದಾರಿಯನ್ನು ನೋಡುತ್ತ ಕುಳಿತುಕೊಳ್ಳುವು ದಕ್ಕಿಂತ, ಇದ್ದುದರ ಯೋಗಕ್ಷೇಮವನ್ನು ಸರಿಯಾಗಿ ನೋಡಿ, ಅದಕ್ಕೇ ಜೀವನವನ್ನು ಎರೆಯುವುದು ಬುದ್ಧಿವಂತಿಕೆಯ ಲಕ್ಷಣವಾಗಿದೆ. ಈ ಮಾತನ್ನು ಕನ್ನಡ ವಾಚಕವರ್ಗದವರೆಲ್ಲ ಮನನಮಾಡಿಕೊಂಡು ಜಯಂತಿಗೆ ಸಹಕಾರಹಸ್ತವನ್ನು ನೀಡಬೇಕಾಗಿ ಬೇಡುವೆವು.

ಜಯಂತಿಯ ಸಂಪಾದಕರು ತುಂಬುಗೈಯವರಾಗಿದ್ದರೆ ಜನತೆ-ಯೆಮರು ಹೀಗೆ ಆಗಾಗ ಆಕ್ರೋಶ ಮಾಡಿಕೊಳ್ಳಬೇಕಾದ ಕಾರಣವೇ ಇರಲಿಲ್ಲ. ಈ ಹದಿನೇಳು ವರ್ಷಗಳಲ್ಲಿ ಜಯಂತಿಗಾಗಿಯೆ ಅವರು ಬರಿಗೈಯವರಾಗಿದ್ದಾರೆ. ಮನೆಯಲ್ಲಿ ಮಧ್ಯಾಹ್ನದ ಯೋಚನೆಯನ್ನು ಮರೆತು ಜಯಂತಿಯ ಮುದ್ರಣವೆಚ್ಚವನ್ನು ನೋಡಿಕೊಂಡಿದ್ದಾರೆ. ಮಕ್ಕಳು-ಮರಿಗಳ ಬಟ್ಟೆಯ ಚಿಂತೆಯನ್ನು ಮರೆತು ಜಯಂತಿಯ ಕಾಗದ-ಹೊದಿಕೆಗಳ ಹೊಂದಿಕೆಯನ್ನು ಮಾಡಿದ್ದಾರೆ. ಎಂತಲೆ ಅದು ತನ್ನ ೨೦೦ನೆಯ ಸಂಚಿಕೆಯನ್ನು ಕಂಡಿತು. ಜಯಂತಿಯ ಬದುಕು ಅವಶ್ಯವೆಂದು ಭಾವಿಸುವ ಕನ್ನಡಿಗರೆಲ್ಲರೂ ಇನ್ನು ಹಚ್ಚುಕಾಲ ಪರೀ-ಕ್ಷೆಯನ್ನು ಮಾಡದೆ, ಸಂಪಾದಕರ ಆರ್ಥಿಕ ಹೊಣೆಗಾರಿಕೆಯನ್ನು ಕಡಿಮೆಮಾಡಲು ಮುಂದೆ ಬರಬೇಕು.

ಜಯಂತಿ ನಿಜವಾಗಿಯೂ ಸಾಮಾಜಿಕಪ್ರಜ್ಞೆಯನ್ನು ಇರಿಸಿ-ಕೊಂಡು ಕೆಲಸ ಮಾಡಲು ಬಯಸುತ್ತಿದೆ. ಸಮಾಜದ ಸುಖ-ಸಮಾ-ಧಾನಗಳೇ ಇದರ ಮುಖ್ಯೋದ್ದೇಶವಾಗಿವೆ. ವ್ಯಕ್ತಿಯು ಸಾಮಾನ್ಯ ಮನೋವೃತ್ತಿಗಳನ್ನು ಕೆರಳಿಸುವ ವಿಕೃತವಿಚಾರಗಳನ್ನೂ ಮಾದಕ ಭಾವನೆಗಳನ್ನೂ ಹರಡುವ ಕೆಲಸ ಮಾಡಿದ್ದರೆ, ಜಯಂತಿ ಸಾಕಷ್ಟು ಹಣವನ್ನೂ ಗಳಿಸಬಹುದಾಗಿತ್ತು. ಅದರೆ ಅಂತಹ ವ್ಯಭಿಚಾರವೃತ್ತಿ-ಗಿಳಿದು ಸಮಾಜದ ದ್ರೋಹವನ್ನು ಕಟ್ಟಿಕೊಳ್ಳಲು ಅದರ ಸಂಸ್ಕೃತಿಯು ಎಂದೂ ಒಪ್ಪಿಗೆಯನ್ನು ಕೊಡದು. ಮಿಳ್ಳೆಯಷ್ಟೇ ಇರಲಿ, ಒಳ್ಳೆಯ ಜೀವಸತ್ತ್ವಯುಕ್ತ ಹಾಲನ್ನೇ ಅದು ಜನತೆಗೆ ಒದಗಿಸ ಬೇಕೆನ್ನುವುದು. ಜನತೆಯ ಮನಸ್ಸಿನ ಆರೋಗ್ಯವನ್ನು ಕೆಡಿಸುವಂತಹ ಸಾಹಿತ್ಯವು ಸಾಹಿತ್ಯವೇ ಅಲ್ಲವೆಂಬುದು ಮೊದಲಿನಿಂದಲೂ ಜಯಂತಿಯ ಘೋಷಣೆಯಾಗಿದೆ. ತನ್ನ ಘೋಷಣೆಯಂತೆಯೆ ಅದು ನಡೆದು-ಕೊಂಡು ಬಂದಿದೆ.

ವಾತಾವರಣದಲ್ಲಿ ಎಂತಹ ವಿಷಗಾಳಿಯು ಬೀಸಿದೆಯೋ ಏನೋ! ವ್ಯಕ್ತಿ-ವ್ಯಕ್ತಿಗಳ ಮನದಲ್ಲಿಯೂ ಇಂದು ಸ್ವಾರ್ಥ-ಸ್ವೈರವೃತ್ತಿಗಳು ತಲೆಯೆತ್ತಿನಿಂತಿವೆ. ಇದರಿಂದ ನಮ್ಮ ಸಾಮಾಜಿಕ ಭದ್ರತೆಗೆ ಸ್ಥೈರ್ಯವೆ ಇಲ್ಲದಂತಾಗಿದೆ. ಇಂತಹ ಕಾಲದಲ್ಲಿ ಸಾಹಿತ್ಯಕರೆನಿಸಿಕೊಳ್ಳುವವರು ಭೂತ-ವರ್ತಮಾನ-ಭವಿಷ್ಯತ್ತುಗಳ ಪ್ರಜ್ಞೆಯನ್ನು ಇಟ್ಟುಕೊಂಡು, ವ್ಯಕ್ತಿಗಳಿಗೆ ಸಂಯಮವನ್ನು ಕಲಿಸುವಂತಹ ಸಾಹಿತ್ಯವನ್ನು ನಿರ್ಮಿಸ ಬೇಕೇ ಹೊರತು, ವ್ಯಕ್ತಿ-ವ್ಯಕ್ತಿಗಳ ಸ್ವಾರ್ಥ-ಸ್ವೈರವೃತ್ತಿಯ ಬೆಂಕಿಗೆ ಹುಲ್ಲನ್ನು ಒಗೆಯುವಂತಹ ಸಾಹಿತ್ಯವನ್ನು ನಿರ್ಮಿಸಕೂಡದು. ಕೆಟ್ಟ ಕಾಲ! ಸಮಾಜಕಲ್ಯಾಣಕಾರಿಯಾದ ಕಲೆಗಳೂ ಇಂದು ಹಣ ಗಳಿ-ಸುವ ದುರ್ವ್ಯವಹಾರಕ್ಕೆ ನಿಂತುಬಿಟ್ಟಿವೆ. ಸಮಾಜದಲ್ಲಿಯ ವ್ಯಕ್ತಿಗಳ ಅಶಕ್ತತೆ-ಅಜ್ಞಾನಗಳೊಂದಿಗೆ ಆಟವಾಡಿ ಅವು ಹಣವನ್ನು ಸೆಳೆಯು-ತ್ತಿವೆ. ಅವುಗಳ ಈ ವ್ಯವಹಾರ, ವ್ಯಕ್ತಿಯನ್ನು ನೈತಿಕದೃಷ್ಟಿಯಿಂದ ಪಾತಾಳಖಾತಕ್ಕೆ ಹಾಕುತ್ತಿರುವುದಲ್ಲದೆ, ಸಮಾಜದ ಅಶಾಂತಿ ಅಸ್ಥಿ-ಮಾಧ್ಯಾನಗಳಿಗೂ ಕಾರಣವಾಗುತ್ತಿದೆ. ಜಯಂತಿ ಇಂತಹ ದುರ್ವ್ಯವ-ಹಾರಗಳನ್ನು ತಡೆಗಟ್ಟಲು ಹೆಣಗಿಸುತ್ತಿದೆ. ಎಂತಲೇ ಅದು ಅನೇ-ಕರ ಕೋಪ-ಶಾಪಗಳಿಗೂ ಪಾತ್ರವಾಗಿ ನಿಂತಿದೆ.

ಇಂತಹರ ಕೋಪ-ಶಾಪಗಳೂ ಜಯಂತಿಯ ದಾರಿಯಲ್ಲಿ ಅಗಾಗ ಮುಳ್ಳು-ಕಲ್ಲುಗಳನ್ನು ಚೆಲ್ಲುತ್ತಲಿವೆ; ಅದರ ಮಾರ್ಗವನ್ನು ದುರ್ಗಮಗೊಳಿಸುತ್ತಲಿವೆ. ಆದರೆ ತನ್ನಲ್ಲಿ ಶಕ್ತಿ ಇದ್ದಷ್ಟು ದಿನವೂ ಜಯಂತಿ ಮುಂದುವರಿದು ಸಮಾಜದ ಕಲ್ಯಾಣದ ಮಾತುಗಳನ್ನು ಸಾರುತ್ತಿರುವುದು. ಜನತೆಯ ಔದಾಸೀನ್ಯ-ಉಪೇಕ್ಷೆಗಳಿಂದ ಅದರ ಶಕ್ತಿ ಪ್ರಗತಿಗಳೇ ನಿಂತುವೊ, ನಿರುಪಾಯ—ಎಂದು ಜಯಂತಿಯ ಕಲ್ಯಾಣವಾಣಿಗಳೂ ಕೇಳದೆ ಹೋಗಬಾರದು.

ಜಯಂತಿ ಹಳೆಯದನ್ನೇ ಹೇಳುತ್ತ ಹೋಗುವ ಮುಗ್ಧ ಸಂಪ್ರ-ದಾಯವಾದಿಯೂ ಅಲ್ಲ; ಸಂಯಮರಹಿತ ಜೀವನವನ್ನು ಪುರಸ್ಕರಿಸಿ ಸಾರುತ್ತ ಹೋಗುವ ಅಂಧಕ್ರಾಂತಿಕಾರಿಯೂ ಅಲ್ಲ. ಸರ್ವೋ-ದಯದ ಸಮನ್ವಯದೃಷ್ಟಿ ಜಯಂತಿಯದು. ತರ್ಕಶುದ್ಧವಾದ ದೇಶಕಾಲೋಚಿತ ನೈತಿಕತತ್ತ್ವದ ಪ್ರಚಾರವೇ ಅದರ ಉದ್ದೇಶವಾಗಿ-ರುವುದು. ಜೀವನದಲ್ಲಿ ಸುಖ-ಶಾಂತಿಗಳನ್ನು ಬಯಸುವ ಮನೆತನದ ಜನರೆಲ್ಲರೂ, ಜಯಂತಿಯ ಈ ಉದ್ದೇಶವನ್ನು ಮನದಂದು ಅದರ ಕಾರ್ಯಕ್ಕೆ ಸರಿಯಾದ ಸಹಕಾರವನ್ನು ನೀಡಬೇಕು.

ಈ ಸಂಚಿಕೆಯನ್ನು ಒಂದು ವಿಶಿಷ್ಟ ಸಂಚಿಕೆಯನ್ನಾಗಿಯೆ ಪ್ರಕ-ಟಿಸಬೇಕೆಂದು ನಮ್ಮ ಆಪೇಕ್ಷೆಯಿದ್ದಿತು. ಆದರೆ ಆರ್ಥಿಕ ಅನಸುಕೂ-ಲತೆಯು ಅದನ್ನು ಸಾಧ್ಯವಾಗಿಸಲಿಲ್ಲ. ಇದ್ದುದರಲ್ಲಿಯೆ ಇದು ವಿಶಿಷ್ಟ-ವಾಗಿ ತೋರುವಂತೆ, ಇದರಲ್ಲಿ ಒಂದು ದೀರ್ಘ ಏಕಾಂಕ ನಾಟಕವನ್ನು ಕೊಡಲಾಗಿದೆ. ಅದೊಂದು ನಮ್ಮ ಸಮಾಜದಲ್ಲಿಯ ವಾಸ್ತವ ಚಿತ್ರ. ನಮ್ಮ ಹಸಗೆಟ್ಟ ಸಾಮಾಜಿಕ ಪರಿಸ್ಥಿತಿಯ ಮೂಲಕ, ಒಂದೊಂದು ಸಂಸಾರದಲ್ಲಿಯೂ ಒಂದೊಂದು ಬಗೆಯ ವಿಕೃತಿಯು ಕಂಡುಬರುತ್ತಿ-ರುವುದು. ಅಂತಹ ವಿಕೃತಿಯ ಸಮಸ್ಯೆಯೊಂದನ್ನೇ ಇಲ್ಲಿಯ ಏಕಾಂಕ-ದಲ್ಲಿ ವಸ್ತುವನ್ನಾಗಿ ತೆಗೆದುಕೊಂಡಿದ್ದಾರೆ.

ಮುಂದಿನ ಸಂಚಿಕೆಯಲ್ಲಿ 'ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ' 'ಸಾಹಿತ್ಯಲೋಕ' 'ಪುಸ್ತಕವಿಮರ್ಶೆ' ಇವೆಲ್ಲ ಅಂಕಣಗಳನ್ನೂ ಕೊಡಲಾಗುವುದು. ಕಳೆದ ಮೂರು ತಿಂಗಳಿಂದ 'ವಿಮರ್ಶೆಯ ಶಿಕ್ಷಣರಂಗ'ಕ್ಕೆ ಎಡೆಗೊಡದಿರುವುದು, ನಮ್ಮ ಅನೇಕ ವಾಚಕರ ನಿರಾಶೆ-ಆಕ್ಷೇಪಗಳಿಗೆ ಕಾರಣವಾಗಿದೆ. ಅದರಂತೆಯೆ ಜಯಂತಿ ಬೆಳೆ-

(೩೨ನೆಯ ಪುಟ ನೋಡಿರಿ)

ಸರ್ವಧರ್ಮ ಪರಿಷತ್ತು

(೧೦—೧೨—೫೪ ರಂದು ವಿಜಾಪುರದಲ್ಲಿ ಕೂಡಿದುದು)

ಶ್ರೀ. ಸರೋಜಿನಿ ಮಹಿಷಿ ಎಂ. ಎ. ಬೆಳಗಾಂವಿ

ಸಮಾಜದಲ್ಲಿ ಉಂಟಾಗಿದ್ದ ಅವ್ಯವಸ್ಥೆಯನ್ನು ನೀಗಿಸಲು ಅಂದು ವಿವಿಧಧರ್ಮಗಳು ಉತ್ಪನ್ನವಾಗಿದ್ದರೆ, ಇಂದು ವಿವಿಧಧರ್ಮಗಳು ಉತ್ಪನ್ನವಾದ್ದರಿಂದಲೇ ಸಾಮಾಜಿಕ ಅವ್ಯವಸ್ಥೆ ಉಂಟಾದುದನ್ನು ಕಾಣಬಹುದು. ಆದರೆ ಸಮಾಜದ ಮೂಲವನ್ನು ತಿಳಿದರೆ, ಅದರ ಉದ್ದೇಶದ ಬಗ್ಗೆ ಸಹಾನುಭೂತಿಯಿದ್ದರೆ ಈ ಬಗೆಯ ಅವ್ಯವಸ್ಥೆಗೆ ಕಾರಣವಿಲ್ಲ. ಧರ್ಮದ ಸ್ವರೂಪವು ವಿಕೃತವಾಗುತ್ತಿದೆ ಎಂಬುದು ನಮಗೆ ಗೊತ್ತು: ನಿತ್ಯಸತ್ಯವಾದ ಧಾರ್ಮಿಕತತ್ತ್ವಗಳು, ನಿತ್ಯ ನೂತನವಾಗಿಯೂ ನಮಗೆ ಗೋಚರವಾಗದಿದ್ದಲ್ಲಿ, ಹೀಗೆ ವಿಕೃತವಾಗುವುದು ಅನಿವಾರ್ಯ. ಪ್ರಚಲಿತಯುಗದಲ್ಲಿ ಸರ್ವಧರ್ಮ-ಪರಿಷತ್ತು ಈ ದೃಷ್ಟಿಯಿಂದ ತೀರ ಆವಶ್ಯಕವಾಗಿದೆ.

ಯಾವುದೇ ಧರ್ಮವಿರಲಿ, ಅವರ ಮೂಲ ಉದ್ದೇಶ ಸಮಾಜದಲ್ಲಿ ಶಾಂತಿ, ಸುವ್ಯವಸ್ಥೆ, ಸಮಾಧಾನ: ಸಮಾಜದಲ್ಲಿ ತಾನೇ ತಾನಾಗಿ ಹರಡಿದ ಅಸಮಾಧಾನ, ಅಸಂತುಷ್ಟಿಗಳನ್ನು ಕಳೆಯಲು, ಧರ್ಮಸಂಸ್ಥಾಪಕರು ಆಯಾ ಕಾಲಕ್ಕೆ ಇದ್ದ ಪರಿಸ್ಥಿತಿಯನ್ನು ಅನುಲಕ್ಷಿಸಿ ಹೆಣಗಾಡಿದ್ದಾರೆ. ಕಬೀರದಾಸರಾಗಲಿ, ಬಸವಣ್ಣನವರಾಗಲಿ ಇಂದಿನ ಯುಗದಲ್ಲಿದ್ದರೆ, ಅಂತಹ ಸಾಧನಗಳನ್ನು ಉಪಯೋಗಿಸುತ್ತಿದ್ದರೋ ಹೇಗೆನ್ನುವಲ್ಲಿ ಶಂಕೆ ತಲೆದೋರಬಹುದು. ಹನ್ನೆರಡನೆಯ ಶತಮಾನದ ಸತ್ಯಕ್ಕೂ ಇಪ್ಪತ್ತನೆಯ ಶತಮಾನದ ಸತ್ಯಕ್ಕೂ ಅಂತರವಿಲ್ಲ. ಆದರೆ ಬಸವಣ್ಣನವರು ಉಪಯೋಗಿಸಿದ ಸಾಧನೆಗಳಿಗೂ, ಗಾಂಧೀಜಿಯವರು ಉಪಯೋಗಿಸಿದ ಸಾಧನೆಗಳಿಗೂ ಅಂತರವಿದೆ.

ಸಹಿಷ್ಣುತೆ ಭಾರತೀಯ ಸಂಸ್ಕೃತಿಯಲ್ಲಿ ಬೇರೂರಿದೆಯೆಂದು ಹೇಳುವರೂ, ಅಸಹಿಷ್ಣುತೆ ಮಾನವನ ಸ್ವಭಾವವೇನೋ ಎನ್ನುವಂತೆ ಆಗಾಗ ತಲೆದೋರಿದೆ. ಭಾರತೀಯ ಸಂಸ್ಕೃತಿಯಲ್ಲಿ ಸಹಿಷ್ಣುತೆ, ಗ್ರಹಿಸ್ಣುತೆ (ನುಂಗಿಬಿಡುವುದು), ಸರ್ವವ್ಯಾಪಕತೆ ಎಲ್ಲವೂ ಇದಕಳಾಗಿವೆ. ಎಷ್ಟೇ ಪರಕೀಯದಾಳಿಗಳು ಬಂದರೂ ಅದರ ಸತ್ತ್ವ ಕುಗ್ಗಿಲ್ಲ. ಬೌದ್ಧ, ಜೈನ, ಇಸ್ಲಾಂ. ಈಸಾಯಿ ಸಂಸ್ಕೃತಿಗಳು ಹಿಂದೂ ಸಂಸ್ಕೃತಿಯಲ್ಲಿ ಯಾವ ವ್ಯತ್ಯಾಸವನ್ನು ಮಾಡಲೂ ಸಮರ್ಥವಾಗಿಲ್ಲ—ಎಂದು ಹೆಮ್ಮೆಯಿಂದ ಹೇಳುವುದುಂಟು. ಆದರೆ ಶತಮಾನಗಳ ವರೆಗೆ ದಬ್ಬಾಳಿಕೆಯನ್ನು ನಡೆಸಿದ ಪರಕೀಯ ಸಂಸ್ಕೃತಿಯ ಪ್ರಭಾವ, ನಮಗರಿವಾಗದಂತೆಯೇ ನಮ್ಮಲ್ಲಿ ರೂಪುಗೊಳ್ಳುತ್ತಿರುವುದು ಅನಿವಾರ್ಯ! ಕೇವಲ ಭಾರತದ ಅಂದಿನ ಗತವೈಭವವನ್ನು ಹೇಳಿ, ಭವಿಷ್ಯದೆಡೆಗೆ ಕಣ್ಣು ಮುಚ್ಚಿಕೊಂಡಿರುವುದು ಇಂದಿನ ವಿಚಾರವುಳ್ಳ ಪೀಳಿಗೆಗೆ ಒಗ್ಗದ ಮಾತು. ವೇದದ ಕರ್ಮಕಾಂಡದ ವಿಕೃತ ಹಿನ್ನೆಲೆಯನ್ನು ತೊಳೆಯಲು ಬೌದ್ಧ ಜೈನ ಧರ್ಮಗಳು ಬಂದರೆ, ಇವುಗಳ ಹಿನ್ನೆಲೆಯನ್ನು ಅಳಿಸಲು ಶತಮಾನಗಳ ತರುವಾಯ ಮತ್ತೆ ವೈದಿಕಧರ್ಮ ತಲೆಯಿಕ್ಕಿತು. ಶೈವಧರ್ಮ ಧಾರ್ಮಿಕ, ಸಾಮಾಜಿಕ ಕ್ರಾಂತಿಯನ್ನು ಒಟ್ಟಾಗಿಯೇ ಸಾಧಿಸಿತು. ಅಂದು ಈ ಧರ್ಮತತ್ತ್ವದ ಪ್ರಭಾವ ಜನತೆಯ ಮೇಲೆ ಯಾವ ಪ್ರತಿಕ್ರಿಯೆಯನ್ನು ಮಾಡಿತ್ತೋ, ಆದರೆ ಇಂದು ಮಾತ್ರ ಆ ತತ್ತ್ವಗಳು ಜನತೆಯ ಮನಸ್ಸನ್ನು ಸೆಳೆಯುತ್ತಿವೆ.

ಎಲ್ಲ ಧರ್ಮಗಳ ಒಳ್ಳೆಯ ತತ್ತ್ವಗಳನ್ನು ಹಿಂಡಿ, ಅಕಬರನು 'ದಿನೇ ಇಲಾಹಿ' ಎಂಬ ಹೊಸ ಧರ್ಮವನ್ನು ಸ್ಥಾಪಿಸಿದ್ದನಂತೆ! ಹಾಗೆ ಇಂದೂ ಕೂಡ, ಸರ್ವಮಾನ್ಯವಾದ ಮಾನವಧರ್ಮದ ರೂಪುರೇಷೆಗಳನ್ನು ಕೊರೆಯಬೇಕಾಗಿದೆ. 'ಧರ್ಮಕ್ಕೆ ಗ್ಲಾನಿಯುಂಟಾದಾಗ, ಮತ್ತೆ ಧರ್ಮಸಂಸ್ಥಾಪನೆಗಾಗಿ ಅವತಾರ ತಾಳುತ್ತೇನೆ' ಎಂದು ಗೀತೆ ನುಡಿಯುವಂತೆ, ಯಾವೊಬ್ಬ ಮಹಾಪುರುಷನ ಬರಪನ್ನು, ಇಂದಿನ ಯುಗವೂ ನಿರೀಕ್ಷಿಸುತ್ತಿದೆಯೆನ್ನಬಹುದು.

ದ್ವೈತಾದ್ವೈತಗಳ ತಾಕಲಾಟವಾಗಲಿ, ಪತಿಯ ದಯೆಯಿಂದ ಪಶುವನ್ನು ಪಾಶದಿಂದ, ಪಟ್‌ಸ್ಥಲಗಳ ಸಾಧನೆಯ ಮೂಲಕ ಮುಕ್ತಗೊಳಿಸುವುದಾಗಲಿ, ಪದ್ಯದ ವಾತಾವರಣದಲ್ಲಿ ಜನತೆಯ ಮನಸ್ಸನ್ನು ಹೆಚ್ಚಾಗಿ ಹಿಡಿಯದು. ಭಕ್ತಿ, ಜ್ಞಾನ, ಕರ್ಮಗಳ ಸಮನ್ವಯ ಯಾವ ಕಾಲಕ್ಕಾದರೂ ಬೇಕೆನ್ನುವುದು ನಿಃಸಂಶಯ. ಆದರೆ ಇವುಗಳನ್ನು ಪದ್ಯದ ಮಾನವಜೀವನದಲ್ಲಿ ಹೇಗೆ ಹೊಂದಿಸಬೇಕೆನ್ನುವುದೇ ಪ್ರಶ್ನೆ.

ಭಾರತದಲ್ಲಿ ಪದ್ಯ ಸಂಧಿಕಾಲ. ಧಾರ್ಮಿಕ, ರಾಜಕೀಯ ಸಾಮಾಜಿಕ ಕ್ಷೇತ್ರಗಳಿಲ್ಲದರಲ್ಲೂ. ಎರಡು ಪೀಳಿಗೆಯ ಪ್ರತಿನಿಧಿಗಳು ಇಲ್ಲಿ ವಾಸವಾಗಿದ್ದಾರೆ. ಇಂಗ್ಲಿಷ ಸಂಸ್ಕೃತಿಯನ್ನು ತೆಗಳಲೇ ಬೇಕೆನ್ನುವವರು ಒಂದು ಪಂಗಡ. ಅದನ್ನು ಹೊಗಳಲೇಬೇಕೆನ್ನುವವರು ಒಂದು ಪಂಗಡ! ದೇವನ ಅಖಂಡ ಭಕ್ತಿಯಲ್ಲಿಯೂ ದ್ವಿವಿಧಮತತೋರದೆಯಿಲ್ಲ ಕರ್ಮದ ಆಧಾರದಲ್ಲಿ ಭಕ್ತಿಯನ್ನು ಕಡೆಗಣಿಸುವ ಜನಾಂಗಕ್ಕೂ, ಭಕ್ತಿಯ ನೆವದಲ್ಲಿ ಪಾರಾಗಲೆಳಸುವ ಜನಾಂಗಕ್ಕೂ,

ವಿಚಾರವು ಹೊಂದಿಕೆಯಾಗುವಂತೆ, ವಿಚಾರವಂತರು ನೋಡಿಕೊಳ್ಳಬೇಕಾಗಿದೆ.

ಧರ್ಮದ ಗುರಿ ಒಂದೇ ಆಗಿದ್ದರೂ, ಅದರ ವ್ಯಾಖ್ಯೆಯನ್ನು ಹೀಗೇ ಎಂದು ಹೇಳುವುದು ತುಂಬ ಕಠಿಣ. ಕಾಲಕಾಲಕ್ಕೆ ಆದರ ಬಾಹ್ಯ ಆಚರಣೆ ಭಿನ್ನವಾಗುವುದರಿಂದ, ಈ ಬಾಹ್ಯಾಚರಣೆಗಳ ಮೂಲಕ ಅದರ ವ್ಯಾಖ್ಯೆಯನ್ನು ಹೇಳುವುದು ಸಾಧ್ಯವಿಲ್ಲ. ಅವಕ್ಕೆಂದೇ ಯಾರಿಗೂ ತೊಂದರೆಯಾಗದಂತಹ ಧಾರ್ಮಿಕ ಸ್ವಾತಂತ್ರ್ಯವನ್ನು ಇಂಗ್ಲಿಷ ಸರಕಾರವನ್ನನುಸರಿಸಿ, ಹಿಂದುಸ್ಥಾನ ಸರಕಾರವೂ ದಯಪಾಲಿಸಿದೆ. ಕಟ್ಟಳೆಗಳನ್ನು ಹಾಕಲು ಬಾರದೆ, ಹಿಂದುಸ್ಥಾನವು ಜಾತ್ಯತೀತ ರಾಷ್ಟ್ರವಾಗಿದೆ. ಯಾವ ಜಾತಿ-ಧರ್ಮಗಳಿಗೂ ಇಲ್ಲಿ ಪ್ರೋತ್ಸಾಹವಿಲ್ಲ ಎಂದರೆ ಎಲ್ಲ ಜಾತಿ-ಧರ್ಮಗಳಿಗೂ ಅಷ್ಟೇ ಪ್ರೋತ್ಸಾಹ ದೊರೆಯುತ್ತಿದೆ. ಧಾರ್ಮಿಕ ನೈತಿಕ ಕಾಯ್ದೆಗಳನ್ನು ಮಾಡುವುದು ತುಂಬ ಕಠಿಣ. ಒಂದು ಕಾಲದಲ್ಲಿ ರಾಜರುಗಳು ಋಷಿಗಳ ಸಲಹೆಯನ್ನು ಪಡೆದು ರಾಜ್ಯಗಳನ್ನು ಸಾಗಿಸುತ್ತಿರಬಹುದು. 'ಸ ಪಿತಾ ಪಿತರಸ್ತಾಸಾಂ ಕೇವಲಂ ಜನ್ಮಹೇತನಃ' ಎಂದು ಹೇಳುವಂತೆ, ರಾಜನು ಧರ್ಮದಿಂದ ರಾಜ್ಯವಾಳುತ್ತಿರಬಹುದು. ಈ ಧರ್ಮದ ಆಚರಣೆಯನ್ನು ಕಡ್ಡಾಯವಾಗಿ ಮಾಡಲು ಧರ್ಮಶಾಸ್ತ್ರಕಾರರು ಕಟ್ಟಳೆಗಳನ್ನು ಕ್ರೋಡೀಕರಿಸಿ, ಮನುಸ್ಮೃತಿಯಂತಹ ಉದ್ಗ್ರಂಥಗಳನ್ನು ಬರೆದಿರಬಹುದು ಆದರೆ, ಅವೇ ಕಾಯ್ದೆಗಳನ್ನು ಇಂದಿಗೂ ಧರ್ಮಶಾಸ್ತ್ರದ ಹೆಸರಿನಲ್ಲಿ ಅಂಧಶ್ರದ್ಧೆಯಿಂದ ಅವಲಂಬಿಸುವುದು ಇಷ್ಟವಾಗದು. ಧರ್ಮದ ನಿಜವಾದ ಸಾರವನ್ನರಿತರೆ, ಅದಕ್ಕೆ ಯಾವ ರೂಪವನ್ನು ಬೇಕಾದರೂ ಕೊಡಬಹುದು. ಹಿಂದುಸ್ಥಾನದ ರಾಜ್ಯಘಟನೆಯು ಕರಡಾದರೂ ಮನುಷ್ಯರೆಲ್ಲರ ಸರಿಸಮಾನತೆಯನ್ನು ಸಾರಿದೆ. ನೈತಿಕ ತತ್ತ್ವಗಳನ್ನು ಒಪ್ಪಿಕೊಂಡಿದೆ. ಆದರೆ ಮಗು ಎಡವಿಬಿದ್ದರೆ ಅದನ್ನು ಎಬ್ಬಿಸಬೇಕೆಂದು ಯಾವ ಸರಕಾರವೂ ಕಾಯ್ದೆ ಮಾಡಲಾರದು. ಅದು ವಿವೇಕಕ್ಕೇ ಹೊಳೆಯುವ ಮಾತು!

ಭಾರತೀಯ ಧರ್ಮಸಂಸ್ಥಾಪಕರು ಸಾಮಾಜಿಕ ಪ್ರವಾಹದ ವಿರುದ್ಧ ದಿಕ್ಕಿನಲ್ಲಿ ಹೋರಾಡಿ, ತಮ್ಮ ವಿವೇಕಕ್ಕೆ ಹೊಳೆದ ನಿತ್ಯ ಸತ್ಯವನ್ನು ಆ ಕಾಲದ ಜನತೆಯ ಎದುರು ಸುಸ್ವರೂಪದಲ್ಲಿಡುವ ಪ್ರಯತ್ನ ಮಾಡಿದರು. ಹಿಂದು ಮುಸ್ಲಿಮರ ಈಶ್ವರ-ನಿರೀಶ್ವರ ತಿಕ್ಕಾಟದ ಸಂಧಿಕಾಲದಲ್ಲಿ ಜನಿಸಿ ಬಂದ ಕಬೀರರು ನಿರ್ಗುಣ, ನಿರಾಕಾರ ಬ್ರಹ್ಮನ ಸ್ವರೂಪವನ್ನು ಹೇಳಿದ್ದಲ್ಲದೆ, ಸಾಸಸಾಜಿಕ, ನೈತಿಕ ವಿಕೃತಿಯನ್ನೂ ಹೋಗಲಾಡಿಸುವ ಪ್ರಯತ್ನ ಮಾಡಿದರು.

"ಜಾತ ನ ಪೂಛಿಯೇ ಸಾಧುಕೀ ಪೂಛ ಲೀಜಿಯೆ ಜ್ಞಾನ
ಕರೋ ಮೇಲ ತರವಾರಕಾ ಪಡಾ ರಹನದೊ ಮ್ಯಾನ" ಎಂದು ಜಾತಿಭೇದವನ್ನು ಅಲ್ಲಗಳೆದರು.

ಹುತ್ತೇರಿ ಬೆತ್ತ ಬೆಳೆದ ತಪಸ್ವಿಗಳೆಲ್ಲರೂ ಹಿರಿಯರೆ? ಆರಿವಿಂಗೆ ಹಿರಿದು-ಕಿರಿದುಂಟೆ? ಅರಿದೊಡೆ ತನ್ನರಿವೆ ತನಗೆ ಗುರು—ಎಂಬ ವಚನದ ಸಾರ ಸಾಮಾಜಿಕ, ನೈತಿಕ ಅಂಧಶ್ರದ್ಧೆಯ ಆಡಂಬರದ ವಿಚಾರಗಳಿಗೆ ತಡೆಯನ್ನುಂಟುಮಾಡುತ್ತದೆ.

ಇಸ್ಲಾಂ ಧರ್ಮದ ತತ್ತ್ವ ಶಾಂತಿ: ಈಸಾಯಿ ಧರ್ಮದ ಸಂದೇಶ ಇದರ ಪ್ರತ್ಯಕ್ಷ ಆಚರಣೆ 'Love thy neighbour' ಎಂಬುದು.

ಎಲ್ಲ ಧರ್ಮದ ಸಾರವನ್ನು ಎಲ್ಲರೂ ಅರಿತುಕೊಳ್ಳಲು ಸರ್ವ ಧರ್ಮಸಮ್ಮೇಲನ ಒಂದು ಹಿರಿಯದಾದ ಸಾಧನ! ಧರ್ಮದ ತಿರುಳನ್ನರಿತ ಮಹನೀಯರು ಪ್ರಯತ್ನಪಟ್ಟು ತಿಳಿಸಿ ಹೇಳಿದರೆ, ಅದೊಂದು ರಸದೂಟ! ಧಾರ್ಮಿಕ ಭೇದಭಾವ ಅಳಿದುಹೋಗಲು ಅದೊಂದು ದಾರಿ!

ಈ ದೃಷ್ಟಿಯಿಂದ ವಿಜಾಪುರದಲ್ಲಿ ೧೦–೧೨–೫೪ರಂದು ಸೇರಿದ ಸರ್ವಧರ್ಮಪರಿಷತ್ತು, ಇಂದಿನ ಪ್ರಕ್ಷುಬ್ಧ ವಾತಾವರಣದಲ್ಲಿ, ಪರಸ್ಪರ ತಿಳುವಳಿಕೆಯನ್ನುಂಟುಮಾಡಲು ತುಂಬ ಸಹಾಯಕಾರಿಯಾಗಬಹುದು. ಕರ್ನಾಟಕದ ಸುಪ್ರಸಿದ್ಧ ತತ್ತ್ವಜ್ಞಾನಿಗಳಾದ ಪ್ರೊ. ಆರ್. ಡಿ. ರಾನಡೆಯವರು ಅದರ ಉದ್ಘಾಟಕರು! ಜ್ಞಾನ, ಕರ್ಮ, ಭಕ್ತಿಗಳು ಮುಪ್ಪುರಿಗೊಂಡ ರೂಪ ಅವರದು! ಹಾಗೆಯೇ ರಾಮಕೃಷ್ಣ ಮಿಶನ್ನಿನ ಹಿರಿಯ ಸಂಚಾಲಕರಾದ ಶ್ರೀಸಂಬುದ್ಧಾನಂದ ಸ್ವಾಮಿಗಳವರು ಪರಿಷತ್ತಿನ ಅಧ್ಯಕ್ಷರು. ಸ್ವಾಮಿ ವಿವೇಕಾನಂದರ ವಾಣಿಯನ್ನು ಅಧಿಕಾರದಿಂದ ಹೇಳಿಕೊಡಬಲ್ಲವರು! ಆದರಂತೆ ಜೈನ, ಬೌದ್ಧ, ಶೀಖ, ಪಾರ್ಸಿ, ಇಸ್ಲಾಂ, ಈಸಾಯಿ, ಹಿಂದು ಧರ್ಮಗಳನ್ನು ಕುರಿತು ಮಾತನಾಡಿದವರು ಆಯಾಧರ್ಮಗಳ ಅಭ್ಯಾಸವನ್ನು ಆಳವಾಗಿ ಮಾಡಿದಂಥವರು! ಇವುಗಳೆಲ್ಲವನ್ನೂ ಲಕ್ಷ್ಯಪೂರ್ವಕ ಕೇಳಿದವರಿಗೆ, ಈ ಧರ್ಮಗಳು ಒಂದರಿಂದೊಂದು ಉದ್ಭವಿಸಿವೆಯೋ ಏನೋ, ಎನ್ನುವಷ್ಟು ಸಾಮ್ಯ ಭಾಸವಾಗುವುದು: ಹೇಳುವವರಿಗೂ ಎಷ್ಟೋ ಸಲ ಹೀಗಾಗಬಹುದು: ಆದರೆ ಅದು ಬರೀ ಆಭಾಸ; ಈ ಧರ್ಮಗಳ ಮೂಲೋದ್ದೇಶ ಒಂದೇ ಆದುದರಿಂದ. ಇಂತಹ ಸಾಮಿಪ್ಯ ಕಂಡುಬರುವುದು ಸಹಜವೇ!

ಶಿಥಿಲವಾದ ನಮ್ಮ ಧಾರ್ಮಿಕ ನೈತಿಕ ಕಟ್ಟಳೆಗಳು, ಆರೋಗ್ಯ ಪೂರ್ಣವಾಗಬೇಕಾದರೆ, ಸರಿಯಾದ ವಿಚಾರ ಜೊತೆಗೆ ಆಚಾರ ಎರಡೂ ಅವಶ್ಯಕ. ಕಲ್ಲು, ಕಟ್ಟಿಗೆ, ಮಣ್ಣಿಗೆ ಆಕಾರಕೊಟ್ಟು, ಅಲ್ಲಿ ದೇವತ್ವವನ್ನಾರೋಪಿಸುವ ಶಕ್ತಿ ನಮ್ಮಲ್ಲಿದೆ: ಆದರೆ ಚೈತನ್ಯ ಪೂರ್ಣವಾದ ನಮ್ಮ ತಿಳಿವಿನಲ್ಲಿ ದೇವರನ್ನರಸುವ ಬುದ್ಧಿ ನಮಗಿಲ್ಲ!

ಎಲ್ಲ ಧರ್ಮಗಳ ಪರಿಸ್ಥಿತಿಯೂ ಇಂದು ಇದೇ ಆಗಿದೆ: ದೇವರ ಸಾಕಾರರೂಪವನ್ನು ಒಪ್ಪದ ಬೌದ್ಧರ ಶೂನ್ಯವಾದದ ಪರಿಣಾಮ ಏನಾಯಿತೋ! ಕಾಲ ಉರುಳಿದಾಗ ಜನತೆ, "ಕೇಶವಧೃತ ಬುದ್ಧ ಶರೀರ—ಜಯ ಜಗದೀಶ ಹರೆ" ಎಂದು ಹಾಡಿಯೂ ಬಿಟ್ಟಿತು.

ಹಾಗೆ ಇಂದು ಧಾರ್ಮಿಕ ಪುನರ್ರಚನೆ ಮತ್ತೆ ಅವಶ್ಯವಾಗಿದೆ! ಈ ಪ್ರಸಂಗದಲ್ಲಿ ಸರ್ವಧರ್ಮಪರಿಷತ್ತು, ಯೋಗ್ಯ ತಿಳಿವಳಿಕೆಯನ್ನೂ ಸಹಿಷ್ಣುತೆಯನ್ನೂ ಜನತೆಯಲ್ಲಿ ಉಂಟುಮಾಡಲು ತುಂಬ ಪರಿಶ್ರಮ ವಹಿಸಿದೆ. *

* ಲೇಖಕರು ಸರ್ವಧರ್ಮ ಪರಿಷತ್ತಿನಲ್ಲಿ, 'ಮಾನವ ಧರ್ಮ' ವಿಷಯ ಕುರಿತು ಮಾಡಿದ ಭಾಷಣದ ಸಾರವೂ ಇದರಲ್ಲಿ ಬಂದಿದೆ.

ಪಡೆದು ಬಂದಿರಬೇಕು!

(ಒಂದು ಸಾಮಾಜಿಕ ರೂಪಕ)

ಬರೆದವರು:

ಶ್ರೀ. ಬೇಂದ್ರೆ. ಲಕ್ಷ್ಮಣರಾಯರು, ಧಾರವಾಡ

ಈ ರೂಪಕದಲ್ಲಿ ಬರುವ ಪಾತ್ರಗಳು

೧ ಶಂಕರಣ್ಣ (ತಂದೆ)
೨ ಉಮಾಬಾಯಿ (ಶಂಕರಣ್ಣನ ಎರಡನೆಯ ಹೆಂಡತಿ)
೩ ಶ್ರೀಪಾದ (ಶಂಕರಣ್ಣನ ಮೊದಲನೆಯ ಹೆಂಡತಿಯ ಮಗ)
೪ ಶಾರದಾ (ಶಂಕರಣ್ಣನ ಎರಡನೆಯ ಹೆಂಡತಿಯ ಮಗಳು)
೫ ನರಹರಿ (ಶಂಕರಣ್ಣನ ಬಾಲ್ಯಸ್ನೇಹಿತ)

[ಶಂಕರಣ್ಣನ ಮನೆ. ಸಣ್ಣದನಿಯಲ್ಲಿ ರೇಡಿಯೋದಿಂದ 'ನಾನು ಬಡವ, ಆತ ಬಡವ' ಎಂಬ ಧ್ವನಿಮುದ್ರಿಕೆಯ ಹಾಡು ಕೇಳಬರುತ್ತದೆ. ಮುಗಿಯುವ ಹೊತ್ತಿಗೆ ಶಂಕರಣ್ಣನು ಹೊರಗಿಂದ ಬರುತ್ತಾನೆ]

ಶಂಕರಣ್ಣ— ಶಾರೀ, ಏ ಶಾರದಾ, ಬಾಗಿಲಾ ತಗಿ.

ಶಾರದಾ— ಅವ್ವಾ, ಅಪ್ಪ ಬಂದ ಕಾಣಸ್ತತದ, ಕೂಗ್ತಾನ ನೋಡು.

ಉಮಾ— **ನೀ ನನಗಽ ಹೇಳು. ಹೋಗಿ ಬಾಗಲಾ ತಗದ ಬಾತ್ಯ. ಆ ರೇಡಿಯೊ ಸುಟ್ಟಬರಲಿ! ಬಂದ್ ಮಾಡು, ಸಾಕು.**

ಶಂಕರಣ್ಣ — (ಬಾಗಿಲ ಹೊರಗೆ ನಿಂತು) ಏ ಶಾರೀ, ಕೇಳಿಸಲಿಲ್ಲೇನು?

ಶಾರದಾ— ಬಂದೆಽಽ. (ರೇಡಿಯೊ ಬಂದು ಮಾಡುತ್ತಾಳೆ. ಬಾಗಿಲನ್ನು ತೆರೆದ ಸಪ್ಪಳ. ಶಂಕರಣ್ಣ ಒಳಗೆ ಬರುತ್ತಾನೆ.)

ಶಂಕರಣ್ಣ— ಈಕೆಲ್ಲಿದ್ದಾಳ?

ಶಾರದಾ— ಒಳಗ.

ಶಂಕರಣ್ಣ— ಏನಽ, ಬರ್ತೀಯೇನು ಹೊರಗ?

ಉಮಾ— ಬಂದೆ.....ಉಂ, ದಿಲ್ಲೀ ಫೋನು ಏನು ಬಂತು? ಏನು ಮಾತಾಡಿದ ಮಗರಾಯ?

ಶಂಕರಣ್ಣ— (ಆನಂದೋತ್ಸಾಹದಲ್ಲಿ) ನವಕರಿ ಹುಕುಮು ಸಿಕ್ಕಿತಂತ! ನಾಲ್ಕುನೂರು ರೂಪಾಯಿ ಪಗಾರ, ಮ್ಯಾಲ ಇರಲಿಕ್ಕೆ ಮನಿ! ದಿಲ್ಲಿಯೊಳಗಽ ಇರೋದಂತ. ವಿಮಾನದಿಂದ ನಾಳೆ ಬೆಳಗಾಂವಿಗೆ ಬಂದು, ಸಂಜೀಯೊಳಗಽ ಇಲ್ಲಿಗೆ ಮುಟ್ಟತಾನಂತ.

ಉಮಾ— (ಗಂಡನ ಆನಂದದಲ್ಲಿ ಪಾಲುಗೂಡದೆ, ಬಿಗುವಿನ ದನಿಯಲ್ಲಿ) ಹುಂ....ಏನು ನಾಳೀ ಬರ್ತಾನಂತಽ?

ಶಂಕರಣ್ಣ— ಹುಂ- ನಾಳೀ ಬರ್ತಾನ! ಮುಂದ ಎಂಟು ದಿವಸಕ್ಕ ಹೋಗ್ತಾನ.....ನಡಿ, ಜೀವನಕ್ಕೊಂದು ಮಾರ್ಗಾತು; ಕಲಿತದ್ದಕ್ಕೂ ಸಾರ್ಥಕಾತು. **ಹೌದಂತೀಯೋ ಅಲ್ಲಂತೀಯೋ?**

ಉಮಾ— ಹುಂ, ಅತ್ಯಲ್ಲ, ಮತ್ತೇನು?

ಶಂಕರಣ್ಣ— ಮಂದಿ ನನ್ನ ಬಹಳ ಹೆದರಿಸಿದ್ದರು:—'ಇಷ್ಟು ಲಗು ನಿಮ್ಮ ಮಗ್ಗೇನು ನೋಕರಿ ಸಿಗ್ತದಽ' ಅಂತ.

ಉಮಾ— ಹುಂ.

ಶಂಕರಣ್ಣ— ಲಗೂನಽನೂ ಸಿಕ್ಕಿತು; ಮತ್ತ ದೊಡ್ಡದೂನೂ ಸಿಕ್ಕಿತು.

ಉಮಾ— ಮತ್ತ ದೊಡ್ಡ ಪರೀಕ್ಷಾನಽ ಪಾಸ್ ಆಗ್ಯಾನ!

ಶಂಕರಣ್ಣ— ನಾ ಅವನ ಜನ್ಮದಾರಭ್ಯ ನೋಡ್ತಿನಿ; ಅಂವ ಹುಟ್ಟದ.....ನನಗ ಮ್ಯಾಲಿನ ಗ್ರೇಡು ಸಿಕ್ಕಿತು! ಮುಂದೆಲ್ಲಾ ನನಗ ಬಡ್ತೀನೇ ಆಗ್ತ ಹೋತ್ಯು. ಮತ್ತ ಅವನೂ 1st class ಇಲ್ಲದೆ ಪರೀಕ್ಷಾನಽ ಪಾಸ್ ಆಗಲಿಲ್ಲ!....ಒಂದೇನು ಅಂದರ.....ಅವನ ಆರನೇ ವರ್ಷದಾಗಽ ತಾಯಿ ಸತ್ತು ಪರದೇಶಿ ಆದ, ಅದಽ ಒಂದು....

ಉಮಾ— (ಕೊಂಕುದನಿಯಲ್ಲಿ) ಅದಽ ಒಂದು ಅಂವಗೂ ದುಃಖ, ನಿಮಗೂ ದುಃಖ!

ಶಂಕರಣ್ಣ— (ಮಾತನ್ನು ಸರಿಪಡಿಸಿಕೊಳ್ಳುವ ರೀತಿಯಲ್ಲಿ) ಉಂಹುಂ, ಅವನ ಕಾಲ್ಗುಣ ಹೇಳಿದೆ.

ಉಮಾ— ಹೌದು. ಅವನ ಕಾಲ್ಗುಣಾ ಛೆಲೋನಽ ಅದ, ನಿಮಗೆಲ್ಲಾ ಛೆಲೋನಽ ಆಗೇದ. ಸುಮಾರಂಬೋದೆಲ್ಲಾ ನನ್ನ ಪಾಲಿಗೇ ಬಂದಽದ.

ಶಂಕರಣ್ಣ— ಹಾಂಗ್ಯಾಕಂತೀ? ನಿನ್ನ ಮದವಿ ಆದಮ್ಯಾಲಾದರೂ ಯಾವದಕ್ಕೇನು ಕೊರತಿ ಆಗೇದ? ಈಗ ನನಗ ಪೆನ್‌ಶನ್ ಆದರೂ, ಮೊದಲಿನ್ಹಾಂಗಽ ಎಲ್ಲಾ ಧುರಂಧುರಿ ನಡದಽದ. ಮೊದಲನೆಯ ಹೆಣ್ತಿ, ಮಗನ್ನ ಕೊಟ್ಟು ಸಂಸಾರ ಮುಗಿಸಿದ್ಲು; ನೀ ಮಗಳ್ನ ಕೊಟ್ಟು ಸಂಸಾರ ಉಳಿಸಿದಿ!

ಉಮಾ— ಆ ಉಳಿಸಿದ್ದರ ಉಪಕಾರ ಎಲ್ಲ್ಯದ ನಿಮಗ? ಆಕೀ ಮಗನಽ ಮಗ, ನನ್ನ ಮಗಳೇನು ಮಗಳಽ ಅಲ್ಲ ಅಂಬವರ್ಹಾಂಗ

ನಡಕೋತೀರಿ! (ಗಡಿಯಾರದಲ್ಲಿ ಢಣ್ ಎಂದು ಗಂಟೆಯಾಗುತ್ತದೆ.) ಖರೆ ಆದ!

ಶಂಕರಣ್ಣ— ಸವತಿ ಸತ್ತರೂ ನಿನ್ನ ಸಂತಾಪ ಸಾಯಲಿಲ್ಲ. ಅಕೀದಂಬೋದು ಬ್ಯಾರೆ ಉಳದಾದೇನೀಗ? ಎಲ್ಲಾ ನಿನ್ನದs ಆದ. ಈಗ ಅದೆಲ್ಲಾ ಇರಲಿ. ಮನೀಗೆ ಮಗ ಬರೋದು ಸುಳ್ಳೇನು? ಹಾಂಗs ಹೀಂಗs ಬರೋದಿಲ್ಲ, ಬಿರುದಾವಳಿ ಕಟಗೊಂಡs ಬರ್ತಾನ!

ಉಮಾ— ಅಂತ ನಾವೇನು ಕೈಕಟಗೊಂಡು ನಿಲ್ಲಬೇಕೇನು? ಬರವೊಲ್ಲ! ತನ್ನ ಮನಿಗೆ ತಾ ಬರ್ತಾನ. ಮನಿ ಅಂದರೇನು ಮುನಸಿಪಾಲ್ಟಿ ಧರ್ಮಸಾಲಿ ಅಲ್ಲ!

ಶಂಕರಣ್ಣ— ಉಂಹುಂ, ಹಾಂಗಲ್ಲ.....

ಉಮಾ— ಹಾಂಗಲ್ಲ, ಹೀಂಗಲ್ಲ ಮಾಡ್ರಿ ನಿಮಗೇನು ಮಾಡೋದದs ನೋ. ನಾ ಎಲ್ಲೆ ಬ್ಯಾಡಂತೀನಿ? ಬ್ಯಾಡ ಅಂದರಾದರೂ ನಂದೇನು ನಡಿಯೋದದ? ಎಷ್ಟs ಮಾಡಿದರೂ ಮಲತಾಯಿ ಅಂದೋದೇನು ಮುಚ್ಚೋದಿಲ್ಲs ಬ್ಯಾರೆ?

ಶಂಕರಣ್ಣ— ಅಲ್ಲಾ, ಏನು ನೀ ಅಂವಗ ಮಾಡಿದ್ದs ಏನು? ಮತ್ತ ಅಂವ ನಮ್ಮ ಮ್ಯಾಲ ಭಾರಾ ಹಾಕಿದ್ದs ಎಷ್ಟು? ಹುಟ್ಟಿದ ಆರನೇ ವರ್ಷಕ್ಕ ಅಜ್ಜನ ಮನೀಗೆ ಹೋದsವ, ಇಪ್ಪತ್ತು ವರ್ಷ ಹೊರಗs ಇದ್ದಾನ. ತನ್ನ ವಿದ್ಯಾ ಸಹಿತ ತನ್ನ ಬುದ್ಧಿಯ ಬಲದ ಮ್ಯಾಲs ಮುಗಿಸಿಕೊಂಡ! ಅದಕ್ಕ ಸಹಿತ ನನ್ನಿಂದ ಹಣ ಕೇಳಲಿಲ್ಲ. ಈಗಂತೂ ಇನ್ನೇನು, ದಿಲ್ಲೀಯೊಳಗs ದೊಡ್ಡ ನೌಕರಿ ಅತ್ಯಾ. ಇನ್ನಮ್ಯಾಲ ಅಲ್ಲೇ ಇದ್ದು, ಅಲ್ಲೇ ಕೆಲಸಾ ಮಾಡಂವ; ಅದಕ್ಕ ಮುಂಜೋಮ್ಮೆ ನಮ್ಮೆಲ್ಲಾರ್ನೂ ಕಂಡುಹೋಗಬೇಕು ಅಂತ ಬರ್ತಾನ. ಅಷ್ಟು ಸಹಿತ ಮಾಡಬ್ಯಾಡ ಅಂತೀಯಾ?

ಉಮಾ— ಅಯ್ಯಯ್ಯ! ನೋಡಿದಿರ್ಯಾ ಸುಮ್ಮನs ನನ್ನ ಮ್ಯಾಲ ಹೇರ್ ಹೊರಿಸಬ್ಯಾಡ್ರಿ ಅಂವ ಬರಲಿಕ್ಕೆ ನಾ ಎಲ್ಲೆ ಬ್ಯಾಡಂತೀನಿ?

ಶಂಕರಣ್ಣ— ಇದು ನೋಡು, ಇಂಥಾ ಸಂತೋಷದ ವ್ಯಾಳ್ಯಾದಾಗ, ಸುಮ್ಮನೆ ಮಾರೀ ಹರಕೊಂಡಾಂಗ ಮಾಡಬ್ಯಾಡ. ಅಂವ ಬಂದಾಗಽರಿ ಎಂಟು ದಿನ ಸುಖದಿಂದ ಇರೋಣು!

ಉಮಾ— ಒಹೊ! ಇರ್ರೆಲ್ಲ. ಯಾಕಂದರ, ಅಂವ ಬಾರದಿದ್ದಾಗ ದುಃಖನೇ ಒಟ್ಟಿರ್ತsದ ಪಾಪ....ನಿಮ್ಮ ಪಾಲಿಗೆ!

ಶಂಕರಣ್ಣ— ನಾ ಒಪ್ಪು ಅಂತ ಮಾತಾಡಿದ್ದನ್ನೆಲ್ಲಾ ನೀ ತಪ್ಪು ಅಂತನs ತಿಳಕೋತೀದಿ!

ಉಮಾ— ಮಾತು-ಮಾತಿಗೆ ಒಪ್ಪ ಹಾಕಿ ಮಾತಾಡಿದರ, ತಪ್ಪು ಅಂತ ತಿಳಕೊಂದೋದೂ ತಪ್ಪs? ಹೋಗಲಿ ಬಿಡ್ರಿ. ನಿತ್ಯದ ನನ್ನ ಸಾವಿಗೆ ಫೀಮ್ಯಾಕ ಅಳ್ತೀರಿ? ನಾಳಿಗೆ ಏನು ಮಾಡಬೇಕು ಹೇಳ್ರಿ. ಎಂಟು ದಿಪ ಮಗನ ಸಂಭ್ರಮ ನಡೀಲಿ. ನನ್ನ ಕೈಲಾದಷ್ಟು ಮಾಡ್ತೀನಿ.

ಶಂಕರಣ್ಣ— ಮಾಡೋದೇನದರಾಗ? ಮುಖ್ಯ..... ಸಂತೋಷದ ಸಂಗತಿ. ಹಿಗ್ಗಾತ್ಯು, ಹೊಟ್ಟಾಕ್ಕಾಗ ಹಿಡಿಸದೆ ಹೇಳದೆ. ಮನ್ಯಾಗ ನಿನಗ ಹೇಳದs ಮತ್ಯಾರಿಗೆ ಹೇಳಲಿ? ಮಗ ಬರ್ತಾನ ಬಹಳ ದಿವಸದ ಮ್ಯಾಲ ಬರ್ತಾನ! ದೊಡ್ಡ ಕೆಲಸಾ ಸಂಪಾದಿಸಿಕೊಂಡ ಬರ್ತಾನ!

ಶಾರದಾ— ಅಪ್ಪಾ, ಅಣ್ಣ ವಿಮಾನದೊಳಗಿಂದ ಬರ್ತಾನ?

ಶಂಕರಣ್ಣ— ಹುಂ, ಬೆಳಗಾಂವೀ ತನಕ ಬರ್ತಾನ.

ಶಾರದಾ— ಹಂಗಾರ ಬೆಳಗಾಂವಿಗೆ ನಾವೂ ಹೋಗೋಣೇನು? ಎದುರುಗೊಂಡು ಕರಕೊಂಡು ಬರೋಣೂ ಅಪ್ಪಾ!

ಶಂಕರಣ್ಣ— ಏನು ಮಾಡ್ತೀ, ತಾನs ಬರ್ತಾನ.

ಶಾರದಾ— (ಅಚ್ಚೈಯಿಂದ) ಇಲ್ಲ, ಹೋಗೋಣೂ! ಆ ವಿಮಾನದೊಳಗಿಂದ ಬರೋವಾಗ ನಾ ನೋಡಬೇಕಾಗೇದ.

ಶಂಕರಣ್ಣ— ಬರೋವಾಗೇನು ಕಾಣಿಸ್ತಾನ? ಇಳಿದಮ್ಯಾ ಇಲ್ಲೆ ಬಂದೇ ಬರ್ತಾನಲ್ಲ.

ಶಾರದಾ— ಅಂವ ಇಳಿಯುವಾಗs ನನಗ ನೋಡಬೇಕಾಗೇ ಹೋಗೋಣೋ ಅಪ್ಪಾ.

ಶಂಕರಣ್ಣ— ನಿಮ್ಮ ತಾಯಿನ್ನ ಕೇಳು ಹೋಗೋದಾದರ!

ಉಮಾ— ನೋಡಿದಿರ್ಯಾ, ನಿಮ್ಮುರಕ್ಕ ನನ್ನ ಗುರಿ ಮಾಡ್ರಿ ನಿಮ್ಮ ಮನಸ್ಸಿನೊಳಗs ಹೋಗೋದದ, ಹೋಗಿಬರ್ರಿ.

ಶಂಕರಣ್ಣ— ಹಾಂಗಿಲ್ಲ. ಹೋದರ ಎಲ್ಲಾರೂ ಹೋಗೋದು, ಬಿಟ್ಟರ ಎಲ್ಲಾರೂ ಬಿಡೋದು.

ಉಮಾ— ಇದ್ಯಾಕಂತ ಹೆಟ? ನಾ ಬರೋದಿಲ್ಲ ಅಂತ ಗೊತ್ತದ. ಮಗಳು ಬಾಯಿ ತಗದು ಕೇಳಿದಳೂ ಅಂತ ನಿಮಗ ಪೇಚು ಬಂತು! ಇಲ್ಲದಿದ್ದರ ನೀವೊಬ್ಬರs ಹೋಗ್ತಿದ್ದಿರಿ ಅಟ್ಟಾಸದಲೆ!

ಶಂಕರಣ್ಣ— ಇಲ್ಲೆ ನೋಡು, ನಾ ಶ್ರೀಪಾದನ್ನ ಅಲ್ಲೆ ಕಂಡರೂ ಅಷ್ಟs, ಇಲ್ಲೆ ಕಂಡರೂ ಅಷ್ಟs. ಇಲ್ಲಿಗೆ ಬರಲಿಕ್ಕಂತs ಹೊರಡ್ತಾನs ಅಂದಮ್ಯಾಲ ಬಂದೇ ಬರ್ತಾನ.

ಉಮಾ - ಶಾರೀ, ಹದಿನೆಂಟು ಹಲ್ಲುಕಿರಿದು ಯಾಕ ಅವರ್ನ ಕೇಳ್ತೀ? ನೀ ಕೇಳಿದ್ದನ್ನ ಯಾವದು ಮಾಡ್ಯಾರ ಅಂತ ಇದ್ದರೆ ಮಾಡಬೇಕು? ಈ ಮನಿಯೊಳಗ ಹೆಣ್ತಿ ಅಂತ ನನಗ ಸತ್ತಾ ಇಲ್ಲ; ಮಗಳು ಅಂತ ನಿನಗ ಸತ್ತಾ ಇಲ್ಲ!

ಶಂಕರಣ್ಣ— ಮಾತಿಗೊಮ್ಮೆ ಈ ಪಲ್ಲವಿ ಇರೋದs ನಿನ್ನದು!

ಉಮಾ— ಅದು ನಾ ಸಾಯೋವರೆಗೂ ತಪ್ಪುದಿಲ್ಲ!

ಶಂಕರಣ್ಣ— (ನಟ್ಟುಸಿರನ್ನು ಬಿಟ್ಟು) ಹುಂ,.....ಆಗಲಿ, ಏನು ಕರಕೊಂಡು ಹೋಗಲ್ಯಾ ಶಾರಿನ್ನ?

ಉಮಾ— ಬೇಕಾದರ ಹೋಗರಿ.

ಶಂಕರಣ್ಣ— ನೀನು?

ಉಮಾ— ನಾ ಬರೋದಿಲ್ಲ.

ಶಂಕರಣ್ಣ— ಉಂ.....ಒಳ್ಳೇದು, ಶಾರಿ ಮತ್ತ ನಾನು ಹೋಗ್ತಿವಿ.

ಉಮಾ — ನಾಳೆ ಯಾವಾಗ ಹೋಗೋದು, ಹೇಳಿ ಹೋಗರಿ!

ಶಂಕರಣ್ಣ— ಹೇಳದೂ ಕೇಳದೂ, ಹೋಗ್ತೀನೇನು ?.....
ಇಮ್ಯಾಲ ಹೇಳ್ತೀನಿ ?

ಶಾರದಾ— ಅಪ್ಪಾ ನಾಳೆ, ಹಂಗಾರ, ನಾನೂ ನೀನೂ ಕೋಗೋದಲ್ಲಽ ?

ಶಂಕರಣ್ಣ— ಹುಂ !

ಶಾರದಾ— ಹಂಗಾರ ಯಾವ್ಯಾವ ಪತ್ರಲಾ ತೊಗೊಳ್ಳಿ ಹಂಗತೀಲೆ ?

ಶಂಕರಣ್ಣ— ಯಾವ್ಯಾವ ಪತ್ರಲಾ ? ಅಂದರೆ ಎಷ್ಟು ಪತ್ರಲಾ ತೊಗೊಳ್ಳೋವಾಕಿದ್ದೀ ? ಅಲ್ಲೇನು ನಿನ್ನ ವಸ್ತ್ರಾಪಹರಣ ನಾಟಕದೂ ಹಂತ ತಿಳಿದೀಯೇನು ?

ಶಾರದಾ— ಹೋಗೊ ! ಹೀಂಗ್ಯಾಕಂತೀ !

ಶಂಕರಣ್ಣ— ಮತ್ತೇನೂ ಹೆಂಗಾರ ? ಶ್ರೀಪಾದ ವಿಮಾನದಿಂದ ಇಳಿಯೋ ಪುರಸತ್ತಿಲ್ಲದ ಹೊರಟು ಬರೋದು. ಉಟ್ಟೊದ್ದೊಂದು ಇದ್ದರ ಸಾಕು !

ಉಮಾ— ಶಾರೀ, ನೀ ಹುಚ್ಚುಡ್ಯಾರ ಅವರಿಗೇನೂ ಕೇಳ್ಯಾದ, (ಬಾಗಿಲನ್ನು ಬಡಿದ ಸಪ್ಪಳ, 'ಶಂಕರಣ್ಣ, ಶಂಕರಣ್ಣ' ಎಂಬ ಕೂಗು)

ಶಂಕರಣ್ಣ— ನರಹರಿ ಕಾಣಿಸ್ತದ. ಶಾರೀ, ಬಾಗಿಲಾ ತಗಿ.

ಉಮಾ — ಅತ್ಯು ಸ್ನೇಹಿತರಿದಿರಿಗಷ್ಟು ಕೊಚ್ಚಿಗೊಂಬೋ. ಬಾಗಲಿ. ನಾ ಎದುರಿಗಿರೋದು ಬ್ಯಾಡ.

(ನರಹರಿ ಬರುವನು.)

ಶಂಕರಣ್ಣ— (ನರಹರಿಗೆ) ಬಾರೊ. ಶಾರಿ, ಎರಡು ಕಪ್ ಕಾಫಿ ಮಾಡಿಕೊಂಡು ಬಾರವಾ. ಅದರ ಜೋಡಿಗೆ ತಿನ್ನಲಿಕ್ಕೆ ಏನಾರೆ ಇದ್ದರ ತೊಗೊಂಡು ಬಾ !

ಶಾರದಾ— ಹುಂ.

ನರಹರಿ— ಉಂ.....ಶ್ರೀಪಾದಂದು ಮತ್ತೇನಪಾ ಸುದ್ದಿ ?.....ಇಷ್ಟು ಲಗು ಏನು ಬರ್ತದ ಅನ್ನು; ಮೊನ್ನೆ ಇನ್ನೂ ಪತ್ರ ಬಿದ್ದದ interview ಆದದ್ದು.

ಶಂಕರಣ್ಣ— ಇಲ್ಲ, ದಿಲ್ಲಿಯಿಂದ ಫೋನ್ ಕಾಲಽ ಬಂದಿತ್ತೀಗ ! ಫೀಸ್ಟಿಗೆ ಹೋಗಿ ಮಾತಾಡೇ ಬಂದೆ. ಇದಽ, ಬಂದು ಐದು ಮಿನಿಟು ಆತ್ಯು.

ನರಹರಿ— ಹೀಂಗಽ ? ಏನಂತ ?

ಶಂಕರಣ್ಣ— Appointment ಆಗೇ ಬಿಟ್ಟಿತು ! ಶಾಮರ್ಸ್ ಅಪಾರ್ಟ್‌ಮೆಂಟಿನಾಗ ! ನಾಲ್ಕುನೂರು ರೂಪಾಯಿ ಪಗಾರಂತ ! ಲಿಕ್ಕೆ ಮನಿ ಸಹಿತ ಸಿಕ್ಕೈತು ಹೋಗು !

ನರಹರಿ— ಹೊಗ್ಲೋ ನಿನ ! ಏನು ದೈವಾನಪಾ ಶ್ರೀಪಾದ ತೀನಿ ?

ಶಂಕರಣ್ಣ— ನಾಳೆ ವಿಮಾನದಿಂದ ಬರ್ತಾನ !

ನರಹರಿ— ಅಬಬಬಬ ! ಹಾಂ !

ಶಂಕರಣ್ಣ— ಹಾಜರಾಗೋ ಮೊದಲು ಎಂಟು ದಿನ ಇದ್ದು ೀಗ್ತಾನಂತ.

ನರಹರಿ— ವಿಮಾನೇನು ಇಲ್ಲಿಗೇ ಬರ್ತದೇನು ?

ಶಂಕರಣ್ಣ— ಇಲ್ಲಿಗೆ ಹ್ಯಾಂಗ ಬಂದೀತೋ ಹುಚ್ಚಾಽ ? ಬೆಳಗಾಂವಿಗೆ ಬಂದು ಇಳೀತಾನ. ನಾ ಬೆಳಗಾಂವೀ ತನಕ ಹೋಗ-ಬೇಕು ಅಂತೀನಿ. ಶಾರದಾನೂ ಬರ್ತಾಳ.

ನರಹರಿ— ಮತ್ತ ಉಮಾಬಾಯರು ?

ಶಂಕರಣ್ಣ— ಅಕಿ ಬರೋದಿಲ್ಲಂತ. ಬಿಡವಳ್ಳಾಕ.

ನರಹರಿ— ಅಲ್ಲೊ ಶಂಕರಣ್ಣಾ, ಒಂದು Taxi ಯಾಕ ಮಾಡೋದಿಲ್ಲ ? ಸುಸೂತ್ರಪಾ ಅದು.

ಶಂಕರಣ್ಣ— ಹೌದು ನೋಡು. ಹಾಂಗs ಮಾಡೋಣಂತೀನಿ. ನೀನೂ ಬಂದುಬಿಡು.

ನರಹರಿ— ಬರಬೇಕಾತೆಪಾ ಅವನ್ನ ನೋಡಲಿಕ್ಕೆ, ಶಂಕರಣ್ಣ ! ಖರೆಯಂದರೂ ನನಗ ಬಹಳ ಆಂದರ— ಬಹಳ ಆನಂದಾಗೇದ ನೋಡು ಇದನ್ನ ಕೇಳಿ ! ನಿನಗ ಹರ್ಷವಾಯು ಹ್ಯಾಂಗ ಆಗಿಲ್ಲ ಅಂತೀನಿ ?

ಶಂಕರಣ್ಣ— (ವಿಕಟವಾಗಿ ನಗುತ್ತ) ಹೂಽ.....ಹೂ.....ಹೂ.....ಹೂ—

ನರಹರಿ— ಅಲ್ಲೊ, ನಾ ಹೀಂಗ ಅಂದಕೂಡಲೆ ಹರ್ಷವಾಯು ಆತ್ಯೇನು ಮತ್ತ ?

ಶಂಕರಣ್ಣ— ನನಗ ಹರ್ಷವಾಯೂನೆ ? ಹೂಽ ಹೂಽ ! ನನಗ ಹರ್ಷವಾಯು !

ನರಹರಿ— ಯಾಕ ? ನಿನಗಾಗದ ಇನ್ಯಾರಿಗೆ ಆಗಬೇಕು ?

ಶಂಕರಣ್ಣ— ಹಾಂಗ ಆಗಿ, ಹುಚ್ಚು ಹಿಡಿದಿದ್ದರ ಒಂದು ರೀತಿ ಸುಖ ಇತ್ತು, ಅಂತೀನಿ !

ನರಹರಿ— ಯಾಕ ಹೀಂಗ ಮಾತಾಡ್ತೀ, ಶಂಕರಣ್ಣ ?

ಶಂಕರಣ್ಣ— ನಿನಗರಿಯದ ವಿಷಯ ಅದಯೇನು ನರಹರಿ ?

ನರಹರಿ— ಆದರೂ ಇಂಥಾ ಸುದ್ದೀ ಕೇಳಿ, ಯಾರಿಗೆ ಆನಂದ ಆಗಲಿಕ್ಕಿಲ್ಲ ?

ಶಂಕರಣ್ಣ— ಆಗಬೇಕು ಖರೆ. (ಉಸಿರ್ಗರೆಯುತ್ತಾನೆ.) ಶಾರದಾ ಕಾಫಿ ತಂದ್ಲು; ತೊಗೊ ನರಹರಿ. ಶಾರೀ, ನೀನು ಬಾಗಲಾ ಮುಂದಮಾಡಿಕೊಂಡು ಹೋಗು.

ಶಾರದಾ— ಹುಂ. (ಬಾಗಿಲ ಹಾಕಿಕೊಂಡ ಸಪ್ಪಳ.)

ನರಹರಿ— ಅಲ್ಲ ಇಂಥಾ ಆನಂದದ ವ್ಯಾಳ್ಯಕ್ಕೂ ನಿನಗ ಅಸಮಾಧಾನ ಆಗೋಹಾಂಗ..... — — —

ಶಂಕರಣ್ಣ— ಹಂಡೇತುಂಬ ಹಾಲೊಳಗ ಹೆಳ್ಳುಪ್ಪು ಒಗದರ ಏನಾಗ್ತದ ?

ನರಹರಿ— ಯಾಕ ಹಿಂಗ ಅಂತೀ ಶಂಕರಣ್ಣ ?

ಶಂಕರಣ್ಣ— ದೈವ ಇನ್ನದು, ನರಹರಿ ! ಯಾರಿಗಂದೋದದ ? ಹದಿನೆಂಟು ವರ್ಷದ ಹಳೇರೋಗ ಅದು; ನಿನ್ನೆ ಮೊನ್ನಿನದಲ್ಲ.

ನರಹರಿ— ಅಂದರ ಏನಂತೀ ನೀನು, ಶಂಕರಣ್ಣ ? ನನಗ ಒಡಪಿನ್ಹಾಂಗ ಹೇಳಬ್ಯಾಡ. ಬಿಚ್ಚುಮಾತಿನಿಂದ ಹೇಳು. ನಿನ್ನ

ಹೆಣ್ತೀ ವಿಷಯ ಮಾತು ಬಂದಾಗೆಲ್ಲ ನೀನು ಹೀಂಗs ಒಡಪಿನ್ಹಾಂಗ ಮಾತಾಡ್ತೀದಿ! ಅದರಿಂದ ನನಗ ಕೆಲವು ಮಾತು ಅರ್ಥಾಗಿಲ್ಲ.

ಶಂಕರಣ್ಣ— ಹೇಳೋದು ಕಠಿಣದ ನರಹರಿ! ಎಷ್ಟೋ ತನ್ನ ಮಾತು, ತನ್ನ ಹೊರತು ಯಾರಿಗೂ ತಿಳೀಬಾರದು ಅಂತ ಅನಿಸ್ತದ!

ನರಹರಿ— ಹಿಂಗ ನಿನಗ ಅನಿಸ್ತಿದ್ದರ ಬ್ಯಾಡ, ಹೇಳಬ್ಯಾಡ. ಯಾವುದs ತನ್ನ ಕಷ್ಟ-ತನ್ನವರಿಗೆ ಹೇಳಿಕೊಂಬೋದು, ತನ್ನ ಎದೀ ಭಾರ ಕಡಿಮಿ ಆಗಲಿ ಅಂತ. ಯಾರಿಗೂ ಹೇಳದಂಥಾ ಮಾತೂ ಇರಬಹುದು ಒಬ್ಬೊಬ್ಬರ ಜೀವನದೊಳಗ ಹಾಂಗ ನಿನ್ನದೂ ಇದ್ದರ ನನಗ ಗೊತ್ತಿಲ್ಲ ಇನ್ನ ಮುಂದ ನೀ ಹೇಳಿದ್ದನ್ನಷ್ಟs ಕೇಳಿಕೋತೀನಿ.

ಶಂಕರಣ್ಣ— ನರಹರಿ, ನಾ ಆಡಿದ ಮಾತಿನಿಂದ ನಿನ್ನ ಹೃದಯಕ್ಕ ನೋವಾತೇನು? ಈಗ ಹದಿನೆಂಟು ವರ್ಷ ಹುದಿಗಿಸಿಟ್ಟ ಆ ಮಾತು— ಈಗಲಾದರೂ ಯಾಕ ಹೇಳಬೇಕು ಅಂತ?

ನರಹರಿ— ಬ್ಯಾಡ, ಹೇಳಬ್ಯಾಡ....ಪಾಪ!

ಶಂಕರಣ್ಣ— ಆದರ ಈಗದು ನನ್ನ ಹೊಟ್ಟೇ ಬಿರಿದು ಹೊರಬೀಳೋ ಸ್ಥಿತಿಗೆ ಬಂದsದ!

ನರಹರಿ— ಹುಂ.

ಶಂಕರಣ್ಣ— ಆದರಿಂದ ನನ್ನ ಅಂತಃಕರಣಕ್ಕ ಆಗ್ತಿರೋ ತಳಮಳ ನಾನೇ ಬಲ್ಲೆ.

ನರಹರಿ— ಹುಂ.

ಶಂಕರಣ್ಣ— ನಾ ಹೀಂಗs ಸತ್ತೆ ಅಂದರ, ಅದು ಯಾರಿಗೂ ತಿಳೀಲಿಕ್ಕೂ ಇಲ್ಲ.

ನರಹರಿ— ಏನು ಕಾರಣದ ತಿಳಿಯೋದು? ನಮ್ಮ ಎಲ್ಲಾ ಮಾತೂ ಪ್ರಪಂಚಕ್ಕ ತಿಳೀಬೇಕು ಅಂತ ಎಲ್ಲ್ಯದ?

ಶಂಕರಣ್ಣ— ಇಲ್ಲ, ಒಬ್ಬರಿಗಾದರೂ ತಿಳಿದಿರೋದು ಒಳ್ಳೇದು.

ನರಹರಿ— ಹುಂ.

ಶಂಕರಣ್ಣ— ನಾ ದೋಷಿಯಲ್ಲ....ಅಂತ ಒಬ್ಬನಿಗನಿಸಿದರೂ ಸಾಕು

ನರಹರಿ - ಹುಂ.

ಶಂಕರಣ್ಣ— ಖರೆ ಹುಂಗೊಡಬ್ಯಾಡ. ತಪ್ಪು, ಒಪ್ಪು ಅಂತ ಏನಾರಿ ಹೇಳು.

ನರಹರಿ— ಶಂಕರಣ್ಣ, ಯಾರಿಗೂ ಹೇಳಬಾರದು ಅನ್ನುವವನೂ ನೀನs. ಹೋಗಲಿ ಬಿಡು. ನನಗ ತಿಳೀಬಾರದು ಅಂತಿದ್ದ ಮಾತನ್ನ ನನ್ನ ಮುಂದ ಆಡ್ತೀಯಾದರೂ ಯಾಕ?

ಶಂಕರಣ್ಣ— ನರಹರಿ, ನನ್ನ ಮಾತಿನಿಂದ ನೀನು ನೊಂದುಕೊಂಡೀದಿಯಷ್ಟೇ ಅಲ್ಲ; ನಿನಗೆ ಸಿಟ್ಟೂ ಬಂದsದ.

ನರಹರಿ— ಹೌದು, ಬಂದsದ.

ಶಂಕರಣ್ಣ— ನಾ ಭಾವಿಸಿದ್ದು ಸರಿ ಹೌದಲ್ಲೊ?

ನರಹರಿ— ಸರಿ. ಮುಂದ?

ಶಂಕರಣ್ಣ— ನರಹರಿ, ನೀನೂ ಹೀಂಗ ನಡಕೊಂಡರ ನನ್ನ ಕೊರಗು ಕೇಳಿಕೊಳ್ಳವರ್ಯಾರು?

ನರಹರಿ— ಶಂಕರಣ್ಣ, ನಿನಗ ಹರ್ಷವಾಯು ಯಾಕ ಆಗಿಲ್ಲ ಅಂತ ನಾ ಆಗಿs ಚ್ಯಾಷ್ಟೀಮಾಡಿದೆ. ಆದರ ಬದಲು, ನಿನಗ ಶೋಕವಾಯು ಆಧಾಂಗ ಕಾಣಿಸ್ತದ! ಸಂಭ್ರಮದಿಂದ ಮಗ ಬರ್ತಾನಂಬೋ ನಿನ್ನ ಸೌಭಾಗ್ಯದೊಳಗ ನಾನೂ ಸಹಭಾಗಿಯಾಗಬೇಕು ಅಂತ ಬಂದೆ; ನನ್ನ ತಿಳಿವಳಿಕಿ ತಪ್ಪಾತ್ಯ. ಎಷ್ಟೋ ಜನರಿಗೆ ಸುಖ ಬಂದರೂ ಅದನ್ನ ಭೋಗಿಸೋ ಅದೃಷ್ಟ ಇರೋದಿಲ್ಲಂತ!

ಶಂಕರಣ್ಣ— ಈ ಮಾತು ಅಕ್ಷರಶಃ ಖರೆ ಅದ ನೋಡು, ನರಹರಿ. ಆ ದೈವಗೇಡಿಜನರ ಗುಂಪಿನೊಳಗ ನನ್ನೊಬ್ಬನ್ನೂ ಸೇರಿಸು. ದೈವದ್ದೂ ದರಿದ್ರ ನಾನು!

ಶಾರದಾ— (ಕೋಣೆಯ ಹೊರಗಿಂದ) ಅಪ್ಪಾ, ಕಪ್ಪು ಬಸಿ ಒಯ್ಯಲೇನು?

ಶಂಕರಣ್ಣ— ಒಯ್ಯಲಾ.

(ಒಂದು ನಿಮಿಷ ಮೌನ.)

ಈ ನನ್ನ ಮಗಳ ಬಗ್ಗೆ ನಿನಗೇನು ಅನಿಸ್ತದ, ನರಹರಿ?

ನರಹರಿ - ನನಗ ಇಂಥಾ ಹೇಚುಪೇಚಿನ ಮಾತು ತಿಳಿಯೋದಿಲ್ಲ, ಶಂಕರಣ್ಣ. ನಿನ್ನ ಮಗಳ ಬಗ್ಗೆ ನನಗ ಅನಿಸೋದೇನು? ನಿನ್ನ ಮಗಳೂ ಅಂತ ಅನಿಸ್ತದ!

ಶಂಕರಣ್ಣ— ಹಾಂಗ ಖರೇವಂದರೂ ನಿನಗ ಅನಿಸ್ತsದ?

ನರಹರಿ— ಖರೇವಂದರೂ ಅನಿಸ್ತದ. ಸಂಶಯ ಏನದರಾಗ?

ಶಂಕರಣ್ಣ— ದೇವದಾಣೆಯೆಂದರೂ?

ನರಹರಿ— ಇಂಥಾ ಪ್ರಶ್ನಿಗೆ ನಾ ಉತ್ತರಾ ಕೊಡೋದಿಲ್ಲ. ಶಂಕರಣ್ಣ, ಮೊದಲು ನೀ ಹೀಂಗ ಕೇಳೋದೇ ತಪ್ಪು. ನೀ ಹಾಂಗ ಕೇಳಿದ್ದರಿಂದ ನಾ ಚಾಷ್ಟಿಲೆ ಹಾಂಗ ಹೇಳಬೇಕಾತ್ಯ.

ಶಂಕರಣ್ಣ— ಇಂಥಾ ಚ್ಯಾಷ್ಟಿ.....ಒಮ್ಮೊಮ್ಮೆ ಖರೇನು ಇರ್ತಾವ!

ನರಹರಿ— ಅಂದರ?

ಶಂಕರಣ್ಣ— ಆಕಿ ನನ್ನ ಮಗಳು ಅಂಬೋದು ಚ್ಯಾಷ್ಟೀನ

ನರಹರಿ— ನಿನ್ನ ಶಲಿ ಸಮ ಇಲ್ಲ ಇವತ್ತು!

ಶಂಕರಣ್ಣ— ಪೂರಾ ಸಮ ಅದ. ಇದs ನಾ ಯಾರಿಗೂ ಉಸುರದೇ ಇರೋ ಮಾತು, ನರಹರಿ! ಅಂತೇ ನನಗ ಇದುವರೆ ಉಸಿರುಗಟ್ಟಿತ್ತು! ಈಗ ಆ ಉಸಿರುಬಿಟ್ಟೆ! (ಇದನ್ನು ಹೇಳುವಾ ನಿಡಿದಾಗಿ ಉಸಿರುಬಿಡುತ್ತಾನೆ.) ಈ ನನ್ನ ನಿಶ್ವಾಸದ ಅಳ ನಿನಗ ಪೂರ್ತಾ ಅರ್ಥಾಗಿಲ್ಲ, ನರಹರಿ!

ನರಹರಿ— ಆಗೋದು ನನಗ ಬೇಕಾಗಿಲ್ಲ.

ಶಂಕರಣ್ಣ— ಇಲ್ಲ, ಪೂರಾ ಕೇಳಿಕೊ ಒಮ್ಮೆ, ನನ್ನ ಮದಿವ್ಯಾಗಿ— ಅಂದರ ಎರಡನೆ ಮದಿವ್ಯಾಗಿ— ಎಷ್ಟು ವರ್ಷಾತ್ಯ ಅಂತ ನಿನ್ನ ಅಂದಾಜದ?

ನರಹರಿ— ಆಗಿದ್ದೀತು ಹದಿನೆಂಟು ಇಪ್ಪತ್ತು ವರ್ಷ.

ಶಂಕರಣ್ಣ— ಇಪ್ಪತ್ತು ವರ್ಷಲ್ಲ; ಹದಿನೆಂಟು ವರ್ಷದ ಮ್ಯಾಲೆ ಏಳು ತಿಂಗಳು ನಿನ್ನೆಗೇ ಮುಗಿದುವು!

ನರಹರಿ— ಇದ್ದೀತು.

ಶಂಕರಣ್ಣ— ನನ್ನ ಮಗಳು ಅಂಬೋ ಶಾರದಾಗ ಎಷ್ಟಿದ್ದಾವು ಅಂತೀದಿ ?

ನರಹರಿ— ಆಕೇ ಜನನದಾಖಲೆ ನನ್ನ ಹತ್ತರಿಲ್ಲ, ಮಹಾರಾಯಾ !

ಶಂಕರಣ್ಣ— ಹೋಗಲಿ. ನನ್ನ ಮದಿವ್ಯಾಗಿ ಎಷ್ಟು ತಿಂಗಳಿಗೆ ಶಾರದಾ ಹುಟ್ಟಿದ್ದು ಅಂತ ನಿನ್ನ ತಿಳಿವಳಿಕಿ ಅದ ?

ನರಹರಿ— ಇವೆಲ್ಲ ನಿನಗ ಗೊತ್ತಿರೋ ಮಾತು. ಶಂಕರಣ್ಣ, ಈ ತರದ ಪ್ರಶ್ನೀ ಯಾಕ ನನ್ನ ಕೇಳ್ತೀ ? ಸಂಸಾರದೊಳಗ ನಿನಗ ಸಮಾಧಾನ ಇಲ್ಲ ಅನ್ನೋದನ್ನ ನಾ ನೋಡ್ತೀನಿ. ಅದಕ್ಕ ಎರಡನೇ ಸಂಬಂಧದ ವೈಷಮ್ಯನು ಕಾರಣಿದ್ದರ—ಹಾಂಗ ನೋಡಿದರ ನೊದಲನೇದೇನು, ಎರಡನೇದೇನು ಪ್ರತಿಯೊಂದು ಗಂಡ-ಹೆಂಡಿರ ಸೋದಿಯೊಳಗೂ ವೈಷಮ್ಯ ಅಡಗಿನು ಅವ—ಅದಕ್ಕ ಪರಸ್ಪರರ ಬಗ್ಗೆ ಪ್ರೀತಿಯ ಜೊತೆಗೆ ತ್ಯಾಗದ ಭಾವನೆಯೂ ಬೇಕು, ಗೌರವದ ಭಾವನೆಯೂ ಬೇಕು. ಆವತ್ತ, ನಿನ್ನ ಹೆಂಡತಿಯ ಬಗ್ಗೆ ನೀನಾಡೋ ಮಾತು ನನಗ ಎಳ್ಳಷ್ಟೂ ಒಪ್ಪಿಗಿಲ್ಲ ಶಂಕರಣ್ಣ. ಈಗ ಹದಿನೆಂಟು ವರ್ಷ ಉಮಾಬಾಯೀರ್ನ ನೋಡ್ತೀನಿ.

ಶಂಕರಣ್ಣ— ಇಲ್ಲ, ಮದಿವಿ ಅದಮ್ಯಾಲ ಆಕಿ ನಂಬಿಗೀ ಕಳಕೊಂಡಿಲ್ಲ.

ನರಹರಿ – ಮತ್ತ ?

ಶಂಕರಣ್ಣ— ನಮ್ಮ ಮದಿವಿಗೆ ಮೊದಲಿನ ಮಾತು! (ಉಸಿರೆಳೆಯುತ್ತಾನೆ.)

ನರಹರಿ— ಇದನ್ನಾದರೂ ನಂಬೋಪ್ಹಾಂಗ ?

ಶಂಕರಣ್ಣ— ಅದರ ಬಗ್ಗೆ ನನಗ ಈಗ ಖಾತ್ರಿ ಆಗೇದ! ಶಾರದಾನ ವಿಷಯದಲ್ಲಂತೂ ಆಪತ್ಯಪ್ರೇಮ ಅಂಬೋ ಭಾವನೆಯೇ ಬರಪೊಲ್ಲದು!

ನರಹರಿ— ಮತ್ತ ಶ್ರೀಪಾದನ ಬಗ್ಗೆ ?

ಶಂಕರಣ್ಣ— ಶ್ರೀಪಾದನ ? ಅಂವ ನನ್ನ ಶ್ರೀಪಾದ! ನನ್ನ ರಕ್ತದ ಪಿಂಡ! ನನ್ನದೇ ಅಂಶ! ನನ್ನ ಸರ್ವಸ್ವ! ನನ್ನ ವಂಶದ ಆಧಾರ! ನಾಳೆ ನನ್ನ ಶ್ರೀಪಾದ ಬರ್ತಾನ; ನನ್ನ ಪೂರ್ಣಚಂದ್ರ ಬರ್ತಾನ ಅಂತ ನನ್ನ ಹೃದಯಸಮುದ್ರ ಉಕ್ಕೇರಿ ಸ್ವಾಗತಿಸಬೇಕು ಅಂದರ, ನನಗಂಟಿಕೊಂಡ ವಿಧಿ ನನ್ನ ಬೆನ್ನು ಬಿಡೋಹಾಂಗಿಲ್ಲ!

ಉಮಾ—'ನಿಮ್ಮ ವಿಕಾಂತ ಮುಗೀತೋ ಇಲ್ಲೋ ? (ಬಾಗಿಲ ಹೊರಗಿಂದ ದನಿ ಕೇಳಬರುತ್ತೆ.)

ಶಂಕರಣ್ಣ— (ಸಣ್ಣದನಿಯಲ್ಲಿ) Think of the devil and she is there! (ಗಟ್ಟಿಯಾಗಿ) ಮುಗೀತು. ಯಾಕ ? ಬಾ ತಿಲ್ಲ ಒಳಗ.

ಉಮಾ— (ಒಳಗೆ ಬಂದು) ನಾಳೆ ಯಾವಾಗ ಹೊರಡ್ತೀರಿ ?

ಶಂಕರಣ್ಣ— ಯಾಕ ?

ಉಮಾ— ಯಾಕ ಕೇಳಬಾರದೇನು ?

ಶಂಕರಣ್ಣ— ಕೇಳಲ್ಲ.

ಉಮಾ— ಅದಕ್ಕss ಕೇಳಿದೆ.

ಶಂಕರಣ್ಣ— ಮುಂಜಾನೆ.....ಹತ್ತು ಗಂಟೆಯ ಸುಮಾರಿಗೆ.

ಉಮಾ— ನಾನೂ ಬರ್ತೀನಿ.

ಶಂಕರಣ್ಣ— (ಆಶ್ಚರ್ಯಗೊಂಡು) ನೀನೂ ಬರ್ತೀದಿ ? ಒಳ್ಳೇದss ಆತ್ಯ.

ಉಮಾ— ಯಾಕ ಆಶ್ಚರ್ಯಾತೇನು—ನಾ ಬರ್ತೀನಿ ಅಂದರ?

ಶಂಕರಣ್ಣ— ಅಂದರ—ಪೊದಲು ಬರೋದಿಲ್ಲ ಅಂತ ಹೇಳಿದ್ದಿ.

ಉಮಾ— ಹೌದು, ಈಗ ಬರಬೇಕು ಅಂತ ಅನಿಸಿತು! ಮಲತಾಯಿ—ಯಾಕ ಹೋದಾಳು—ಅಂತ ಹಲರ್ದಿ ಹೊರೋದು ಬ್ಯಾಡ!

ಶಂಕರಣ್ಣ— ಛೆಲೋದss ಆದು!

ಉಮಾ— ಈಗ ನಾ ಬಂದರೂ ತೋರಗಾಣಿಕೇಗೆ ಹೋದಳೂ ಅಂತಾರ; ಅಸವೊಲ್ಲರ್ಯಾಕ. ನಾ ನಾಳೆ ಬರೋವಾಕಿ !

ನರಹರಿ— ಅತ್ತಿಗಿ, ನೀವೂ ಹೊರಡೋದು ಅಂತ ಮಾಡಿದ್ದು ಭಂಗಾರವಂಥಾ ಮಾತು. ನಾನೂ ಬರ್ತೀನಿ ನಿಮ್ಮ ಜತಿಗೆ.

ಶಂಕರಣ್ಣ— ನರಹರಿ, ನಾಳೆ ಒಂದು ಟ್ಯಾಕ್ಸೀನss ಗೊತ್ತು ಮಾಡಿಬಿಡಪಾ.

ನರಹರಿ— ಆಗಲಿ.

× × × ×

(ಶ್ರೀಪಾದ ಮನೆಯಲ್ಲಿ ಒಬ್ಬನೇ ಓದುತ್ತ ಕುಳಿತಿದ್ದಾನೆ, ಹೊರಗಿಂದ ರಂಕರಣ್ಣ ಎರುತ್ತಾನೆ.)

ರಂಕರಣ್ಣ— ಶ್ರೀಪಾದ! (ಹೊರಗಿಂದ ಕೂಗುತ್ತಾನೆ.)

ಶ್ರೀಪಾದ— ಬಂದೆ. (ಬಾಗಿಲು ತೆರೆದ ಸಪ್ಪಳ.)

ರಂಕರಣ್ಣ— ಏನು ಓದತಾ ಕೂತಿದ್ದೇನು ?

ಶ್ರೀಪಾದ— ಹೌದು.....ನಾ ಒಬ್ಬನss ಮನಿಯೊಳಗ.

ಶಂಕರಣ್ಣ— ಯಾಕ ? ಇವರೆಲ್ಲಿ ಹೋಗ್ಯಾರ ?

ಶ್ರೀ— ಎಲ್ಲೊ ಅರಿಷಿಣಾ-ಕುಂಕುಮಕ್ಕ ಹೋದರು....ಮುಗೀತೇನು ಗೀತಾಪ್ರವಚನ ?

ಶಂಕ— ಮುಗೀತು. ನೀನೂ ಓದತss ಕೂತಿದ್ದೇನು ?

ಶ್ರೀ— ಹುಂ. ಇದು 'My son' ಅಂತ ಒಂದು ಕಾದಂಬರಿ, ಬಹಳ ಛೆಲೋ ಇದ

ರಂಕ— ನಂದೂ ಬರೆದರ ಒಂದು ಒಳ್ಳೇ ಕಾದಂಬರೀನss ಆಗ್ತದ, ಶ್ರೀಪಾದ.

ಶ್ರೀ — ಪ್ರತಿಯೊಬ್ಬರ ಜೀವನದ್ದೂ ಬರೆದರ ಒಂದು ಕಥೀ ಆಗೇ ಆಗ್ತದ ಅದನ್ನ ಬರೆಯುವ ಮಾತ್ರ ಕುಶಲ ಬೇಕು.

ಶಂಕ— ಅದರ ನನ್ನ ಜೀವನದ ಕಥೀ ಒಂದು ಬ್ಯಾರೇನss ಅದ, ಶ್ರೀಪಾದ! ಹೇಳಿದರ ಬಹಳ ಆಶ್ಚರ್ಯ ಅನಿಸೋ ಹಾಂಗನ, ನಿನಗ ಇನ್ನೂ ಕೆಲವು ವಿಷಯ ಗೊತ್ತಿಲ್ಲ.

ಶ್ರೀ— ಆದರ ನಾಯೇನು ಕಾದಂಬರೀಕಾರಲ್ಲ, ನಾಟಕಕಾರಲ್ಲ! ಇಷ್ಟಾಗಿ, ನಾನೂ ನಿನ್ನ ಕಥೆಯೊಳಗಿನದೇ ಒಂದು ಪಾತ್ರ ಅಲ್ಲೇನು ?

ಶಂಕ— ಆಗದಿ ಖರೇ ಆದ. ಇವತ್ತಿನ ಪ್ರವಚನದೊಳಗ ಇದs ಮಾತs ಬಂದಿತ್ತು. ಪರಮಾತ್ಮ ಈ ಜಗತ್ತಿನ ಸೂತ್ರಧಾರಕ, ನಾವು ಕೇವಲ ಪಾತ್ರ ಅಂತ. ಹಾಂಗಾದರ ಮನುಷ್ಯ ಹೀಂಗ್ಯಾಕ ನಡೀತಾನ ಅಂದರ, ' ಬುದ್ಧಿಃಕರ್ಮಾನುಸಾರಿಣಿ ' ಅಂತ. ಕರ್ಮದಂತೆ ಬುದ್ಧಿ; ಬುದ್ಧಿಯಂತೆ ಕರ್ಮ.

ಶ್ರೀ — ಹೌದು, ಇದೂ ಒಂದು ಕರ್ಮಚಕ್ರ !

ಶಂಕ— ಹಂ. ಹೌದು ನೋಡು! ಕರ್ಮಚಕ್ರ ಅಂಬೋದು ಸುಳ್ಳಲ್ಲ. ಆದs ನನ್ನ ಕಾಡತಾ ಇರೋದು! ಇನ್ನೊಂದು ಉದಾಹರಣೆ ಕೊಟ್ಟರು ಶಾಸ್ತ್ರಿಗಳು. ' ಯಥಾ ಕಾಷ್ಠಂಚ ಕಾಷ್ಠಂಚ ಸಮೇ ಯಾತಾಂ ಮಹೋದಧೌ' ಅಂತ! ಸಮುದ್ರದೊಳಗ ನಾಲ್ಕೂ ಕಡೆಯ ಕಟಗೀ ತುಂಡು ಒಂದೇ ಕಡೆಗೆ ಕೂಡಿ ಮತ್ತೆ ಅಗಲೋ ಹಾಂಗ, ನಾವೂ ಈ ಸಂಸಾರಸಾಗರದೊಳಗ ನಾಲ್ಕು ದಿನ ಕೂಡ್ತೀವಿ ಮತ್ತ ಅಗಲ್ತೀವಿ. ಆದರ ಕಟಗೀ ತುಂಡಿಗೀ ಭಾವನಾ ಎಲ್ಲಿರ್ತಾವ, ಶ್ರೀಪಾದ? ಕೂಡಿದರೂ ಅಷ್ಟs, ಅಗಲಿದರೂ ಅಷ್ಟs.

ಶ್ರೀ.— ಭಾವನಾ ಇರೋದಿಲ್ಲ, ಖರೆ. ಅವುಗಳ ಹಾಂಗs ಮನುಷ್ಯನಾದರೂ ಕೂಡಬೇಕು, ಅಗಲಬೇಕು—ಅಂತ ಹೇಳತಾರ.

ಶಂಕ— ಅದು ಹ್ಯಾಂಗ ಶಕ್ಯ ಅದ, ಶ್ರೀಪಾದ? ನೀ ಇನ್ನ ಮೂರು ದಿನಕ್ಕ ಹೊರಡೋದು ಅಂತೀ; ಈಗಿಂದsನs ನನ್ನ ಪ್ರಾಣ ಕಸವಿಸಿ ಆಗಲಿಕ್ಕೆ ಹತ್ತೈತೀದ.

ಶ್ರೀ — ಹೌದು, ಆ ತಾರೀಖಿಗೆ ಹಾಜರಾಗೋದು ಅಂದರ ತಪ್ಪಿಸಲಿಕ್ಕೆ ಬಾರದು. ಅಪ್ಪಾ, ಇವೊತ್ತು ನಿನ್ನ ಜತಿಗೆ ಇದರ ಬಗ್ಗೇ ಮಾತಾಡಬೇಕು ಅಂತಿದ್ದೆ.

ಶಂಕ— ಹಿಂಗs? ಅನಾಯಾಸ ನಾವಿಬ್ಬರೇ ಇದ್ದೀವಿ, ಅದೊಂದು ಒಳ್ಳೇದs. ನೀನು ಬಂದ ಮ್ಯಾಲ ನಾವು ಹಿಂಗ ಇಬ್ಬರs ಇರಲಿಲ್ಲ. ಇರಲಿ.....ಏನಂತೀ ?

ಶ್ರೀ— ನಿನಗಂತೂ ಪೆನ್‌ಶನ್ ಅತ್ಯ.

ಶಂಕ— ಅತ್ಯಪಾ.

ಶ್ರೀ— ಇನ್ನ ನೀವು ಇಲ್ಲೇ ಇರಬೇಕು ಅಂಬೋ ಅಗತ್ಯ ಏನದ ?

ಶಂಕ— ಅಂದರ ನಾನೊಬ್ಬನೇ ಅಂತೀಯೋ ನಾವೆಲ್ಲರೂ ಅಂತೀಯೊ ?

ಶ್ರೀ— ನೀವು ಎಲ್ಲರೂ.

ಶಂಕ — ಮತ್ತ ಮನಿ?

ಶ್ರೀ— ಅದನ್ನ ತೆಗೆದೇ ಬಿಡೋದು.

ಶಂಕ— ತಗದು ?

ಶ್ರೀ— ' ಚಲೊ ದಿಲ್ಲಿ ' ! ಎಲ್ಲಾರು ಅಲ್ಲೇ ಇದ್ದುಬಿಡೋದು. ಇಲ್ಲೀ ಮನಿ ಬಾಡಿಗೆ ಕೊಡಲಿಕ್ಕೆ ಬರ್ತದ; ಅದರದೇನು ? ಅಪ್ಪಾ, ನನ್ನ ಹತ್ತಿರ ನೀವಿನ್ನ ಯಾವಾಗ ಇರ್ತವರು ? ಈಗ ಇಪ್ಪತ್ತು ವರ್ಷ ಆಗಲಿದ್ದೀವಿ. ಸಾಕಿಷ್ಟು! ಮುಪ್ಪಿನಕಾಲಕ್ಕ ಪರಮಾರ್ಥಚಿಂತನ ಮಾಡ್ತ ನನ್ನ ಜತೆಗೆ ಸಮಾಧಾನದಿಂದ ಇದ್ದು ಬಿಡಿರಿ. ನನಗೂ ಸೌಖ್ಯ ಸಿಕ್ಕೀತು..... ಇದುನರೆಗೆ.....ಪರದೇಶಿಯಾಗಿದ್ದೆ. (ಕುತ್ತಿಗೆ ಬಿಗಿದು ಬರುವುದು.)

ಶಂಕ— (ಒಮ್ಮೆಲೆ ಭಾವನೆ ಉಮ್ಮಳಿಸಿ, ಶೋಕ ಆವರಿಸಿ) ಹೌದು. ನೀನೂ ಪರದೇಶಿ ಆಗಿದ್ದಿ; ನಾನೂ ಪರದೇಶಿ ಆಗಿದ್ದೆ. ನನ್ನವರು ಅಂಬವರು ಯಾರಿದ್ದಾರ ನಿನ್ನ ಹೊರ್ತು ನನಗ ? ನಾ ಹತ್ತಿರ ಇರಬೇಕು ಅಂತ ನಿನಗ ಹೆಂಬಲ, ನೀ ಹತ್ತಿರ ಇರಬೇಕು ಅಂತ ನನಗ ಹೆಂಬಲ! ಆದರ....ನಮ್ಮ ದುರ್ದೈವ..... ನಮ್ಮನ್ನು ಕೂಡಗೊಡಲಿಲ್ಲ.

ಶ್ರೀ— ಅಪ್ಪಾ, ಯಾವುದಕ್ಕೂ ಕೊನಿ ಅಂಬೋದದನs ಆದ, ಇಪ್ಪತ್ತು ವರ್ಷದ ಈ ಹೆಂಬಲ ಈಗ ಕೈಗೂಡೋ ಕಾಲ ಬಂದಿರ. ಬಹುದು!

ಶಂಕ— ಏನೋಪ್ಪ, ಹಾಂಗನಲಿಕ್ಕೆ ನನಗೇಕೋ ಧೈರ್ಯ ಇಲ್ಲ. ಇಲ್ಲೀವರೆಗೆ ಆದದ್ದಾತ್ಯ, ಇನ್ನು ಮುಂದಾದರೂ ನಾವೆಲ್ಲರೂ ಕೂಡಿ ಇರೋದಾದರ.....ಆ ಸುಖದ ಮುಂದ ಯಾವ ಸುಖ ಆದ? ಆದರ.....ನಿನ್ನ ಮಲತಾಯಿ ಒಂದು ಒಪ್ಪಬೇಕಲ್ಲಪಾ ?

ಶ್ರೀ— ಅವ್ವಗ ನಾ ಹೇಳ್ತಿನಿ. ಅಪ್ಪಾ, ಇಲ್ಲೀವರೆಗೆ ಏನಾತ್ಯೋ ಆತ್ಯು. ನನಗೂ ಶಿಕ್ಷಣಕ್ಕಾಗಿ ದೂರ ಇರಬೇಕಾಯ್ತು. ನೀವೂ ಕೆಲಸದ ಮ್ಯಾಲ ಅಡ್ಡಾಡತಿದ್ದಿರಿ. ಈಗ ನನ್ನ ಶಿಕ್ಷಣಾನೂ ಮುಗೀತು- ನಿಮ್ಮ ನೌಕರೀನೂ ಮುಗೀತು. ಸಾಕೆನ್ನ ಈ ಅಗಲಿಕಿ.

ಶಂಕ— ಎಲಾ ಖರೆ, ಶ್ರೀಪಾದ! ಈಗ ನಾಲ್ಕು ದಿನ ಆತ್ಯ ನೀ ಬಂದು, ಆಕೀ ಜತಿಗೆ ಸಾಕಷ್ಟು ಕೂಡಿದ್ದೀದಿ, ಅವಳ ಸ್ವಭಾವ ಹ್ಯಾಂಗ ಅಂಬೋದು ಕಂಡುಕೊಂಡೀಯೇನು ?

ಶ್ರೀ— ಹಾಂಗ ಹೇಳೋದು ಬಹಳ ಕಠಿಣ ಆದ. ನಿಜವಾಗಿ ಹೆಣ್ಣುಮಕ್ಕಳ ಸ್ವಭಾವದ ಪರೀಕ್ಷಾ ನನಗ ಸಾಕಷ್ಟಿಲ್ಲ. ಯಾಕಂದರ ನಾ ಚಿಕ್ಕsವ ಇರತsನs ತಾಯಿ ತೀರಿಕೊಂಡಳು, ಅಂತ ತಾಯೀ ಸ್ವಭಾವ ಗೊತ್ತಾಗಲಿಲ್ಲ. ತಂಗೆಂದರ ಜತೀಗೆ ಬೆಳೀಲಿಲ್ಲ ಅಂತ ತಂಗೆಂದಿರ ಸ್ವಭಾವ ಗೊತ್ತಾಗಲಿಲ್ಲ. ಹೆಣ್ತಿ ಅಂತೂ ಇನ್ನೂ ಬರಲೇ ಇಲ್ಲ! ಅಂದಮ್ಯಾಲ ನನಗ ನೀ ಅಭಿಪ್ರಾಯ ಕೇಳೋದರೊಳಗ ಔಚಿತ್ಯ ಇಲ್ಲ. ಇನ್ನ ನಾ ಅಭಿಪ್ರಾಯ ಕೊಡsಬೇಕು ಅಂದರ, ಹೆಣ್ಮಕ್ಕಳು ಸ್ವಭಾವತಃನs ಒಳ್ಳೆವರು ಇರ್ತಾರ—ಅಂತ ನನ್ನ ಅಭಿಪ್ರಾಯ ಆದ ನೋಡು!

ಶಂಕ— ನಿನಗಿನ್ನೂ ಅನುಭವ ಕಡಿಮೆ, ಶ್ರೀಪಾದ. ಮದಿವ್ಯಾಗಿ ಹತ್ತೆಂಟು ವರ್ಷ ಸಂಸಾರ ಮಾಡಿದಾಗs ಹೆಣ್ಣಿನ ಸ್ವಭಾವ ಗೊತ್ತಾಗೋದು.

ಶ್ರೀ— ಇರಬಹುದು. ಅದರಾಗ ನೀನು, ಒಬ್ಬರಲ್ಲದs ಇಬ್ಬರು ಹೆಂಡಿರ್ನ ಮಾಡಿಕೊಂಡು ಸಂಸಾರ ಮಾಡಿದಿ. ಅಂದಮ್ಯಾಲ ನೀನು authority ಆಗಲಿಕ್ಕೆ ಅಡ್ಡಿಯಿಲ್ಲ!

ಶಂಕ— ಚ್ಯಾಷ್ಟಿ ಅಲ್ಲ ಶ್ರೀಪಾದ, ಇದ್ದs ಇದ್ದೀನಿ.

ಶ್ರೀ— ಅದು ಸರಿ. ಆದರ ನನ್ನ ಜತೀಗೆ ಮಾತ್ರ ಎಲ್ಲಾ ಪಣ್ಮಾಕ್ಕಳೂ ಒಳ್ಳೆ ವರಾಗೇ ನಡೀತಾರ.

ಶಂಕ – ಮಿಕ್ಕವರು ಇರಬಹುದು, ಈಕೇ ಮಾತು ಹೇಳು.

ಶ್ರೀ— ಮಲತಾಯಿ ಆದರೂ, ಅವ್ವ ಕೂಡ ನನ್ನ ಮ್ಯಾಲ ಬಹಳ ಪ್ರೀತಿ ಮಾಡ್ತಾಳ!

ಶಂಕ— ಉಂ. ಆದೆಲ್ಲ ಲೌಕಿಕ! ತನಗ ಬೇಕಾದ್ದನ್ನ ಸಾಧಿಸಲಿಕ್ಕೆ ಇದೆಲ್ಲ ಸೋಗು! ಈಗ ನನ್ನ ವಿಷಯನs ನೋಡು, ಅವರಿಗೆ ನಾ ಯಾಕ ಬೇಕು ಗೊತ್ತೇನು?

ಶ್ರೀ— ಯಾಕ?

ಶಂಕ -- ತಮ್ಮ ಹೊಟ್ಟೆಬಟ್ಟೆ, ತಮ್ಮ ಚ್ಯೆನೀ ಇವನ್ನ ಪೂರೈಸಲಿಕ್ಕೆ! ಗಂಡ ಅಂಬೋ ಈ ಗಂಡುಕತ್ತೆ, ಮ್ಯಾಲ ಬಿದ್ದ ಭಾರೆಲ್ಲ ಹೊತ್ತು ಒಗೀತದ! ದುಡೀಲಿಕ್ಕೆ ಫಿಟ್ಟ ಇರಬೇಕು ಅಂತ ಆ ಸ್ವಾಣೀ ಜಂತೀ ಅಗಸ ಮಾಡಿಧಾಂಗ, ನಮ್ಮದೂ ಅಷ್ಟರ ಮಟ್ಟಿಗೇ ಇವರು ಕಾಳಜೀ ಮಾಡ್ತಾರ! ಅಗಸ ಮಾಡೋದು ಸರಿ ಇರಬಹುದು. ಆದರ ಮನುಷ್ಯ ಮನುಷ್ಯನ ಜತೀಗೆ ಹಿಂಗ ನಡಕೋತಾನ—ಅಂದರ ಕೇವಲ ಸ್ವಾರ್ಥ ಅಲ್ಲೇನು?

ಶ್ರೀ— ಅಪ್ಪಾ, ಸ್ವಾರ್ಥ ಯಾರಿಗೆ ಬಿಟ್ಟಿsದ? ಪೆನ್‌ಶನ್ ಬರ್ತಿದ್ದರsನs ತಂದಿ ಬಡಕಬೇಕು ಅಂಬೋ ಮಕ್ಕಳಿಲ್ಲೇನು? ಇದೇನs ಇವ್ವರೂ ಒಳ್ಳೇತನ ಅಂಬೋದು ಪ್ರತಿಯೊಂದು ಜೀವನದಾಗೂ ಇದ್ದೇ ಇರ್ತsದ. ನಾವು ಒಳ್ಳೇಯವರಿದ್ದರ ಜಗತ್ತsನ ಒಳ್ಳೇದಾಗ್ತsದ— ಅಂಬೋ ತತ್ತ್ವದ ಮ್ಯಾಲ ನನ್ನ ವಿಶ್ವಾಸದ ನೋಡಪಾ.

ಶಂಕ— ಪ್ರತ್ಯಕ್ಷ ಪ್ರವಾಹದೊಳಗ ಬೀಳೋತನಕ ನೀರಿನ ಸುಳಿ ಗೊತ್ತಾಗೋದಿಲ್ಲ, ಶ್ರೀಪಾದ! ನೀನು ಬರೆ ಗ್ರಂಥವಿಜ್ಞಾನಿ!

ಶ್ರೀ— ಜೀವನಾ ನೋಡೇ ಗ್ರಂಥಾ ಬರೆದಿರ್ತಾರ. ಒಂದೋ ಎರಡೋ ಸ್ವಭಾವ ನೋಡಿ, ಇದು ಸಿದ್ಧಾಂತ ಅಂತ ಹೇಳವರು ನಾವು. ಜನಸಾಮಾನ್ಯರ ಸ್ವಭಾವ ಪರೀಕ್ಷಿಸಿ ಹೇಳೋ ಸಿದ್ಧಾಂತ ಜ್ಞಾನಿಗಳದು. ಯಾವತ್ತೂ ಅವರ ಮಾತೇ ನಮಗ ಮಾರ್ಗದರ್ಶಕ.

ಶಂಕ— ಅಂದರ ನಾ ಹೇಳೋ ಮಾತು ಸತ್ಯ ಬಿಟ್ಟ ಅದ ಉದ್ವಾಂಗಾತ್ಯೆ.

ಶ್ರೀ— ಉಂಹುಂ. ಅದರೊಳಗ ತುಸು ಮಟ್ಟಿಗೆ ಸತ್ಯ ಅದ ಇಷ್ಟು ಹೇಳಬಹುದು.

ಶಂಕ— ಇಷ್ಟಾದರೂ ಒಪ್ತೀಯಲ್ಲ ಸಾಕು. ಈಗ ಅಕೇ ಬಗ್ಗೇ ಕೇಳ್ತಿದ್ದೆ. ಹದಿನೆಂಟು ವರ್ಷ ಸಂಸಾರ ಮಾಡಿದ ನಾ ಹೇಳೋದು ಸರಿ ಆದೀತೊ, ನಾಲ್ಕು ದಿನ ಕೂಡಿ ಇದ್ದ ನೀ ಹೇಳೋದು ಸರಿ ಆದೀತೊ?

ಶ್ರೀ— ನೀಯೇನs ಅಂದರೂ, ತಾಯೀ ಬಗ್ಗೆ ಮಾತಾಡೋ ಅಧಿಕಾರ ನನಗಿಲ್ಲ.

ಶಂಕ— ಒಂದು ರೀತಿಯಿಂದ ನೀ ಅಂಬೋದು ಸರಿ ಅದ, ಶ್ರೀಪಾದ. ಯಾವ ತಾಯಿಯ ಬಗ್ಯೂ ಮಗನಾದವ ಕೆಟ್ಟ ಮಾತನಾಡಬಾರದು. ನಾನಾದರೂ ಆಕೀ ಬಗ್ಗೆ ಯಾಕ ಕೆಟ್ಟ ನುಡೀಬೇಕು? (ದುಃಖ ಒತ್ತರಿಸಿ, ಮಾತು ಎಡಜೆಡಜಾಗುವುದು) ಮಾಡುವವರ .....ಪಾಪ.....ಮಾಡುವವರ ಹತ್ತಿರs.....ಇರಲಿ; ಆಡುವವರ ಬಾಯಲ್ಲಿ.....ಬ್ಯಾಪ. ಖರೆ ಅದ .. ....ಮಾತಾಡಿ ಏನಾಗೋದದ? (ಶಾಂತಿ ತಂದುಕೊಳ್ಳುತ್ತಾನೆ.)

ಶ್ರೀ— (ಕಾತರನಾಗಿ) ಅಪ್ಪಾ, ನಿನಗ್ಯಾಕೆಷ್ಟೊಂದು ದುಃಖ ಬಂತು? ಇಷ್ಟ್ಯಾಕ ನೀ ಭಾವನಾವಶನಾಗೀದಿ?

ಶಂಕರ – ನಿನ್ನ ಹತ್ತರ ಇರಬೇಕು ಅಂತ....ಬಹಳ ಆನಿಸ್ತದ, ಶ್ರೀಪಾದ!

ಶ್ರೀ— ಆದಕ್ಕ ಅಡ್ಡಿಯೇನದ? ನಾಡದ್ದು ಹೊರಟೀಬಿಡೋದು. ನಾ ನಿಮ್ಮನ್ನ ಬಿಟ್ಟು ಹೋಗೋದೇ ಇಲ್ಲ.

ಶಂಕ— ಇದು ಸಾಧ್ಯ ಆಗಬಹುದು ಅಂತೀದಿ?

ಶ್ರೀ — ಯಾಕ ಆಗಲಿಕ್ಕಿಲ್ಲ? ಅವ್ವ ಬರಲಿಕ್ಕಿಲ್ಲ ಅಂದೋ ಅಭರವಸ ನಿನಗಿದ್ದರ, ನಾ ಅಕೆನ್ನ ಒಪ್ಪಿಸ್ತೀನಿ. ಆ ವಿಶ್ವಾಸ ಅದ ನನಗ.

ಶಂಕ— ನಿನ್ನ ವಿಶ್ವಾಸಕ್ಕ ಫಲ ಸಿಗಲಿ, ಶ್ರೀಪಾದ. ನಾ ಇಚ್ಛಿಸ ಬೇಡೋದು.

× × ×

[ನರಹರಿಯ ಮನೆ, ನರಹರಿ ಬೆಳಗಿನ ಚಹ ಕುಡಿಯುತ್ತ ಕುಳಿತಿದ್ದಾನೆ. ಉಮಾಬಾಯಿ ಬರುತ್ತಾಳೆ.]

ನರ— ಓsಽ! ಇದೇನು ಅತ್ತಿಗಿ, ಇಷ್ಟು ಬೆಳಗ್ಗೆ ನೀವು ಬಂದಿರಿ.

ಉಮಾ— ಇವತ್ತ ದೇವರಿಗೆ ನೈವೇದ್ಯ ಆದ ಮನಿಯೊಳಗ, ನಿಮಗ ಊಟದ ಆಮಂತ್ರಣ ಹೇಳ್ಲಿಕ್ಕೆ ಬಂದೆ.

ನರ— ಅದಕ್ಯ ನೀವs ಬರಬೇಕೇನು?

ಉಮಾ— ಇಲ್ಲ, ನಿಮ್ಮ ಮನಿಯವರಿಗೂ ಹೇಳಬೇಕಾಗಿತ್ತು. ಎಲ್ಲೆ ರಮಾಬಾಯೇರು ಕಾಣಿಸೋದಿಲ್ಲ! ಹುಡುಗರ ಗದ್ದಲಾನೂ ಇಲ್ಲ!

ನರ— ಎಲ್ಲರ್ನ ಕಟಗೊಂಡು ತವರಮನಿಗೆ ಹೋಗ್ಯಾಳ ನಿನ್ನೆ. ಊರಾಗ ತವರಮನಿ ಇತ್ತು—ಅಂದರ, ಇದs ಹಾಡsು. ನಿನ್ನೆ ಏನೋ ತಮ್ಮನ ಮಗನ ತೊಟ್ಟಿಲ ಸಮಾರಂಭ ಇತ್ತಂತ. ಮುಗಿವ ಮ್ಯಾಲ ರಾತ್ರಿ ಬರಬೇಕೊ ಇಲ್ಲೊ? ಕೂಡ್ರೆಲ್ಲ ಅತ್ತಿಗಿ, ಚಹಾ ಮಾಡ್ತೀನಿ ನನ್ನ ಕೈ ಚಹಾ ಒಂದು ದಿವಸsರೆ ಕುಡೀರಿ.

ಉಮಾ— ಏsಽ, ಚಹ ಬ್ಯಾಡ, ಏನೂ ಬ್ಯಾಡ. ಹೋಗೂಣು, ಅವಸರ ಅದ ಮನ್ಯಾಗ. ಆಡಿಗೀಯಾಕಿ ಬಂದಾಳ, ಇವರೂ ಪೂಜಿಗೆ ಕೂತಾರ.

ನರ— ಆಗಲಿ, ನಡೀತsದ. ಐದು ಮಿನಿಟು ಕೂಡ್ರಿ. ಇದ್ದೀ ಒಲೀ ಮ್ಯಾಲ ಈಗ ಅಗ್ತದ ಕೂಡ್ರಿ.....ಮತ್ತೇನು, ನಾಡದಂತೂ ನೀವು ಹೊರಡೋದು ದಿಲ್ಲಿಗೆ. ಇನ್ನೇನು ದಿಲ್ಲಿಯವರಾದಿರಿ!

ಉಮಾ— ನಮಗ್ಯಾಕರೆಪಾ ದಿಲ್ಲೀ-ಗಿಲ್ಲಿ? ಹೋಗ್ಯವರು ಹೋಗ್ತಾರ.

ನರ ಹೋಗಿರವರು ಅಂದರ ನೀವಽ ಅಲ್ಲ?

ಉಮಾ— ನಾವಲ್ಲ! ನಾವು ಇಲ್ಲೇ.

ನರ— ಎಲೆ, ಮತ್ತ ಶ್ರೀಪಾದಂತೂ ನಿಮ್ಮೆಲ್ಲರ್ನೂ ಕರಕೊಂಡು ಹೋಗೋದು ಅಂತ ಅಂತಾನ. ಶಂಕರಣ್ಣನೂ ಹುಂಯಿಗುಟ್ಟ್ಯಾನ.

ಉಮಾ— ಅವರೇನು, ಈಗ ಮಗ ಏನು ಹೇಳಿದ್ದಕ್ಕೂ ಹುಂ-ಯಿಗುಡ್ತಾರ. ಹಿಂದುಮುಂದಿನ ವಿಚಾರಿಲ್ಲದ ನಡೆಯವರಿಗೆ ಏನು ಹೇಳಬೇಕು?

ನರ— ಅಲ್ಲ, ಏನಾದರೂ ವಿಚಾರ ಮಾಡಿರಬೇಕಲ್ಲ!

ಉಮಾ— ನನ್ನ ಜತೀಗೆ? ಅವರೇನೂ ಮಾತು ತಗದಿಲ್ಲ. ಶ್ರೀಪಾದನಽ ನಿನ್ನೆ ರಾತ್ರಿ ಈ ಮಾತೆತ್ತಿದ್ದ, ಇವರೂ ಇದ್ದರು. ಬಾಯಿಗೆ ಬೀಗ ಹಾಕಿಕೊಂತು ಸುಮ್ಮಗ ಕೂತಿದ್ದರು.

ನರ— ಹುಂ. ನಿಮ್ಮ ಮನಸ್ಸು ತಿಳಕೊಂಡು ಆ ಮ್ಯಾಲ ಮಾತಾಡಬೇಕು ಅಂತ ಸುಮ್ಮಗಿದ್ದಾನು. ಮತ್ತ ನೀನೇನು ಹೇಳಿದಿರಿ ಮಗನಿಗೆ?

ಉಮಾ — ಹೇಳೋದೇನು? ಮ್ಯಾಲಽ ಕಾಣಿಸ್ತದ, ನಾ ಹೋಗೋದು ಶಕ್ಯಽ ಇಲ್ಲ. ಹೀಂಗಂತ ಇನ್ನೂ ನಾ ಅಂವಗ ಖಂಡಿತ ಹೇಳಿಲ್ಲ ಅನ್ರಿ.

ನರ— ಯಾಕ, ನಿಮಗ ಹೋಗೋ ಮನಸ್ಸಿಲ್ಲೇನು?

ಉಮಾ — ನಿಮ್ಮ ಮುಂದ ಅಂತ ಹೇಳ್ತೀನಿ, ನನಗ ಹೋಗೋ ಮನಸ್ಸು ಎಷ್ಟೂ ಇಲ್ಲ ನೋಡ್ರಿ.

ನರಹರಿ— ಹೀಂಗಂದರ ಹ್ಯಾಂಗ ಅತ್ತಿಗೀ? ಮಗನ ಹತ್ತರ ಇರೋ ಮನಸ್ಸಿಲ್ಲ ಅಂದರ?

ಉಮಾ— ಅಂವ ಅವರ ಮಗ, ನನ್ನ ಮಗ ಅಲ್ಲ.

ನರಹರಿ— ಅವರ ಮಗ ಏನು, ನಿಮ್ಮ ಮಗ ಏನು, ಬ್ಯಾರೇ ಅದ ಏನು?

ಉಮಾ— ಹೌದು, ಬ್ಯಾರೇನಽ ಅದ.

ನರಹರಿ— ಈ ಭಾವನಾ ನೀವು ಇಟಗೋಬಾರ್ದು, ಅತ್ತಿಗಿ.

ಉಮಾ— ಈ ಮಾತನ್ನು ಅವರಿಗ್ಯಾಕ ನೀವು ಹೇಳಬಾರದು?

ನರಹರಿ— ಏನಂತ?

ಉಮಾ— ಮಗಳು ಮತ್ತು ಮಗ ಇವರೊಳಗ ಭೇದ ಮಾಡ-ಬಾರ್ದು ಅಂತ!

ನರಹರಿ— ಶಂಕರಣ್ಣ ಹಾಂಗೆಲ್ಲಿ ಭೇದಮಾಡ್ತಾನ? ಮಗ ಆದರೂ ಅವನ ಮಗನಽ, ಮಗಳಾದರೂ ಅವನ ಮಗಳಽ! ತಂದೀ-ತಾಯಿಗೆ ತಮ್ಮ ಮಕ್ಕಳು ಅಂಬೋವೆಲ್ಲಾ ಒಂದಽ!

ಉಮಾ— ಮಿಕ್ಕ ಎಲ್ಲಾರಿಗೂ ಇರಬಹುದು. ಇವರಿಗಿಲ್ಲ!

ನರಹರಿ— ನಾ ಅದನ್ನೊಪ್ಪಲಾರೆ ಅತ್ತಿಗಿ! ನೀವು ವೃಥಾ ಶಂಕರಣ್ಣನ ಬಗ್ಗೆ ತಪ್ಪು ಅಭಿಪ್ರಾಯ ಮಾಡಿಕೊಂಡೀರಿ.

ಉಮಾ— ನೀವು ಸಿಟ್ಟಾಗದಿದ್ದರ, ಒಂದು ಮಾತು ಕೇಳಲ್ಯಾ?

ನರಹರಿ— ಕೇಳ್ಕೆಲ್ಲ. ಅತ್ತಿಗಿ, ನಿಮ್ಮ ಮ್ಯಾಲ ಸಿಟ್ಟಽ?

ಉಮಾ— ಇಲ್ಲ, ನೀವು ಅವರ ಸ್ನೇಹಿತರು. ಎಷ್ಟೆಂದರೂ ನಾ ಬ್ಯಾರೇನಽ!

ನರಹರಿ— ಅತ್ತಿಗಿ, ಶಂಕರಣ್ಣ ನನಗ ಅಣ್ಣನ್ಹಾಂಗಿದ್ದರ, ನೀವು ತಂಗೀ ಹಾಂಗಿದ್ದೀರಿ. ಇನ್ನೇನು, ನಾನೂ ಶಂಕರಣ್ಣ ಬಾಲ್ಯ-ಸ್ನೇಹಿತರು. ಒಂದಽ ಎಲ್ಯಾಗ ಉಂಡು ಬೆಳದೀವಿ. ನಿಮ್ಮ ಜೋಡಿಗೆ ನನಗಷ್ಟು ಸಲಿಗಿ ಇಲ್ಲ. ಆದರೂ ನೀವು ಅತ್ತಿಗಿ ಅಂಬೋ ಭಾವನಾಗಿಂತ ತಂಗಿ ಅಂಬೋ ಭಾವನಾ ನನಗ ಹೆಚ್ಚು ಹತ್ತರದ್ದು ಅನಿಸ್ತತದ.

ಉಮಾ— ಆದರ ನಾ ಮಾತ್ರ—ಖರೆ ಹೇಳಲ್ಯಾ—ನಿಮ್ಮನ್ನ ಇಲ್ಲೀವರೆಗೆ ತಪ್ಪು ತಿಳಕೊಂಡಿದ್ದೆ.

ನರ— ಹಾಂಗ ನನ್ನಿಂದ ಏನು ತಪ್ಪಾಗೇದ ಹೇಳ್ರಿ, ನಿಮ್ಮ ಕ್ಷಮಾ ಕೇಳಿಕೋತೇನಿ.

ಉಮಾ— ಛೆ, ಛೆ, ನಿಮ್ಮಿಂದ ತಪ್ಪಾಗಿಲ್ಲ, ನನ್ನಿಂದಾಗೇದ. ನಿಮ್ಮ ಬಗ್ಗೆ ಅನ್ಯಥಾ ಭಾವಿಸಿದ್ದು ನನ್ನ ತಪ್ಪಾಗೇದ. ನಾನಽ ನಿಮ್ಮ ಕ್ಷಮಾ ಬೇಡಬೇಕು.

ನರ— ನಿಮ್ಮ ಕಡಿಂದ ಕ್ಷಮಾ ಬೇಡಿಸಿಕೊಳ್ಳೋದು ಅಂದರ ಮತ್ತ ನಾನಽ ತಪ್ಪು ಮಾಡಿದ್ಹಾಂಗಾಗ್ತದ!

ಉಮಾ — ಇಲ್ಲ, ನಿಮ್ಮ ತಂಗಿ ಅಂತ ನೀವು ಖರೇನs ನನ್ನ ಭಾವಿಸಿದ್ದರ, ನನಗೊಂದು ಮಾತು ಕೇಳಬೇಕಾಗೇದ....ನನಗಾದರೂ ತವರಮನಿಯವರು ಅಂಬವರು ಯಾರಿದ್ದಾರ ಹೇಳ್ರಿ. (ದುಃಖ ಕುಲಳಾಗುವಳು)

ನರ— ಅತ್ತಿಗಿ, ಇದುವರೆಗೆ ನಿಮ್ಮ ಬಗ್ಗೆ ಭಾವಿಸಿದ್ದರಲ್ಲ ಏನಾದರೂ ತುಸು ಕೊರತೆಯ ಅಂಶ ಇದ್ದರ, ಆ ಭಗಿನೀ ಭಾವನೆ ಕ್ಷಣಾರ್ಧ ಪರಿಪೂರ್ಣತ್ಯ ಅಂತ ಖಂಡಿತ ತಿಳೀರಿ. ನನ್ನ ಈ ಮನ-....ನಿಮ್ಮ ತವರಮನಿ. ಇನ್ನು ಮುಂದ ನೀವೂ ಬ್ಯಾರೇ ಭಾವನಾ ಸರ್ವಥಾ ಇಟಗೊಬ್ಯಾಡ್ರಿ.

ಉಮಾ— ಹೀಂಗಂತೀರಿ ಅಂದಮ್ಯಾಲ ನಾ ಕೇಳೋ ಧೈರ್ಯಾ ಮಾಡ್ತೀನಿ. ಮೊನ್ನೆ ನೀವೂ ಅವರೂ ಮಾತಾಡ್ತಿದ್ದಿರಲ್ಲ— ಆ ಮಾತು ತುಸು ನನ್ನ ಕಿವಿಗೆ ಬಿದ್ದವು.

ನರ— ಹುಂ, ಅಂದರ ನಮ್ಮ ಮಾತು ಹೊರಬಿತ್ತು ಅಂದ್ಹಾಂ ಆತ್ಯ

ಉಮಾ— ನಿಮ್ಮಾದೇನಿಲ್ಲ, ಅವರದು. ಇಷ್ಟು ದಿವಸ ತನ್ನೊಳಗs ಇತ್ತು. ಈಗ ಪರಕೀಯರೆದುರಿಗೂ ಪ್ರಕಟಾಗಲಿಕ್ಕೆ ಹತ್ತಿತು

ನರ— ನನಗ ಈ ಟಕ್ಕು ಇದ್ದಽ ಇತ್ತು. ಆದರ ಅತ್ತಿಗೀ ಶಂಕರಣ್ಣ ನಿಮ್ಮ ಗುಣದ ಬಗ್ಗೆ ಅವಾಚ್ಯ ಉದ್ಗಾರ ತಗದದ್ದು ನನ್ನ ಎಷ್ಟೂ ಸೇರಲಿಲ್ಲ. ಅಲ್ರಿ ಅತ್ತಿಗಿ, ಹದಿನೆಂಟು ವರ್ಷ ಸಂಸಾ ಮಾಡಿದ ಮ್ಯಾಲ, ನಿಮ್ಮ ಬಗ್ಗೆ ಈ ಹೇಸಿ ಮಾತಾಡೋದು?

ಉಮಾ— (ದುಃಖಿಸಿ) ನನ್ನದು.... ....ತಪ್ಪಾಗೇದ.... ಅವರನ್ನ ಮಾದಿಕೊಂತಮ್ಮ!

ನರ— ಛೆ, ಹೀಂಗ್ಯಾಕಂತೀರಿ ಅತ್ತಿಗಿ? ನಿಮ್ಮದೇನು ತಪ್ಪು

ಉಮಾ— ಇಲ್ಲ, ನನ್ನದೂ ತಪ್ಪಾಗೇದ!

ನರ— ಇದು ತಪ್ಪು ಅಂತ ಯಾರೂ ಅನಲಾರರು. ಕಾಣಾ-ಕಾಣಾ ಇಮನೀ ವರನ್ನ ಮಾಡಿಕೊಂಡು, ನಿರ್ಜೀವಾದ ಅವನ ಸಂಸಾರಕ್ಕ ಜೀವದಾನಾ ಮಾಡಿದಿರಿ.

ಉಮಾ— ಮಾಡಿದೆ ಖರೆ. ಹಾಂಗ ತಿಳಕೊಂಡರ. ನನ್ನ ಸುಖಕ್ಕs ನಾ ಮಾಡಿದೆ ಅಂತ ಅಂದರ?

ನರ— ನಿಮ್ಮಕಿಂತಾ ಅಂವಗ ಅಗತ್ಯ ಹೆಚ್ಚಿತ್ತು. ಮನಿಯೊಳಗೊಬ್ಬರು ಮಾಡವರು ಬೇಕಾಗಿದ್ದರು.

ಉಮಾ— ಅಷ್ಟರ ಮಟ್ಟಿಗೇನs ನನ್ನ ಅವರು ಭಾವಿಸ್ಯಾರ! ಮೊದಲನೆ ಹೆಂಡತೀನೆ ಹೆಂಡತಿ; ಅವಳ ಮಗನs ಮಗ! ನಾ ಖರೇ ಹೆಂಡತೀನೂ ಅಲ್ಲ, ನನ್ನ ಮಗಳು ಖರೇ ಮಗಳೂ ಅಲ್ಲ!

ನರ— ಅನೇಕ ಸಾರೆ ನಿಮ್ಮ ಬಗ್ಗೆ ಬ್ಯಾರೆ ತಕರಾರು ಹೇಳಿದ್ದ, ಆದರೆ ಮೊನ್ನಿನ ಅವನ ಮಾತು.....ಛೆ, ಛೆ, ಛೆ, ನನಗಂತೂ ಸೀಸು ಕಾಸಿ ಕವಿಯಲ್ಲಿ ಸುರುವಿದ್ದಾಂಗಾತ್ಯ!

ಉಮಾ— ಈಗ ವರ್ಷಾರು ತಿಂಗಳಿಂದಂತೂ ದಿನಕ್ಕ ಒಮ್ಮೆ ಆದರೂ ಈ ಮಾತು ಆಡಿತೋರಿಸ್ತಾರ.

ನರ— ಪೆನ್‌ಶನ್ ತೊಗೊಂಡ ಮ್ಯಾಲ ಅಂವಗ ಕೆಲಸಿಲ್ಲದ್ದಾಂಗಾಗೇದ. ಮತ್ತ ಈ ವಯಸ್ಸಿಗೆ ತುಸು ಬುದ್ಧೀನೂ ಭ್ರಂಶಾಗ್ತದ. ಬಿಡ್ರಿ, ಹೀಂಗ್ಯಾಕಂತೀರಿ? ಶಾರದಾ ತನ್ನ ಮಗಳಕ್ಕ ಅಲ್ಲ ಅಂಬವರ್ದಾಂಗ ಮಾತಾಡಿದರ ಏನನಬೇಕೊ ತಿಳಿಯೋದಿಲ್ಲ! ನನ್ನ ಮುಂದs ಆಂದ, ಒಳ್ಳೇದಾತ್ಯ. ಮುಂದೀ ಮುಂದ ಆಂದಿದ್ದರ, ನಗ್ಲೇಡಾಗೋ ಮಾತು. ಇಲ್ಲ, ಅವನ ಬುದ್ಧೀನs ವಿಕಾರಕ್ಕಿಟ್ಟುಗೊಂಡsದ. ಅಲ್ರಿ, ಮಗಳ ಮಾತು ತಗದರ ಹೇಸಿಗೋತಾನ! ಆಶ್ಚರ್ಯ ಆನಿಸ್ತsದ!

ಉಮಾ— ಅದಕ್ಕೊಂದು ಕಾರಣದ, ಭಾವುಜೀ!

ನರ— ಏನು ಕಾರಣೋ ಏನೋ, ಭಗವಂತನs ಬಲ್ಲರೆವಾ!

ಉಮಾ— ಆದ.....ನಿಮಗ ಹೇಳಿಲ್ಲs ಅವರು?

ನರ— ಸರ್ವಥಾ ಇಲ್ಲ.

ಉಮಾ— ನನ್ನಾಣೆಂದರೂ?

ನರ— ನಿಮ್ಮಾಣೆ, ನನ್ನ ಮಕ್ಕಳಾಣೆ!

ಉಮಾ— ಒಳ್ತು.....ಇನ್ನ ಮುಂದಾದರೂ ಅವರು ಹೇಳಬಹುದು ಅನ್ರಿ.....ಇರಲಿ.....ನನ್ನ ಗುಣದ ಬಗ್ಗೆ ನಿಮಗೇನನಿಸೇದ ಭಾವುಜಿ? ಖರೇ ಖರೇ ಹೇಳ್ರಿ.

ನರ— ಕಾಲತ್ರಯದಲ್ಲೂ ನನಗ ಸಂಶಯ ಬಂದಿಲ್ಲ; ಬರೋದು ಶಕ್ಯs ಇಲ್ಲ, ಅತ್ತಿಗಿ. ಇನ್ನೇನು, ನೀವು ಶಂಕರಣ್ಣನ್ನ ಪೂರಾ ಹೆದರಿಸಿಕೊಂಡು ನಡೀತೀರಿ—ಇಷ್ಟು ಹೇಳಬಹುದು. ಅದು ಒಬ್ಬೊಬ್ಬರ ಸ್ವಭಾವ ಅನ್ರಿ. ಮ್ಯಾಲ ಹಾಂಗ ಕಂಡರೂ, ಒಳಗ ಅಂತಃಕರಣ ಇದ್ದsಇರ್ತsವ. ಪ್ರಾರಂಭಕ್ಕ ನೀವು ಗಂಡ-ಹೆಣ್ತಿ ಬಹಳ ಪ್ರೀತಿಯಿಂದ ಇರ್ತಿದ್ದಿರಿ, ನಾನs ನೋಡ್ತಿದ್ದೆನಲ್ಲ. ಅವಂದು ಎರಡನೇ ಮದಿವಿ, ನಿಮ್ಮದು ಮೊದಲನೆ ಮದಿವಿ. ಆದರೂ ನಿಮಗ ವಯಸ್ಸು ಬಹಳ ಆಗಿತ್ತಾಗ!

ಉಮಾ— ಮೂವತ್ತನೇ ವರ್ಷರೆಪಾ! ಮದಿವೀ ಕಾಣದೇ ಮುಲ್ಲಿ ಆಗಿ ಕೂತಿದ್ದೆ! ಏನೋ ಅದೃಷ್ಟ ನೆಟ್ಟಗ, (ಉಸುರ್ಗರೆದು) ಆತ್ಯ ಅಂತ ಆತ್ಯ! ಮೆಚ್ಚಿ ಮಾಡಿಕೊಂಡದ್ದಲ್ಲ.....ಮರ್ಯಾದೀ ಕಿಚ್ಚಿಗೆ ಮಾಡಿಕೊಂಡದ್ದು!

ನರ— ಸಾಮಾನ್ಯವಾಗಿ ಎಲ್ಲಾ ಎರಡನೇ ಸಂಬಂಧನೂ ಹೀಂಗ�s ಇರ್ತಾವನ್ರಿ!.... ಆದರ ಶಂಕರಣ್ಣನದು ಎರಡನೇದು, ನಿಮ್ಮದು, ಹಾಂಗ ನೋಡಿದರ, ಮೊದಲನೇದs ಆಲ್ಲ!

ಉಮಾ— ಖರೇ ಹೇಳಲ್ಯಾ ಭಾವುಜ? ನನ್ನದೂ ಎರಡನೇದs!

ನರ— ಏನಂದ್ರಿ? ಎರಡನೇದು?

ಉಮಾ— ಹೌದು. ಯಾರು ನನ್ನ ಮಾಡಿಕೋತೀನಿ ಅಂತ ಆಶಾ ಹಚ್ಚಿದರೋ....ಅವರು ನನ್ನ ಕುತ್ತಿಗೀ ಕೊಯ್ದರು. ನನ್ನದsರೆ ಏನು ತಪ್ಪದ ಹೇಳ್ರಿ. ಗಂಡಸರು ತಮ್ಮ ಉದ್ದೇಶ ಸಾಧಿಸಿಕೊಳ್ಳಲಿಕ್ಕೆ ಬೇಕಾದ ವಚನಕ್ಕ ಹಿಂದಮುಂದ ನೋಡೋದಿಲ್ಲ. ಮದಿವ್ಯಾದರ ಸಾಕು ಅಂತ ಕಂಗೆಟ್ಟು ಕೂತ ನಾನು, ಮೋಸಕ್ಕ ಬಲಿಯಾದೆ. ತಂದಿ-ತಾಯಿ ಅಸರಿಲ್ಲದ ತಬ್ಬಲಿಯಾದ ನನಗೆ, ತಂಗೀ ಗಂಡನs ಮಾಂಗಲ್ಯ ಕಟ್ಟಿಸಿ ಮರ್ಯಾದಿ ಮುಚ್ಚದಿದ್ದರ, ನಾ ಜಗತ್ತಿಗೆ ಮಾರೀ ತೋರಿಸೋದು ಸಾಧ್ಯ ಇರಲಿಲ್ಲ! ಭಾವುಜಿ, ನನಗ ಪಶ್ಚಾತ್ತಾಪ ಆಗಿಲ್ಲ ಅಂತ ತಿಳೀಬ್ಯಾಡ್ರಿ. ಶಾರದಾ ಎದುರಿಗೆ ಬಂದಾಗೆಲ್ಲಾ ನನ್ನ ಪಾಪನ ಸಾಕಾರಾಗಿ ಎಮರಿಗೆ ನಿಂತ್ಹಾಂಗ ಅನಿಸ್ತsದ. ಆದರೆ, ಈ ಮಾಂಗಲ್ಯ ಮುಟ್ಟಿ ಹೇಳ್ತೀನಿ—ಇದು ನನ್ನ ಕೊರಳಲ್ಲಿ ಯಾವ ಕ್ಷಣಕ್ಕ ಬಂತೋ, ಆ ಕ್ಷಣದಿಂದ ಪತಿಯ ಬಗ್ಗೆ ನಾ ಇಟ್ಟುಗೊಂಡ ನಿಷ್ಠಾದೊಳಗ ಎಳ್ಳಷ್ಟೂ ಅಂತರ ಮಾಡಿಕೊಂಡಿಲ್ಲ.

ನರಹರಿ— ಅಂದರ.....ಶಂಕರಣ್ಣಗ ಬಂದ ಸಂಶಯ ನಿರಾಧಾರಿಲ್ಲ ಅಂದ್ಹಾಂಗಾತ್ಯ! ಆದರ ಅತ್ತಿಗಿ, ನಾ ಕೇಳ್ತೀನಿ ಅಂತ ಬ್ಯಾಸರಾ ಮಾಡಿಕೋಬ್ಯಾಡ್ರಿ. ಶಂಕರಣ್ಣಗ ಇತ್ತೀಚೆಗೇ ಈ ಸಂಶಯ ಬಂತು ಹ್ಯಾಂಗ?

ಉಮಾ— ಮೊದಲಿನಿಂದಲೂ ಶಾರದಾನ ಮ್ಯಾಲ ಅವರಿಗಷ್ಟು ಪ್ರೀತೀನೇ ಇಲ್ಲ. ನಮ್ಮ ಮದಿವಿ ಆಗಿ ಎಂಟನೇ ತಿಂಗಳಿಗೇ ಆಕಿ ಹುಟ್ಟಿದಳು! ಆಗs ಅವರಿಗೆ ಕಚ್ ಅನಿಸಿತು. ಆಗ ಯಾವ ಮಾತೂ ಆಡಲಿಕ್ಕೆ ಬರೋಹಾಂಗಿರಲಿಲ್ಲ. ಲೋಕದ ರೂಢಿಯ ಪ್ರಕಾರ ಎಲ್ಲಾ ನಡೀತು ಆದರ, ಈಗೆರಡು ವರ್ಷದ ಹಿಂದ ಅವರು ನನ್ನ ತವರೂರಿಗೆ ಹೋಗಿದ್ದರು. ಅಲ್ಲಿ ಯಾವ ಮಾಯದಿಂದಲೋ ಈ ಮಾತು ಅವರ ಕಿವಿಗೆ ಮುಟ್ಟಿತು. ಭಾವುಜಿ, ಧರ್ಮ-ನೀತಿ ನೋಡಿದರ ನಾ ಪಾಪಿಷ್ಠಳು ಖರೆ; ಆದರ ನಾ ಬ್ಯಾರೇ ಏನು ಮಾಡಬೇಕಾಗಿತ್ತು ಹೇಳ್ರಿ! ವಿಷ ತಿಂದು ಸಾಯಬೇಕೆತ್ತು! ಅಷ್ಟು ನನ್ನಿಂದಾಗಲಿಲ್ಲ. ಮದಿವ್ಯಾದ ಮ್ಯಾಲ, ಇವರಿಗಾದರೂ ಇದನ್ನ ಹೇಳೋದ್ಹ್ಯಾಂಗ ಅಂತ ಹೇಳಲಿಲ್ಲ. ನನ್ನ ಈ ತಪ್ಪು ಮುಚ್ಚಿಕೊಳ್ಳಿಕ್ಕೆ ಇವರ ಮ್ಯಾಲs ಜರಬು ನಡಸಿದೆ; ಈಗ ಅದು ನನ್ನ ಸ್ವಭಾವನs ಆಗಿ ಕೂತsದ. ನನ್ನ ಹೊಟ್ಟೀಲೇನೂ ಮತ್ತ ಮಕ್ಕಳಾಗಲೇ ಇಲ್ಲ. ಆಗಿದ್ದರ ನಾನೂ ಮರೀತಿದ್ದೆ, ಇವರ ಮನಸ್ಸೂ ಬವಲಾಗತಿತ್ತು. ನನ್ನ ದುರ್ದೈವಕ್ಕ ಅದೂ ಆಗಲಿಲ್ಲ. ಇದರಿಂದ ನನ್ನ ಅಂತಃಕರಣಕ್ಕ ಏನು ಕಷ್ಟಾಗ-

ತಿದ್ದೀತು ನೀವು ವಿಚಾರಮಾಡ್ರಿ. ಒಬ್ಬರದಾನರೂ ನನಗ ಜೆನ್ನುಬಲ ಇರಲಿ ಅಂತ, ನಿಮ್ಮ ಮುಂದ ಇನನ್ನ ಹೇಳೋ ಧೈರ್ಯ ಮಾಡಿದೆ. ಇಲ್ಲದಿದ್ದರ, ನಾವು ಹೆಂಗಸರು ಒಬ್ಬ ಪರಕೀಯ ಗಂಡಸಿನೆದುರಿಗೆ ನಾಚಿಕೀ ತೊರೆದು ಇಂಥಾ ಮಾತು ಎಂದಾದರೂ ಹೇಳೇವ? ಅದರ ನಿಮ್ಮ ಅಂತಃಕರಣ ನೋಡ್ರಿ, ಯಾವ ಗುಟ್ಟಿನ ಮಾತೂ ಹೊಟ್ಟಾಗ ಇಟಗೋಬಾರದು ಅಂತ ಅನಿಸಿತು ನಿಮ್ಮ ಮುಂದ ಆಡಿಬಿಟ್ಟೆ! ಭಾವುಜಿ, ಇವರಂತೂ ಮಗನ ಪತ್ತೇ ಇಲ್ಲೇಕೂ ಅಂತ ಹಂಬಲಿಸ್ತಾರ. ನನ್ನ ಮನಸ್ಸು ಅದಕ್ಕ ಎಳ್ಳಷ್ಟು ತಯಾರಿಲ್ಲ ನೋಡ್ರಿ.

ನರಹರಿ— ಯಾಕ? ಇದ್ದರ ನಿನು ತಪ್ಪನ ಹೇಳ್ರಿ.

ಉಮಾ— ಅದರಿಂದ ನಾ ಎಲ್ಲಾ ವಿಷಯಿಂದನೂನೂ ಪರಾಧೀನ ಆಗ್ತೀನಿ. ಈಗಿದ್ದ ಈ ಸ್ವಾತಂತ್ರ್ಯ ನಾ ಕಳಕೊಳ್ಳಲಿಕ್ಕೆ ಒಲ್ಲೆ.

ನರ— ಅದರ ಶಂಕರಣ್ಣನ ಭಾವನಾಮ್ದಾ ನೀವು ವಿಚಾರ ಮಾಡೋದು ಅಗತ್ಯ. ನಿಮ್ಮ ಸುಖ, ನಿಮ್ಮ ಸ್ವಾತಂತ್ರ್ಯ ಅಷ್ಟಕ ನೀವು ನೋಡಿದರ.....ಮುಪ್ಪಿನ ಕಾಲಕ್ಕ ಮಕ್ಕಳ ಪತ್ತರ ಇರಬೇಕು ಅಂತ ಯಾವ ತಂದೆ-ತಾಯಿಗೆ ಅನಿಸೋದಿಲ್ಲ?

ಉಮಾ— ಅದರ....ನನ್ನ ಮನಸ್ಸು ಮಾತ್ರ ಹೀಂಗದ ನೋಡ್ರಿ. ನಾ ಸರ್ವಥಾ ಇರಲಾರೆ. ನಾಳೆ ಬರೋ ಸೊಸೀ ಕೈಯಾಗ ಉರೀಲಾರೆ, ಭಾವುಜಿ!

ನರ— ನೀವು ಹೋಗದಿದ್ದರ ಬಿಡಿರಿ. ಶಂಕರಣ್ಣನಾದರೂ ಒಬ್ಬನೇ ಹೋಗಲಿ. ಅವನನ್ನಾದರೂ ಬಿಟ್ಟುಬಿಡಿರಿ.

ಉಮಾ— ಹೀಂಗ ನಾ ಅವರ್ನ ಕಳಿಸಿ, ಮಂದೀ ಹಲ್ಕೀ ಹೊರ ಬೇಕಂತೀರೇನು? ನಾಳೆ ನನ್ನ ಸಂಸಾರದ ಗತಿಯೇನು? ಶಾರದಾನ ಮದಿವೀ ಗತಿಯೇನು? ಭಾವುಜಿ, ನೀವು ಆಲೋಚನೆ ಮಾಡ್ರಿ— ಇವರದೀಗ ಮುಪ್ಪಿನ ಕಾಲ. ಮಾಡಿಕೊಂಡ ಹೆಣ್ತಿ ನಾ ಮಾಡಿದ್ಹಾಂಗ, ನಾಳೆ ಸೊಸಿ ಅಂಬೋ ಬುಬ್ಬಣಿ ಮಾಡ್ತಾಳ? ನಾನು, ಮನಸ್ಸಿನಿಂದ ಮಾಡದಿದ್ದರೂ ಮರ್ಯಾದಿಗಂಜಿಯಾದರೂ ಮಾಡೇನು— ಪಾಪಕ್ಕ ಅಂಜಯಾದರೂ ಮಾಡೇನು! ಅವರಿಗೆ ಈಗ ತಿಳೀಲಿಕ್ಕಿಲ್ಲ. ಸೊಸೀ ಬಂದಮ್ಯಾಲ ತಿಳಿದೀತು. ಅವರ ಹಿತದ ಮಾತಂತಃ ನಾ ಇದನ್ನ ಹೇಳೋದು. ಈ ಮಗನ ಉಬ್ಬು ಎಷ್ಟು ದಿವಸದ್ದು?

ನರ— ಅದರ, ಶ್ರೀಮಾದ ಭಂಗಾರದಂಥಾ ಹುಡುಗ!

ಉಮಾ— ನಾ ಎಲ್ಲೆ ಇಲ್ಲಂತೀನಿ? ಆದರ ಮುಪ್ಪಿನ ಕಾಲಕ್ಕ ಎಂಥಾ ಪ್ರೀತಿ ಮಾಡೋ ಮಕ್ಕಳೂ ಬ್ಯಾಸರಾ ಮಾಡಿಕೋತಾರಂಬೋದನ್ನ ನೀವು ನೋಡಿಲ್ಲೇನು?

ನರ— ನೀವಾಡೋ ಮಾತು ಖರೇ ಅದ, ಅತ್ತಿಗಿ! ಉಂಽಽ, ಚಹ ತೊಗೊಳ್ರಿ! ಪ್ರಪಂಚದೊಳಗ ಯಾರ್ಯಾರಿಗೆ ಏನೇನು problems ಇರ್ತಾವ ತಿಳಿಯೋದಿಲ್ಲ! ನಿಮ್ಮದೆಲ್ಲಾ ಕೇಳಿ ನನ್ನ ಮತಿ ಗುಂಗಾಗಿ ಹೋತ್ಯು, ಅತ್ತಿಗಿ!

ಉಮಾ— ಭಾವುಜಿ, ನಿಮ್ಮ ಮುಂದ ಇದನ್ನೆಲ್ಲಾ ಹೇಳಬೇಕಂತಃ ನಾನಃ ಬಂದೆ. ನಿಮ್ಮ ಹೆಣ್ತಿ ಇಲ್ಲಂಬೋದು ನನಗ ಮೊದಲಃ ಗೊತ್ತಿತ್ತು. ಭಾವುಜಿ, ನಿಮಗ ಕೈಜೋಡಿಸಿ ಬೇಡಿಕೋತೀನಿ, ನನ್ನ ಮಾತು ನಿಮ್ಮ ಹೊಟ್ಟಾಗಃ ಇರಲಿ. ನಿಮ್ಮ ಹೆಣ್ತೀ ಮುಂದ ಕೂಡ ಇದನ್ನಾಡೋದು ಬ್ಯಾಡ.

ನರ— ಅತ್ತಿಗಿ, ಅದರ ಬಗ್ಗೆ ನಿರ್ಭೀತಿಯಿಂದಿರ್ರಿ. ಆದರ, ನನಗ ಕಾಳಜಿ ಪತ್ತಿರೋದು ಶಂಕರಣ್ಣನ ಮನಃಸ್ಥಿತೀದು.

ಉಮಾ— ಭಾವುಜಿ, ನೀವಃ ಅದನ್ನ ದಾರಿಗೆ ತರಬೇಕು. ಆದರ ಅವರಿಗೆ ನಾ ನಿಮ್ಮ ಮುಂದೆ ಆಡಿದ ನನ್ನ ಗುಟ್ಟಿನ ಮಾತು ಮಾತ್ರ ತಿಳೀಗೊಡಬ್ಯಾಡ್ರಿ.

ನರ— ಅದಕ್ಕ ಒಂದು ಕರಾರು. ನೀವು ಒಪ್ಪತಿದ್ದರ.....

ಉಮಾ— ನನ್ನ ಕುತ್ತಿಗೀ ನಿಮ್ಮ ಕೈಯಲ್ಲೇ ಕೊಟ್ಟೀನಿ. ನೀವೇನು ಮಾಡಂದರೂ ನಾ ಇಲ್ಲನಲಾರೆ.

ನರ— ಅತ್ತಿಗಿ, ನಾ ನಿಮಗ ತಪ್ಪು ಮಾತು ಎಂದೂ ಹೇಳಲಾರೆ; ಇದರೊಳಗ ನಿಮ್ಮ ಇಹಲೋಕದ ಕಲ್ಯಾಣದ; ಅಷ್ಟೇ ಅಲ್ಲ, ಪಾರಲೌಕಿಕ ಕಲ್ಯಾಣನೂ ಅದ. ನಿಮಗ ಕೃತಕರ್ಮದ ಬಗ್ಗೆ ನಿಜವಾಗೇ ಪಶ್ಚಾತ್ತಾಪ ಆಗಿದ್ದರ.....

ಉಮಾ— ನನ್ನ ಮಗಳಾಣೆ, ಆಗೇದರಿಪಾ! ನಾ ಸುಳ್ಳಾಡೋದಿಲ್ಲ.

ನರ— ಹಾಂಗಿದ್ದರ ನಿಮ್ಮಿಂದ ಆದ ತಪ್ಪು ಗತಜನ್ಮದ ತಪ್ಪ ಅಂತ ಭಾವಿಸಿ ಇದ್ದುಬಿಡಿರಿ. ಇನ್ನೊಂದು ಮಾತು, ಅದೇ ಮುಖ್ಯ ಅದ.

ಉಮಾ— ಹೇಳ್ರಿ, ಅಗತ್ಯ ಹೇಳ್ರಿ.

ನರ— ಶಂಕರಣ್ಣನದೂ ಇನ್ನ ವೃದ್ಧಾಪ್ಯಕಾಲ. ಅವನ ಜೀವನ ಮಾನ ಇರೋನರೆಗೂ ನಿಷ್ಠೆಯಿಂದ ಅವನ ಸೇವಾ ಮಾಡ್ರಿ, ಸಾಕು. ಇದರ ಹೊರತು ಬ್ಯಾರೆಯೇನೂ ನನಗ ಹೇಳೋದಿಲ್ಲ.

ಉಮಾ— ಭಾವುಜಿ, ನೀವು ಹೇಳಿದ ಮಾತು ದೇವರ ಬಾಯಿಂದಃನಃ ಬಂದದ್ದು ಅಂತ ಭಾವಿಸಿ ಪಾಲಿಸ್ತೀನಿ. ಇದರಿಂದ ನಾ ಉದ್ಧಾರಾದರ ಧನ್ಯಳಾದೆ.

ನರ— ಅತ್ತಿಗಿ, ನಾನಾದರೂ ಏನು ಸಿದ್ಧನಲ್ಲ, ಸರ್ವಜ್ಞನಲ್ಲ! ನನ್ನ ಅಲ್ಪಬುದ್ಧಿಗೆ ಇದು ಸರಿ ಅನಿಸಿತ್ಯು, ಹೇಳಿದೆ. ವಿಶ್ವಾಸ ಇದ್ದರ ಮಾಡಿರಿ.

ಉಮಾ— ಪೂರ್ಣ ವಿಶ್ವಾಸ ಅದ, ಭಾವುಜಿ! ಇವತ್ತ ದೇವದೇವರಿಗೆ ಇದನ್ನಃ ಬೇಡಿಕೋತೇನಿ. ನಾ ಬರ್ತೀನಿ ಹಂಗಾರ, ಹೊತ್ತಾತ್ಯು. ನೀವು ಲಗು ಬರ್ರಿ.

ನರ— ಆಗಲಿ. ಸ್ನಾನಾ ಮುಗಿಸಿಕೊಂಡು ಬರ್ತೀನಿ.

× × × ×

[ಶಾರದಾ ಒಬ್ಬಳೇ ತನ್ನ ಕೋಣೆಯಲ್ಲಿ ಒಂದು ಭಾವಗೀತದ ನುಡಿಯನ್ನು ತನ್ನಷ್ಟಕ್ಕೆ ಹಾಡಿಕೊಳ್ಳುತ್ತಿದ್ದಾಳೆ.]

" ನಾನು ಮನಸುಖರಾಯನೆಂಬ ರಾಜನ ಮಗಳು
ನರಳುತಿಹೆ ಬಂಧನವ ಅಡಸಿಕೊಂಡು —
ಏನಾರೆ ಮಾಡಿ ಯಾರಾರೆ ಬಂದಿಲ್ಲಿಂದ
ಎಲ್ಲಾದರೂ ಹೋಗಿ ಬಿಡಿಸಿಕೊಂಡು. "

ಶ್ರೀವಾದ— ವಾಹವಾ! Excellent! ಶಾರದಾ, ನಿನ್ನ ಹಾಡು ಮರೆಗೆ ನಿಂತು ಕೇಳಿದೆ. ಮೊದಲು ನನಗ ರೇಡಿಯೋನಽ ಅನಿಸಿತ್ತು. ಆದರ ರೇಡಿಯೋ ನನ್ನ ಖೋಲಿಯಲ್ಲಿಯೇ ಇತ್ತು. ಮತ್ತ ಅದನ್ನ ಹಚ್ಚಿಲ್ಲ ಅಂಬೋದೂ ಲಕ್ಷ್ಯಕ್ಕ ಬಂತು. ವಾಹವ್ವಾ! ನಿನ್ನ ದನಿ ಭೆಲೋ ಅದ, ಹಾಡೂ ಭೆಲೋ ಅದ, ಹಾಡಿದ್ದೂ ಭೆಲೋ ಅದ!

ಶಾರ— ಮತ್ತ ಕೇಳಿದವರೂ ಭೆಲೋ ಇದ್ದಾರ. ಅಣ್ಣಾ ನೀ ಮರೀಗೆ ನಿಂತು ಕೇಳ್ತೀ ಅಂತ ಗೊತ್ತಿದ್ದರ, ನಾ ಹಾಡ್ತಾನೇ ಇರಲಿಲ್ಲ.

ಶ್ರೀ— ಯಾಕ? ನೀ ಹಾಡೋದು ನಾ ಕೇಳಬಾರದು ಅಂತ ಅದs ಏನು?

ಶಾರ— ಕೇಳಬಾರದು ಅಂತಲ್ಲ. ಇವು ಸ್ವಗತ ಭಾಷಣ. ಪ್ಪಾಂಗ ಸ್ವಗತ ಗೀತ! ತಮ್ಮಷ್ಟಕ್ಕಽ ಹಾಡಿಕೊಂಬೋದು.....

ಶ್ರೀ— ಹಾಂಗ ಇದ್ದದ್ದುವನ್ನ ಅಣ್ಣನ ಮುಂದ ಹಾಡಿ ತೋರಿಸಲಿಕ್ಕೆ ಆಡ್ಡಿಯಿಲ್ಲ. ಇಷ್ಟಾಗಿ, ನೀ ಹಾಡಿದ್ದನ್ನ ಕೇಳಿದರ, ಇದು ಸ್ವಗತಗೀತ ಅಂತ ಅನಿಸೋದಿಲ್ಲ. 'ಏನಾರೆ ಮಾಡಿ....ಯಾರಾರೆ ಬಂದಿಲ್ಲಿಂದ....ಎಲ್ಲಾದರೂ ಹೋಗಿ' ಮುಂದೇನು?

ಶಾರ— ಬಿಡಿಸಿಕೊಂಡು.

ಶ್ರೀ— ಹುಂ, ಬಿಡಿಸಿಕೊಂಡು! ಅಂದಮ್ಯಾಲ ಇದು ನನಗಾಗೇ ಅದ. ಮತ್ತ ಎಲ್ಲಾ ಯದರೂ ಯಾಕ, ದಿಲ್ಲೀಗೇ ಹೋಗ್ತಿನಿ! ಮತ್ತ ನಿನ್ನ ಬಿಡಿಸಿಕೊಂಡು ಅಲ್ಲ, ಕರಕೊಂಡು!

ಶಾರ— ಉಂ, 'ಕರಕೊಂಡು ಹೋಗು' ಅಂತ ನಾ ಅಂಬೋದು; 'ಹೋಗ್ತೀನಿ' ಅಂತ ನೀ ಅಂಬೋದು ಬರೇ ನಮ್ಮಿಬ್ಬರ ಕನವರಿಕೆ! ಕದು ಅವ್ವ ಇರೋನವರಿಗೂ ಕೈಗೂಡೋಹಾಂಗ ಕಾಣಿಸೋದಿಲ್ಲ.

ಶ್ರೀ— ಈಗ ಆ ಮಾತು ತಗದಿ ಅಂತ ನೆನಪಾತ್ಯ. ನಿನ್ನೆ ನಾ ಅವ್ವನ ಜತಿಗೆ ಮಾತಾಡಿದ ಮ್ಯಾಲ, ಮುಂದೇನಾದರೂ ಮಾತು ಮುಂದರೀತೇನು?

ಶಾರ— ಹಗ್ಗ ಹರೀಲಿಲ್ಲ, ಕೋಲುಮುರೀಲಿಲ್ಲ—ಆ ಪೈಕಿ ಅತ್ಯ ಆಪ್ಪ ಮುರಿದು ಹೇಳ್ಕಿಕ್ಕೆ ಅಂಜತಾನ, ಅವ್ವ ಅಡ್ಡಗೋಡೀ ಮ್ಯಾಲ ದೀಪಾ ಇಟ್ಟಾಂಗ ಮಾತಾಡ್ತಾಳ. ಕಡೆಗೆ ಅವ್ವನ ಮಾತs ಇದರಾಗ ಗೆಲ್ತsದ ಅಂತ ಅನಿಸ್ತದ. ಅವರಿಬ್ಬರೂ ಇಲ್ಲೇ ಇರಪ್ಪೊಲ್ಲ ನ್ಯಾಕ. ನಾವಿಬ್ಬರೂ ಹೋಗೋಣಂತೀನಿ. ನಿನ್ನ ಜೋಡಿಗಿರಬೇಕು— ಂತ ನನಗ ಬಹಾಳ ಆಶಾ ಆದ ನೋಡಪಾ. ಈ ಆಪ್ಪ-ಅವ್ವನ ಕಾಟ ಬ್ಯಾಡ. ನಾ ಎಲ್ಲ ನಿನಗ ಮಾಡಿ ಹಾಕ್ತೀನಿ; ಹೆಣ್ತೀಕಿಂತಾ ಕೆಚ್ಚು ಮಾಡ್ತೀನಿ!

ಶ್ರೀ— ಅಂತ ನಾ ಹೆಣ್ತಿನ್ನ ಮಾಡಿಕೊಂಬೋದss ಬ್ಯಾಡ ಅಂತೀಯೆನು?

ಶಾರ— ಬ್ಯಾಡ ಅಂತ ನಾ ಯಾಕ ಅನ್ನಲಿ? ಬೇಕಾದಷ್ಟು ಕೆಂಡರ್ನ ಮಾಡಿಕೂ. ದಿಲ್ಲೀಯೊಳಗ, ನಾಲ್ಕೂ ಖಂಡದ ಗಂಡು ಇದ್ದಾಂಗ, ನಾಲ್ಕು ತಂಡದ ಹೆಣ್ಣೂ ಇರಬಹುದು! ಯಾರಿಗೆ ಯಾರೋ ಪುರಂದರ ವಿಠಲ!

ಶ್ರೀ— ಆ ತಿಳಿವಳಿಕಿ ತಪ್ಪದ. ಈ ಸ್ವೈರವಿವಾಹದ ಪದ್ಧತಿ ಯಾರೂ ಒಪ್ಪುದಿಲ್ಲ. ನನಗೂ ಅದು ಮಾನ್ಯ ಇಲ್ಲ. ನಾ ಮದಿವೀ ಮಾಡಿಕೊಂಬೋದsss ಆದರ, ನಿಮ್ಮೆಲ್ಲಾರ ಮನಸ್ಸಿಗೆ ಬಂದ ಕನ್ಯಾನ್ನsss ಮಾಡಿಕೊಳ್ಳಽವ!

ಶಾರ— ಹಂಗಾರ ಎಲ್ಲೂ ಪ್ರೇಮದ ತಿರುಗಣಿಯೊಳಗ ಇನ್ನೂ ಸಿಕ್ಕಿಲ್ಲ ಅಂದ್ಹಾಂಗಾತ್ಯ.

ಶ್ರೀ— ಹಾಂಗ ಸಿಗೋ ಗಂಡಸಲ್ಲ ನಾನು!..... ಅದಿರಲಿ. ಈಗ ಹಂಗಾರ ಆಪ್ಪಗ ಇನ್ನೂ ಅವ್ವನ ಅನುಮತಿ ಸಿಕ್ಕಿಲ್ಲ ಅಂದ್ಹಾಂಗಾತ್ಯ!

ಶಾರ— ಸಿಕ್ಕಿಲ್ಲ, ಸಿಗೋದೂ ಶಕ್ಯ ಇಲ್ಲ!

ಶ್ರೀ - ಶಾರದಾ, ಹೊರಡೋದು ಹತ್ತರ ಬಂದ್ಹಾಂಗೆಲ್ಲ ನನ್ನ ಮನಸ್ಸಿನ ಧೈರ್ಯ ಕುಗ್ಗಲಿಕ್ಕೆ ಹತ್ತೇದ. ನಾವೆಲ್ಲ ಕೂಡಿ ಇರೋದು ಅಂತ ಹೆಂಬಲಿಸಿ, ನಿಮ್ಮನ್ನ ಕರೆದೊಯ್ಯಬೇಕು ಅಂತ ಬಂದೆ.

ಶಾರ — ಅಲ್ಲೊ, ಆಗದ ಮಾತಿಗೆ ಆಶಾ ಮಾಡೋದು, ಆಗಲಿಲ್ಲ ಅಂತ ಮರಗೋದು! ಸುಮ್ಮನೇ ನನ್ನೊಬ್ಬಾಕಿನ್ನೇ ಕರಕೊಂಡು ಹೋಗೋ ಹಂಚಿಕೆ ಮಾಡು.

ಉಮಾ— (ಆರತಿಯ ಗಂಟೆಯ ಸಪ್ಪಳ, ಒಳಗಿಂದ ಕೂಗು) ಶಾರದಾ, ಶ್ರೀಪಾವಾ, ಬರ್ರಿ! ದೇವರಿಗೆ ಮಂಗಳಾರ್ತಿ ಆಗ್ತsದ.

ಶಾರ— ಹುಂsss ಬಂದಿವಿ. ಅಣ್ಣಾ, ನಡಿ. ಇಲ್ಲಾಂದ್ರ ನಮ್ಮದೂ ಮಂಗಳಾರ್ತಿ ಆದೀತು!

× × × ×

[ಶ್ರೀವಾದ, ಉಮಾ ಹಾಗು ಶಾರದಾ ಸಿನೇಮಾಕ್ಕೆ ಹೋಗಿದ್ದಾರೆ. ಶಂಕರಣ್ಣ ಒಬ್ಬನೇ ಕುಳಿತಿದ್ದಾನೆ; ತನ್ನಷ್ಟಕ್ಕೇ ಮಾತನಾಡಿಕೊಳ್ಳುತ್ತಿದ್ದಾನೆ.]

ಶಂಕ— ನಾನೂ ಅವರ ಜತಿಗೆ ಸಿನೇಮಾಕ್ಕಾದರೂ ಯಾಕ ಹೋಗಲಿಲ್ಲ? ಓದಬೇಕು ಅಂತ ಭಾಗವತ ತಕ್ಕೊಂಡು ಕೂತೆ. ಒಂದು ಅಧ್ಯಾಯೇನು ಪೂರಾ ಮುಗೀಲಿಲ್ಲ. ಯಾವುದರಲ್ಲಿಯೂ ಮನಸ್ಸು ತೊಡಗುವುದಿಲ್ಲ. ಯಾರ ಹತ್ತರಾದರೂ ಎದೆ ಬಿಚ್ಚಿ ಮಾತಾಡಬೇಕು, ಹೆಗಲ.ಮ್ಯಾಲ ಹಣೆಯಿಟ್ಟು ಆಕಂತ ಅಳಬೇಕು ಅಂತ ಅನಿಸ್ತsದ. ಈ ನನ್ನ ಮಾತನ್ನು ಕೇಳಿ ಜನ ನನಗ ಮೂರ್ಖ ಅನಬಹುದು, ಹೇಡಿ ಅನಬಹುದು. ಯಾಕೋ ನನ್ನ ಮನಸ್ಸು ಬಹಳ ಅದ್ವರಾಗೇದ. ಯಾರ ಮನಸ್ಸೂ ನೋಯಿಸೋದು ಬ್ಯಾಡ ಅಂತ ಅನಿಸ್ತsದ. ಯಾರ ಜತಿಗೂ ಕಠೋರವಾಗಿ ನಡಿಯೋದು ಬ್ಯಾಡ ಅನಿಸ್ತsವ! ಹತ್ತರ ಬರೋನರೆಲ್ಲ ಸ್ವಾರ್ಥಕ್ಕಾಗೇ ಬರ್ತಾರ, ಸ್ವಾರ್ಥಕ್ಕಾಗೇ ಇರ್ತಾರ, ಮಾಡಿಕೊಂಡ ಹೆಣ್ತೀನsss ಹಿಂಗ ಅಂದಮ್ಯಾಲ ಪರರಿಗಂಬೋದೇನದ? ಕಣ್ಮಚ್ಚಿನೊಳಗss ನುದಿವ್ಯಾದೆ, ಕಣ್ಮಚ್ಚಿನೊಳಗss ಸಂಸಾರ ಮಾಡಿದೆ. ಹೆಣ್ತಿ ಅಂಬೊ ಭ್ರಮ, ಮಗಳು ಅಂಬೊ ಭ್ರಮ! ಆ ಭ್ರಮಕ್ಕ ಬತಿಗೆಟ್ಟು ಕೂತಿದ್ದೆ. ವಂಶಕ್ಕ

ಬೆಳಕು ತಂದ ಮಗ ಕೈಗೆ ಬಂದ. ಆ ಬೆಳಕಿನ ಹತ್ತರ ಇರಬೇಕು ಅಂತ ಜೀವ ಹಾತೊರೀತದ. ಆದರ 'ನೀ ಸಾಯೋವರಿಗೂ ಭೃನು-ದಾಗಽ ಇರು' ಅಂತ ಸ್ವಾರ್ಥ ಹೇಳ್ತಽದ!

ನರ— ಶಂಕರಣ್ಣ, ಶಂಕರಣ್ಣ!

ಶಂಕ— ಬಾ.

ನರ— ಏನ್ಹೊ, ಯಾರ ಜತಿಗೋ ಮಾತಾಡತಿದ್ದಾಂಗ ಅನ್ನಿಸಿತು! ಇಲ್ಲೆ ನೋಡಿದರ ಒಬ್ಬನಽ ಇದ್ದೀದಿ!

ಶಂಕ— ಹೌದು, ಒಬ್ಬನಽ ಇದ್ದೀನಿ. ನನ್ನ ಮನಸ್ಸು ನನ್ನ ವಿವೇಕದ ಜತಿಗೆ ವಾದ ನಡಿಸೇದ!..... ಇವರೆಲ್ಲ ಸಿನೇಮಾಕ್ಕ ಹೋಗ್ಯಾರ.

ನರ— ಹೋದರೇನು? ಊಟಕ್ಕ ಕೂತಾಗಽ ಮಾತು ನಡೆದಿತ್ತು. ನೀ ಒಬ್ಬನಽ ಇರಬಹುದು ಅಂತ ಬಂದೆ.

ಶಂಕ— ನುತ್ತ....ನೀ ಬರಬಹುದು ಅಂತ ನಾನೂ ದಾರೀ ಕಾಯತಾ ಇದ್ದೆ.....ಮುಂಚೆ ಬಾಗಿಲಾ ಹಾಕ್ಕೊಂಡು ಬಾ. (ಬಾಗಿಲ ಹಾಕಿದ ಸಪ್ಪಳ)

ನರ— ಏನು? ಅಂಥ ಗಹನ ವಿಚಾರೇನು ನಡೆದಿತ್ತು?

ಶಂಕ— ಕೊನೀ ಮುಟ್ಟದ ವಿಚಾರ! ಉತ್ಪದ್ಯಂತೇ ವಿಲೀಯಂತೇ!

ನರ— ಮಗನ ಹಳವಂಡಾ ನೀ ಬಹಳ ಹಚ್ಚಿಕೊಂಡೀಯಪಾ.

ಶಂಕ— ಯಾವ ತಂದೆಗೂ ಹೀಂಗ ಹೆಳವಂಪ ಸ್ವಾಭಾವಿಕ ಅದ. ನಿನ್ನ ಮ್ಯಾಳ ಈ ಪ್ರಸಂಗ ಬಂದಿದ್ದರ ಏನ್ಮಾಡ್ತಿದ್ದಿ?.... ಆದರ ನನ್ನ ಪರಿಸ್ಥಿತಿ ಯಾರಿಗೂ ಬರೋದು ಬ್ಯಾಡ, ಮಹಾರಾಯಾ!

ನರ— ಬರೋದು ಬ್ಯಾಡ—ಖರೆ, ಬಂದಾಗ ನಡಿಯೋದ್ಹ್ಯಾಂಗ ಅಂಬೋದಽ ಪ್ರಶ್ನೆ.

ಶಂಕ— ನೀಯೇನು ಮಾಡ್ತಿದ್ದಿ ಹೇಳು. ನನ್ನ ಪರಿಸ್ಥಿತಿ-ಮನಃಸ್ಥಿತಿಯ ಅರಿವಿದ್ದ ನೀನು ಹ್ಯಾಂಗ ನಡಕೋತಿದ್ದಿ? ನನ್ನ ಜಾಗಾಕ್ಕ ನೀನಽ ಇದ್ದೀ ಅಂತ ತಿಳಕೊ!

ನರ— ನಾ ಇದ್ದು ಬಿಡತಿದ್ದೆ.

ಶಂಕ— ಎಲ್ಲೆ?

ನರ— ಇಲ್ಲೇ, ಈಗ ನೀ ಇದ್ದಲ್ಲೇ!

ಶಂಕ— ಮೂರ್ಖ ಇದ್ದೀ ಆತ್ಯ.

ನರ— ನಾ ಇದಕ್ಕಽ ಶಹಣೇತನ ಅಂತೀನಿ. ನೀ ಮೂರ್ಖತನ ಅಂತಿದ್ದರ, ಈ ಮೂರ್ಖತನಾನಽ ಒಳ್ಳೇದು ಅಂತೀನಿ!

ಶಂಕ— ಅಲ್ಲೊ, ಮಗನ ಆಸೇಕ್ಕಾ, ನನ್ನ ಹಂಬಲ ಇವಕ್ಕೇನು ಬೆಲೀನಽ ಇಲ್ಲಽ ಹ್ಯಾಂಗ?

ನರ— ವಿವೇಕ ಕಣ್ಣಿದಿರಿಗಿಟುಕೊಂಡು ವಿಚಾರಮಾಡು, ಶಂಕರಣ್ಣ. ವಿಕಾರಕ್ಕಽ ವಿವೇಕ ಅಂತ ತಿಳಿದು ನಡೀತಿದ್ದರ, ಹರಿ-ಬ್ರಹ್ಮ ಬಂದೂ, ನಿನ್ನ ಹಾದಿಗೆ ಹೆಚ್ಚಲಾರರು!

ಶಂಕ— ನೀಯೇನು ಇವತ್ತ ಬಹಳ ವ್ಯವಹಾರ ಕುಶಲನ್ಹಾಂಗ ಮಾತಾಡಲಿಕ್ಕೆ ಮೊದಲ ಮಾಡೀದಿ?

ನರ— ಹೌದು, ನನಗ ಹೊಸಾ ಕಣ್ಣು ಬಂದಾವ!

ಶಂಕ— ಕಣ್ಣು ಬಂದರ ಪಿಚ್ಚುಗಟ್ಟಿತಽದ ಗೊತ್ತದನ್ನೂ ಇಲ್ಲೋ?

ನರ— ಶಬ್ದಚ್ಛಲ ಮಾಡಿ ನನ್ನ ಬಾಯಿ ಕಟ್ಟಬ್ಯಾಡ. ನನ್ನ ವ್ಯವಹಾರಕೌಶಲದ ಮಾತು ನಿನಗ ಅವ್ಯವಹಾರ ಅಂತ ಅನ್ನಿಸಿದರ ನಿನ್ನ ಬುದ್ಧಿಗೆ ತಿಳದ್ಹಾಂಗ ಮಾಡು.

ಶಂಕ— ನೀ ಹೇಳೋದರಿ ಏನು?

ನರ— ಕೇವಲ ನಿನ್ನ ಜೀವಕ್ಕ ಹತ್ತಿದ ಮಾತು ಅಂತ ಕೇಳ್ತಿದ್ದರ ಹೇಳ್ತನಿ, ಬರೆ ಕಥೀ ಕೇಳೋ ಕುತೂಹಲದಿಂದ ಕೇಳ್ತಿದ್ದರ ನಾ ಹೇಳವನೇ ಅಲ್ಲ! ಒಂದಽ ಜೀವಾ ಇಟುಗೊಂಡು ಬೆಳದೇವಿ. ನಿನ್ನ ಜೀವ ಒದ್ದಾಡಿದರ, ನನ್ನ ಜೀವಾನೂ ಒದ್ದಾಡ್ತಽದ!

ಶಂಕ—ನನಗದರ ಅರಿವು ಇಲ್ಲಂತಲ್ಲ, ಪರಿವಿಲ್ಲ ಅಂತಲ್ಲ. ನಾ ಇನ್ನೂ ಕೆಲವು ಮಾತು ಸ್ಪಷ್ಟ ನಿನಗ ಹೇಳಿಲ್ಲ.

ನರ— ಹೇಳೋದು ಬೇಕಾಗಿಲ್ಲ. ಮೊನ್ನಿನ ನಿನ್ನ ಮಾತಿನ ಸರಣಿಯಿಂದನಽ ತಿಳಕೊಂಡೆ!

ಶಂಕ—ಹಾಂಗ ತಿಳಕೊಂಡಿದ್ದರ, ಮಗನ ಮ್ಯಾಲ ನನ್ನ ಜೀವ ಯಾಕ ಹರೀಬಾರದು ನೀನಽ ಹೇಳು!

ನರ—ಜೀವ ಹರೀತದ, ಜೀವ ಹೋಗ್ತಽದ. ಹಿಂಗ ಆಗೋದು ಆಶ್ಚರ್ಯ ಆಲ್ಲ. ಆದರ ನೀ ಹಾಂಗ ಆಗಗೊಡಬೇಕೇನು ಅಂಬೋದಽ ಪ್ರಶ್ನೆ.

ಶಂಕ—ಅಲ್ಲ, ಇದರೊಳಗ ನನ್ನ ತಪ್ಪೆಲ್ಲ್ಯದ ಇದಽ ನನಗ ತಿಳಿವೊಲ್ಲದು. ಏಕಮೇವ ಪುತ್ರ, ಪ್ರಬುದ್ಧನಾದ. ವಿದ್ಯಾವಿಭೂಷಿತನಾದ. ಅಧಿಕಾರಸದಸ್ಯನಾದ. ಪಿತೃಪ್ರೇಮದಿಂದ ಹಾತೊರೆದು ಬಂದ ಇಂಥ ಮಗನಿಗಾಗಿ ನನ್ನ ಕರುಳು ಕೊರೆದರ ಅದು ತಪ್ಪಽ?

ನರ—ಇದು ತಪ್ಪಿನ ಮಾತಲ್ಲ. ಇದ್ದ ಪರಿಸ್ಥಿತಿಯನ್ನು ಮರೆತು ನಡೆದರ ಕೇಡು. ನನಗ ಹೇಳು—ಉಮಾಬಾಯವರು ನಿನ್ನ ಹೆಣ್ತಿ ಅಂತೂ ಖರೇನಽ?

ಶಂಕ—ಖರೆ, ಮದವೀನಽ ಆಗೇದ.

ನರ— ಹದಿನೆಂಟು ವರ್ಷದ ಶಾರದಾ—ಏನಽ ಇರಲಿ—ಹುಟ್ಟಿದಾಗಿನಿಂದ ನಿನ್ನ ಮಗಳು ಅಂತ ಅನ್ನಿಸಿಗೊಂಡಾಳಽ?

ಶಂಕ—ಹುಂ, ಜನ ಹಾಂಗ ನಂಬಿದ್ದು ಖರೆ!

ನರ—ಈಗ ನೀ ಅದನ್ನ ಅಲ್ಲಗಳೆದರ, ಸಮಾಜದೊಳಗ ಅಲ್ಲೋಕಿಕ ಆಗಿ, ನಿನ್ನದಽ ಛೀ, ಥೂ ಆಗ್ತದೋ ಇಲ್ಲೋ?

ಶಂಕ— ಹಿಂಗಾಗ್ತಽದ ಅಂತ, ನಾ ಈ ಮಾತನ್ನ ಮುಚ್ಚಿಗೋ ಬೇಕಽ ಹ್ಯಾಂಗ?

ನರ—ಹೌದು. ನಿನಗಂತೂ ಬರಿ ಆದರ ಸಂಶಯ ಬಂದಽದ?

ಶಂಕ— ಸಂಶಯ ಯಾಕ? ಖಾತ್ರೀನೇ ಆಗೇದ!

ನರ—ಆಗಿದ್ದರೂ ಬಂತು; ಆಗದಿದ್ದರೂ ಬಂತು.

ಶಂಕ— ಅಲ್ಲೊ, ಪಾಪ-ಪುಣ್ಯ, ದೇವರು-ಧರ್ಮ ಏನೂ ಇಲ್ಲೇ ಇಲ್ಲೇನು?

ನರ—ಎಲ್ಲಾ ಅವ, ಧರ್ಮರಾಜನಂಥಾ ಧರ್ಮರಾಜ ಸುಳ್ಳಾ-ದ. ಕೃಷ್ಣನಂಥ ದೇವರು ನೋಸಕ್ಕ ಮನಸು ಮಾಡಿದ. ಪರಿಸ್ಥಿತಿ, ಸಂಗ ಎಲ್ಲಾ ನೋಡಬೇಕಾಗ್ತದ. ಒಳ್ಳೇದು. ನೀನು ಹೆಂಡತಿಯ ಮ್ಯಾಲ ಈ ಅಪವಾದ ಹೊರಿಸಿದಿ; ಮಗಳ ಮ್ಯಾಲಿನ ಮಮತಾನೂ ಗದುಹಾಕೆದಿ. ಅದರಿಂದ ನಿನ್ನ ಅವಸ್ಥಾ ಏನಾದೀತು. ವಿಚಾರ ಮಾಡು. ಹೆಣ್ತಿ ಕೈಬಿಡತಾಳ. ಮಗಳು ಮನಸು ತಗೀತಾಳ. ಒಂದು ಸ್ಯಾಳ್ಯಾ ಇದು ಆಗದಿದ್ದರೂ, ಇಂಥಾ ಮನಸ್ಸಿಟ್ಟುಗೊಂಡು ನಿನ್ನ ಂಗತಿ ಅವರು ದಿಲ್ಲಿಗೆ ಬರೋದು ಶಕ್ಯ ಇಲ್ಲ!

ಶಂಕ—ಬರದಿದ್ದರ ಬರಲಿಲ್ಲ. ಕಡೆಗೆ ಮಗನ ಸಂಗತಿ ನಾ ಒಬ್ಬನೇ ಹೋಗ್ತೀನಿ.

ನರ—ನಿನ್ನ ಮುಪ್ಪಿನ ಕಾಲಕ್ಕ ಅಲ್ಲಿ ಯಾರು ನಿನ್ನ ಕಾಳಜೀ ಮಾಡವರು? ಮಗ ನೋಡಿದರ ಬ್ರಹ್ಮಚಾರಿ. ಮುಂದ ಮದಿವ್ಯಾ-ತಾನು ಅಂತ ಇಟುಗೊ. ಸೊಸಿ ಬಂದರೂ ದಿಲ್ಲೀಸೊಸೀಗೆ ಎಲ್ಲೀ ಮಾವ? ತಾಯೀ ಕರುಳು ತಪ್ಪಿದರ ಹೆಣ್ತೀ ಕರುಳಾದರೂ ಬೇಕು. ಅವರಡೂ ಇರಲಿಲ್ಲ ಅಂದರ, ಗಂಡಸಿನ ಬಾಳು ನಾಯೀ ಬಾಳು. ಪಾಕೆದಷ್ಟು ತಿಂದು, ಹೊರ-ಹೊರಗs ಕಾಲಾ ಕಳೀಬೇಕಾಗ್ತದ!

ಶಂಕ—ನರಹರಿ, ಈ ಹೆಣ್ತಿಯಿಂದಾದರೂ ನನ್ನ ಬಾಳು ಪಟ್ಟಕ್ಕs ಬಂದsದ. ಈ ಮನಿಯೊಳಗ ಯಾತರ ಮ್ಯಾಲ ನನ್ನ ಅಧಿಕಾರ ಅದ ಅಂತ ತಿಳಿದೀ?

ನರ—ನೀ ಏನs ಹೇಳು. ನಾನು ಹದಿನೆಂಟು ವರ್ಷ ನಿಮ್ಮ ಸಂಸಾರ ನೋಡೀನಿ; ಅತ್ತಿಗಿ ಹಾಂಗ ಮಾಡsವರಲ್ಲ.

ಶಂಕ—ಅದs, ಮನಸಿಗೆ ಬಂದರ!! ಮನಸುಖರಾಯಳಾಕೆ-ಆಕೀಯಂತೆ ಹೋಗಬೇಕು—ಅಂದರ ಬೇಕಾದ್ದು ಮಾಡ್ತಾಳ.

ನರ—ಇದು ನೋಡು, ಅತ್ತಿಗಿಗೂ ವಯಸ್ಸಾಗ್ಯಾವ. ಒಗರು ಕಡಿಮ್ಯಾಗೇದ. ಅನುಭವ ಬಂದsದ. ಮನಸೂ ಹಣ್ಣಾಗೇದ .....

ಶಂಕ—ಇವತ್ತೇನs ನೀನು ಪೂರಾ ಆಕೀ ವಕೀಲೀ ವಹಿಸೇ ಮಾತಾಡ್ತೀಯಲ್ಲ!

ನರ—ಹೀಂಗ ನಿನ್ನಕಡಿಂದ ಅನಿಸಿಗೊಂಡೂ ನನಗ ಹೀಂಗs ಹೇಳಬೇಕಾಗೇದ. ಶಂಕರಣ್ಣ, ಭಾವನಾ ನಾಲ್ಕು ದಿವಸದುವು; ಆದರ ಜೀವನ ನೂರು ವರ್ಷದ್ದು. ನೀರು ಇರೋ ತನಕ ತೆರೀ ಆಡ್ತಾವ. ಒಂದು ಕ್ಷಣಕ್ಕ ಬರ್ತಾವ; ಇನ್ನೊಂದು ಕ್ಷಣಕ್ಕ ಹೋಗ್ತಾವ. ಯಾವಾಗಲೂ ನಿಲ್ಲೋ ಬದುಕು ಅದಲ್ಲ.

ಶಂಕ—ಅಂತ ಹೊಟ್ಟೇ ಮಗನ್ನ ನಾ ಮರತs ಬಿಡಬೇಕು. ಅಂಬೋ ಮಾತು ಬಂತು!

ನರ—ನಾ ಆಡಿದ ಅಭಿಪ್ರಾಯ ಅದಲ್ಲ. ಪ್ರತಿಯೊಬ್ಬನೂ ತನ್ನ ಪರಿಸ್ಥಿತಿ, ವಿಚಾರ ಇಟುಗೊಂಡs ನಡೆಯೋದು ಕ್ಷೇಮ ಬರೆ ಸ್ವರ ನುಡಿಸಿದರ ಸಂಗೀತಾಗೋದಿಲ್ಲ. ಅದಕ್ಕೂ ಹ್ಯಾಂಗ ರಾಗ, ತಾಳ, ಲಯ ಇದರ ಬಂಧನಗಳು ಅವನೋ, ಹಾಂಗ ಜೀವನಕ್ಕೂ ಅವ; ಕುತು ಅದಕ್ಕ ಜೀವನಸಂಗೀತ ಅಂತಾರ.

ಶಂಕ—ಹೌದಪಾ... ಈ ಜೀವನಸಂಗೀತದಾಗs ಅಪಸ್ವರ ಇರೋತನಕ ಆನಂದಾಗೋದ್ಯಾಂಗ? ಹೆಣ್ತಿ ಒಂದು ಅಪಸ್ವರ! ಮಗಳು ಇನ್ನೊಂದು ಅಪಸ್ವರ!!

ನರ—ಅದಕ್ಕ ನಿನ್ನದs ಸ್ವರ—ಅಂದರ ಸ್ಥಾಯೀ ಸ್ವರ—ತಪ್ಪೇದ ಅಂತ, ಅವು ಅಪಸ್ವರ ಅನಿಸ್ತಾವ! ಒಂದು ಕುಟುಂಬ ಅಂದರ ಆರ್ಕೆಸ್ಟ್ರಾದ್ಹಾಂಗ – ಅಂತ ಒಬ್ಬರು ಆಡಿ ತೋರಿಸಿದರು.

ಶಂಕ—ನರಹರಿ, ನೀ ಆಡೋದು ತಪ್ಪು ಅಂತ ನಾ ಹೇಳೋ. ದಿಲ್ಲಿ.....ಸದ್ಯದ್ದs ವಿಚಾರ ಮಾಡೋಣ. ನಾವೆಲ್ಲಾರೂ ದಿಲ್ಲಿಗೆ ಹೋಗಿ ಯಾಕರಬಾರದು ಹೇಳು, ಈ ಮನೀದು ಹ್ಯಾಂಗ ಅಂತ ವಿಚಾರ ಮಾಡೋ ಕಾರಣಿಲ್ಲ. ನೀನೇ ಬಂದು, ಇಲ್ಲಿದ್ದು ಬಿಡು. ನಮ್ಮ ಹೆಚ್ಚಿನ ಸಾಮಾನಿಗೆ ಒಂದು ಲೋಲೀ ಇಟುಗೋತೇವಿ, ಸಾಕು.

ನರ—ನಮ್ಮ ಮ್ಯಾಲ ಅವಲಂಬಿಸಿರೋವರ ಮನಸ್ಸು ಅಂದರ ಒಂದು ಸಾಮಾನು ಅಂತೇನು ತಿಳಕೋತೀವಿ - ಇದs ಎಲ್ಲಾ ವಿರಸಕ್ಕ ಕಾರಣಾಗೇದ. ಸಾಮಾನೇನು ಇಟ್ಟಲ್ಲೆ ಇರ್ತಾವ, ಹೆಣ್ತಿ-ಮಕ್ಕಳೂ ಹಾಂಗಿರಬೇಕು ಅಂದರ....ಇರೋ ಹಾಂಗ ಅವರಿಗೆ ಅನಿಸಬೇಕು! ಅನಿಸೋ ಹಾಂಗ ನೀವಿರಬೇಕು. ನಿರ್ಜೀವ ಕುರ್ಚಿಸಹಿತ ಕೂಡೋ ಹಾಂಗಿಟ್ಟರ ಕೂಡಿಸಿಗೋತಾವ; ಇಲ್ಲದಿದ್ದರ ಕೆಡವದೆs ಬಿಡೋದಿಲ್ಲ!

ಶಂಕ—ನರಹರಿ, ನಿನ್ನ ಮಾತಿನ ತರ್ಕ ಒಪ್ತೀನಿ; ಆದರ ಆದರ ಪರಿಣಾಮ ಯಾಕೋ ನನ್ನ ಮ್ಯಾಲ ಆಗಲೊಲ್ಲದು, ಒತ್ತಿ ಹಣ್ಣು ಮಾಡಿದರ, ರುಚಿ ಕೆಡ್ತsದ ಅಂಬೋದು ನಿನಗೂ ಗೊತ್ತಿಲ್ಲೇನು?

ನರ—ಈ ಮಾತು ಅವರಿಗೂ ಅನ್ವಯಿಸ್ತsದ, ಶಂಕರಣ್ಣ! ನೀನು ಅವರ ಬಗ್ಗೆ ಒಳ್ಳೇ ಮನಸ್ಸಿಟ್ಟುಗೊ. ಈ ಹೇಸಿ ವಿಚಾರ ತಗದು ಹಾಕು. ಮತ್ತ ಮಗನ ಹತ್ತರ ಇರಬೇಕು ಅಂಬೋ ಹವ್ಯಾ-ಸಾನೂ ಬಿಡು. ಆ ಮ್ಯಾಲ ನಿನ್ನ ಸುಖಕ್ಕ, ಸಮಾಧಾನಕ್ಕ ಕೊರತಿ ಆದರ, ನೀ ಕೂಟ್ಟ ಶಿಕ್ಷಾ ಭೋಗಿಸಲಿಕ್ಕೆ ನಾ ತಯಾರಿದ್ದೀನಿ. ನಾ ಇನ್ನ ಹೆಚ್ಚು ಹೇಳೋ ಗೋಜಿಗೆ ಹೋಗೋದಿಲ್ಲ. ನಾ ಇಷ್ಟು ಮಾತಾಡಿದ್ದು ಸಹಿತ ಕರುಳು ಹರಕೊಂಡು ಮಾತಾಡಿದೆ. ಅದೂ ನಿನಗ ಕಷ್ಟಕಾಲ ಬರಬಾರದು ಅಂತ. ಕಟ್ಟದ ಸಂಸಾರ ಮೂರಾ-ಬಟ್ಟೆ ಆಗಬಾರದು ಅಂತ.

ಶ್ರೀಪಾದ—ಅಪ್ಪಾ, ಅಪ್ಪಾ.....(ಹೊರಗಿಂದ ಕೂಗು ಕೇಳಿ-ಬರುವುದು.)

ನರ—ಶ್ರೀಪಾದ ಬಂದ ಕಾಣಸ್ತsದ.

ಶಂಕ—ಹೌದು. ಬಾಗಿಲಾ ತಗಿ! ನರಹರಿ, ಇವರು ಸಿನೆಮಾ-ದಿಂದ ಬಂದಿರಬೇಕು.

× × × ×

[ಶ್ರೀಪಾದ ತಾಯಿಯ ಜೊತೆಗೆ ಮಾತನಾಡುತ್ತಿದ್ದಾನೆ.]

ಶ್ರೀ—ಅವ್ವಾ, ನಾನಿಲ್ಲಿರೋದು ನಾಳೆ ಒಂದೇ ದಿನ. ನಾಡಿದ್ದಂತೂ ಹೊರಡಲೇಬೇಕು. ನೀವೆಲ್ಲರೂ ಬರೋ ತಯಾರಿ ಮಾಡಿರಿನ್ನ. ಈ

ವಿಷಯ ಎರಡು ಸಾರಿ ನಿಮ್ಮೆದುರಿಗೆ ತಗದೆ. ನಿಮ್ಮಿಂದ ನಿಶ್ಚಿತ ಉತ್ತರ ದೊರೀಲಿಲ್ಲ. ಅಪ್ಪಂತೂ ಬರಲಿಕ್ಕೆ ಒಪ್ಪ್ಯಾನ.

ಉಮಾ—ಹಾಂಗಿದ್ದರ ಅವರ್ನs ಕರಕೊಂಡು ಹೋಗು

ಶ್ರೀ ನೀವಿಲ್ಲದs ಅವನ್ನೊಬ್ಬನ್ನs ಕರಕೊಂಡು. ಹೋಗಲಿಕ್ಕೆ ನನ್ನ ಮನಸ್ಸsರೆ ಒಪ್ಪೀತು ಹ್ಯಾಂಗ?.

ಉಮಾ—ಹಾಂಗಿದ್ದರ ಬಿಟ್ಟು ಹೋಗು.

ಶ್ರೀ—ಅಲ್ಲ ನಾವೆಲ್ಲಾರೂ ಕೂಡಿ ಇರೋಣು. ಮಗನೆ ಹತ್ತರ ಇರಬಾರದು ಅಂತ ಮಾಡೀನೇನು ?

ಉಮಾ—ಇವ್ವೇನವ್ವ; ನಾಲ್ಕು ದಿವಸ. ಎಂಟು ದಿವಸ! ಇಲ್ಲೆ ಮನಿ ಅದ, ನಾ ಇದ್ದೀನಿ, ಮಗಳಿದ್ದಾಳ. ಶಾರದಾನ ಮದಿವೀ-ಕಾರ್ಯ ಆಗೋದದ—ಹೋಗೋದವ. ಎಲ್ಲಾ ಬಿಟ್ಟು ಅವರು ದಿಲ್ಲಿಗೆ ಹೋಗಿ ಕೂತು, ದಿಲ್ಲಿಯಿಂದsನs ಇಲ್ಲೀ ಸಂಸಾರ ಮಾಡ್ತಾ-ರಂತೇನು? ದಿಲ್ಲಿಯೊಳಗ ಕೂತು ಹಳ್ಳೀ ಆಳಬಹುದು; ಅದರ ಹಳ್ಳಿಯೊಳಗಿನ ಸಂಸಾರಕ್ಕ ಹಳ್ಳಿಯೊಳಗs ಇರಬೇಕಾಗ್ತsದ! ನಾಳೆ ನಿನ್ನ ಮದಿವ್ಯಾಗೋದು, ಹೆಣ್ತಿ ಬರೋವಾಕಿ. ಬಂದ ಹೆಣ್ತಿ ಹ್ಯಾಂಗ ಇರ್ತಾಳಂಬೋದು ನಿನಗsರೆ ಏನು ಗೊತ್ತವ? ನನ್ಹಾಂಗs ಒಬ್ಬ ಚಂಡಿ ಬಂದ್ಲು ಅಂದರ, ನಿನ್ನದೂ ಒದ್ವಾಟ, ನಮ್ಮದೂ ಒದ್ವಾಟ! ಆ ಒದ್ವಾಟ ತಪ್ಪಿಸಲಿಕ್ಕೆ ಅವ್ಯಾಲ ಅಗಲೋದಕ್ಕಿಂತ, ಈಗs ಅಗಲಿ-ಇರೋದು ಒಳ್ಳೇದು! ಇನ್ನೊಂದು ಮಾತು ಅವರು ಆಡಿ ತೋರಿಸ್ಯಾರ-ಅದು ನನ್ನ ಮನಸಿಗೆ ಬಹಳ ಹತ್ತೀದ.

ಶ್ರೀ—ಯಾರು ಅಪ್ಪನs ?

ಉಮಾ—ಹುಂ.

ಶ್ರೀ—ಅದೇನು ಮತ್ತs ?

ಉಮಾ—ನಾ ಏನೋ ಅವರ ಕಾಳಜೀ ತೊಗೊಂಬೋದಿಲ್ಲಂತ; ಅದನ್ನೂ ನನಗ ಸುಳ್ಳನಾಡಿ ತೋರಿಸಬೇಕಾಗೇದ. ಇವರ ವ್ಯಾಲ ಹೋಗೇ ತೀರಬೇಕು ಅಂತ ಅವರ ಹಟ ಇವ್ರರ, ಒಯ್ದೇ ತೀರಬೇಕು ಅಂತ ನಿನ್ನ ಹಟ ಇದ್ದರ, ಅವರಿಗೇನು ಅದರಿಂದ ಸುಖ ಆಗೋದಿಲ್ಲ-ಇದು ಶಾಶ್ವತ ಅಂತ ತಿಳಿದುಬಿಡು.

ಶ್ರೀ—ಛೆ, ಹಾಂಗ ಹಟದಿಂದ ಅವರ್ನ ಒಯ್ಯಬೇಕು ಅಂಬೋ ಮನಸ್ಸಿನವ ನಾ ಅಲ್ಲ. ಬಂದರ ನೀವೆಲ್ಲಾರೂ ಬರಬೇಕು ಅಂಬೋ ಅಪೇಕ್ಷಾ ನನ್ನದು. ಈ ಪ್ರಪಂಚದ್ದು ನನಗಾದರೂ ಏನು ಅನುಭವ ಅದ? ಅದರ, ಹೊಟ್ಟೆಲೆ ಹುಟ್ಟದ್ದಕ್ಕಿಂತ ಖರೇ ಮಗನ್ಹಾಂಗ ಇರಬೇಕು ಅಂತ ನನ್ನ ಅಂತಃಕರಣಕ್ಕ ಬಹಳ ಅನಿಸ್ತsದ.

ಉಮಾ— ಅವರ ಕೈ ಹಿಡಿದದ್ದಕ್ಕ ಖರೇ ಹೆಣ್ತಿಹಾಂಗ ಇರಬೇಕು ಅಂತ ನನಗೂ ಅನಿಸೂದಿಲ್ಲೇನು ?

ಶ್ರೀ—ಅವ್ವಾ, ಎಷ್ಟಾದರೂ ನೀ ತಾಯಿ; ನನಗ ವಂದ್ಯಳೇ ಸರಿ. ನಾ ಮಗನಾದರೂ ಅಪ್ಪನ ವ್ಯಾಲ ನಿನ್ನ ಅಧಿಕಾರ ಹೆಚ್ಚದ! ಒಂದೇ ಹಣ್ಣಿನ ಎರಡು ಹೊಳಿಕೆಗಳು ನೀವು! ಮಕ್ಕಳಾಗಿದ್ದ ನಾವು ಆ ಹಣ್ಣಿನಲ್ಲಿಯ ಬೀಜ! ನಿನ್ನ ಮಾತಿಗೆ ನಾನು ತಲಿಬಾಗಲೇ ಬೇಕು.

ಉಮಾ—ಶ್ರೀಪಾದ, ನಾ ಆಡೋದು ಚಂಡಿತನ ಅನಿಸಿದರೂ ನನ್ನ ಬಗ್ಗೆ ಬ್ಯಾಸರಾ ಮಾಡಿಕೋಬ್ಯಾಡ. ನಾ ಮಲತಾಯಿ ಖರೆ. ನೀ ಬರೋದಕ್ಕ ಮೊದಲು ನಿನ್ನ ಬಗ್ಗೆ ಮಾತು ಹೊರಟರ ಮಾತ್ರ ಹರಕೋತಿದ್ದೆ—ಅದೂ ಖರೆ! ಆದರ ಈಗೆಂಟು ದಿವಸದೊಳಗ, ನಿನ್ನ ಗುಣ ನನ್ನ ಮನಸ್ಸು ಬದಲುಮಾಡೀದ. ನೀನು ದಿಲ್ಲಿಯಲ್ಲಿರು, ನಾವು ಇಲ್ಲಿ ಇರ್ತೀವಿ. ಯಾರ್ಯಾರು ಅವರವರ ಸ್ಥಾನದಲ್ಲಿರೋದs ಒಳ್ಳೇದು. ಒಬ್ಬರನ್ನೊಬ್ಬರು ಕಾಣಬೇಕು ಅಂತ ಅನಿಸಿದಾಗ, ಎರಡು ದಿನ ಬರೋಣು ಹೋಗೋಣು....(ಶಂಕರಣ್ಣ ಬರುತ್ತಾನೆ.)

ಶಂಕ—ಉಂ, ತಾಯೀಮಗನ ಮಾತು ಬಹಳ ಜೋರು ನಡದಾವ ?

ಶ್ರೀ—ಬ್ಯಾರೇ ಏನು ? ದಿಲ್ಲಿಗೆ ಹೋಗೋದರ ಬಗ್ಗೇ ಮಾತು ನಡೆದಿತ್ತು.

ಶಂಕರ—ಉಂ, ಹೋಗೋದು ಅಂತ ನಿರ್ಧಾರ ಆತ್ಯೊ ?

ಶ್ರೀ—ನನ್ನದಂತೂ ಮೊದಲೇ ಆಗೇದ.

ಶಂಕ—ನಿನ್ನದಾಗೇದ. ನಮ್ಮೆಲ್ಲಾರದು ?

ಶ್ರೀ—ಅವ್ವ ಅಂತೂ ಬರೋದಿಲ್ಲ.....ಮತ್ತ ನೀವೂ.....

ಶಂಕ—ನಾನು ಬರ್ತೀನಿ. ನಾ ಬರೋದು ಅಂತ ಯಾವಾಗೂ ಸಂಕಲ್ಪಮಾಡಿಕೊಂಡೀನಿ.

ಶ್ರೀ—ಬರ್ತೀರಿ ಖರೆ. ಆದರ ಸದ್ಯಕ್ಕ.....ಬರೋದ ಬ್ಯಾಡ!

ಶಂಕ— (ತೀರ ಹತಾಶನಾಗಿ) ಬ್ಯಾಡ ?.....ನಾ ಬರೋದ ಬ್ಯಾಡ ಅಂತೀದಿ ?

ಶ್ರೀ—ಸದ್ಯಕ್ಕ ಬ್ಯಾಡ! ಸದ್ಯಕ್ಕ ನಾ ಒಬ್ಬನs ಹೋಗೋದು ಯೋಗ್ಯ ಅಂತ ಅನಿಸೇದ! ನಾ ಬಹಳ ಆಗ್ರಹಮಾಡಿದ್ದರ ಅವ್ವ ಬರಬಹುದಾಗಿತ್ತು; ಆದರ ನನಗs ಆ ವಿಚಾರ ಅಷ್ಟು ಸರಿ ಅಂತ ಅನಿಸಲಿಲ್ಲ. ಅಪ್ಪಾ, ನಿಮಗಿಲ್ಲೆ ಇನ್ನೂ ಕೆಲಸವ. ಶಾರದಾಗ ನೋಡಿರಿ, ನನಗೊಂದು ಕನ್ಯಾ ನೋಡಿರಿ. ಮದಿವೀ ಕಾಲಕ್ಕ ಎಲ್ಲರು ಮತ್ತೆ ಕಲೆಯೋಣಂತ, ಅದಾದ ಮ್ಯಾಲ.....ಎಲ್ಲಾರೂ ಕೂ ಇರೋ ಭಾಗ್ಯ ಒಮ್ಮೆಲ್ಲೊಮ್ಮೆ ಬಂದೀತಂತ! ಆ ಕಾಲ ಬಂದಾ ಕೂಡಿ ಇರೋಣಂತ!

ಶಂಕ—(ಶೋಕ ತಡೆಯಲಾರದೆ) ಅಷ್ಟು ಕಾಲ....ನಾ ಬದು ಉಳಿದರ..... ನೋಡೋಣಂತ! ಯಾವುದಕ್ಕೂ ಪಡೆದು ಬಂದಿ ಬೇಕು !!

(ಎಂಬ ಮಾತಿಗೆ ಸರಿಯಾಗಿ, ಹೊರಗೆ ಭಿಕ್ಷುಕನು ಏಳತಾರಿಯ ನಾದ ದಲ್ಲಿ ' ಪಡೆದು ಬಂದಿರಬೇಕೊ ಗುರುದೇವಾ ' ಎಂದು ಮೂರು ಸಲ ಅನ್ನು ವಾಗ ಮುಕ್ತಾಯ.)

ಅರಿಯಬಹೆನು

ಶ್ರೀ ಎಂ. ಗೋಪಾಲಕೃಷ್ಣಭಟ್ಟ, ನೀರ್ಚಾಲ (ದ. ಕ.)

೧

ತ್ಯಾಗಿಗಳು ಭೋಗಿಗಳು ಜ್ಞಾನಿ–ಮುನಿಪುಂಗವರು
ವೀರನರರೊಬ್ಬರೂ ಉಳಿಯಲಿಲ್ಲ;
ವರಶಿಲ್ಪಿ–ಕವಿಗಳನು ಶುಷ್ಕಭೂಮಿಯ ಹೆಸಿವು
ಹಾಹಂತ! ಇನ್ನೆವರ ಉಳುಹಲಿಲ್ಲ!

೨

ಎನಿತೊ ಶತ-ಶತವಾನ ಏಸು ಜೀವವ ನುಂಗಿ
ಈ ಮಣ್ಣು ತನ್ನೊಡಲ ತುಂಬಿರುವುದೊ!
ಭಗ್ನಜೀವಿಗಳೆಷ್ಟೊ ಏಸು ಜಿಜ್ಞಾಸುಗಳೊ,
ಇನ್ನೆನಿತು ಜೀವಿಗಳ ನುಂಗಲಿಹುದೊ!

೩

ನಿಷ್ಕ್ರೇಮ! ನಿರ್ದಯತೆ! ಹೃದಯ ಸಿಡಿದೇಳುತಿದೆ
ಬಿಡಿಸಲಾರದ ಒಗಟೆ ನಿನ್ನಬಾಳು?
ಅಂಕ ಪರ್ಯಂಕದಲಿ ನಗುತಿರುವ ಮಕ್ಕಳಲಿ
ಈ ಸೇಡು! ಭೂತಾಯಿ, ಏಕೆ ಹೇಳು.

೪

ಗ್ರೀಷ್ಮರವಿಕರದಂತೆ ನರರೊಡಲ ಕೆನ್ನೀರ
ಕುಡಿಕುಡಿದು ಆರದಿಪ ತವಪಿಪಾಸೆ–
ಚಿಂತೆಸಂತೆಯ ಹೊತ್ತು ಸುಖದ ಹಾಗಯಿಕೆಯಲಿ
ಬದುಕಲೆಳಸುವ ಜನದ ಶುಷ್ಕ ಆಸೆ—

೫

ಇವುಗಳೆರಡರ ನಡುವೆ ನಡೆಯುತಿದೆ ಹೋರಾಟ,
ಯುಗಯುಗಗಳಿಂದಲೂ ತಿಳಿದುಬಂತು!
ಕ್ರೂರಕೃತ್ಯವ ಗೈದು ಇನಿಸು ಅರಿಯದ ತೆರದ
ನಟನೆಯಲಿ ಇಹೆ ನೀನು ಇಲ್ಲಿ ನಿಂತು!

೬

ನಾಳೆ ನಾನೂ ನಿನ್ನ ನುಸಣ ಬಸಿರಿನ ಒಳಗೆ
ಹಿಡಿಮಣ್ಣು ರೂಪಿಸಲಿ ಒರಗಲಿಹೆನು!
ಅಪಕಂತ ಮೊದಲೊಮ್ಮೆ ಮಕ್ಕಳನು ಮುಕ್ಕುತಿಹ
ತವಗೂಢದಂತರವ ಅರಿಯಬಹೆನು!

ವಿದ್ಯಾಪೀಠ

ಶ್ರೀ. ಎನ್. ಎಸ್. ಗದಗಕರ ಬಿ. ಎ. ಧಾರವಾಡ

೧

ಗತಿಸಿದುವು ಕಾಲಚಕ್ರದಲೆನಿತೊ ವರುಷಗಳು
ನಾ ನಿನ್ನ ಪಾದದೆಡೆಯಲಿ ಭಕ್ತನೆಂದಿದ್ದೆ.
ನಿನ್ನ ಮಂದಿರದ ದಿವ್ಯತೆಯೇನ ಬಣ್ಣಿಪುದು?
ಶಕ್ತಿ ಸಾಲದು ನನ್ನಲಿಹ ಶಬ್ದಸಂಗ್ರಹಕ.

೨

ಆದರೂ ಉಸಿರದಿರಿ ಹೊಣೆಗೇಡಿಯೆನಿಸುವೆನು.
ನೀನು ಇತ್ತುದದೆನಿತು! ಜ್ಞಾನದಾ ಬೆಳಕೊಂದೆ—
ಮಾತುಗಾರಿಕೆಯೊಂದೆ ಕಲ್ಪನೆಯ ಕುಸುರೊಂದೆ!
ನನ್ನಂತರಂಗದಲಿ ಅಚ್ಚಳಿಯದುಳಿದಿರುವೆ.

೩

ಲೇಖನದ ಕಲೆಯ ಬೀಜವನೂರಿದುದ ನೀನು–
ಮರೆಯುವೆನೆ? ಅದರ ಬೆಳೆಯುಣ್ಣುತಿಹೆನಿಂದು;
ನಿನ್ನ ದೇಗುಲದ ಆ ಮಾಸದಿಹ ಸೌಂದರ್ಯ
ಎನ್ನ ಮನದಾಗಸದಿ ನೂರು ಕಾಲವು ಇರಲಿ!

೪

ಹೆಚ್ಚೇನ ಬಯಸುವುದು? ಸದ್ಗುಣದ ನಿಧಿ ನೀನು
ನಿನ್ನ ಐಸಿರಿಯೆನಗೆ ಲಭಿಸಲಿ ನಿರಂತರವು;
ಜಯ ಜಯವು ಜಯವೆಂದು ಮನದಿ ಅರತಿಯೆತ್ತಿ
ನಿನ್ನ ನುತಿಸುವ ಆಸೆ ಎಂದೆಂದು ಮೊರೆಯುತಿದೆ.

ಕ್ರಾಂತಿಕಾರಿಯಾದ ಸಾಹಿತಿ

ವಾಲ್ಟೇಯರ್

ಶ್ರೀ. ಬ. ಲ. ನಲ್ಲಿ, ಮಣಿದಾಳ

●

ಸಾಹಿತ್ಯವು ಜೀವನದ ಸತ್ಯದರ್ಶನವಾಗಿರಬೇಕೆಂದು ಎಲ್ಲರೂ ಬಾಯಿಂದ ಹೇಳುತ್ತಾರೆ. ಆದರೆ ಸತ್ಯವು ನಿಷ್ಕರುಣವಾಗಿ ಕಂಡಾಗ, ಎಲ್ಲರೂ ಅವರ ಮೇಲೆ ದಾಳಿಮಾಡಲು ನಿಲ್ಲುತ್ತಾರೆ. ಫ್ರೆಂಚ್ ಸಾಹಿತ್ಯಿಕ ವಾಲ್ಟೇಯರನ ಜೀವನದ ಕೊನೆಯವರೆಗೂ ಇಂತಹ ದಾಳಿಗಳನ್ನು ಎದುರಿಸಬೇಕಾಯಿತು.

●

ವಾಲ್ಟೇಯರನ್ನು ಕುರಿತು ವಿಕ್ಟರ್ ಹ್ಯೂಗೋ ಹೀಗೆ ಬರೆದಿರುವನು:—"ವಾಲ್ಟೇಯರನ ಹೆಸರಿತ್ತುತ್ತಲೇ, ಸಂಪೂರ್ಣ ಹದಿನೆಂಟನೆಯ ಶತಮಾನವು ತನ್ನ ವಿಶಿಷ್ಟಗುಣಗಳೊಂದಿಗೆ ನಮ್ಮೆದುರು ಪ್ರತ್ಯಕ್ಷವಾಗುತ್ತದೆ." ಇನ್ನೊಬ್ಬ ಲೇಖಕನು ಬರೆದಿರುವುದಿಂತು:—"ಮನುಷ್ಯನು ತನ್ನ ಜೀವನದಲ್ಲಿ ಏನು ಮಾಡಿಪ್ಪನೆಂಬ ವಿಚಾರದಿಂದ ಮನುಷ್ಯರನ್ನು ಕುರಿತು ಯೋಚಿಸುವುದಾದರೆ, ನಿಸ್ಸಂದೇಹವಾಗಿ ವಾಲ್ಟೇಯರನು ಆಧುನಿಕ ಯುರೋಪಿನ ಸರ್ವಶ್ರೇಷ್ಠ ಲೇಖಕನು. ಕ್ಷಯಗ್ರಸ್ತಯುಗವನ್ನು ಕ್ರಮಶಃ ಗಲಿತಾವಸ್ಥೆಯಿಂದ ಪರಿವರ್ತಿಸಲಿಕ್ಕೆಂದೇ ಬ್ರಹ್ಮನು ಅವನಿಗೆ ಎಳ ವರ್ಷಗಳ ಆಯುಷ್ಯವನ್ನಿತ್ತಿದ್ದನು. ಕಾಲನೊಂದಿಗೆ ಸಂಗ್ರಾಮವೆಸಗಲು ಅವನ ಬಳಿ ಸಮಯವಿತ್ತು. ಮತ್ತು ಈ ಯುದ್ಧದಲ್ಲಿ ಅವನು ಒಬ್ಬ ವಿಜಯಿಯಾದ ವೀರನ ರೂಪದಲ್ಲಿ ಮೃತ್ಯುವಶನಾದನು." ಫ್ರಾನ್ಸಿನ ರಾಜ್ಯಕ್ರಾಂತಿಯ ಮೊದಲು ವ್ಯಕ್ತಿಸ್ವಾತಂತ್ರ್ಯಕ್ಕಾಗಿ ಅವನು ಆಜೀವನ ನಡೆಸಿದ ಸಂಗ್ರಾಮದ ಕುರಿತು ಅವನ ಜೀವನಚರಿತ್ರಲೇಖಕನು ಒಂದು ಸಂಕ್ಷಿಪ್ತಯಲ್ಲಿ ಎಲ್ಲವನ್ನೂ ಬರೆದಿರುವನು. ಅವನು ಬರೆದುದು ಹೀಗಿದೆ:—"ವಾಲ್ಟೇಯರನೆನ್ನುತ್ತಿದ್ದನು—'ನೀವಾಡುವ ಪ್ರತಿಯೊಂದು ಮಾತನ್ನು ಕುರಿತೂ ನನಗೆ ಮತಭೇದವಿದೆ; ಆದರೆ ಇನ್ನೆಲ್ಲವನ್ನು ಹೇಳುವುದಕ್ಕೆ ಯಾವ ನಿಮ್ಮ ನ್ಯಾಯವಾದ ಅಧಿಕಾರವಿದೆಯೋ, ಆ ಅಧಿಕಾರದ ರಕ್ಷಣೆಗಾಗಿ ನಾನು ಆಜೀವನ ಪ್ರಯತ್ನಿಸುವೆನು!"

ವಾಲ್ಟೇಯರನ ಯುಗವು ಅಂಧವಿಶ್ವಾಸ ಮತ್ತು ಧರ್ಮಾಂಧತೆಯ ಯುಗವಾಗಿತ್ತು. ಆ ಯುಗದ ಸರ್ವಪ್ರಥಮ ಪ್ರಗತಿಶೀಲ ವಿಚಾರಕ ಮತ್ತು ಲೇಖಕನಾಗಿದ್ದನು ವಾಲ್ಟೇಯರ್. ತನ್ನ ಕಾಲದ ಸಾಹಿತ್ಯವಿದ್ರೋಹಿಗಳಲ್ಲಿ ಅವನು ಅಗ್ರಗಣ್ಯನು. ಮನಸ್ಸಿನ ಆಲಸ್ಯ ಮತ್ತು ಆದರ್ಶಗಳ ಜಡತೆಯ ವಿರುದ್ಧ ಅವನು ಲೇಖನಿಯನ್ನೆತ್ತಿದ; ವ್ಯಂಗ್ಯದ ರೂಪದಲ್ಲಿ ಅವನ ಲೇಖನಿಯು ಧಾರ್ಮಿಕ ಅಂಧವಿಶ್ವಾಸಗಳ ವಿರುದ್ಧ ಅಗ್ನಿವರ್ಷವನ್ನೆಸಗಿತು. ನೀಡ್ಸೆಯು ಅವನ ವ್ಯಂಗ್ಯವನ್ನು ನಗುವ ಸಿಂಹಕ್ಕೆ ಹೋಲಿಸಿದ್ದಾನೆ. ಸಿಂಹದ ನಗುವು ಎಷ್ಟು ಘಾತಕವಾಗಿದೆ? ವಾಲ್ಟೇಯರನು ನಗುವ ಸಿಂಹದಂತೆ ಬಂದು, ತನ್ನ ನಗುವಿನಿಂದ ಸರ್ವನಾಶವನ್ನೆಸಗಿದನು. ವಾಲ್ಟೇಯರ್ ಮತ್ತು ರೂಸೋ ಇವರು, ಹದಿನೆಂಟನೆಯ ಶತಮಾನದ ಯುರೋಪಿನಲ್ಲಿ ರಾಜಕೀಯ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ಕ್ರಾಂತಿಯ ಮಾರ್ಗವನ್ನು ಪ್ರಶಸ್ತಗೊಳಿಸಿದ ಸಾಹಿತ್ಯಿಕಶಕ್ತಿಗಳಾಗಿದ್ದರು. ಸಾಮಂತರ ಶಾಸನದ ಚಿತಾಭಸ್ಮದ ಮೇಲೆ, ಮಧ್ಯಮವರ್ಗದ ಶಾಸನದ ಸೂತ್ರಪಾತವನ್ನೆಸಗಿದರು ವಾಲ್ಟೇಯರ್. ಈಶ್ವರವಿರೋಧಿ ಅಥವಾ ಧರ್ಮವಿದ್ರೋಹಿಯಾಗಿರಲಿಲ್ಲ. ಅವನು ನಂಬುತ್ತಿದ್ದ ಧರ್ಮವು ಯುಕ್ತಿವಾದವು. ಅರ್ಥಾತ್ ಯಾವುದೇ ಧಾರ್ಮಿಕಸಿದ್ಧಾಂತವು ತಾರ್ಕಿಕ ವರಿಗಲ್ಲಿನಲ್ಲಿ ಶುದ್ಧವೆಂದು ನಿರ್ಣಯವಾಗುವತನಕ ಅವನದನ್ನು ಸ್ವೀಕರಿಸಲು ಸಿದ್ಧನಿರಲಿಲ್ಲ. ಸರಲ ಧರ್ಮವಿಶ್ವಾಸದ ವಿರುದ್ಧ ಅವನು ಎಂದೂ ಏನೂ ಹೇಳಲಿಲ್ಲ ಅವನ ಪ್ರಚಂಡವಿರೋಧವು ಆ ಕಾಲದ ಧರ್ಮಾಂಧತೆ ಮತ್ತು ಧಾರ್ಮಿಕ ಅನಾಚಾರಗಳ ವಿರುದ್ಧವಿತ್ತು. ಅವನು ಫ್ರಾನ್ಸಿನ ಜನರ ಪ್ರಾಣಗಳನ್ನು ಎಲ್ಲಾ ರೀತಿಯ ಅಂಧವಿಶ್ವಾಸ ಹಾಗೂ ಕು ಸಂಸ್ಕಾರಗಳಿಂದ ಮುಕ್ತಗೊಳಿಸಲು ಬಯಸುತ್ತಿದ್ದನು. ಮಿಥ್ಯಾ ಧರ್ಮ ಮತ್ತು ಪಾಷಂಡತೆಯ ವಿರುದ್ಧ ಅವನು ತೀಕ್ಷ್ಣ ವ್ಯಂಗ್ಯ ಬಾಣದ ಪ್ರಯೋಗವನ್ನೆಸಗಿದನು. ಆದುದರಿಂದವನು ಧರ್ಮಾಚಾರ್ಯರ ಮತ್ತು ಧರ್ಮಪುರೋಹಿತರ ಕೋಪಕ್ಕೆ ಪಾತ್ರನಾಗಬೇಕಾಯಿತು ಅವರ ದೃಷ್ಟಿಯಲ್ಲಿ ವಾಲ್ಟೇಯರನು ಧರ್ಮಹೀನ ಮತ್ತು ಧರ್ಮದ್ವೇಷಿಯಾಗಿದ್ದನು.

ವಾಲ್ಟೇಯರನ ಜನ್ಮವು ಸನ್ ೧೬೯೪ರಲ್ಲಿ ಪ್ಯಾರಿಸಿನಲ್ಲಾಯಿತು. ಅವನ ಜನ್ಮದೊಂದಿಗೇ ತಾಯಿಯು ಮೃತ್ಯುವಶಳಾದಳು ಒಂದು ಬಗ್ಗಣ ಶಿಶುವಿನಂತೆ ಜನ್ಮವೆತ್ತಿದ ಕಾರಣ, ಅವನು ಉಳಿಯುವ ಆಶೆಯಿರಲಿಲ್ಲ ಆದುದರಿಂದ ಬೇಗನೆ ಅವನಿಗೆ ಕ್ರಿಸ್ತ ಧರ್ಮದೀಕ್ಷೆಯು ಕೊಡಲ್ಪಟ್ಟಿತು. ಆದರೆ ಸ್ವಾಸ್ಥ್ಯಹೀನನಾದರೂ ಅವನ ಜ್ಞಾನಾರ್ಜನೆಯ ಅದಮ್ಯ ಉತ್ಸಾಹವಿತ್ತು. ೧೭ ವರ್ಷದ ಪ್ರಾಯದಲ್ಲಿ ವಾಲ್ಟೇಯರನು ಸಾಹಿತ್ಯವನ್ನು ಉದ್ಯೋಗದಂತೆ ಸ್ವೀಕರಿಸುವ ಇಚ್ಛೆಯನ್ನು ಪ್ರಕಟಿಸಿದನು. ಅವನು ವಕೀಲನಾಗಬೇಕೆಂದು ತಂದೆಯ ಇಚ್ಛೆಯಿತ್ತು. ಆದುದರಿಂದ ಅವನು ಮಗನಿಗೆ ಕಾನೂನುಗಳನ್ನು ಕಲಿಯಲು ಒತ್ತಾಯಪಡಿಸಿದನು. ಕಾನೂನಿನ ಶಿಕ್ಷಣ ಹೊಂದಿದರೂ ವಾಲ್ಟೇಯರನು ವಕೀಲನಾಗಲಿಲ್ಲ. ಫ್ರಾನ್ಸಿನ ಕೂಟನೀತಿ ವಿಭಾಗದಲ್ಲಿ ಅವನಿಗೊಂದು ನೌಕರಿಯು ದೊರೆಯಿತು. ಈ ನೌಕರಿಯ ಸಂದರ್ಭದಲ್ಲಿ ಅವನು ಹಾಲಂಡಿಗೆ ಹೋಗಬೇಕಾಯಿತು. ಆ ಅವನು ಒಬ್ಬ ಡಚ್ ಬಾಲಿಕೆಯ ಪ್ರೇಮಪಾಶದಲ್ಲಿ ಕಟ್ಟುಬಿದ್ದು ಅವಳನ್ನು ಕರೆದುಕೊಂಡು ಪ್ಯಾರಿಸಿಗೆ ಓಡಿಬರಲು ಆಲೋಚಿಸಿದನು ಆದರೆ ಅಧಿಕಾರಿಗಳಿಗೆ ಸಮಾಚಾರ ಸಿಕ್ಕಿ, ಅವರು ಇವನನ್ನು ಪ್ಯಾರಿಸಿಗೆ ಕಳುಹಿದರು. ಈಗವನು ಸಾಹಿತ್ಯೋದ್ಯೋಗಿಯಾದನು. ಅವ ತಂದೆಯು, ಸಾಹಿತಿಯಾದರೆ ಹಸಿವೆಯಿಂದ ಸಾಯಬೇಕಾಗುವುದೆಂದ

ನು ಅವನನ್ನು ತ್ಯಾಜ್ಯಪುತ್ರನೆಂದು ತಿಳಿಯುವೆನೆಂದೂ ಗದರಿಸಿ ನು. ಆದರೆ ವಾಲ್ಟೇಯರನು ತನ್ನ ದೃಢಸಂಕಲ್ಪದಿಂದ ವಿಚಲಿತ. ನಾಗಲಿಲ್ಲ. ಏಕಾಗ್ರಭಾವದಿಂದ ಅವಿಶ್ರಾಂತವಾಗಿ ಅವನ ಸಾಹಿತ್ಯ-ಸಾಧನೆಯು ನಡೆಯತೊಡಗಿತು. ಅವನು ಜೀವಿತವಿರುವ ವರೆಗೂ ಲೇಖನಿಯೆಂಬ ತನ್ನ ಅಸ್ತ್ರವನ್ನು ಒಂದು ದಿನ ಸಹ ತ್ಯಜಿಸಲಿಲ್ಲ. ಏಳಾರು ನೂರು ಪುಸ್ತಕಗಳನ್ನು ಬರೆದನು. ಅವುಗಳಲ್ಲಿ ಕವಿತೆ, ನಾಟಕ, ಕಾದಂಬರಿ, ಇತಿಹಾಸ ಎಲ್ಲವೂ ಇವೆ. ಅವನ ಗದ್ಯವು ಫ್ರೆಂಚ್ ಸಾಹಿತ್ಯಕ್ಕೆ ಗೌರವರೂಪವಾಗಿದೆ. ಅವನ ಲೇಖನಗಳಲ್ಲಿ ಒಂದು ಕಡೆ ಜ್ವಾಲಾಮುಖಿಯ ಉಜ್ವಲ ಲಾವಾಪ್ರವಾಹವಿದ್ದರೆ, ಇನ್ನೊಂದು ಕಡೆ ಚಂದ್ರನ ಉಜ್ವಲ ಸ್ನಿಗ್ಧ ಪ್ರಕಾಶವೂ ಇದೆ. ವಿಲ್ ಡುರಾಂಟನು ಅವನನ್ನು ಕುರಿತು ಹೀಗೆ ಬರೆದಿದ್ದಾನೆ:— "ವಾಲ್ಟೇಯರನು ಇತಿಹಾಸದ ಅತ್ಯಂತ ಬೌದ್ಧಿಕಶಕ್ತಿ."

ಲೂಯಿಯ ಮರಣವಾದಾಗ, ವಾಲ್ಟೇಯರನ ವಯಸ್ಸು ೫೧ ವರುಷ. ರಾಜನ ಮರಣಾನಂತರ ರಾಜಪ್ರತಿನಿಧಿಯು ಆರ್ಥಿಕ ಕಾರಣಗಳಿಂದ ಅಶ್ವದಳದ ಅರ್ಧಾಂಶ ಕುದುರೆಗಳನ್ನು ಮಾರಿದನು ಈ ಕುರಿತು ವಾಲ್ಟೇಯರ್‌ನು ಹೀಗೆ ಬರೆದನು:—"ಅಶ್ವದಳದ ಕುದುರೆಗಳನ್ನು ಮಾರದೆ, ರಾಜಸಭೆಯಲ್ಲಿ ತುಂಬಿರುವ ಕತ್ತೆಗಳ ಅರ್ಧಾಂಶವನ್ನು ಹೊರಗೆ ಕಳುಹುತ್ತಿದ್ದರೆ, ಅದು ಅಧಿಕ ಬುದ್ಧಿವಂತಿಕೆಯ ಕೆಲಸವಾಗುತ್ತಿತ್ತು." ವಾಲ್ಟೇಯರನ ವ್ಯಂಗ್ಯವು ಎಷ್ಟು ತೀಕ್ಷ್ಣವೆಂಬುದಕ್ಕೆ ಇದೊಂದು ಜ್ವಲಂತ ಉದಾಹರಣೆ. ರಾಜನ ಹೆಸರಿನಲ್ಲಿ ಒಂದು ವ್ಯಂಗ್ಯನಾಟಕ ಬರೆದ ಅಪರಾಧದಲ್ಲಿ ಅವನಿಗೆ ಜೈಲಾಯಿತು. ಜೈಲಿನಿಂದ ಬಿಡುಗಡೆಯಾದ ಮೇಲೆ, ಅವನು ಕವಿತೆಯ ಎರಡು ಪುಸ್ತಕಗಳನ್ನು ಬರೆದನು. ಈ ಎಲ್ಲಾ ಕೃತಿಗಳಿಂದಾಗಿ ಅವನ ಸಾಹಿತ್ಯಕೀರ್ತಿಯು ನಾಲ್ಕೂ ಕಡೆಗೆ ಪಸರಿಸಿತು. ಪ್ರಕಾಶಿತವಾದಂತೆ ವಾಲ್ಟೇಯರನ ಪ್ರತಿಯೊಂದು ಪುಸ್ತಕವೂ ಸರಕಾರದಿಂದ ಜಪ್ತಿ ಮಾಡಲ್ಪಡುತ್ತಿತ್ತು. ಇದರಿಂದ ಅವನ ಪುಸ್ತಕಗಳನ್ನೋದುವ ಉತ್ಸಂತೆಯು ಜನರಲ್ಲಿ ಮತ್ತಷ್ಟು ಹೆಚ್ಚುತ್ತಿತ್ತು. ಜನರು ಗುಟ್ಟಾಗಿ ಅವನ ಪುಸ್ತಕಗಳನ್ನೋದುವ ಪ್ರಯತ್ನ ಮಾಡತೊಡಗಿದರು. ಅವನಿಂದ ಬರೆಯಲ್ಪಟ್ಟ ನಾಟಕವು ಎರಡುರಾತ್ರಿಗಿಂತ ಹೆಚ್ಚು ದಿನ ಅಭಿನಯಿಸಲ್ಪಡುತ್ತಿರಲಿಲ್ಲ; ಕಾರಣ: ರಾಜಾಜ್ಞೆಯಿಂದ ನಾಟಕವು ಮುಕ್ತಾಯಗೊಳಿಸಲ್ಪಡುತ್ತಿತ್ತು. ಆದರೆ ಆ ಎರಡು ರಾತ್ರಿಯ ಅಭಿನಯಕ್ಕೆ ಜನರು ಮುಗಿಬೀಳುತ್ತಿದ್ದರು. ಅವನ ನಾಟಕದ ಎಷ್ಟೋ ವಾಕ್ಯಗಳು ಜನರಿಗೆ ಕಂಠಸ್ಥವಾಗುತ್ತಿದ್ದುವು. ಫ್ರಾನ್ಸಿನ ಹೊರಗೆ ವಾಲ್ಟೇಯರನ ಪುಸ್ತಕಗಳು ಸಾಕಷ್ಟು ಖರ್ಚಾಗುತ್ತಿದ್ದುವು. ವಾಲ್ಟೆಯರನ ಮೇಲೆ ಸರಕಾರವು, ಅವನು ಯುವಕರನ್ನು ನೀತಿಭ್ರಷ್ಟರನ್ನಾಗಿ ಮಾಡುತ್ತಿದ್ದಾನೆಂಬ ಅಪರಾಧವನ್ನು ಹೊರಿಸಿತು ಆ ದಿನಗಳಲ್ಲಿ ಫ್ರಾನ್ಸಿನಲ್ಲಿ ರಾಜನ ಶಾಸನದ ಸಮಾಲೋಚನೆ ಮಾಡುವುದು ಅಥವಾ ಅಧಿಕಾರಿಗಳ ಯೋಗ್ಯತೆ ಅಥವಾ ಬುದ್ಧಿಮತ್ತೆಯಲ್ಲಿ ಸಂದೇಹಪಡುವುದು ಸಹ ನೀತಿಹೀನತೆಯೆಂದು ತಿಳಿಯಲ್ಪಡುತ್ತಿತ್ತು.

ವಾಲ್ಟೇಯರನ ನಿಜವಾದ ಹೆಸರು ಫ್ರಾಂಕ್ ಈ-ಮರಿ

ಕುಟಜಾರಿಷ್ಟ

ಆಮಾಂಶ—ಸಂಗ್ರಹಣೆಗಳಿಗೆ

●

ಕಾಸಶ್ವಾಸಾರಿ

ದಮ್ಮು-ಕೆಮ್ಮುಗಳಿಗೆ

ಎಲ್ಲ ಬಗೆಯ ಆಯುರ್ವೇದ ಔಷಧಿಗಳಿಗಾಗಿ ಬರೆಯಿರಿ:

ದಿ ನೂತನ
ಆಯುರ್ವೇದ ಕಾರ್ಯಾಲಯ ಲಿ.
ವಿಜಾಪುರ

ಅರುಈ' ಎಂದಿತ್ತು. ಅವನು ಜೈಲಿನಲ್ಲಿದ್ದಾಗ ತನ್ನ ಉಪನಾಮವಾಗಿ 'ವಾಲ್ಟೇಯರ್' ಎಂಬ ಹೆಸರನ್ನಿಟ್ಟುಕೊಂಡನು. ಇದೇ ಗುಪ್ತನಾಮದಿಂದ ಕವಿತೆ ಬರೆಯುತ್ತಿದ್ದನು. ಸೆರೆಮನೆಯಲ್ಲಿ ಹನ್ನೊಂದು ತಿಂಗಳ ಸಜೆಯನ್ನನುಭವಿಸುವುದರೊಳಗೇ ಅವನೊಂದು ಮಹಾಕಾವ್ಯವನ್ನು ರಚಿಸಿದ್ದನು. ಜೈಲಿನಿಂದ ಬಿಡುಗಡೆಯಾಗುತ್ತಲೇ ವಾಲ್ಟೇಯರನು, ರಂಗಪೀಠದ ಮೇಲೆ ಅವತರಿಸಿದನು. ಮತ್ತು ಒಂದು ವಿಷಾದಾಂತ ನಾಟಕದ ರಚನೆ ಮಾಡಿದನು. ಈ ನಾಟಕವು ಪ್ಯಾರಿಸಿನಲ್ಲಿ ಒಂದೇ ಸನನೆ ೪೫ ರಾತ್ರಿ ಅಭಿನಯಿಸಲ್ಪಟ್ಟು, ಅದಕ್ಕೆ ಅಭೂತಪೂರ್ವ ಸಫಲತೆ ದೊರೆಯಿತು. ವಾಲ್ಟೇಯರನ ಮುದಿತಂದೆ ತನ್ನ ಪುತ್ರನ ಕೀರ್ತಿಯನ್ನು ಕೇಳಿ, ಅಭಿನಯ ನೋಡಲು ಆಗಮಿಸಿದ್ದನು. ತನ್ನ ಯಾವ ಪುತ್ರನನ್ನು "ನಿರುಪಯೋಗಿ" ಎಂದರಿತಿದ್ದನೋ ಅವನ ಅಸಾಮಾನ್ಯ ಪ್ರತಿಭೆಯನ್ನು ಕಂಡು ಹರ್ಷಪುಳಕಿತನಾದನು.

ನಾಟಕ ಬರೆದು ವಾಲ್ಟೇಯರನು ಸಾಕಷ್ಟು ಹಣ ಸಂಪಾದಿಸಿದನು. ಅವನು ಹಣದ ದುರುಪಯೋಗ ಮಾಡಲಿಲ್ಲ. ಜೀವನದಲ್ಲಿ ಧನಕ್ಕಿರುವ ಮಹತ್ತ್ವವನ್ನವನು ಚೆನ್ನಾಗಿ ಅರಿತಿದ್ದನು. ಧನವಂತನಾದಂತೆ ಅವನ ಔದಾರ್ಯವೂ ಹೆಚ್ಚುತ್ತಿತ್ತು. ಅವನ ಆಶ್ರಯದಲ್ಲಿದ್ದು ಅವನ ಎಷ್ಟೋಜನ ಬಂಧು ಬಾಂಧವರು, ಅವನಿಂದ ಸಹಾಯ ಹೊಂದತೊಡಗಿದರು. ಕಾವ್ಯ ಮತ್ತು ನಾಟಕಗಳ ಪ್ರಕಾಶನದಿಂದವನ ಕೀರ್ತಿಯು ತಾತ್ಕಾಲಿಕ ವಿದ್ಯಾವಂತರಲ್ಲಿ ತುಂಬ ಹರಡಿತು. ಅವರು

ಇವನನ್ನು ಸ್ವಾಗತಿಸಿ, ಇವನಿಗೆ ಪ್ರೋತ್ಸಾಹವನ್ನಿತ್ತರು. ಆದರೆ ಅವರಲ್ಲಿ ಕೆಲವರು ಇವನ ಅಭಿವೃದ್ಧಿಗೆ ಮತ್ಸರ ಪಡುವವರೂ ಇದ್ದರು. ಅವರು ವಾಲ್ಟೇಯರನಲ್ಲಿ ಪ್ರತಿಭೆಯ ಹೊರತು ಮತ್ತಾವ ವಿಶಿಷ್ಟ ಗುಣವಿರಲಿಲ್ಲವೆಂಬುದನ್ನು ನುರೆಯುವಾದರು. ಒಂದುದಿನ ಒಂದು ಉದ್ಯಾನಭೋಜನದನಂತರ, ವಾಲ್ಟೇಯರನೊಂದು ಚಮತ್ಕಾರ ಪೂರ್ಣ ಭಾಷಣವಿತ್ತನು. ಆ ಕೂಟದ ಅತಿಥಿಯೊಬ್ಬನು ಅಲ್ಲಿ ನೆರೆದಿರುವ ಜನಮಂಡಳಿಯನ್ನು ಸಂಬೋಧಿಸಿ "ಹೀಗೆ ಸ್ಫೂರ್ತಿಯುಕ್ತ ಭಾಷಣ ಕೊಡುವ ನವಯುವಕನಾರು?" ಎಂದು ಪ್ರಶ್ನಿಸಿದನು. ವಾಲ್ಟೇಯರನು ಒಡನೆ ಉತ್ತರವಿತ್ತನು—"ಸ್ವಾಮಿ ಈ ತರುಣನ ಹೆಸರಿನೊಂದಿಗೆ ಪಾಷಂಡತೆಯ ಮಾಲಿನ್ಯವಿಲ್ಲ; ಅವರೂ ಅವನು ತನ್ನ ಹೆಸರಿನಿಂದಲೇ ಜನರಲ್ಲಿ ಸಂಮಾನಿತನಾಗಿದ್ದಾನೆ." ಈ ಉತ್ತರದಿಂದ; ಪ್ರಶ್ನಿಸಿದವನು ವಾಲ್ಟೇಯರನ ವಿರುದ್ಧ ಉರಿದೆದ್ದನು; ಮತ್ತು ಮುಯ್ಯಿತೀರಿಸಲು ನಿಶ್ಚಯಿಸಿದನು. ಅವನು ವಾಲ್ಟೇಯರನ ಹಿಂದೆ, ಅವನನ್ನು ಹಿಡಿಸಲು 'ಗೂಂಡ'ರನ್ನು ನಿಯುಕ್ತಗೊಳಿಸಿದನು; ಅಲ್ಲದೆ ಅವನಿಗೆ ಈ ಎಚ್ಚರಿಕೆಯನ್ನಿತ್ತಿದ್ದನು—"ತಲೆಗೆ ಹೊಡೆಯದಿರಿ; ಅವನ ಮೆದುಳಿನಿಂದ ಒಳ್ಳೆಯ ಮಾತುಗಳು ಹೊರಡಬಲ್ಲುವು." ಗೂಂಡರ ಹೊಡೆತದಿಂದ ಘಾಯಗೊಂಡಿ, ಕುಂಟುತ್ತಿದ್ದ ವಾಲ್ಟೇಯರನು, ಆ ಭದ್ರವ್ಯಕ್ತಿಯ ಮುಂದೆ ಬಂದು ಅವನನ್ನು ದ್ವಂದ್ವಯುದ್ಧಕ್ಕೆ ಕರೆದನು. ಅನಂತರ ಅವನು ಮನೆಗೆ ಹೋಗಿ, ಇಡೀ ದಿನ ಪಿಸ್ತೂಲ್ ಹೊಡೆಯುವ ಅಭ್ಯಾಸ ಮಾಡುತ್ತಿದ್ದನು. ಅತ್ತ ಆ ವ್ಯಕ್ತಿಯು ದ್ವಂದ್ವಯುದ್ಧದ ಭಯದಿಂದ, ಮೌನನಾಗಿ, ಉಚ್ಚಪದಾಧಿಕಾರಿ.

ಖಸಗ್ರತ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಮನೋಹರ **ನೀಲ** ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ ಬೆಳೆಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ

ಗರ್ಭಾಶಯಕ್ಕೆ **ಜೀವಿನಿ** ಟಾನಿಕ್

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯ ಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ **ಪಂಚವಟಿ** ರಾಮಬಾಣ

ಸದ್ವೈದ್ಯ ಶಾಲಾ, ನಂಜನಗೂಡು

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರಖಾನೆ

ಯಾದ ತನ್ನ ಸಂಬಂಧಿಕನಿಗೆ ಈ ಸೂಚನೆಯನ್ನಿತ್ತನು. ಆಗ ವಾಲ್ಟೇಯರನು ಬಂಧಿಸಲ್ಪಟ್ಟು ಪುನಃ ಸೆರೆಮನೆಗೆ ತಳ್ಳಲ್ಪಟ್ಟನು. ಅವನು ಸ್ವದೇಶಬಿಟ್ಟು, ಇಂಗ್ಲಂಡಿಗೆ ಓಡನೇ ಹೋಗಬೇಕೆಂಬ ಕರಾರಿನ ಮೇಲೆ ಜೈಲಿನಿಂದ ಬೇಗನೆ ಬಿಡುಗಡೆಯಾಯಿತು. ವಾಲ್ಟೇಯರನು ಇಂಗ್ಲಂಡಿಗೆ ಹೋಗಿ, ಅಲ್ಲಿ ಮೂರು ವರುಷಗಳ ತನಕ ಇದ್ದನು. ಈ ಪ್ರವಾಸಕಾಲದಲ್ಲಿ ಅವನು ಇಂಗ್ಲೀಷ್ ಭಾಷೆಯನ್ನು ಚೆನ್ನಾಗಿ ಅಭ್ಯಾಸ ಮಾಡಿದನು. ನ್ಯೂಟನ್, ಶೇಕ್ಸ್‌ಪೀಯರ್ ಮತ್ತು ಲಾಕರ ರಚನೆಗಳನ್ನು ಮನಸ್ಸಿಟ್ಟು ಅಭ್ಯಸಿಸಿದನು. ಸ್ವಲ್ಪ ಸಮಯದಲ್ಲಿಯೆ ಅವನು, ಆಂಗ್ಲ ಸಾಹಿತ್ಯ, ದರ್ಶನ, ಮತ್ತು ವಿಜ್ಞಾನವನ್ನು ಮಥಿಸಿ ಅದರ ಸಾರತತ್ತ್ವವನ್ನು ಗ್ರಹಿಸಿದನು. ತನ್ನ ಅನುಭವಗಳನ್ನವನು "ಲೆಟರ್ಸ್ ಆನ್ ದ ಇಂಗ್ಲೀಷ್" ಎಂಬುದರಲ್ಲಿ ಲಿಪಿಬದ್ಧಮಾಡಿದನು. ಅದರ ಹಸ್ತಲಿಖಿತ ಪ್ರತಿಗಳು ಮಿತ್ರಮಂಡಳಿಯಲ್ಲಿ ಹಂಚಲ್ಪಟ್ಟುವು. ಅದರಲ್ಲಿ ಇಂಗ್ಲಂಡಿನ ಪ್ರಶಂಸೆ ಮತ್ತು ಫ್ರಾನ್ಸಿನ ಕುಲೀನ ಮತ್ತು ಪುರೋಹಿತಸಂಪ್ರದಾಯದ ಅತ್ಯಾಚಾರಗಳಿಗೆ ನಿರ್ಮಮ ಆಘಾತವಿದ್ದುದರಿಂದ, ಅದನ್ನು ಪ್ರಕಟಿಸುವ ಸಾಹಸ ಮಾಡಲಿಲ್ಲ. ಇಂಗ್ಲಂಡಿನಲ್ಲಿ ಅವನಿದ್ದಾಗ, ಪ್ರಸಿದ್ಧ ವಿಜ್ಞಾನಿ ನ್ಯೂಟನನ ಮರಣವಾಯಿತು. ಅವನ ಕಳೇಬರದ ಮೆರವಣಿಗೆ ವೈಭವಯುಕ್ತವಾಗಿ ಹೊರಟಾಗ, ಒಬ್ಬ ವೈಜ್ಞಾನಿಕನಿಗೆ ರಾಜಸನ್ಮಾನ ದೊರೆತುದಕ್ಕಾಗಿ ಅವನಿಗೆ ಅನಂದಮಿಶ್ರಿತ ವಿಸ್ಮಯವಾಗಿತ್ತು. ಆಂಗ್ಲ ಜಾತೀಯ ಪಾರ್ಲಿಮೆಂಟರೀ ಶಾಸನಪದ್ಧತಿ ಮತ್ತು ನ್ಯಾಯನೀತಿಜ್ಞತೆಯನ್ನು ಕಂಡು ವಾಲ್ಟೇಯರನು ವಿಶೇಷ ಪ್ರಭಾವಿತನಾದನು. ೧೭೨೮ರಲ್ಲಿ ವಾಲ್ಟೇಯರನಿಗೆ ಸ್ವದೇಶಕ್ಕೆ ಮರಳಲು ಅನುಮತಿ ದೊರೆಯಿತು. ಅವನು ಪೇರಿಸ್ಸಿಗೆ ಬಂದಮೇಲೆ, ಪುನಃ ಭೋಗವಿಲಾಸದ ಉದ್ದಾಮಜೀವನವು ಆರಂಭವಾಯಿತು. ಆನಂದಾವೇಗದೊಂದಿಗೆ ದಿನಗಳು ಗತಿಸತೊಡಗಿದುವು. ನೋಡು ನೋಡುವುದರಲ್ಲಿಯೆ ಐದು ವರ್ಷ ಗತಿಸಿತು. ಅನಂತರ ಅವಗೆ ಪೇರಿಸ್ ಬಿಡಬೇಕಾಗುವಂತಹ ಘಟನೆಯೊಂದು ಘಟಿಸಿತು. ಒಬ್ಬ ದುಷ್ಟ ಪ್ರಕಾಶಕನು, ಅವನ ಅನುಮತಿಯಿಲ್ಲದೆ "ಲೆಟರ್ಸ್ ಆನ್ ದ ಇಂಗ್ಲೀಷ್" ಎಂಬ ಹಸ್ತಲಿಖಿತ ಪುಸ್ತಕವನ್ನು ಪ್ರಕಟಿಸಿದನು. ಪುಸ್ತಕವು ಮುದ್ರಿಸಲ್ಪಡುತ್ತಲೇ ಕುಲೀನವರ್ಗದಲ್ಲಿ ಗೊಂದಲವೆದ್ದಿತು. ಪೇರಿಸಿನ ಪಾರ್ಲಿಮೆಂಟು ಆಜ್ಞಾಪಿಸಿತು:—"ಸಾರ್ವಜನಿಕ ಸ್ಥಳದಲ್ಲಿ ವಾಲ್ಟೇಯರನ ಪುಸ್ತಕವು ಸುಡಲ್ಪಡಲಿ" ಎಂದು. ವಾಲ್ಟೇಯರನು ತನಗೆ ಜೈಲುವಾಸ ಕಟ್ಟಿಟ್ಟದ್ದೆಂದು ಮೊದಲೇ ತಿಳಿದಿದ್ದನು. ಆದುದರಿಂದ ಸುಮ್ಮನೆ ಓಡಿಹೋಗುವುದರಲ್ಲೇ ಬುದ್ಧಿವಂತಿಕೆಯೆಂದರಿತನು. ಆದರೆ ಓಡುವುದರೊಂದಿಗವನು ಹೊಸ ಕೃತ್ಯವೊಂದನ್ನೆಸಗಿದನು.

ಆಗ ವಾಲ್ಟೇಯರನ ಪ್ರಾಯ ೩೪ ವರ್ಷ. ಒಬ್ಬ ೩೮ ವರ್ಷದ ವಿದುಷಿಯೊಂದಿಗೆ ಅವನಿಗೆ ಪ್ರೇಮವುಂಟಾಯಿತು. ಅವಳು ವಿವಾಹಿತಳಿದ್ದಳು. ವಾಲ್ಟೇಯರನು ಅವಳನ್ನು ಕರೆದುಕೊಂಡು ಹೊರಟನು. ವಾಲ್ಟೇಯರನ ಪ್ರೇಯಸಿಯು ಗಣಿತವಿದ್ಯೆಯಲ್ಲಿ ನಿಷ್ಣಾತಳಿದ್ದಳು. ಫ್ರೆಂಚ್ ಎಕೆಡೆಮಿಯಿಂದ ಅವಳಿಗೆ ಭೌತಿಕವಿಜ್ಞಾನದ

ವಿಷಯದ ಒಂದು ಪ್ರಬಂಧಕ್ಕೆ ಪುರಸ್ಕಾರ ದೊರೆಯುವುದಿತ್ತು. ಈ ಮಹಿಳೆಯ ದೃಷ್ಟಿಯಲ್ಲಿ ವಾಲ್ಟೇಯರನು "ಫ್ರಾನ್ಸಿನ ಸರ್ವೋತ್ತಮ ವಿಭೂಷಣ" ನಾಗಿದ್ದನು. ವಾಲ್ಟೇಯರನು ತನ್ನ ಪ್ರೇಯಸಿಯ ಪ್ರೇಮದ ಬಗೆಗೆ "ಹೆಂಗುಸಾಗಿ ಹುಟ್ಟುವ ಒಂದೇ ಒಂದು ಅಪರಾಧ ಮಾಡಿದ ಮಹಾಪುರುಷಳವಳು" ಎಂದು ಹೇಳುತ್ತಿದ್ದ. ಇಬ್ಬರೂ ಒಟ್ಟಿಗಿರುತ್ತ ತಮ್ಮ ಮಧುಮಯ ಜೀವನದ ೧೫ ವರುಷಗಳನ್ನು ಆನಂದದಿಂದ ಕಳೆದರು. ಅನಂತರ ಪ್ರೇಮದ ಗಾಢತೆಯಲ್ಲಿ ಶಿಥಿಲತೆಯು ಬರತೊಡಗಿತು. ಆ ಮಹಿಳೆಯು ಒಬ್ಬ ಸುಂದರ ತರುಣನಲ್ಲಿ ಪ್ರೇಮಾಸಕ್ತಳಾದಳು. ವಾಲ್ಟೇಯರನಿಗೆ ಇದರ ಸಮಾಚಾರ ತಿಳಿದಾಗ ಕ್ರುದ್ಧನಾದನು. ಆದರೆ ಆಗ ಅವನು ತನ್ನ ಜೀವನದ ಇಳಿಕೆಯಲ್ಲಿ ಕಾಲಿರಿಸಿದ್ದನು. ಪ್ರೇಮಿಸಿದ ಯುವಕನು ಕ್ಷಮೆ ಕೇಳಿದ ಬಳಿಕ ಅವನು ಶಾಂತನಾದನು; ಮತ್ತು ಅವಳನ್ನು ಅವನೊಂದಿಗೆ ಹೋಗಗೊಟ್ಟನು. ಒಬ್ಬ ದಾರ್ಶನಿಕನಂತೆ ಅವನು ಈ ಘಟನೆಯನ್ನು ಸಹಿಸುವನು: "ನಾನೊಬ್ಬ ಪರಿಣೀತ ಸ್ತ್ರೀಯನ್ನು ನನ್ನ ಪ್ರೇಯಸಿಯನ್ನಾಗಿ ಮಾಡಿಕೊಂಡೆನು. ಈಗ ಮತ್ತೊಬ್ಬ ಯುವಕನು ಇವಳ ಮೇಲೆ ತನ್ನ ಅಧಿಕಾರವನ್ನು ಹೇರಿದ್ದಾನೆ. ಜಗತ್ತಿನಲ್ಲಿ ಇದೇ ವ್ಯವಸ್ಥೆಯು ನಡೆಯುತ್ತದೆ. ಒಂದು ಕೀಲು ಇನ್ನೊಂದು ಕೀಲನ್ನು ತೂಡಿ ಹೊರಗೆ ಹಾಕುತ್ತದೆ. ಇದೇ ಜಗತ್ತಿನ ವೈಚಿತ್ರ್ಯ." ಸನ್ ೧೭೪೯ರಲ್ಲಿ ಆ ಮಹಿಳೆಗೆ ಪ್ರಸವವೇದನೆಯಿಂದ ಮರಣ ಬಾಗಲು, ಅವಳ ಮರಣಶಯ್ಯೆಯ ಹತ್ತಿರ ಅವಳ ಮೊದಲ ಪತಿ, ವಾಲ್ಟೇಯರ್ ಮತ್ತು ಪ್ರೇಮಿ ಯುವಕ ಮೂವರೂ ಇದ್ದರು. ಮೂವರಲ್ಲಿ ಯಾರೊಬ್ಬರೂ ನಿಂದೆಯ ಒಂದು ಶಬ್ದವನ್ನೂ ಉಚ್ಚರಿಸಲಿಲ್ಲ.

ಆ ಬಳಿಕ ವಾಲ್ಟೇಯರನಿಗೆ ಜರ್ಮನಿಯ ಸಮ್ರಾಟ್ ಫ್ರೆಡರಿಕನ ಆಮಂತ್ರಣ ಬಂದಿತು. ಆ ಆಮಂತ್ರಣದೊಂದಿಗೆ ಮೂರುಸಾವಿರ ಫ್ರಾಂಕ್ ಪ್ರಯಾಣದ ಖರ್ಚಿಗಾಗಿ ಕಳುಹಲಾಗಿತ್ತು. ೧೭೫೦ರಲ್ಲಿ ವಾಲ್ಟೇಯರನು ಬರ್ಲಿನಿಗೆ ಹೊರಟನು. ಫ್ರೆಡರಿಕನ ರಾಜಭವನದಲ್ಲಿ ಅವನು ಆನಂದಪೂರ್ವಕ ಇರತೊಡಗಿದನು. ರಾಜನು ಅವನ ಗುಣಗಳಿಗೆ ಮುಗ್ಧನಾಗಿದ್ದನು. ವಾಲ್ಟೇಯರನು ತನ್ನ ಒಂದು ಪತ್ರದಲ್ಲಿ ರಾಜಭವನದ ಈ ಜೀವನವನ್ನು ಸ್ವರ್ಗಜೀವನಕ್ಕೆ ಹೋಲಿಸಿರುವನು. ಬಳಿಕ ವಾಲ್ಟೇಯರನು ಫ್ರೆಡರಿಕನ ಕೋಪಪಾತ್ರನಾಗುವಂತಹ ಘಟನೆಯೊಂದು ಘಟಿಸಿತು. ಅವನೊಂದು ವ್ಯಂಗ್ಯದ ರಚನೆಯನ್ನು ಬರೆದನು. ಫ್ರೆಡರಿಕನಿಗೆ ವಾಲ್ಟೇಯರನು ತನ್ನ ರಚನೆಯನ್ನು ತೋರಿಸಿದಾಗ ಅವನು ಅತ್ಯಂತ ಪ್ರಸನ್ನನಾದನು. ಮತ್ತು ಇಡಿ ರಾತ್ರಿ ನಗುತ್ತಾ ಇದ್ದನು. ರಾಜನು ಅದನ್ನು ಪ್ರಕಟಿಸದಿರೆಂದು ವಾಲ್ಟೇಯರನ್ನು ಕೇಳಿಕೊಂಡನು. ಆದರೆ ಅದರೊಳಗೇ ಇವನು ಪ್ರೆಸ್ಸಿಗೆ ಕಳುಹಿಸಿ ಆಗಿತ್ತು. ಅದು ಮುದ್ರಿತವಾದುದನ್ನು ನೋಡಿ ರಾಜನು ಬರೆದಿದ್ದನು. ರಾಜನ ಕ್ರೋಧಾನಲದಿಂದ ಪಾರಾಗಲು ವಾಲ್ಟೇಯರನು ಅಲ್ಲಿಂದ ಓಡಿಹೋದನು.

ಜರ್ಮನಿಯ ಗಡಿಯಿಂದ ಪಾರಾಗಿ ಅವನು ಫ್ರಾನ್ಸಿಗೆ ಕಾಲಿಡುವಷ್ಟರಲ್ಲಿಯೆ ಅವನನ್ನು ಫ್ರಾನ್ಸಿನಿಂದ ನಿರ್ವಾಸಿತನನ್ನಾಗಿ ಮಾಡಿದ್ದಾರೆಂಬ ವಾರ್ತೆ ತಿಳಿಯಿತು. ಹಾಗಾಗಿ ಅವನಿಗೆ ಸ್ವಲ್ಪ ಸಮಯ ಆಲ್ಲಲ್ಲಿ ತಿರುಗಬೇಕಾಗಿ ಬಂತು. ಕೊನೆಗೆ ಸ್ವಿಟ್ಜರಲೆಂಡಿನಲ್ಲಿ ಒಂದು ಹಳೆಯ ಜಮೀನನ್ನು ಕೊಂಡುಕೊಂಡು ಅಲ್ಲಿ ಇರತೊಡಗಿದನು. ವಾಲ್ಟೇಯರನ ವಸತಿಯ ಪತ್ತಾರದ ನಗರದಲ್ಲಿ, ಕ್ರೈಸ್ತಧರ್ಮದ ಪುರೋಹಿತರು ಅತ್ಯಂತ ನಿಷ್ಕುರಭಾವದಿಂದ ಒಬ್ಬ ಹದಿನಾರು ವರ್ಷದ ಬಾಲಕನನ್ನು ಕೊಂದುಹಾಕಿದರು. ಏಸುವಿನ ಒಂದು ಮೂರ್ತಿಯನ್ನು ಹಾಳು ಮಾಡಿದನೆಂಬುದೇ ಅವನ ಮೇಲಿನ ಅಪರಾಧ. ಅದಕ್ಕಾಗಿ ಅವನನ್ನು ಚೆನ್ನಾಗಿ ಹೊಡೆದರು; ಕೊನೆಗವನು ಅಪರಾಧ ಸ್ವೀಕರಿಸಿದನು. ಆಗ ಧರ್ಮಾಂಧ ಪಾದರಿಗಳು ಅವನ ರುಂಡವನ್ನು ಕಡಿದು ಮುಂಡವನ್ನು ಅಗ್ನಿಯಲ್ಲಿ ಹಾಕಿದರು. ಆ ಅಗ್ನಿಜ್ವಾಲೆಯನ್ನು ಮುತ್ತಿ ಉನ್ಮತ್ತ ಜನರು ನರ್ತಿಸತೊಡಗಿದರು. ಆ ಹುಡುಗನ ಬಳಿ ವಾಲ್ಟೇಯರನ ಒಂದು ಪುಸ್ತಕ ದೊರಕಿತ್ತು. ಆ ಪುಸ್ತಕವೂ ಬೆಂಕಿಗೆಸೆಯಲ್ಪಟ್ಟಿತು.

ಈ ಕ್ರೂರಕೃತ್ಯದ ವಾರ್ತೆ ವಾಲ್ಟೇಯರನಿಗೆ ತಿಳಿದಾಗ ಅವನು ಬಹಳ ಕ್ರುದ್ಧನಾದನು. ಅನಂತರ ಅವನು ಪುರೋಹಿತರ ಅತ್ಯಾಚಾರ ಹಾಗೂ ಧರ್ಮಾಂಧತೆಯ ವಿರುದ್ಧ ತನ್ನ ಲೇಖನಿಯಿಂದ ನಿರಂತರ ವ್ಯಂಗ್ಯದ ಬಾಣಗಳನ್ನೆಸೆಯತೊಡಗಿದನು. ಕ್ರಮೇಣ ಪುರೋಹಿತರ ವಿರುದ್ಧ ಜನಮತಸಂಗ್ರಹವಾಗತೊಡಗಿತು. ಪುರೋಹಿತರ ಸಮೂಹವು ಗಲಿಬಿಲಿಯಾಯಿತು. ವಾಲ್ಟೇಯರನಿಗೆ ಹಣದ ಪ್ರಲೋಭನೆಯನ್ನು ತೋರಿಸಲಾಯಿತು; ಆದರೆ ಯುದ್ಧವಾರಂಭವಾಗಿತ್ತು

ಆನಂದ ಗ್ರಂಥಮಾಲಾ, ಹುಬ್ಬಳ್ಳಿ

ಈ ಕೆಳಗಿನ ಎಲ್ಲಾ ಪುಸ್ತಕಗಳು

ಸೇಕಡಾ ೨೫% ಕಡಿಮೆ ದರಕ್ಕೆ ಕೊಡುವೆವು

	ಸಾದಾಪ್ರತಿ	ಉತ್ತಮಪ್ರತಿ
ಮನೋರಾಜ್ಯ (ನಾಟಕ)	ರೂ. ೧–೧೨	ರೂ. ೨—೪
ಇನೆತ್ (ನೊಪಾಸಾನ ಕಾದಂಬರಿ)	೧–೧೨	—
ಪೂರ್ಣಿಮಾ (ಸಂಸಾರ ಚಿತ್ರಗಳು)	೧—೪	೨—೪
ಸ್ಯೆಮನ್ನನ ತಂದೆ (ಕತೆಗಳು)	—	೨—೪
ರುಕ್ಮಿಣಿ (ಕಾದಂಬರಿ)	೧—೮	೨—೦
ಮೊಪಾಸನ ಓಲೆಗಳು (ಜೀವನ)	೧—೪	೨—೦
ಮುಡಿಯದ ಹೂ (ಕತೆಗಳು)	೦–೧೨	೧—೪
ಕಲ್ಪನಾ ವಿಲಾಸ (ಕತೆಗಳು)	೦–೧೨	೧—೮
ಪ್ರವಾದಿ (ಗಿಬ್ರಾನರ "ಪ್ರೋಫೆಟ್")	೧—೪	೨—೦
ಆ ರಾತ್ರಿ (ನಾಟಕ)	೧–೧೪	೧—೬
ಗುಣ (ಕಾದಂಬರಿ)	೧—೪	೧–೧೨
ವಾರ್ಷಿಕ ಚಂದಾ (ಸಾಮಾನ್ಯ ಪ್ರತಿ)	ರೂ. ೫—೦—೦	
,, (ಉತ್ತಮ ಪ್ರತಿ)	ರೂ. ೬—೦—೦	

ಆದುದರಿಂದ ಈಗ ಅದರಿಂದ ನಿರತವಾಗುವಂತೆಯೇ ಇರಲಿಲ್ಲ. ವಾಲ್ಟೇಯರನ ಲೇಖನಿಯಿಂದ ಬೆಂಕಿಯ ಕಿಡಿಗಳು ಹಾರತೊಡಗಿದುವು. ಒಂದೊಂದು ಪುಸ್ತಕವು ಲಕ್ಷಗಟ್ಟಲೆ ಪ್ರತಿಗಳು ಮಾರಾಟವಾಗತೊಡಗಿದುವು. ಧರ್ಮಧ್ವಜಗಳ ದುರ್ಗದ ಮೇಲೆ ಆಘಾತವನ್ನುಂಟುಮಾಡಲು ವಾಲ್ಟೇಯರನು ಒಂದೇಸವನೆ ಸಾಹಿತ್ಯರೂಪದಲ್ಲಿ ಒಂದೊಂದು ಬಾಂಬನ್ನೆಸೆಯತೊಡಗಿದನು. ಮಾಳಿಯಿಂದ ಅವರ ಆಸನವು ಡೋಲಾಯಮಾನವಾಯಿತು. ರಾಜಸಿಂಹಾಸನಗಳು ಸಹ ಕಂಪಿಸಿದುವು- ಹೀಗೆ ಒಂದು ಕಡೆ ವಾಲ್ಟೇಯರ್. ಇನ್ನೊಂದು ಕಡೆ ರೂಸೋ! ಇವರ ಅಗ್ನಿಗರ್ಭಿತವಾಣಿಯು ಫ್ರಾನ್ಸಿನ ರಾಜ್ಯಕ್ರಾಂತಿಗಾಗಿ ತತ್ಕಾಲೀನ ಜನತೆಯ ಚಿಂತಾವಾಜ್ಯದಲ್ಲಿ ಭಾವನ ಬೀಜವನ್ನು ಬಿತ್ತಿತು. ಸಾಮ್ಯ ಮತ್ತು ಸ್ವಾಧೀನತೆಯ ಅಗ್ರದೂತನಾಗಿ ಅವನು ಕ್ರಾಂತಿಯ ಮಾರ್ಗವನ್ನು ಪ್ರಶಸ್ತಗೊಳಿಸಿದನು.

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್
ಧಾರವಾಡ

ಹಿಮಾಯರ್, ಚಾಳೀಸು, ರೇಡಿಯೊ, ಗ್ರಾಮೊಫೋನ್
ಮಾರಾಟಮಾಡುವವರು, ರಿಪೇರಿ ಮಾಡುವವರು.

ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ!

ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ ನಡೆದಿದ್ದು ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: ಬಿ. ಜೆ. ಮುತ್ತಗಿ

ವಾಲ್ಟೇಯರನ ಜೀವನಚರಿತ್ರೆಯನ್ನು ಬರೆದವನು, ಅವನನ್ನು ಜಗಳಗಂಟ ಹಾಗು ಅಹಂಕಾರಿಯೆಂದು ಬರೆದಿದ್ದಾನೆ. ಅನೇಕ ಮಾನವೀಯ ದುರ್ಬಲತೆಗಳು ಅವನಲ್ಲಿದ್ದುವು. ಆದರೂ ಆ ವ್ಯಕ್ತಿಯು ಸ್ವಾತಂತ್ರ್ಯದ ಪ್ರಬಲ ಪ್ರಚಾರಕನಾಗಿದ್ದನು. ಯಾವುದೇ ಮನುಷ್ಯನ ಮೇಲೆ ಇನ್ನೊಬ್ಬ ಅನ್ಯಾಯ ಮಾಡುವುದನ್ನು ಅವನು ಸಹಿಸುತ್ತಿರಲಿಲ್ಲ. ಆ ಯುಗದಲ್ಲಿ "ರಾಜನೆಸಗಿದುದು ನ್ಯಾಯ" ಎಂಬ ನಾಣ್ಣುಡಿ ಫ್ರಾನ್ಸಿಗೆ ಅನ್ವಯಿಸಿತ್ತು. ರಾಜನ ದೋರ್ದಂಡ ಪ್ರತಾಪದೆದುರು ಸಾಧಾರಣ ಜನರ ಮಾನಮರ್ಯಾದೆಯು ಮೂಲ್ಯಹೀನವಾಗಿತ್ತು. ರಾಜನಾದ ಹದಿನಾಲ್ಕನೆಯ ಲುಯಿಯು ತನ್ನನ್ನೇ ರಾಜ್ಯವೆಂದು ತಿಳಿಯುವಷ್ಟು ಅಹಂಕಾರಿಯಾಗಿದ್ದನು. ಅವನೇ ಪ್ರಜೆಗಳ ಕರ್ತೃ, ಧಾತೃ, ವಿಧಾತೃ,— ಎಲ್ಲ. "ರಾಜನು ದೇವರೊಬ್ಬನ ಹೊರತು ಮತ್ತೆ ಯಾರ ಎದುರೂ ತನ್ನನ್ನು ಆರಾಧ್ಯನೆಂದು ತಿಳಿಯುವುದಿಲ್ಲ" ಎಂಬುದು ಅವನ ವಾದವಾಗಿತ್ತು. ಅವನ ಪೌತ್ರನಾದ ಹದಿನಾರನೆ ಲುಯಿಯ ಹೇಳಿಕೆಯು "ನನ್ನಿಚ್ಛೆಯೇ ಕಾನೂನು" ಎಂದಾಗಿತ್ತು. ಅಂತಹ ಯುಗದಲ್ಲಿ ವಾಲ್ಟೇಯರನು ಸಾಹಿತ್ಯದ ಮುಖಾಂತರ ಮನುಷ್ಯನ ಸ್ವಾಧೀನತೆ ಹಾಗು ಮನುಷ್ಯತ್ವದ ಮರ್ಯಾದೆಯ ಜಯಗಾನವನ್ನು ಮಾಡಲು ಆರಂಭಿಸಿದನು. "ನಾನು ಹೇಗೆ ಸ್ವಾಧೀನನಾಗಿ ವಿಚಾರಮಾಡುತ್ತೇನೋ ಹಾಗೆಯೇ ಅವನ್ನು ಲಿಪಿಬದ್ಧ ಮಾಡುತ್ತೇನೆ" ಎಂಬುದು ಅವನ ಹೇಳಿಕೆ. "ಅನ್ಯಾಯದ ಧ್ವಂಸ ಮಾಡು" ಎಂಬುದೇ ಅವನ ಜೀವನದ ವಾಣಿ. ವಾಲ್ಟೇಯರನು ತನ್ನನ್ನು ಕ್ರೈಸ್ತ ಧರ್ಮದ ವಿರೋಧಿಯೆಂದೆಣಿಸುತ್ತಿರಲಿಲ್ಲ. ಅವನು ಧರ್ಮದ ಹೆಸರಿನಲ್ಲಾಗುವ ಅತ್ಯಾಚಾರ ಹಾಗೂ ಅನಾಚಾರದ ವಿರುದ್ಧ ಖಡ್ಗಹಸ್ತನಾಗಿದ್ದನು. "ತನ್ನೊಳಗೆ ಬಹಳ ನೀಚ ಹಾಗೂ ಅಯೋಗ್ಯ ವಿಷಯಗಳು ತುಂಬಿದ್ದರೂ, ೧೬೦೦ ವರ್ಷಗಳಿಂದ ಜೀವಿತ ವಿರುವ ಕಾರಣ ಅವಶ್ಯವಾಗಿ ಕ್ರೈಸ್ತಧರ್ಮವು ಈಶ್ವರೀಯ ಧರ್ಮ" ಎಂದು ಅವನು ಹದಿನೇಳು ವರ್ಷದ ಪ್ರಾಯದಲ್ಲೇ ಹೇಳಿದ್ದನು. ಆ ಕಾಲದಲ್ಲಿ ರಾಜನೀತಿಯ ಮತ್ತು ನ್ಯಾಯದ ಕ್ಷೇತ್ರದಲ್ಲೂ ಧರ್ಮ. ಪುರೋಹಿತರ ಪ್ರಧಾನತೆಯಿತ್ತು. ರಾಜನೀತಿಯೊಂದಿಗೆ ಧರ್ಮಾಂಧತೆಯು ಸೇರಿತ್ತು. ರಾಜನ ಮೇಲೆ ಧರ್ಮಾಚಾರ್ಯರ ಅಧಿಕಾರವಿದ್ದಿತು. ವಾಲ್ಟೇಯರನು ಉತ್ಕಂಠತೆಯಿಂದ ಘೋಷಿಸಿದನು:— "ಧರ್ಮವನ್ನು ರಾಜನೀತಿ ಮತ್ತು ನ್ಯಾಯದ ಕ್ಷೇತ್ರದಿಂದ ಬೇರ್ಪಡಿಸಿರಿ" ಎಂದು. ಇದಕ್ಕಾಗಿಯೇ ಅವನು ಇಗರ್ಜಿಯ ವಿರುದ್ಧ ಜನಮತವನ್ನು ಸಂಘಟಿಸಿದ್ದನು. ಆ ಕಾಲದಲ್ಲಿ ಇದೊಂದು ಅಸಾಧ್ಯ ಸಾಧನೆಯೆಂದು ತಿಳಿಯಲ್ಪಡುತ್ತಿತ್ತು.

ವಾಲ್ಟೇಯರನು ಕಠಿಣ ಪರಿಶ್ರಮಿಯಾಗಿದ್ದನು. ಆಜೀವನ ಅವನು ಅವಿಶ್ರಾಂತವಾಗಿ ಕಾರ್ಯವೆಸಗುತ್ತಿದ್ದನು. ಆದಕಾರಣನೇ ಅವನು ತನ್ನ ಜೀವನದಲ್ಲಿ ಮಾಡಿತೋರಿಸಿದಷ್ಟನ್ನು ಮತ್ತಾರೂ ಮಾಡಲಿಲ್ಲ. "ಯಾವ ಕಾರ್ಯದಲ್ಲಿಯೂ ತೊಡಗಿರದಿರುವುದು ಮತ್ತು ಜೀವಿತವಿಲ್ಲದಿರುವುದು ಒಂದೇ!" ಎಂಬುದು ಅವನ ಹೇಳಿಕೆ. ಅಲ್ಲದೆ "ಆಲಸಿಗನ ಹೊರತು ಮತ್ತೆಲ್ಲ ಜನರು ಒಳ್ಳೆಯವರು" ಎನ್ನುತ್ತಿದ್ದನು. ವಾಲ್ಟೆಯರನ ಕಾರ್ಯದರ್ಶಿಯು, ಅವನು ಕೇವಲ ತನ್ನ ಕಾಲದ ಕೃಪಣನಾಗಿದ್ದನೆಂದು ಬರೆದಿದ್ದನು. "ಜಗತ್ತಿನಲ್ಲಿ ಜೀವನದ ಭಾರವನ್ನು ನಿರ್ವಹಿಸಲು ನಿರಂತರ ತಾನು ಕಾರ್ಯಮಗ್ನನಾಗಿರುವ ದವಶ್ಯ..... ನನ್ನ ಪ್ರಾಯ ಬೆಳೆದಂತೆ ಕಾರ್ಯಮಾಡುವುದವಶ್ಯವೆಂದು ತಿಳಿಯುತ್ತೇನೆ. ಕೊನೆಗದು ಜೀವನದ ಅಂತಿಮ ಆನಂದವಾಗುತ್ತದೆ. ನೀನೊಂದು ವೇಳೆ ಆತ್ಮಹತ್ಯೆ ಮಾಡಿಕೊಳ್ಳಲಿಚ್ಛಿಸುವೆದಿಲ್ಲವಾದರೆ ಸದಾ ಏನಾದರೂ ಮಾಡುತ್ತಿರು" ಈ ರೀತಿಯ ಕರ್ಮೋಪಾಸಕನಾದುದರಿಂದಲೇ ವಾಲ್ಟೇಯರನು, ತನ್ನ ಯುಗವನ್ನು ಸಂಪೂರ್ಣ ಕರ್ಮಮಯವನ್ನಾಗಿ ಮಾಡಿದನು.

೮೩ ವರ್ಷದ ಪ್ರಾಯದಲ್ಲಿ, ತನ್ನ ಮೃತ್ಯುವಿನ ಮೊದಲು ವಾಲ್ಟೇಯರನಿಗೆ ಪೇರಿಸ್ಸನ್ನು ನೋಡುವ ಪ್ರಬಲೇಚ್ಛೆಯಾಯಿತು. ಆ ಯಾತ್ರೆಯು ಅವನಿಗೆ ಘಾತಕವಾಗುವುದೆಂದು ಡಾಕ್ಟರರು ಸಲಹೆಯನ್ನಿತ್ತರು. ಆದರೆ ಅವನು ಡಾಕ್ಟರರ ಸಲಹೆಯನ್ನೊಪ್ಪದೆ ಪ್ರಯಾಸ್ಸಿ

ನಡೆದನು. ಫ್ರಾನ್ಸಿನ ಗಡಿಯ ಸುಂಕದ ವಿಭಾಗದ ಒಬ್ಬ ಉದ್ಯೋಗಸ್ಥನು ಅವನ ಗಾಡಿಯನ್ನು ತಡೆದನು. ಉದ್ಯೋಗಸ್ಥನು, ಆ ಗಾಡಿಯಲ್ಲಿ ನ್ಯಾಯಬಾಹಿರವಾದ ಯಾವ ವಸ್ತುವನ್ನಾದರೂ ಕೊಂಡು ಹೋಗುತ್ತಾರೋ—ಎಂದು ನೋಡಬಯಸುತ್ತಿದ್ದನು. ಅದರ ವಿರುದ್ಧ ಅವನು ಅತಿ ವೃದ್ಧಪುರುಷನು ಅದರಲ್ಲಿ ಕುಳಿತಿರುವುದನ್ನು ನೋಡಿದನು. ಉದ್ಯೋಗಸ್ಥನ ಪ್ರಶ್ನೆಯ ಉತ್ತರವಾಗಿ ವಾಲ್ಟೇಯರನು ಹೀಗೆಂದನು— "ಗಾಡಿಯಲ್ಲಿ ಕೇವಲ ನನ್ನ ಹೊರತು ಮತ್ತಾವ ನ್ಯಾಯಬಾಹಿರವಾದ ವಸ್ತುವೂ ಇಲ್ಲ." ಕರ್ಮಚಾರಿಯು ಅವನನ್ನು ಗುರುತಿಸಿದನು. ದೀರ್ಘಯಾತ್ರೆಯನ್ನು ಮುಗಿಸಿ ಅವನ ಗಾಡಿಯು ಪ್ಯಾರಿಸ್ಸಿಗೆ ಮುಟ್ಟಿದಾಗ, ಅವನ ಅವಸ್ಥೆಯು ಅರ್ಧ ಮೃತಾವಸ್ಥೆಯಾಗಿತ್ತು. ತನ್ನೊಬ್ಬ ಮಿತ್ರನ ಬಳಿ ಹೋಗಿ ಅವನು ಹೀಗೆಂದನು.— "ಮೃತ್ಯುವನ್ನು ಹಿಂದೆ ಬಿಟ್ಟು ನಿನ್ನೊಡನೆ ಮಾತಾಡಲು ಬಂದಿರುವೆನು." ಮರುದಿನ ಇಡೀ ಪೆರಿಸ್ಸೇ ಅವನ ಸತ್ಕಾರಕ್ಕಾಗಿ ಅಲ್ಲಿ ನೆರೆಯಿತು. ಒಬ್ಬ ರಾಜನಂತೆ ಅವನನ್ನು ಸ್ವಾಗತಿಸಲಾಯಿತು. ಇದನ್ನೆಲ್ಲಾ ನೋಡಿ ಹದಿನಾರನೆಯ ಲೂಯಿಯು ಈರ್ಷೆಯಿಂದ ಉರಿದೆದ್ದನು. ಇಷ್ಟು ದಿನಗಳ ಬಳಿಕ ವಾಲ್ಟೇಯರನ ಊರಿನವರು ಅವನಿಗೆ ಯಥಾಯೋಗ್ಯ ಸತ್ಕಾರವನ್ನಿತ್ತರು. ಮರಣದ ಮೊದಲು ಅವನು ತನ್ನ ಸಂದೇಶವೊಂದನ್ನು ತನ್ನ ಕಾರ್ಯದರ್ಶಿಯ ಕೈಯಲ್ಲಿ ಇತ್ತನು. "ನಾನು ಈಶ್ವರನ ಉಪಾಸನೆ ಮಾಡುತ್ತ, ನನ್ನ ಮಿತ್ರರನ್ನು ಪ್ರೀತಿಸುತ್ತ, ಶತ್ರುಗಳ ಕುರಿತು ಯಾವುದೇ ಘೃಣಿತ ಭಾವನೆಯನ್ನು ಮನಸ್ಸಿನಲ್ಲಿಟ್ಟುಕೊಳ್ಳದೆ, ಅಂಧವಿಶ್ವಾಸವನ್ನು ಘೃಣಿತನೆಂದು ತಿಳಿಯುತ್ತ ಮೃತ್ಯುವನ್ನಾಲಿಂಗಿಸುತ್ತೇನೆ" ಎಂದದರಲ್ಲಿ ಬರೆದಿತ್ತು.

ಸನ್ ೧೭೭೮ನೆಯ ಇಸವಿಯ ಮೇ ೩೦ನೆಯ ತಾರೀಖಿಗೆ ಅವನ ಮರಣವಾದಾಗ, ಕ್ರೈಸ್ತ ಧರ್ಮ ಪುರೋಹಿತರು ಕ್ರೈಸ್ತಧರ್ಮಕ್ಕನುಸಾರವಾಗಿ ಅವನ ಅಂತ್ಯೇಷ್ಟಿಯನ್ನೆಸಗಲು ಒಪ್ಪಲಿಲ್ಲ ಆದುದರಿಂದ ಅವನ ಶವವನ್ನು ಊರ ಹೊರಗಿನ ಒಂದು ಹಳ್ಳಿಯಲ್ಲಿ ಹೂಳಲಾಯಿತು. ಬಳಿಕ ೧೭೯೧ರಲ್ಲಿ ಫ್ರಾನ್ಸಿನ ವಿಜಯಿಯಾದ ವಿದ್ರೋಹಿ ದತ್ತನು ರಾಜಾ ಲುಯಿಯ ಕೊಲೆ ಮಾಡಿದಾಗ, ವಾಲ್ಟೇಯರನ ಮೃತಶರೀರವನ್ನು ಸಮಾಧಿಯಿಂದೆತ್ತಿ ಹೊರಗೆ ತರಲಾಯಿತು. ಒಂದು ಮಹತ್ತಾದ ಮೆರವಣಿಗೆಯೊಂದಿಗೆ ಅದನ್ನು ಪ್ಯಾರಿಸ್ಸಿಗೆ ತಂದು ಅಲ್ಲಿ ಸಮಾಧಿ ಮಾಡಲಾಯಿತು. ಮೆರವಣಿಗೆಯಲ್ಲಿ ಒಂದು ಲಕ್ಷ ಸ್ತ್ರೀಪುರುಷರಿದ್ದರು; ಮತ್ತು ಆರು ಲಕ್ಷ ಜನರು ರಸ್ತೆಯ ಇಕ್ಕಡೆಗಳಲ್ಲಿ ನಿಂತು ಮೆರವಣಿಗೆಯನ್ನು ನೋಡುತ್ತಿದ್ದರು. ಶವವನ್ನೊಯ್ಯುವ ಗಾಡಿಯಲ್ಲಿ ದೊಡ್ಡ ದೊಡ್ಡ ಅಕ್ಷರಗಳಲ್ಲಿ ಹೀಗೆ ಬರೆದಿತ್ತು: "ಮನುಷ್ಯನ ಮನಸ್ಸಿಗೆ ವಾಲ್ಟೇಯರನಿಂದ ಬಹಳ ಬಲದೊರೆಯಿತು; ಅವನೇ ಸ್ವಾತಂತ್ರ್ಯಕ್ಕಾಗಿ ನಮ್ಮನ್ನು ಅಣಿಗೊಳಿಸಿದನು." ಅವನ ಸಮಾಧಿಯ ಶಿಲೆಯ ಮೇಲೆ ಕೇವಲ ಮೂರು ಶಬ್ದಗಳು ಕೊರೆಯಲ್ಪಟ್ಟವು— "Here lies Voltair"

ಆರು??

●

"ಉಳುವೀಶ" (ಕಿತ್ತೂರನಾಡು)

ಬಾನಿನ ವನದಲಿ ಚಿಕ್ಕೆಯ ಹೂಗಳ
ಅರಳಿಸಿದವರಾರು?
ಸುಂದರ ಚಂದ್ರನ ಹೊಳೆಯುವ ಸೂರ್ಯನ
ಕಳುಹಿಸುವರಾರು?
ಸೂರ್ಯನ ಸುತ್ತಲು ನಮ್ಮೀ ಧರಣಿಯ
ತಿರುಗಿಸುವರಾರು?
"ಶರಧಿಯಲ್ಲಿ ಈ ಧರೆಯು ಕರಗದಂ-
ತಿರಿಸಿದವರು" ಯಾರು?
ನಭಕೆ ನೀಲಿನೆಯ ಬಣ್ಣ ಬಳಿದ ಆ-
ಚಿತ್ರಕಾರನಾರು?
ಗಾಳಿಯೊಡಲಿನಲಿ ಹಸಿರು ತುಂಬಿದಾ
ಕುಶಲಮತಿಯಃದಾರು?
ಕಬ್ಬಿನೊಳಗೆ ಇನಿದಾದ ರಸವ ತುಂ-
ಬಿರುವನವನುಯಾರು?
ಮರದ ತುದಿಯಲಿಹ ತೆಂಗಿನೊಳಗೆ ಎಳ-
ನೀರನಿಟ್ಟರಾರು?
ಹಾವಿನ ಹಲ್ಲಿಗೆ ನಂಜನ ನೀರನು
ಕುಡಿಸಿದವರು ಯಾರು?
ಹೂವಿನ ಹೃದಯದಿ ಪರಿಮಳ ಬೆರಸಿದ
ರಸಿಕವರನದಾರು?
ದೇಹಪಂಜರದಿ ಜೀವಪಕ್ಷಿಯನು
ಸಲುಹುವವರು ಯಾರು?
ಮನಕೆ ಬಂದ ತೆರ ಕಾಡಿಸಿ ಹಾಡಿಸಿ
ಆಡಿಸುವವರಾರು?
ಪ್ರೇಮಬಂಧನದಿ ಮನುಜಕುಲವನೇ
ಸಿಲುಕಿಸಿದವರಾರು?
ನಾಮ-ರೂಪ-ಕ್ರಿಯೆ ವಿರಹಿತನಾದಾ-
ಪ್ರೇಮಧಾಮನಾರು?

ಹೃದಯದ ಹಂಬಲ

(ನೆನಹುಗಳು)

ಶ್ರೀ. ಬಳ್ಳೂರ ಸುಬ್ಬರಾಯ ಅಡಿಗ ಗಂಗೊಳ್ಳಿ

卐

ಮನುಷ್ಯನ ಹೃದಯ-ಮನಗಳ ಳಸುಕನ್ನು ಕಡಿಮೆಮಾಡಿ, ಅವುಗಳನ್ನು ಹಣ್ಣುಗೊಳಿಸುವುವು ಜೀವನದ ನೆನಹುಗಳೆ. ಸಂಬಂಧ ಬಂದ ಒಂದೊಂದು ವ್ಯಕ್ತಿಯೂ ಜೀವನಕ್ಕೆ ಒಂದೊಂದು ಬಗೆಯ ಪಾತನನ್ನು ಕಲಿಸುವುದು.

卐

೩

ಶ್ರೀನಾಥನ ಸಂಬಂಧವು ಗಂಭೀರಮೌನದಲ್ಲಿ ಕೊನೆಗೊಂಡಾಗ ನನ್ನ ಹೃದಯವು ಪುನಃ ಗೆಳೆತನಕ್ಕಾಗಿ ಕಾತರಿಸಿತು. ಎರಡು ಬಾರಿ ಮರೆಯಲಾರದ ಬರೆ ಬಿದ್ದಿದ್ದರೂ ಏಕಾಕಿಜೀವನವು ಯಾರಿಗೂ ಒಗ್ಗುವುದಿಲ್ಲ. ಕಷ್ಟಕಾಲದಲ್ಲಿ ಸಹಾನುಭೂತಿಯ ಒಂದಕ್ಷರವನ್ನಾದರೂ ಕೇಳುವ ಬಯಕೆ ಜೀವಕ್ಕಿರುತ್ತದೆ. ಅಂತಹ ವ್ಯಕ್ತಿಯೊಂದನ್ನು ಪಡೆಯುವ ಹಂಬಲ ಸರ್ವಸಾಧಾರಣವಾದರೂ, ನಾನಾಗಿ ಎರಡು ಬಾರಿಯೂ ಮುನ್ನುಗ್ಗಿ ಕೈಸುಟ್ಟುಕೊಂಡ ಮೇಲೆ, ಇನ್ನು ಅಸಾಹಸ ಮಾಡುವಂತಿರಲಿಲ್ಲ. ಬರುಬರುತ್ತಾ ನನಗೆ ಇದೊಂದು ಅತೃಪ್ತ ಬಯಕೆಯಾಗಿಯೇ ಉಳಿಯುವುದೆಂದು ಖಚಿತವಾಯಿತು.

ಕೆಲವೊಮ್ಮೆ ಶಾಂತ ಮನಸ್ಸಿನಿಂದ ವಿಚಾರ ಮಾಡಿದಾಗ, ನನಗೆ ನನ್ನೀ ಮನೋಭಾವನೆಗಾಗಿ ನಗು ಬರುತ್ತಿತ್ತು. ಎಂತಹ ಮೂರ್ಖತನ! ನನ್ನಂತೆಯೇ ಎಷ್ಟು ಜನರಿಲ್ಲ ಈ ಪ್ರಪಂಚದಲ್ಲಿ! ನಮ್ಮ ಕಾಲೇಜಿನಲ್ಲಿಯೆ ತುಂಬಾ ವಿದ್ಯಾರ್ಥಿಗಳಿದ್ದಾರೆ. ಅವರೆಲ್ಲಾ ನನ್ನಂತೆಯೇ ಇಷ್ಟು ಆಳವಾಗಿ ವಿಚಾರಮಾಡುತ್ತಾರೆಯೆ? ಸಣ್ಣ ಸಣ್ಣ ವಿಚಾರಗಳನ್ನೂ ಭೂತಗನ್ನಡಿಯ ಎದುರಿಗಿಟ್ಟು ನೋಡುತ್ತಾರೆಯೆ? ಅವರಲ್ಲೆಷ್ಟೋ ಮಂದಿ ನನ್ನಂತೆಯೇ ಬಡವರು. ಕಷ್ಟ–ನಿಷ್ಠುರಗಳಿಗೆ ಗುರಿಯಾಗಿ ದೇಹವನ್ನು ಸವೆಯಿಸುತ್ತಾರೆ. ಆದರೆ ಅವರೆಲ್ಲ ನನ್ನಂತೆಯೇ ಇಷ್ಟತ್ತಾನ್ಲುು ತಾಸೂ ತಲೆ ಕಾಯಿಸುತ್ತಿದ್ದರೆ. ಒಂದು ದಿನ ಹುಚ್ಚರಾಸ್ಪತ್ರೆಗೆ ಸೇರಬೇಕಾದೀತು—ಎಂತಲೇ ಅವರಾವುದನ್ನೂ ಆಳವಾಗಿ ವಿಚಾರಿಸುವುದಿಲ್ಲ. ಹಿಂದುಮುಂದನ್ನು ನೋಡುವುದಿಲ್ಲ. ವರ್ತಮಾನವನ್ನು ನಿರಾಸಕ್ತ ದೃಷ್ಟಿಯಿಂದ ಎಂತಾದರೂ ಕಳೆಯುತ್ತಾರೆ. ಎಂತಹ ಸನ್ನಿವೇಶಗಳೂ ಅವರ ಹೃದಯವನ್ನು ಕಲಕುವುದಿಲ್ಲ. ಅಡುತ್ತಾರೆ,– ಓಡುತ್ತಾರೆ; ನಗುತ್ತಾರೆ,–ನಲಿಯುತ್ತಾರೆ;– ಮುಗಿಯಿತು ಅವರ ಜೀವನದ ಒಂದು ದಿನ. ಆದರೆ ನಾನು ಅದೇ ಒಂದು ದಿನದೊಳಗೆ ಮಿದುಳಿಗೆ ಎಂತೆಂತಹ ಕೆಲಸ ಕೊಡುತ್ತಿದ್ದೆ ಎಷ್ಟ ಸಣ್ಣ ಘಟನೆಯನ್ನಾದರೂ ಮನೋವೈಜ್ಞಾನಿಕ ದೃಷ್ಟಿಯಿಂದ ಪರೀಕ್ಷಿಸಲೆಳಸುತ್ತೇನೆ! ಇಷ್ಟೆಲ್ಲ ವಿವೇಚನೆಯ ಪರಿಣಾಮ ಘೋರ ನಿರಾಶೆ,– ಅನಂತ ಅಂಧಕಾರ! ಆದರೂ ನನ್ನ ಜೀವನ ಜೀವನ ಕ್ರಮ ಇದೊಂದು ಅಂಟುರೋಗವಾಗಿ ಪರಿಣಮಿಸಿದೆ.

ನನ್ನ ಜೀವನದಲ್ಲಿ 'ಶೇಖರ'ರ ಪ್ರವೇಶ ಎಂದಾಯಿತು ಹೇಳಲಾರೆ. ಅಂತೂ ಶ್ರೀನಾಥನ ಅಗಲುವಿಕೆಯಿಂದ ಕೊರಗುತ್ತಿದ್ದಾಗಲೇ ಅವರ ಪರಿಚಯವಾಗಿರಬೇಕು. ಆ ಸಂಬಂಧವಾಗಿ ಯಾವ ಘಟನೆಯೂ ನನಗೀಗ ನೆನಪಾಗುವುದಿಲ್ಲ. ಯಾವುದೋ ಒಂದು ನಿರಾಶೆಯ ವೇಳೆ ಅವರು ಸಹಾನುಭೂತಿಯ ಎರಡು ಮಾತುಗಳಿಂದ ನನ್ನ ಮನವನ್ನು ಸಂತಯಿಸಿದ್ದರು. ನನ್ನ ಹಿಂದಿನ ಮಿತ್ರರುಗಳಿಗೂ ಇವರಿಗೂ ಇದ್ದ ಮುಖ್ಯ ಅಂತರವೆಂದರೆ, ಮೊದಲಿನವರ ಮೇಲೆ ನಾನು ಪ್ರಭಾವ ಬೀರುತ್ತಿದ್ದೆ. ಆದರೆ ಈಗ ನಾನು ಶೇಖರರ ಪ್ರಭಾವಕ್ಕೆ ಹೊಸತಾಗಿ ಒಳಗಾಗಿದ್ದೆ. ಮೊದಲನೆಯದಾಗಿ ಅವರು ನನಗಿಂತ ತುಸು ಹಿರಿಯರು. ಜೀವನದಲ್ಲಿ ನನಗಿಂತಲೂ ಎಷ್ಟೋ ಹೆಚ್ಚು ಕಷ್ಟಗಳನ್ನು ಅನುಭವಿಸಿದವರು. ಜಗತ್ತಿನ ಆಗು-ಹೋಗುಗಳನ್ನು ಸೂಕ್ಷ್ಮದೃಷ್ಟಿಯಿಂದ ಪರೀಕ್ಷಿಸುವವರು. 'ನನ್ನಂತಹ ಹುಚ್ಚುಬೇರೊಬ್ಬರಿಲ್ಲ' ಎಂದು ಬಗೆದಿದ್ದ ನನಗೆ, ಅವರನ್ನು ನೋಡಿದಾಗ ನನಗಿಂತಲೂ ಎಷ್ಟೋ ಗಂಭೀರವಾಗಿ ಅವರು ವಿವೇಚಿಸುತ್ತಿದ್ದಾರೆಂದು ತಿಳಿದು ಆಶ್ಚರ್ಯವಾಯಿತು. ನಾವಿಬ್ಬರೂ ಅಣ್ಣ–ತಮ್ಮಂದಿರಂತೆ ಪರಸ್ಪರ ಸುಖ–ಕಷ್ಟಗಳನ್ನರಿತುಕೊಂಡು, ಅವುಗಳಿಂದ ಬಿಡುಗಡೆ ಹೊಂದುವ ಉಪಾಯವನ್ನು ಯೋಚಿಸುತ್ತಿದ್ದೆವು. ನಾನವರ ಮನಸ್ಸಿಗೆ ನೋವಾಗುವಂತಹ ಯಾವ ಕಾರ್ಯವನ್ನೂ ಕೈಕೊಳ್ಳುತ್ತಿರಲಿಲ್ಲ. ಸಣ್ಣ ಸಣ್ಣ ವಿಷಯಕ್ಕಾಗಿಯೇ ಅವರು ವಿಶೇಷ ನೊಂದುಕೊಳ್ಳುತ್ತಿದ್ದರು. ಅವರ ಮನಸ್ಸನ್ನು ಚೆನ್ನಾಗಿ ಅರಿತು ಜಾಗರೂಕನಾಗಿ ವರ್ತಿಸುತ್ತಿದ್ದೆ. ಆದರೂ ಕೆಲವೊಮ್ಮೆ ಅನಿರೀಕ್ಷಿತವಾಗಿ ಅವರ ಸಿಡುಕಿಗೆ ಪಾತ್ರನಾಗಬೇಕಾಗುತ್ತಿತ್ತು. ನನ್ನಂತೆಯೇ ಅವರೂ ಬಹಳ ಸೂಕ್ಷ್ಮಕಾಯರು. ದುರ್ಬಲದೇಹಿಗಳ ಮನಸ್ಸೂ ತುಂಬಾ ದುರ್ಬಲ. ಮಾತು–ಮಾತಿಗೆ ಅವರು ಸಿಡಿದೇಳುತ್ತಾರೆ. ಸಹನೆಯ ಎಲ್ಲೆಯನ್ನೂ ವಿಚಾರಕ್ಕೂ ಮುಂಬರಿಯುತ್ತದೆ. ಆದರೆ ಮುಂದೆ ಈ ಅನಾವಶ್ಯಕ ಕ್ರೋಧಕ್ಕಾಗಿ ತುಂಬಾ ಪಶ್ಚಾತ್ತಾಪವಾಗುತ್ತದೆ. ಶೇಖರರೂ ಈ ನಿಯಮಕ್ಕೆ ಹೊರತಾಗಿಲ್ಲ. ತಮ್ಮ ರೋಗಾಬ್ಧಕ್ಕಾಗಿ ಮರುಕ್ಷಣವೇ ಮನಮರಗುತ್ತಾರೆ. ಮನದ ಬೇಗುದಿ, ಅನಾವಶ್ಯಕ ಸಂತಾಪ ಹಾಗೂ ಪಶ್ಚಾತ್ತಾಪಗಳಿಂದ ಮನಸ್ಸೆಷ್ಟು ದುರ್ಬಲವಾಗಬಹುದು!

ದಿನಗಳೆದಂತೆ ನನ್ನ ಆರ್ಥಿಕಪರಿಸ್ಥಿತಿಯೂ ಹದಗೆಡುತ್ತಾ ಬಂತು. ಒಂದೆಡೆ ಪರೀಕ್ಷೆಯ ಸಿದ್ಧತೆಯಾಗಬೇಕು. ಮತ್ತೊಂದೆಡೆ ಮನೆಯ ಸಮಸ್ಯೆಗಳನ್ನು ಬಿಡಿಸಬೇಕು. ವಿದ್ಯಾರ್ಥಿದಸೆಯಲ್ಲಿ ಮನೆಯ ಚಿಂತೆಯನ್ನೂ ತಲೆಗೆ ಹಚ್ಚಿಕೊಂಡರೆ ಓದು ಸಾಗೀತೆ? ಆದರೆ ಈ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಶೇಖರರು ತಮ್ಮ ಕಷ್ಟಗಳನ್ನು ಲೆಕ್ಕಿಸದೆ ನನಗೆ ಮನಃಪೂರ್ವಕವಾಗಿ ಸಹಾಯಮಾಡಿದರು. ನಾನು ನಾಚ್ಚಾರ

ತಿಂಗಳು ನಿಶ್ಚಿಂತೆಯಿಂದ ಓದುವಂತಾಯಿತು. ಸಾಲದ ಭಾರ ಮೈಮೇಲೆ ಇದ್ದರೂ, ಅದನ್ನು ಗಮನಿಸದೆ ನಾನು ದಿನಗಳೆದೆ. ಹೇಗೆಯೇ ಇರಲಿ, ಕಷ್ಟ ಬಂದಾಗ ನಾವಿಬ್ಬರೂ ಒಟ್ಟಿಗೆ ಸೇರಿ ಧೈರ್ಯದಿಂದ ನೀಗಬಹುದೆಂದು ನನಗಾಗ ಭರವಸೆಯಾಯಿತು

ಪ್ರಪಂಚದಲ್ಲಿ ಸಂಪತ್ತಿಗೊಂದು ಸ್ಥಾನವಿದೆ. ಬಡತನದ ಬೇಗೆಯಲ್ಲಿ ಬೆಂದಿದ್ದರೂ ನಾನು, ಬಾಲ್ಯದಿಂದಲೂ ಹಣಕ್ಕೆ ಮಹತ್ತ್ವ ಕೊಡುತ್ತಿದ್ದಿಲ್ಲ. 'ಹಣ ಬರುತ್ತದೆ, ಹೋಗುತ್ತದೆ. ಶಾಶ್ವತವೇನಲ್ಲ' ಎಂಬ ಭಾವನೆ ನನ್ನಲ್ಲಿತ್ತು. ಜೀವನ ಸಾಗಿಸಲು ಹಣ ಅವಶ್ಯವಾದರೂ ಅದೇ ಸರ್ವಸ್ವವೆಂದು ನಂಬಿ ಅದನ್ನು ಕೂಡಿಹಾಕಲು ಅನ್ಯಾಯ ಮಾರ್ಗವನ್ನವಲಂಬಿಸುವ ಮನುಷ್ಯರನ್ನು ಕಂಡರೆ, ನನಗೇಕೋ ಕನಿಕರವುಂಟಾಗುತ್ತದೆ. ಹಣದಾತೆ ಸಹಜವಾದರೂ ನಾವಿಬ್ಬರೂ ಅದಕ್ಕಿಂತ ಗೆಳೆತನಕ್ಕೇ ಹೆಚ್ಚು ಮಹತ್ತ್ವ ಕೊಡುತ್ತಿದ್ದೆವು. ಈಗಲೂ ನನಗೆ ನನ್ನ ಸಾಲದ ಹೊರೆಯೊಂದು ತಲೆಯಮೇಲಿಂದ ಇಳಿದರೆ ಸಾಕೆಂಬ ಇಚ್ಛೆಯಲ್ಲದೆ, ಹಣ ಕೂಡಿಸಿ ಮೆರೆಯಬೇಕೆಂಬ ಬಯಕೆಯಿಲ್ಲ. ಇದೊಂದು ಅಸಂಭವವಿಚಾರವೆಂಬ ನಿರಾಶೆಯಿಂದ ನಾನೀ ಮಾತನ್ನು ಹೇಳುತ್ತಿಲ್ಲ. ಆಂತಃಕರಣಪೂರ್ವಕವಾಗಿಯೇ ನುಡಿಯುತ್ತಿದ್ದೇನೆ.

ನಾವಿಬ್ಬರೂ ೩-೪ ವರ್ಷಗಳ ಕಾಲ ಅಭಿನ್ನರಾಗಿಯೇ ಉಳಿದೆವು. ನಮ್ಮ ಉದ್ಯೋಗ, ವಸತಿ ಬೇರೆ ಬೇರೆ ಊರುಗಳಲ್ಲಾದರೂ, ಈ ದೂರ ನಮ್ಮ ಪ್ರೀತಿಗೆ ಅತಂಕವಾಗಲಿಲ್ಲ. ವಾರಕ್ಕೊಮ್ಮೆ ಪತ್ರವ್ಯವಹಾರ ತಪ್ಪದೆ ನಡೆಯುತ್ತಿತ್ತು. ಅವುಗಳ ಸಂಗ್ರಹ ಈಗಲೂ ನನ್ನ ಬಳಿ ಇದೆ. ತಿಂಗಳಿಗೊಮ್ಮೆ ಪರಸ್ಪರರ ಭೇಟಿಯಾಗದಿದ್ದರೆ ಮನಸ್ಸೇ ತಡೆಯುತ್ತಿದ್ದಿಲ್ಲ. ಎಷ್ಟೋ ಸಂಕಷ್ಟಗಳನ್ನು ಎದೆಯೊಡ್ಡಿ ಸಹಿಸಿದೆವು. ನಮ್ಮ ಆತ್ಮೀಯತೆ ಎಷ್ಟೋ ಜನರಿಗೆ ಅಸೂಯೆಯನ್ನೂ ಹುಟ್ಟಿಸಿದೆ, ಕಣ್ಣು ಕೋರೈಸಿದೆ. ಆದರೆ ನಮ್ಮಲ್ಲಿ ಒಮ್ಮೆಯೂ ಮನಸ್ತಾಪವಾಗಲಿಲ್ಲ.

ಬೇಸಗೆ ಕಾಲದ ರಜೆಯಮೇಲೆ ನಾವಿಬ್ಬರೂ, ಯಾವುದಾದೊಂದು ಸ್ಥಳದ ಪ್ರವಾಸವನ್ನು ಕೈಕೊಳ್ಳುತ್ತಿದ್ದೆವು. ಎಲ್ಲಿಗಾದರೂ ಹೋಗುವುದಿದ್ದರೆ ಇಬ್ಬರೂ ಒಟ್ಟಾಗಿಯೇ ಹೋಗುತ್ತಿದ್ದೆವು ಎಷ್ಟೋ ಸ್ಥಳಗಳನ್ನು ತಿರುಗಾಡಿ ಬಂದೆವು. ಜಿಲ್ಲೆಯ ಪ್ರಸಿದ್ಧ ಯಾತ್ರಾ ಸ್ಥಳಗಳನ್ನು ಸಂದರ್ಶಿಸಿದೆವು. ಕಟ್ಟಕಡೆಗೆ ನಾವಿಬ್ಬರೂ ಒಟ್ಟಾಗಿ ಮಾಡಿದ ಯಾತ್ರೆ ಈಗಲೂ ನನ್ನ ಕಣ್ಮುಂದೆ ನಲಿಯುತ್ತಿದೆ.

ನಾಲ್ಕಾರು ದಿನದ ರಜೆಯನ್ನು ಪಡೆದು, ಫೆಬ್ರುವರಿಯ ಒಂದು ಮುಂಜಾನೆ ನಾವು ಕಾಲ್ನಡಿಗೆಯಿಂದ ಕೊಲ್ಲೂರಿನ ಪ್ರವಾಸ ಕೈಕೊಂಡೆವು. ದಾರಿಯಲ್ಲಿ ಸಿಕ್ಕುವ ಸಂಬಂಧಿಕರ ಮನೆಯಲ್ಲೆಲ್ಲಾ ತಂಗಿ, ಒಂದು ಹೊತ್ತು ನಿಂತು ಮುಂದುವರಿದೆವು. ಈ ಪ್ರವಾಸದ ಉದ್ದೇಶವೇನೋ ನನಗೆ ತಿಳಿದಿರಲಿಲ್ಲ. ವಿಶೇಷ ಜಾತ್ರೆಯ ದಿನಗಳಲ್ಲ ಅವು. ಆದರೂ ಅವರ ಇಚ್ಛೆಯಂತೆ ನಾನು ಹೊರಟೆ. ಕೊಲ್ಲೂರಿನಲ್ಲಿ ಒಂದು ದಿನ ಕಳೆದ ಮೇಲೆ ಕೊಡಚಾದ್ರಿಗೆ ಹೋಗುವ ಬಯಕೆ ನನಗಾಯಿತು. ಎಷ್ಟೋ ಬಾರಿ ಕೊಲ್ಲೂರನ್ನು ಕಂಡಿದ್ದರೂ ಕೊಡಚಾದ್ರಿಗೆ ಒಮ್ಮೆಯೂ ಹೋಗಿರಲಿಲ್ಲ. ಈಗ ಆ ಸುಸಮಯ ತಾನಾಗಿ ಒದಗಿರುವಾಗ ಏಕೆ ಹೋಗಬಾರದು? ಅವರು ಮೊದಲೇನೂ ಮಾತನಾಡಲಿಲ್ಲ. ಬಹುಶಃ ಹೋಗುವ ಮನವಿಲ್ಲವೆಂದು ನಾನು ಸುಮ್ಮನಾದೆ. ಆದರೆ ಕೊನೆಗೆ ಅವರೇ 'ಹೂಂ ಹೋಗುವ' ಎಂದರು. ಏಕೆಂದರೆ ಯಾತ್ರೆಯ ಹುಚ್ಚು ಅವರಿಗೆ ವಿಶೇಷವಾಗಿತ್ತು. ಹೀಗಾಗಿ ಮರುದಿನ ಬೆಳಗಿನಲ್ಲಿ ಹೊರಟೇಬಿಟ್ಟೆವು.

ಕೊಡಚಾದ್ರಿಯ ಸುಂದರಪ್ರಕೃತಿಯಿಂದ ಮನಸ್ಸು ಉಲ್ಲಾಸಗೊಂಡಿತು. ಗುತ್ಪಗಾತುಗಳಲ್ಲಿ ಅಲೆದಾಡುವುದೆಂದರೆ ನನಗೆ ಮೊದಲಿನಿಂದಲೂ ಪ್ರಿಯವಾದುದು. ಜನಜಂಗುಳಿಯ ಗಲಭೆಯ ನಡುವೆ ಇದ್ದೂ ಇದ್ದೂ ಬೇಸತ್ತ ಮನಸ್ಸಿಗೆ, ಪ್ರಕೃತಿಯ ರುದ್ರ-ಗಂಭೀರ ದೃಶ್ಯಗಳನ್ನು ನೋಡುವ ಲವಲವಿಕೆ ಇರುತ್ತದೆ. ಉತ್ತುಂಗ ಶೃಂಗಗಳನ್ನೇರಿ ಮನದಣಿಯೆ ನಲಿದಾಡಿದೆವು. ಪ್ರೇಕ್ಷಣೀಯ ಸ್ಥಳಗಳಾವುವನ್ನೂ ಬಿಡಲಿಲ್ಲ. ನಡೆನಡೆದು ಕಾಲುಗಳು ದಣಿದಿದ್ದರೂ ಉತ್ಸಾಹ ಕುಗ್ಗಿರಲಿಲ್ಲ. ಸಂಜೆಯ ವೇಳೆ ಅತ್ಯುನ್ನತ ಶಿಖರವೊಂದನ್ನೇರಿ, ಎದುರಿನ ರಮ್ಯ ಪ್ರಕೃತಿಯನ್ನು ನೋಡುವುದರಲ್ಲೇ ತಲ್ಲೀನರಾದಾಗ, ಶೇಷರರ ಗಂಭೀರಧ್ವನಿಯು ನನ್ನನ್ನು ಬೆಚ್ಚಿಸಿತು. ಇಂತಹ ಉಲ್ಲಾಸದ ವೇಳೆಯಲ್ಲಿ ಅವರ ಗಾಂಭೀರ್ಯ ನನಗೇನೂ ರುಚಿಸಲಿಲ್ಲ. ಎದುರಿಗೆ ದೊಡ್ಡ ಇಳುಕಲು. ಅದರಾಚೆ ಬಹು ದೂರದವರೆಗೂ ಹಬ್ಬಿದ ಸುಂದರ 'ಅಂಬಾವನ'ದ ಹಚ್ಚಹಸುರು. ಗಗನಾಂಗಣದಲ್ಲಿ ಚಿತ್ರವಿಚಿತ್ರ ರೂಪಗಳನ್ನು ಧರಿಸಿ ನರ್ತಿಸುತ್ತಾ ಸಾಗುತ್ತಿರುವಂತೆ ಕಾಣಿಸುವ ಮೋಡಗಳ ಸಾಲು. ಪಡುಗಡಲಲ್ಲಿ ಧುಮುಕಲು ಸಿದ್ಧನಾಗಿರುವ ಸೂರ್ಯನ ಹೊಂಬಣ್ಣದ ದೇಹಕಾಂತಿ. ಇದರಿಂದಾಗಿ ಪ್ರಕೃತಿಗುಂಟಾದ ನವ್ಯಕೋಭೆ— ಇವೆಲ್ಲದರ ಪರಿಣಾಮವಾಗಿ ನಾನು ಆನಂದಸಮಾಧಿಯಲ್ಲಿ ಮೈಮರೆತಿದ್ದಾಗ, ಕರ್ಣಕಠೋರವಾದ ಆ ಗಂಭೀರಧ್ವನಿ ಅಪ್ರಿಯವಾದುದೇನೂ ಅಸಹಜವಲ್ಲ. ಆದರೆ ಅವರ ಮೊಗದತ್ತ ದೃಷ್ಟಿ ಹರಿಸಿದಾಗ, ನನ್ನ ಉತ್ಸಾಹವೆಲ್ಲ ಕರಗಿ ನೀರಾಗಿ ಹರಿದು, ಆ ಸ್ಥಾನವನ್ನು ಗಾಬರಿಯು ಅವರಿಸಿತು.

'ಇದೇ ನನ್ನ ಕೊನೆಯ ಯಾತ್ರೆ—' ಯಾವ ಪೀಠಿಕೆಯೂ ಇಲ್ಲದೆ ಅವರು ಹೇಳಿದರು. ನಾನು ಸ್ತಬ್ಧನಾಗಿ ಅವರನ್ನೇ ಮಿಕಮಿಕನೆ ನೋಡುತ್ತಾ ನಿಂತೆ. ಅವರ ಮಾತನ್ನು ನಗೆಯಲ್ಲಿ ತೇಲಿಸುವ ಸಾಹಸ ನನಗಿದ್ದಿಲ್ಲ. ಏಕೆಂದರೆ ಅವರೆಂದೂ ಹುಲುತಮಾಷೆ ಮಾತುಗಾರರಲ್ಲ ಹೇಳುವುದನ್ನು ಸ್ಪಷ್ಟವಾಗಿ ಗಂಭೀರವಾಗಿ ಹೇಳುತ್ತಿದ್ದರು. ಅವರ ಅಂದಿನ ಹೊಸ ಪರಿಯನ್ನು ಕಂಡು, ನನ್ನ ಮನಸ್ಸೆಷ್ಟು ನೊಂದಿರಬಹುದು!

ನನ್ನ ದುಗುಡವನ್ನು ಕಂಡು ಅವರೇ ಹೇಳಿದರು:—'ಇದೇ ನನ್ನ ಕೊನೆಯ ಯಾತ್ರೆ. ಕೊಡಚಾದ್ರಿಗೆ ಬರಲು ಅದೆಕೋ ನನ್ನ ಮನ ಹಿಂದೆಗೆಯುತ್ತಿತ್ತು. ಇಲ್ಲಿಗೆ ಬರಬೇಕ, ಬರಬೇಕ'— ಎಂದು ಯಾರೋ ನನ್ನ ಕಿವಿಯಲ್ಲಿ ಉಸುರಿದಂತಾಗುತ್ತಿತ್ತು. ಆದರೂ ನೀನು ಯಾತ್ರೆಯ ಇಚ್ಛೆಯನ್ನು ವ್ಯಕ್ತಪಡಿಸಿದಾಗ, ಅದನ್ನು ಅಲ್ಲಗಳೆಯುವ

ನುನಸ್ಸಾಗಲಿಲ್ಲ. ನನ್ನ ಜೀವನದಲ್ಲಿ ಇನ್ನೊಮ್ಮೆ ಆ ಸುಯೋಗ ಒದಗುವುದೋ ಇಲ್ಲವೋ ಯಾರು ಬಲ್ಲರು! ಅನಕ್ಕಂತಲೇ ನಾನು ಹೊರಟುಬಿಟ್ಟೆ. ಕೊನೆಗಾಲ ಸಮೀಪಿಸುತ್ತಿದೆಯೆಂದು ಎಷ್ಟೋ ದಿನಗಳಿಂದ ನನ್ನ ಹೃದಯ ಒಡನುಡಿಯುತ್ತಿದೆ. ನಾನೇನೂ ಭವಿಷ್ಯವಾದಿಯಲ್ಲ. ಆದರೆ ಹಿಂದೆಷ್ಟೋ ಬಾರಿ ನನ್ನ ಒಳಮನಸು ನುಡಿದ ಮಾತುಗಳು ಸತ್ಯವಾಗಿ ಪರಿಣಮಿಸಿವೆ ಎಷ್ಟೋ ಸ್ವಪ್ನಗಳು ಮುಂದಿನ ಘಟನೆಗಳನ್ನು ಸಾರಿವೆ. ಅನೆಲ್ಲಾ ಘಟಿಸಿಯೇ ಬಿಟ್ಟಿರುವಾಗ, ಇದನ್ನೆಂತು ನಂಬದಿರಲಿ!'

ನನ್ನ ಮುಖ ಬಿಳಿಚಿಕೊಂಡಿತು; ಏಕೆಂದರೆ ನನ್ನ ಸ್ವಪ್ನಗಳೂ ಹಲವು ಬಾರಿ ಭವಿಷ್ಯದ ಗರ್ಭವನ್ನು ಭೇದಿಸಿ ಸತ್ಯಸಂಗತಿಯನ್ನು ತೋರಿಸಿದುದುಂಟು. ಇಂತಹ ಸ್ವಾನುಭವವನ್ನು ಅಲ್ಲಗಳೆಯುವ ಸಾಹಸವಾದರೂ ನನಗೆಂತಾಗಬೇಕು? ಆದರೂ 'ಈ ಮಾತೊಂದು ಸುಳ್ಳಾಗಲಾರದೆ?' ಎಂಬ ಕ್ಷಣಿಕ ಆಶಾಕಿರಣವೊಂದು ಹೃದಯದ ಮೂಲೆಯಲ್ಲಿ ಬೆಳಗುತ್ತಿತ್ತು.

ನಮ್ಮ ಮಾತುಕತೆ ಮುಂದುವರಿಯಲಿಲ್ಲ. ಮತ್ತೆ ಸುತ್ತಲೂ ಭೀಕರ ಮೌನ ಆವರಿಸಿತು. ಸೂರ್ಯನು ಮುಳುಗಿ ಮೆಲ್ಲಮೆಲ್ಲನೆ ಕತ್ತಲೆಯು ಪಸರಿಸುತ್ತಿತ್ತು. ನಮ್ಮ ಹೃದಯದೊಳಗೂ ಅದು ಬಲಾತ್ಕಾರವಾಗಿ ನುಗ್ಗುತ್ತಿರುವಂತೆ ಭಾಸವಾಗುತ್ತಿತ್ತು. ಭಾರವಾದ ಮನಸ್ಸಿನಿಂದ ನಾವು ಕೊಟಶಾದ್ರಿಯ ದೇವಾಲಯಕ್ಕೆ ಇಳಿದು ಬಂದೆವು.

ಭಯಕ್ಕೂ ಭಕ್ತಿಗೂ ನಿಕಟ ಸಂಬಂಧವಿದೆ. ಭಯ ಹೆಚ್ಚಿದಂತೆಲ್ಲಾ ಭಕ್ತಿಯೂ ಹೆಚ್ಚುತ್ತದೆ. ನಮಗೂ ಅದರ ಅನುಭವವಾಯಿತು. ಅಂದು ನಾವು ದೇವರನ್ನು ಧ್ಯಾನಿಸಿದಷ್ಟು ಭಕ್ತಿಯಿಂದ ಹಿಂದೆಂದೂ ಧ್ಯಾನಿಸಿರಲಿಲ್ಲ. ಅದೇನೋ ನನ್ನ ಆದರ್ಶಮಿತ್ರರನ್ನು ನನ್ನಿಂದ ದೂರ ಕ್ಕೊಯ್ಯಲು ವಿಧಿಯು ಹೂಡಿದ ಸಂಚನ್ನು ತಪ್ಪಿಸಲು ಈ ಭಕ್ತಿಯಾದರೂ ನೆರವಾಗಲೆಂದು ಮನಸಾ ಹಾರೈಸಿದೆ. ಯಾವುದೋ ಒಂದು ಹೊಸ ಹೆದರಿಕೆಯನ್ನು ಹೊತ್ತು ಯಾತ್ರೆಯನ್ನು ಮುಗಿಸಿದೆವು.

ಮತ್ತೆ ನಾಲ್ಕು ತಿಂಗಳು ವಿಶೇಷ ಏರುಪೇರುಗಳಿಲ್ಲದೆ ಸರಿದುವು. ನನಗೆ ಆ ಕೊಟಕಾದ್ರಿಯ ಭವಿಷ್ಯವಾಣಿಯು ಮರೆತೇ ಹೋಗಿತ್ತು. ಜೀವನದ ಸಾಮಯಿಕ ಸಮಸ್ಯೆಗಳನ್ನೇ ಚರ್ಚಿಸುತ್ತಿದ್ದೆವು. ಉದ್ಯೋಗದ ಜಂಜಡಗಳಿಂದ ಬಿಡು ಸಮಯವೇ ಸಿಗುತ್ತಿದ್ದಿಲ್ಲ. ಅಲ್ಲದೆ ಸಾಂಸಾರಿಕ ತಾಪತ್ರಯಗಳ ಪರಿಹಾರದಲ್ಲೇ ಮುಳುಗಿರಬೇಕಾಗುತ್ತಿತ್ತು.

ಒಂದು ದಿನ ಇದ್ದಕ್ಕಿದ್ದಂತೆ ಅವರ ಕಾಗದವನ್ನು ಕಂಡು ನನಗೆ ಪುನಃ ಮೈಚಳಿ ಆರಂಭವಾಯಿತು. ಕಾಗದದಲ್ಲಿ ವಿಶೇಷವೇನೂ ಇಲ್ಲ—'ಸಾಧಾರಣ ಜ್ವರ ಬಂದಿದೆ. ಗುಣವಾಗಲು ಕೆಲವು ದಿನ ಹಿಡಿಯಬಹುದು. ಶನಿವಾರ ಬಂದೇ ಬರುವೆಯಲ್ಲ?' ಎಂದಿತ್ತು. ಆದರೆ ಹೆದರಿದ ಮನಸ್ಸು ಅನಿಷ್ಟವನ್ನೇ ಆಶಂಕಿಸುತ್ತದೆ. ನಾನೆಷ್ಟು ಪ್ರಯತ್ನಿಸಿದರೂ ಪುನಃ ಪುನಃ ಬೇಡದ ಭಾವವೇ ಹೊಳೆಯುತ್ತಿತ್ತು. ಪಂಚೇಂದ್ರಿಯಗಳ ನಿಯಂತ್ರಣ ನನ್ನಿಂದ ಸಾಧ್ಯ. ಆದರೆ ಮನಸ್ಸನ್ನು ಥಟ್ಟನೆ ನಮ್ಮ ಅಂಕೆಗೆ ಗುರಿಪಡಿಸುವುದು ಅಷ್ಟೇನೂ ಸುಲಭವಲ್ಲ. ಅದೂ ನನ್ನಂತಹ ಶಂಕಿತ ಮನೋವೃತ್ತಿಯ ದುರ್ಬಲ ವ್ಯಕ್ತಿಗೆ ಸರ್ವಥಾ ಅಸಂಭವ.

ಮುಂದೇನು? ಭವಿಷ್ಯ ನಿಜವೆನಿಸುವ ಕಾಲ ಸನ್ನಿಹಿತವಾಯಿತು. ಸಾಧಾರಣ ಜ್ವರವೇ ಪ್ರಸಿದ್ಧ ಡಾಕ್ಟರರ ಚಿಕಿತ್ಸೆಗೂ ನಿಲುಕದಾಯಿತು. ಎಷ್ಟೋ ಡಾಕ್ಟರರು ಬಂದರು, ಹೋದರು—ಪರಿಣಾಮ ಮಾತ್ರ ಶೂನ್ಯ. ಯಾರೇ ಆಗಲಿ, ಏನು ಮಾಡಬಹುದು! ಕಾಲನ ಕರೆಯನ್ನು ಕಡೆಗಣಿಸುವ ಶಕ್ತಿ ಯಾರಿಗಿದೆ? ಈ ಜ್ವರದ ಗುಟ್ಟು ನಮಗಿಬ್ಬರಿಗೂ ಮಾತ್ರ ನಿಚ್ಚಳವಾಗಿತ್ತು. ಆದರೆ ಬಾಯಿಬಿಟ್ಟು ಹೇಳುವುದರಿಂದೇನು ಲಾಭ?

ಸುಮಾರು ಒಂದು ತಿಂಗಳ ತನಕ ಅವರು ಆ ಕಾಹಿಲೆಯನ್ನು ನರಳಿದರು. ಕೊಟ್ಟ ಔಷಧಿಗಳನ್ನೆಲ್ಲ ತಾಳ್ಮೆಯಿಂದ ಸೇವಿಸಿದರು. ನಾನು ಯಾವಾಗಲೂ ಅವರ ಬಳಿಯೇ ಇರುತ್ತಿದ್ದೆ. ಅವರನ್ನು ಕಂಡ ಕೊನೆಯ ದಿನಗಳು ಈಗಲೂ ಕಣ್ಣಮುಂದೆ ಕಟ್ಟಿದಂತಿವೆ.

'ಇನ್ನೆರಡೇ ದಿನಗಳಲ್ಲಿ ನನ್ನ ಜೀವನದ ಆಟ ಮುಗಿದುಹೋಗುತ್ತದೆ. ಅದಕ್ಕಾಗಿ ನಾನೀಗ ದುಃಖಿಸುವುದಿಲ್ಲ. ಒಂದಲ್ಲ ಒಂದಿನ ಪ್ರತಿಯೊಬ್ಬರೂ ಸಾಯಬೇಕಷ್ಟೆ; ಆದರೆ ಅಂದಿನ ಭವಿಷ್ಯ ಹೀಗೆ ಸತ್ಯವಾಗಿ ಪರಿಣಮಿಸುತ್ತಿದೆ ನೋಡು, ಇನ್ನೊಂದು ವರ್ಷದೊಳಗೆ ನನಗೆ ಸಾವು ಸಿದ್ಧವಿದೆಯೆಂದು ಅಂದೇ ಖಚಿತವಾಗಿತ್ತು. ಹಾಗೆಂದು ಮನೋರೋಗಕ್ಕೆ ಗುರಿಯಾಗಿ ನನಗೀ ಸ್ಥಿತಿ ಉಂಟಾಗಿಲ್ಲ. ಮರಣೋತ್ತರದ ಜೀವನ ಇದಕ್ಕಿಂತಲೂ ಸೊಗಸಾಗಿರಬಾರದೇಕೆ? ನಿಗಂತೂ ಅದೇ ನಂಬಿಕೆಯಿದೆ. ಈಗ ಹೇಳಬೇಕಾದುದೆಷ್ಟೋ ಇದೆ. ಎಲ್ಲವನ್ನೂ ಹೇಳಲು ಸಮಯವೂ ಇಲ್ಲ. ಡಾಕ್ಟರರೂ ಮಾತ್ರ ಗೊಡುವುದಿಲ್ಲ. ನಿನ್ನನ್ನು ಹೀಗೆ ಏಕಾಕಿಯಾಗಿ ಬಿಟ್ಟು ಹೋಗಲು ಮನ ಮರುಗುತ್ತದೆ. ಹೃದಯ.. ....!' ಅಷ್ಟರಲ್ಲೇ ಡಾಕ್ಟರರು ಬಂದುದರಿಂದ ಆ ಮಾತು ಅರ್ಧಕ್ಕೆ ನಿಂತಿತು.

ಅದೇ ಕೊನೆಯ ಮಾತುಕತೆ. ಮುಂದೆ ನಮ್ಮ ಸಂಭಾಷಣೆಯೆಲ್ಲಾ ಕಣ್ಣುಗಳಲ್ಲೇ ನಡೆಯಿತು. ಹೃದಯದ ಭಾವನೆಗಳು ಹೃದಯ ಅರಿತುಕೊಂಡಿತು.

ಕೊನೆಯವರೆಗೂ ಅವರ ಮುಖದ ಮೇಲೆ ಮುಗುಳ್ನಗೆಯಿತ್ತು. ಸಾಯುವ ಹೊತ್ತಿಗೂ ಆ ನಗು ಮಾಯವಾಗಿರಲಿಲ್ಲವಂತೆ; ನಾನಾ ಅವರಿಂದ ದೂರವಿದ್ದೆ. ಅವರೇ ಹಾಗೆ ಹೇಳಿದ್ದರು. ನನ್ನಿಂದ ಅಂತಹ ಹೃದಯ ವಿದಾರಕ ದೃಶ್ಯವನ್ನು ಕಾಣುವುದು ಸಾಧ್ಯವಿಲ್ಲವೆಂದು ಅವರು ದೃಢವಾಗಿ ನಂಬಿದ್ದರು.

ಶೇಖರರ ಗೆಳೆತನದಂತೆ ಅವರ ಮೃತ್ಯುವೂ ನನ್ನ ಜೀವನದ ಮೇಲೆ ವಿಶೇಷ ಪ್ರಭಾವ ಬೀರಿತು 'ವಿಧಿಯು ನನ್ನನ್ನು ಏಕಾಕಿಯನ್ನಾಗಿರಲು ಇಂತಹ ಸಂಚು ಹೂಡಬೇಕೆ?' ಎಂದು ಮನಸು ರೋಸಿತು. ಹೃದಯ ಕಟುವಾಯಿತು. ಪ್ರಪಂಚವನ್ನು ಕಂಡರೇ ಸಿಡಿವೇಳೆ ಸ್ವಭಾವವಾಯಿತು. 'ಸಹನೆ'ಯ ಶಬ್ದವೂ ನನ್ನ ಬಳಿ ಸುಳಿದಾಡಲಿಲ್ಲ.

ಹುದರುತ್ತಿತ್ತು. 'ಶೇಖರರೊಡನೆ ನಾನೂ ಸಾಯಬಾರದಿತ್ತೆ? ಯಾವ ಮಹತ್ಕಾರ್ಯ ಸಾಧನೆಗಾಗಿ ಬದುಕಬೇಕು?' ಎಂದು ಆಗಾಗ ಯೋಚಿಸುವುದುಂಟು. ಇಂತಹದನ್ನೇ "ಸ್ಮಶಾನ ವೈರಾಗ್ಯ" ಎಂದು ಬಲ್ಲವರು ಕರೆಯುತ್ತಾರೆ.

ಯಾವುದು ಮಾಸಿದರೂ ಶೇಖರರ ನೆನಪು ಮಾಸಲಾರದು. ಅವರು ನನ್ನ ಜೀವನದಲ್ಲಿ ಫಕ್ಕನೆ ಮಿಂಚಿ ಮಾಯವಾದರು. ನನ್ನ ವ್ಯಕ್ತಿತ್ವವನ್ನು ಬೆಳಗಿ ಕಣ್ಮರೆಯಾದರು. ಆ ಬಳಿಕ ಅವರ ಮನೆಗೆ ಒಮ್ಮೆಯೂ ನಾನು ಹೋಗಲಿಲ್ಲ. ಸಹೋದ್ಯೋಗಿಗಳು ಆಗಾಗ "ಕೊಟೆಶಾದ್ರಿಗೆ ಹೋಗಿಬರೋಣವೆ?" ಎನ್ನುವುದುಂಟು. ನೋಡುವ ತವಕ ನನಗೂ ಇದೆ. ಆದರೆ ಆ ಬೆಟ್ಟವನ್ನು ನೆನೆಯುವಾಗ ಶೇಖರರ ನೆನಪೂ ಮೈದಳೆಯುತ್ತದೆ. ಅಲ್ಲಿಗೆ ಹೋದರೂ ನನಗೆ ಉತ್ಸಾಹವೆನಿಸಲಾರದು. ಅವರ ಮಾತುಗಳೆಲ್ಲ ಅಲ್ಲಿಯ ತಂಗಾಳಿಯೊಡನೆ ಬೆರೆತು ಕಿವಿದೆರೆಗಳಿಗೆ ಬಂದು ಬಡಿಯಬಹುದು. ಹೃದಯ ಚೀರಿ ಗೋಳಿಡಬಹುದು. ಹೆಜ್ಜೆ ಹೆಜ್ಜೆಗೆ ಅವರ ನೆನಪು ಮರುಕಳಿಸಿ ನನ್ನನ್ನು ಸೋಯಿಸಬಹುದು. ಜೀವವನ್ನೇ ಹಿಂಡಿ ಹಿಪ್ಪಿ ಮಾಡಬಹುದು. ಇದಕ್ಕೆಂತಲೇ ಎಲ್ಲರ ಕೇಳಿಕೆಯನ್ನೂ ಮೀರಿ ಆಸೆಯನ್ನು ಅದುಮಿ ನಾನು ಸುಮ್ಮನಿದ್ದೇನೆ ಇನ್ನು ಕೆಲ ಸಮಯದ ವರೆಗಾದರೂ ಈ ಭಯ ನನ್ನನ್ನು ಕೊರೆಯಲಾರದೆಂದು ಕಾಣುತ್ತದೆ.

× × × ×

ಹೀಗೆ ನನ್ನ ಜೀವನದಲ್ಲಿ ಬಂದ ಮೂವರೂ ಗೆಳೆಯರು ಒಂದೊಂದು ತೆರದಿಂದ ಅಗಲಿಹೋದರು. ಪ್ರತಿಬಾರಿಯೂ ನನ್ನ ಹೃದಯಕ್ಕೆ ಬಲವಾದ ಆಘಾತವಾದರೂ ಅದೆಲ್ಲಾ ಅವಶ್ಯಂಭಾವಿ, ವಿಧಿಯ ಸಂಕೇತ ಎಂದು ಸಮಾಧಾನ ತಾಳುತ್ತಿದ್ದೆ. ಆದರೆ ಅವರಿಂದ ನನ್ನ ಜೀವನದ ಎಷ್ಟೊ ಅಂಶಗಳು ತುಂಬಿವೆ. ನನ್ನ ಜೀವನವು ಒಂದು ರೂಪಕ್ಕೆ ಬರಲು ಅವರೆಲ್ಲ ನನಗೆ ಸಾಕಷ್ಟು ನೆರವಾಗಿದ್ದಾರೆ.

ಅಂದಿನಿಂದ ನಾನು ಯಾರ ಒಡನಾಟಕ್ಕೂ ಎಳಸಿಲ್ಲ. ಬಂದ ದುಃಖಗಳನ್ನು ಹೃದಯದಲ್ಲೇ ನುಂಗಿ ಮೇಲೆ ನಗಲು ಪ್ರಯತ್ನಿಸುತ್ತಿದ್ದೇನೆ. ನನ್ನ ಸಂಪರ್ಕದಲ್ಲಿ ಬರುವವರೆಲ್ಲಾ ಈ ರೀತಿ ಒಂದೊಂದು ವಿಧದಿಂದ ದೂರವಾಗುವುದು ನನಗೇನು ಸಂತಸವೆ? "ಮುದ್ರಾಮಂಜೂಷ" ದ "ವಿಷಕನ್ಯೆ"ಯಂತೆ ನಮ್ಮ ಗೆಳೆತನವು ದುರಂತವಾಗಬೇಕೆ? ಅದಕ್ಕಿಂತ ಒಂಟಿಯಾಗಿರುವುದೇ ಮೇಲು— ಎಂದು ನಾನು ಯೋಚಿಸುತ್ತೇನೆ. ಆದರೆ ಹೃದಯದಲ್ಲಿ ಜ್ವಾಲಾಮುಖಿಯನ್ನು ಅದುಮಿಟ್ಟು ಎಷ್ಟು ದಿನ ತಡೆ ಹಿಡಿಯಬಹುದು? ಒಂದಲ್ಲ ಒಂದು ದಿನ ಅದು ಸ್ಫೋಟಿಸದಿರುತ್ತದೆಯೆ?

ಮತ್ತೆ ಮೂರು ವರ್ಷಗಳು ಸಂದುವು. ನನ್ನ ದಿನಚರಿಯಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ. ಕಂಡವರ ಮೇಲೆ ಕಿಡಿಗಾರುವುದು, ಕಟಕಿಯ ಮಾತಿನಿಂದ ಮೂದಲಿಸುವುದು, ನನ್ನ ಅಭ್ಯಾಸವಾಯಿತು. ಸ್ನೇಹದ ಒರತೆ ಸಂಪೂರ್ಣ ಬತ್ತಿಹೋದಂತಿತ್ತು. ಇದೆಲ್ಲ ಆ ಅಂತರ್ವೇದನೆಯ ಪರಿಣಾಮವೆಂದು ಯಾರೂ ಅರಿಯದಾದರು.

ಶಾಂತಿ ಸೇವಾಸದನದ ಹೊಸ ಪ್ರಕಟಣೆಗಳು

ಹಾಲು-ಹಣ್ಣು (ಕವನ ಸಂಗ್ರಹ)	೧– ೮–೦
ಶ್ರೀ. ಭುಜೇಂದ್ರ ಮಹಿಷವಾಡಿ	
ಬಾಳ-ಬಂಡಿ (ಕವನ ಸಂಗ್ರಹ)	೦– ೮–೦
ಶ್ರೀ. ಬಾಳ ಬಿ. ಉಪಾಧ್ಯೆ	
ಮೂಲ ಶಿಕ್ಷಣದ ಮೌಲ್ಯಮಾಪಣ	೦–೧೨–೦
ಶ್ರೀ. ಮಿರ್ಜಿ ಅಣ್ಣಾರಾಯರು	
ಭರತೇಶನ ನಾಲ್ಕು ಚಿತ್ರಗಳು	೧– ೪–೦
ಶ್ರೀ. ಮಿರ್ಜಿ ಅಣ್ಣಾರಾಯರು	
ಶ್ರೀ ಶಾಂತಿಸಾಗರ	೦– ೪–೦

ವ್ಯಾಪಾರಿಗಳಿಗೆ ಧಾರಾಳವಾದ ಕಮಿಶನ್ನು

ಪ್ರತಿಗಳಿಗಾಗಿ ಬರೆಯಿರಿ:

ಶ್ರೀ. ಮಿರ್ಜಿ ಅಣ್ಣಾರಾಯರು

ವೋ. ಉಗಾರ ಬದ್ರುಕ್ (ಜಿಲ್ಲಾ ಬೆಳಗಾಂವಿ)

ನನಗೂ ಒಂದು ಹೃದಯವಿದೆ. ಅದರಲ್ಲಿ ಮಮತೆಯ ಸ್ರೋತ ಹರಿಯುತ್ತಿದೆಯೆಂಬುದನ್ನು ಯಾರೂ ಗುರುತಿಸಲಿಲ್ಲ. ಇತರರನ್ನು ಬೈದು ಭಂಗಿಸಿ ನಲಿಯುವುದೇ ನನ್ನ ಗುರಿಯೆಂದು ಅವರು ಭ್ರಮಿಸಿದರು. ಅದರಿದು ಅವರ ತಪ್ಪಲ್ಲ, ನನ್ನ ಬಾಹ್ಯವ್ಯವಹಾರ ಹಾಗೆಯೇ ಇತ್ತು. ಅಲ್ಲದೆ ನನ್ನ ಅಂತರಂಗದ ಪರಿಚಯ ಯಾರಿಗೂ ಸಿಗುವಂತಿರಲಿಲ್ಲ.

ಇದೀಗ ಕೆಲ ತಿಂಗಳ ಹಿಂದೆ ಅಕಸ್ಮಾತ್ "ಮನೋಹರ"ನ ಕಡೆ ನನ್ನ ಮನಸ್ಸು ಜರಿಯಿತು. ಹಿಂದಿನ ಮೂರು ಆಘಾತಗಳನ್ನು ಸಹಿಸಿದರೂ ಈ ವಿಶೇಷ ಒಲವು ಏಕೆ ಸೆಳೆಯಿತೋ ಅರಿಯೆ. ಆದರೆ ಈಗ ಮಾತ್ರ ನಾನು ಬಹು ಎಚ್ಚರಿಕೆ ವಹಿಸಿದೆ. "ಇದರ ಪರಿಣಾಮ ಕೆಡುಕಾಗಬಹುದೆ?" ಎಂದು ಜ್ಯೋತಿಷ್ಕರನ್ನು ವಿಚಾರಿಸಿದೆ. ಏಕೆಂದರೆ ದುರಂತದ ಕಿರುಸಂಕೇತ ಸಿಕ್ಕಿದರೂ ನಾನು ಈ ಹೊಸ ಸಂಬಂಧವನ್ನು ಕಡಿಯುವ ಹವಣಿಕೆಯಲ್ಲಿದ್ದೇನೆ. ಆದರೆ ಈ ಬಾರಿ ನನ್ನ ದೈವ ತೆರೆದಿರಬೇಕು. ಅಂತಹ ಗಂಡಾಂತರವಿಲ್ಲವೆಂದು ಖಚಿತವಾಗಿ ತಿಳಿದು ಬಂದಿದೆ. "ಮೂರಕ್ಕೆ ಮುಕ್ತಾಯ" ಎನ್ನುತ್ತಾರಲ್ಲ– ಹಾಗಾಗಿರಬೇಕು. ದೈವ ಯಾವಾಗಲೂ ಪ್ರತಿಕೂಲವಿರುವುದಿಲ್ಲ. ಕಾಲಚಕ್ರ ಉರುಳುತ್ತಿರುವುದಲ್ಲವೆ? ಒಮ್ಮೆ ದುಃಖ, ಮತ್ತೊಮ್ಮೆ ಸುಖ! ಇನ್ನು ನನ್ನ ಪಾಲಿಗೆ ದುಃಖದ 'ಕಾಳರಾತ್ರಿ'ಯು ಕಳೆದು ಸುಖದ ಸೂರ್ಯ-

ಭಾತವಾಗಬಹುದೆಂದು ಅಧಿಕೃತನಾಗಿ ತಿಳಿದಿದ್ದೇನೆ. ಅದಕ್ಕಾಗಿ ಈ ಗೆಳೆತನಕ್ಕೆ ಮನಸೋತಿದ್ದೇನೆ.

ಆದರೆ ನನ್ನ ಬಗ್ಗೆ ಅವನ ಅಭಿಪ್ರಾಯ ಎಂತಹುದೋ ನಾನು ಅರಿಯೆ. 'ಗೆಳೆತನ' ಬಾಯಿಮಾತಿನ ಅಡಂಬರಪೂರ್ಣ ವ್ಯವಹಾರವಲ್ಲ. ಹಾರ್ದಿಕವ್ಯವಹಾರದ ಮೂರ್ತರೂಪ. 'ನಾನು ನಿನ್ನ ಗೆಳೆಯ' ಎಂದು ಹೇಳಿದೊಡನೆಯೇ ಆ ಭಾವನೆ ಬರಬೇಕೆಂದಿಲ್ಲ; ಬರುವುದೂ ಇಲ್ಲ. ಮನಸ್ಸಿನಲ್ಲಿ ಆತ್ಮೀಯತೆ ತಾನಾಗಿಯೇ ಒಡಮೂಡಬೇಕು. ಅದು ಅವನಲ್ಲಿ ನೆಲೆಗೊಂಡಿದೆಯೋ ಇಲ್ಲವೋ, ಧೈರ್ಯವಾಗಿ ಹೇಳಲಾರೆ. ಆದರೆ ಆ ಬಗ್ಗೆ ನನಗೆ ಅವನ ಮೇಲೆ ತುಂಬ ಭರವಸೆಯಿದೆ.

ಮನೋಹರನನ್ನು ಕಂಡಾಗಲೆಲ್ಲಾ ನನಗೆ ಶ್ರೀನಾಥನ ನೆನಪಾಗುತ್ತದೆ. ಶ್ರೀನಾಥನ ಮುಂದಹಾಸ ಒಂದೇ ಒಂದು ಏಟಿನ ನೆಪದಿಂದ ಮಾಯವಾಗಿ ಮುಂದೆ ಗಂಭೀರಮೌನವು ಆವರಿಸಿತಲ್ಲ! ಮನೋಹರನನ್ನು ಕಂಡಾಗ ಆ ನಿರಾಶಾಮೂರ್ತಿ ಶ್ರೀನಾಥನೆ ಎದುರು ನಿಂತಂತೆ ಭಾಸವಾಗುತ್ತದೆ. ಅವನ ಮುಖದ ಮೇಲೆ ಈ ಅಸಾಮಯಿಕ ಗಾಂಭೀರ್ಯವು ಏಕೆ ಕಾಣಿಸಿತೋ ಎಂದು ನಾನು ಆಗಾಗ ಯೋಚಿಸುತ್ತೇನೆ. ಶ್ರೀನಾಥನೊಡನೆ ನಾನೆಸಗಿದ ತಪ್ಪಿಗೆ

ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ
ಕೊಡುತ್ತದೆ.

ಬಗನ ಬಾಲಾಮೃತ

ಮಕ್ಕಳ ಸದೃಢತೆಗಾಗಿ — "ಬಗನ ಬಾಲಾಮೃತ"

ಹಲ್ಲು ಬರುವಾಗ — "ಎಸ್ಟನ್ ಗ್ರಾಇಪ್ಸ್" ಹೀಲರ್

ಜಂತು ಆದರೆ — "ವರ್ಮ್ ಆಯಿಲ್"

ಉಪಯೋಗಿಸಿರಿ. ಇವು ಪ್ರತಿಯೊಬ್ಬ ಕುಟುಂಬಸ್ಥರಿಗೆ ಉಪಯೋಗಬೀಳುವ ಔಷಧಗಳು

The National Pharmacies & Pharmaceuticals Ltd., Dharwar

ಪ್ರಾಯಶ್ಚಿತ್ತವಾಗಬೇಕಾದರೆ ಮನೋಹರನ ದುಃಖ ದೂರವಾಗಬೇಕು–ಎಂದು ನನ್ನ ಮನಸ್ಸು ಒಡನುಡಿಯುತ್ತದೆ. ಜೀವನದ ಚಿಂತೆಯಿಂದ ಕೊರಗಿ ಕುಗ್ಗಿದ ಜೀವಕ್ಕೆ ತುಸುವಾದರೂ ಸಹಾನುಭೂತಿ ನನ್ನಿಂದ ದೊರೆಯಬೇಕೆಂಬ ಹಂಬಲ; ಅಲ್ಲದೆ ಅವನ ಮುಖದ ಮೇಲೆ ಮುನ್ನ ಮಂದಹಾಸವು ನಲಿದಾಡಲೆಂದು ನಾನು ಹಾರೈಸುತ್ತೇನೆ. ಆ ಸುಯೋಗವು ಎಂದು ದೊರೆಯುವುದೋ ನೋಡಬೇಕು.

ಅವನ ಜೀವನದ ಕಣಕಣವೂ ವಿಕಾಸ ಹೊಂದಬೇಕು, ಬಾಳ್ವೆಯ ಬಳ್ಳಿಗೆ ಸ್ನೇಹದ ಅಮೃತಧಾರೆಯನ್ನೆರೆದು ಪ್ರಗತಿಯ ಮಧುರ ಫಲವನ್ನು ಪಡೆಯಬೇಕೆಂಬ ಆಕಾಂಕ್ಷೆಯಿದೆ. "ಕ್ರೂರವಿಧಿಯ ಕೂರಸಿಯು ನಮ್ಮ ಸ್ನೇಹಬಂಧನವನ್ನು ಕಡಿಯದಿರಲಿ, ಗೆಳೆತನದ ಹಾಲಿನಲ್ಲಿ ವಿಷಮತೆಯ ಹುಳಿಯನ್ನು ಹಿಂಡದಿರಲಿ, ನನ್ನೀ ಸವಿಗನಸು ನನಸಾಗಲಿ, ಮಧುರಬಾಂಧವ್ಯ ಅಮರವಾಗಲಿ, ನಿರ್ಮಲ ಸ್ನೇಹದ ಜ್ಯೋತಿಯು ನಮ್ಮ ಹೃನ್ಮಂದಿರದಲ್ಲಿ ನಂದಾದೀಪವಾಗಿ ಅನವರತ ಬೆಳಗುತ್ತಿರಲಿ"—ಇಷ್ಟೇ ಆ ಮಂಗಳಮಯ ವರಮಾತ್ಮನಲ್ಲಿ ನನ್ನ ಸವಿನಯ ಪ್ರಾರ್ಥನೆ.

———

ವಿಜ್ಞಾನಮಯಕೋಶ

(ಆಧ್ಯಾತ್ಮಿಕ ಪ್ರಬಂಧ)

ಶ್ರೀ. ಆರ್. ಜಿ. ಕುಲಕರ್ಣಿ (ಬೆನಕಟ್ಟಿ) Sr. B. A.

ಲೋಕಕಲ್ಯಾಣಕಾರಿಯಾದ ಮಾನವೀಯ ಸದ್ಗುಣಗಳೆಲ್ಲ ಮಾನವನ ವಿಜ್ಞಾನಮಯಕೋಶದ ವಿಕಾಸದ ಪರಿಣಾಮಗಳಾಗಿವೆ. ವಿಜ್ಞಾನಮಯಕೋಶದ ಸಂಪೂರ್ಣವಿಕಾಸವೇ ಮಾನವನನ್ನು ಆನಂದಮಯಕೋಶಕ್ಕೆ ಕರೆದೊಯ್ದು ದೇವನನ್ನಾಗಿ ಮಾಡುತ್ತದೆ.

" ಮಾನವವಿಕಾಸದ ಚತುರ್ಥರಂಗಭೂಮಿಯು ಉಪನಿಷತ್ತಿನ ವಿಜ್ಞಾನಮಯಕೋಶದಲ್ಲಿದೆ. "

" ವಿಜ್ಞಾನಂ ಬ್ರಹ್ಮೇತಿ ವ್ಯಜಾನಾತ್ " (ತೈತ್ತಿರೀಯ ಉಪನಿಷತ್ತು.)

ಜಡದಿಂದ ಬಿಡುಗಡೆಹೊಂದಿದ ಚೇತನವು ಮುಂಗತನದಲ್ಲಿ ಬಹಳ ಕಾಲ ರಮಿಸಿ, ಕೊನೆಗೆ ಮಾನವತೆಯನ್ನು ಪಡೆದ ಅದ್ಭುತ ರನ್ಯತೆಯನ್ನು " ಡಾರ್ವಿನ್ " ನಮಗೆ ಹೇಳಿದ್ದಾನೆ. ಚೇತನದ ಈ ವಿಕಾಸಕ್ರಮವು ಇಲ್ಲಿಗೇ ನಿಲ್ಲುವುದೆ, ಅಥವಾ ಇನ್ನೂ ಮುಂದುವರಿಯುವುದೇ?—ಎಂಬುದು ಇಂದಿನ ವಿಜ್ಞಾನಿಗಳ ತಲೆತಿನ್ನುತ್ತಿರುವ ಸಮಸ್ಯೆಯಾಗಿದೆ. ಜಡದ ಸೂಕ್ಷ್ಮಾತಿಸೂಕ್ಷ್ಮ ವಿಭಜನೆಯಿಂದ ಜಡದ " ಜಡತ್ವ "ವೇ ಮಾಯವಾಗಿ, ಸ್ಥಳ ಮತ್ತು ಕಾಲಗಳು (Space–Time) ಒಂದೇ ಎನ್ನುವಂತಹ ಸಂದಿಗ್ಧ ಮಟ್ಟಕ್ಕೆ ನಾವು ಬಂದು ಮುಟ್ಟಿದ್ದೇವೆ. ಇನ್ನು ನಮ್ಮ ಈ ವೈಜ್ಞಾನಿಕ ದೃಷ್ಟಿಯು ಈಗಿನದಕ್ಕಿಂತಲೂ ವಿಶಾಲವಾದರೂ ಆಗಬೇಕು. ಇಲ್ಲವೆ ನೇರವಾಗಿ ಒಂದು ಸೂಕ್ಷ್ಮದೃಷ್ಟಿಯನ್ನಾದರೂ ಪಡೆಯಬೇಕು; ಎನ್ನುವ ಕಾಲ ಬಂದಿದೆ. ಇಲ್ಲದಿದ್ದರೆ ಮಾನವಜೀವನದ ಅಸಹ್ಯಸಮಸ್ಯೆಗಳಿಗೆ ಅರ್ಥವೇ ಇಲ್ಲದಂತಾಗುತ್ತದೆ. ಅದಕ್ಕೆ ಸ್ವತಂತ್ರ ಪ್ರಯತ್ನವು ಅವಶ್ಯವೇ ಸರಿ. ಆದರೆ ಈ ನಮ್ಮ ಪ್ರಯತ್ನಕ್ಕೆ ಪುರಾತನಜೀವನ ಪ್ರಪಂಚದಲ್ಲಿ, ಏನಾದರೂ ಸಹಾಯಕ ಅಂಶಗಳಿವೆಯೇ ಎಂಬುದನ್ನು ವಿಚಾರಿಸಬೇಕು:

ಇಂದಿನ ವಿಕಾಸವಾದಿಗಳ ತಲೆತಿನ್ನುತ್ತಿರುವ ಸಮಸ್ಯೆಗಳೆಂದರೆ ಮೂರು ಎಂದು ಹೇಳಬಹುದು.

(೧) ನ್ಯಾಯ ಅಥವಾ ನೈತಿಕ ದೃಷ್ಟಿ.
(೨) ಸೌಂದರ್ಯದೃಷ್ಟಿ ಅಥವಾ ಕಾವ್ಯದೃಷ್ಟಿ.
(೩) ನಿಷ್ಕಾಮ ಮತ್ತು ನಿರಂಕುಶ ಪ್ರೇಮದೃಷ್ಟಿ.

ಈ ಮೂರರ ಮೂಲವೆಲ್ಲಿದೆ? ಪಶುವಿನಿಂದ ಬೆಳೆದು ಬಂದ ಮಾನವನಲ್ಲಿ ಈ ವಿಲಕ್ಷಣ ದೃಷ್ಟಿತ್ರಯಗಳೆಲ್ಲಿಂದ ಬಂದುವು?

ಜೀವಿಯಲ್ಲಿ ಹಸಿವು–ತೃಷೆಗಳು, ಅವನಲ್ಲಿ ಜಡದಿಂದ ತಾನು ಭಿನ್ನನೆಂಬ ಭಾವನೆಯನ್ನು ಹುಟ್ಟಿಸಿದುವು. 'ಹಸಿವಾದಾಗ ತಿನ್ನಬೇಕು' ಎಂಬ ಜೀವನಪ್ರವೃತ್ತಿಯೇ (Life impulse) ಆತನನ್ನು ಸುತ್ತುಮುತ್ತಲೂ ನೋಡಹಚ್ಚಿತು. ಕಲ್ಲು–ಮಣ್ಣಿನ ಪ್ರಪಂಚದಲ್ಲಿ ಈ ಯಾನ ಪ್ರವೃತ್ತಿಯೂ ಇರುವುದಿಲ್ಲ. ಇದನ್ನು ಉಪನಿಷತ್ಕಾರರು " ಅನ್ನಮಯಕೋಶ " ಎಂದು ಕರೆದರು. ಅನಂತರ ಬಂದ ಹಸಿವು–ತೃಷೆಯ ನೂತನಪ್ರಪಂಚವನ್ನು " ಪ್ರಾಣಮಯಕೋಶ " ಎಂದು ಕರೆದಿದ್ದಾರೆ. ಈ ಪ್ರಾಣಮಯಕೋಶದಲ್ಲಿದ್ದಾಗ ಜೀವಿಯು ತನ್ನ ಹಸಿವು–ತೃಷೆಗಳನ್ನು ತಣಿಸಲು ತಾನೊಬ್ಬನೇ ಪ್ರಯತ್ನಿಸದೆ ಸುತ್ತಲಿನ ತನ್ನ ಜಾತಿಯವರೊಡನೆ ಒಂದುಗೂಡಿ ಪ್ರಯತ್ನಿಸುತ್ತಾನೆ. ಇಲ್ಲಿ ನಿಜವಾಗಿಯೂ ಎರಡು ಹೊಸತತ್ತ್ವಗಳು ತಲೆದೋರುತ್ತವೆ.

(೧) ತನ್ನ ಜೀವನ ಕ್ಷೇತ್ರವನ್ನು ವಿಸ್ತರಿಸುವುದು.

(೨) ಇಲ್ಲಿಯವರೆಗೆ ಸ್ವಾಭಾವಿಕವಾಗಿರದ ಹೊರಗಿನ ನಿಯಮಗಳಿಗೆ ಬಂಧಿತವಾಗಲು ಒಪ್ಪುವುದು.

ಮೊದಲನೇಯದರಲ್ಲಿ ಅವನು ಹೊಸ ಹಸಿವು–ತೃಷೆಗಳನ್ನು ಹುಟ್ಟಿಸಿಕೊಳ್ಳಲು ಪ್ರಾರಂಭಿಸಿದರೆ, ಎರಡನೆಯದರಲ್ಲಿ ತನ್ನ ಕೆಲವು ಆಶೆ–ಆಕಾಂಕ್ಷೆಗಳನ್ನೂ ತ್ಯಾಗಮಾಡಲು ಒಪ್ಪುತ್ತಾನೆ. ಈಗ ನಾಲ್ಕು ಜನರ ಗುಂಪುಗಳಲ್ಲಿ ಇರುವುದರಿಂದ, ಇಲ್ಲಿಯವರೆಗೆ ತಾನೊಬ್ಬನೇ ಕೊಲ್ಲಲಾರದ ಪ್ರಾಣಿಗಳನ್ನು ಇತರರ ಸಹಾಯದಿಂದ ಕೊಂದು ತಿನ್ನಲು ಸಮರ್ಥನಾದನು. ಅದೇ ವೇಳೆಯಲ್ಲಿ ತನ್ನ ಸ್ವಂತ ಶಕ್ತಿಯಿಂದ ಗಳಿಸಿದ್ದನ್ನು ಇತರರಲ್ಲಿಯೂ ಹಂಚಲು ಸಿದ್ಧನಾದನು. ಹೀಗೆ ಇಲ್ಲಿ ಸ್ವಾರ್ಥ ಹಾಗೂ ಸ್ವಾರ್ಥತ್ಯಾಗದ ಎರಡು ಪರಸ್ಪರ ವಿರುದ್ಧ ಅಂಶಗಳು ಸಮನ್ವಯಗೊಳ್ಳಲು ತೊಡಗಿದುವು.

ಇದರ ಮುಂದೆ ಆ ಸಣ್ಣಗುಂಪು ವಿಸ್ತಾರವಾಗಲು ತೊಡಗಿದಾಗ, ವ್ಯಕ್ತಿಯ ಆಶೆ–ಆಕಾಂಕ್ಷೆಗಳ ಮೇಲೆ ಬಹಳೇ ಆಘಾತ ಬರತೊಡಗಿತು. ಆಗ ವ್ಯಷ್ಟಿ ಮತ್ತು ಸಮಷ್ಟಿಗಳಲ್ಲಿ ದ್ವಂದ್ವವು ಪ್ರಾರಂಭವಾಯಿತು. ಯಾವುದು ಹೆಚ್ಚು? ವ್ಯಷ್ಟಿಯೇ—ಸಮಷ್ಟಿಯೆ? ಇಲ್ಲಿ ಉತ್ತರ–

ದಕ್ಷಿಣಧ್ರುವಗಳಂತೆ ವಿಪರೀತ ವಿರೋಧಿಗಳಾದ ಎರಡು ತತ್ತ್ವ ಪ್ರಣಾಲಿಗಳು ಬೆಳೆದು ಬಂದುವು.

(೧) ವ್ಯಷ್ಟಿಯ ಹಿತಕ್ಕಿಂತ ಸಮಷ್ಟಿಯ ಹಿತವೇ ದೊಡ್ಡದು. ಪ್ರಸಂಗ ಬಂದರೆ ವ್ಯಷ್ಟಿಯ ಆಹುತಿಯನ್ನು ಕೊಟ್ಟಾದರೂ ಸಮಷ್ಟಿಯನ್ನು ಪೋಷಿಸಬೇಕು.

(೨) ವ್ಯಷ್ಟಿಯಿಲ್ಲದೆ ಸಮಷ್ಟಿಯಿಲ್ಲ. ವ್ಯಷ್ಟಿಯ ಹಿತ-ಸಂವರ್ಧನೆಗಾಗಿಯೇ ಸಮಷ್ಟಿಯ ಕಲ್ಪನೆ ಹುಟ್ಟಿದ್ದು. ಹೀಗಿರುವಾಗ ವ್ಯಷ್ಟಿಯನ್ನು ಬಲಿಕೊಟ್ಟ ಸಮಷ್ಟಿಗೆ ಬೇರೆ ಅಸ್ತಿತ್ವವುಂಟೆ?

ಈ ಎರಡೂ ತತ್ತ್ವಪ್ರಣಾಲಿಗಳು ಒಂದೊಂದು ಕಾಲದಲ್ಲಿ ವಿಪರೀತ ಮಟ್ಟಕ್ಕೆ ಹೋಗುತ್ತವೆ. ಮೊದಲಿನ ತತ್ತ್ವಪ್ರಣಾಲಿಯಿಂದ ಅಸಂಖ್ಯ ಸಾಮಾಜಿಕ ಕಟ್ಟಳೆಗಳೂ, ಧಾರ್ಮಿಕ ನಿಯಮ-ನಿಬಂಧನೆಗಳೂ ಹುಟ್ಟಿದುವು. ಅವುಗಳ ಹಿಂಸೆಯನ್ನು ಸಹಿಸದೆ ತಲೆ ಕೆಟ್ಟ ವ್ಯಷ್ಟಿಯು ಸಮಷ್ಟಿಯ ವಿರುದ್ಧ ದೊಂಬೆಯೆದ್ದು ಎಲ್ಲೆಲ್ಲಿಯೂ ಅನಾಯಕತೆಯನ್ನುಂಟುಮಾಡುತ್ತಾನೆ. ಹೀಗಾಗಿ ಒಂದು ಕಡೆಗೆ ಅತಿನಿಯಮ! ಇನ್ನೊಂದು ಕಡೆಗೆ ನಿರಂಕುಶತೆ!! ಈ ವಿಷ-ಚಕ್ರದಿಂದ ಬಿಡುಗಡೆ ಎಲ್ಲಿದೆ? ಇಲ್ಲಿ ಬಿಡುಗಡೆಯ ಸುವರ್ಣ ಮಾಧ್ಯಮವನ್ನು ಹುಡುಕಲೆಂದೇ ಮತ್ತೆ ಮೂರು ಹೊಸ ಶಕ್ತಿಗಳು ಮಾನವನಲ್ಲಿದ್ದುದನ್ನು ಮನುಷ್ಯನು ಗುರುತಿಸಿದನು. ಅವೇ ನೀಲೆ ಹೇಳಿದ (೧) ನ್ಯಾಯ ಅಥವಾ ನೈತಿಕವೃಷ್ಟಿ. (೨) ಸೌಂದರ್ಯವೃಷ್ಟಿ ಇಲ್ಲವೆ ಕಾವ್ಯದೃಷ್ಟಿ. (೩) ನಿಷ್ಕಾಮವಾದ ನಿರಂಕುಶ ಪ್ರೇಮವೃಷ್ಟಿ.

ಪ್ರಾರಂಭದಲ್ಲಿ ತನ್ನ ವೈಯಕ್ತಿಕ ಸ್ವಾರ್ಥವನ್ನು ಸಾಧಿಸಲು ಸ್ವಲ್ಪಮಟ್ಟಿಗೆ ಸ್ವಾರ್ಥತ್ಯಾಗ ಮಾಡಲು ಮನುಷ್ಯನು ಸಿದ್ಧನಾಗಿದ್ದ; ಆದರೆ ಈಗ ಅವನಲ್ಲಿ ಇನ್ನೊಂದು ಹೊಸದೃಷ್ಟಿ ಮೂಡಿತು. ಇಲ್ಲಿಯವರೆಗೆ ಆತನು ತನ್ನ ಜೀವನದ ಸ್ವಾಭಾವಿಕಪ್ರವೃತ್ತಿಗಳ ಒತ್ತಡಕ್ಕೊಳಗಾಗಿ ನಾಲ್ಕು ಜನರೊಡನೆ ಒಂದಾಗಿದ್ದ. ಆವರೆ ಈಗ ಆತನು ತನ್ನ ಕೃತಿಗಳಿಗೆ ಒಂದು "ಉದ್ದೇಶ" ಅಥವಾ "ಗುರಿ"ಯನ್ನು ನಿರ್ಧರಿಸುವ ತಿಳುವಳಿಕೆಗೆ ಬಂದ. ಯಾವಾಗ ಮನುಷ್ಯನು ತನ್ನ ಜೀವನಕ್ಕೆ ಹೀಗೆ ಒಂದು ಉದ್ದೇಶವನ್ನು ಕಲ್ಪಿಸತೊಡಗಿದನೋ, ಆಗಲೇ ಅವನಲ್ಲಿ ನ್ಯಾಯಾನ್ಯಾಯದ ವಿವೇಕದೃಷ್ಟಿ ಮೂಡಿತು. ಇಲ್ಲಿ ನಿಜವಾಗಿಯೂ ವ್ಯಕ್ತಿಗೇ ಹೆಚ್ಚು ಪ್ರಾಧಾನ್ಯ ಬಂದಿತ್ತೆನ್ನಬಹುದು. ಯಾಕೆಂದರೆ ವ್ಯಕ್ತಿಯಲ್ಲಿ ಈ ನ್ಯಾಯಾನ್ಯಾಯದ ದೃಷ್ಟಿ ಸೂಕ್ಷ್ಮವಾಗಿರುವಷ್ಟು ಜನಜಂಗುಳಿಯಲ್ಲಿ ಸೂಕ್ಷ್ಮವಿರುವುದಿಲ್ಲ. ವ್ಯಕ್ತಿಯು ಸ್ವತಂತ್ರವಾಗಿ, ಶಾಂತವಾಗಿ ವಿವೇಚಿಸಿ ಹೊಸ ಹೊಸ ಬೆಳಕನ್ನು ಕಂಡಂತೆ, ಒಂದು ಇಡೀ ಸಮಾಜವು ಅಷ್ಟು ತೀವ್ರಗತಿಯಿಂದ, ಆ ತಾಳ್ಮೆಯಿಂದ ಆ ಪ್ರಕಾಶವನ್ನು ಕಾಣಲಾರದು. ಇದರಿಂದ ವ್ಯಕ್ತಿಯು ಸತ್ಯದ ಕೆಲವು ಮಾನದಂಡಗಳನ್ನು ಕಂಡುಹಿಡಿದು ಅವುಗಳನ್ನು ಸಮಾಜದ ಮುಂದೆ ಇಡುತ್ತಾನೆ. ಆ ಮಾನದಂಡಗಳಿಗನುಸಾರವಾಗಿ ಯಾವಾಗ ವ್ಯಕ್ತಿಯು ಸ್ವಾರ್ಥತ್ಯಾಗ ಮಾಡಬೇಕು — ಯಾವಾಗ ಮಾಡಬಾರದೆಂಬುದನ್ನು ನಿರ್ಧರಿಸಲು ಸಮಾಜವು ಸಿದ್ಧವಾಗುತ್ತದೆ. ಮೊದಲಿನ ಬಂಧನಕ್ಕೂ, ಈ ಹೊಸ ವಿವೇಕದೃಷ್ಟಿಗೂ ಅಂತರವಿದೆ ಇಲ್ಲಿ ವ್ಯಕ್ತಿಯು ಸತ್ಯವನ್ನು ಪ್ರೀತಿಸುತ್ತಾನೆ. ಆದರಿಂದ ಆತನ ತ್ಯಾಗಕ್ಕೆ ಸಿದ್ಧನಾಗುತ್ತಾನೆ. ಮೊದಲು ದೊಡ್ಡ ಸ್ವಾರ್ಥವು ಸಣ್ಣ ಸ್ವಾರ್ಥಕ್ಕೆ ಕಾರಣವಾಗುತ್ತಿತ್ತು. ಈಗ ಸತ್ಯದ ಪ್ರೀತಿಯು ತ್ಯಾಗಕ್ಕೆ ಕಾರಣವಾಗುತ್ತದೆ. ಆದರೆ ಇಲ್ಲಿರುವ ಮುಖ್ಯ ಕೊರತೆಯೆಂದರೆ ಇಂತಹದೇ ಸತ್ಯವೆಂದು ನಿರ್ಧರಿಸಲು ನಿಶ್ಚಿತಸಾಧನವಿಲ್ಲದಿರುವುದು.

ಎರಡನೆಯದು ಕಾವ್ಯದೃಷ್ಟಿ. ಇದು ಜೀವನದಲ್ಲಿ ಸತ್ಯವನ್ನು ಸೌಂದರ್ಯದ ಮುಖಾಂತರ ಗುರುತಿಸುತ್ತದೆ. ದಾನ-ಧರ್ಮಗಳಿಗಾಗಿ ಒಂದು ಕಾಸನ್ನೂ ಕೊಡದ ಜೀವನು ತನ್ನ ಮದುವೆಯ ಮೆರವಣಿಗೆಗಾಗಿ ಸಾವಿರಾರು ರೂಪಾಯಿ ಚೆಲ್ಲುತ್ತಾನೆ. ಜೀವನದಲ್ಲಿ ಚೆಲುವಿನ ಸ್ಥಾನಗಳನ್ನು ಕಾಣಲು ದೇಶ-ದೇಶಗಳನ್ನು ಸುತ್ತುವ ಮಹನೀಯರಿಗೆ ಕೊರತೆಯೇನೂ ಇಲ್ಲ. ಈ ಚೆಲುವಿನ ದೃಷ್ಟಿಯೇ ಅರಳಿ ನವ ಜೀವನದಲ್ಲಿ ಒಂದು ಕಾವ್ಯಸಂಸ್ಕಾರವನ್ನುಂಟು ಮಾಡಲು ಕಾರಣವಾಗುತ್ತದೆ. ದೇವರು–ಧರ್ಮಗಳನ್ನು ಪ್ರೀತಿಗೊಳಿಸಲು ಶುಚಿಯಾಗಿರದವನು, ತನ್ನ ಈ ಸೌಂದರ್ಯದೃಷ್ಟಿಯ ತೃಪ್ತಿಗಾಗಿಯಾದರೂ ನಿರ್ಮಲನಾಗಿರಲು ಪ್ರಯತ್ನಿಸುತ್ತಾನೆ. ಆದರೆ ಸೌಂದರ್ಯವು ಸತ್ಯವನ್ನು ಗುರುತಿಸಲು ನಿಜವಾದ ಸಾಧನೆಯಾಗಬಲ್ಲದೇ ಹೇಗೆ? ವ್ಯವಹಾರಿಕ ಸೌಂದರ್ಯಕ್ಕೆಂತ, ಸತ್ಯವನ್ನು ಪ್ರತಿನಿಧೀಕರಿಸುವ ಸೌಂದರ್ಯವು ಬೇರೆಯಾಗಿರಬಹುದೇ? 'ಸತ್ಯವೇ ಸೌಂದರ್ಯ, ಸೌಂದರ್ಯವೇ ಸತ್ಯ' ಎಂದು ಸಾರಿದ 'ಕೀಟ್ಸ್' ಮಹಾಕವಿಯು "ಪ್ರತಿಭಾನ್ವಿತನ ಕಲ್ಪನಾದೃಷ್ಟಿಗೆ ಸುಂದರವಾಗಿ ಕಂಡದ್ದೇ ಸತ್ಯ" ಎಂದು ಹೇಳಿದ್ದಾನೆ. ಇಲ್ಲಿ ಈ ಕವಿಯ "ಕಲ್ಪನೆ" ಎಂಬುದು ಸಾಮಾನ್ಯರ ಅಳವು ಮೀರಿದ "ಅಂತಃಪ್ರೇರಣೆಯ" ಪ್ರಾಕಾರವನ್ನೆ ತನ್ನ ಚುಂಚು ಚಾಚುತ್ತದೆ. ಇಲ್ಲಿ ಪುನಃ 'ಸತ್ಯವನ್ನೇ ಸುಂದರವಾಗಿ ಕಾಣುವಷ್ಟು ಕಲ್ಪನಾಶಕ್ತಿ ಶುದ್ಧವಿದೆಯೇ?' ಎಂಬ ಪ್ರಶ್ನೆ ಏಳುತ್ತದೆ.

ಇನ್ನು ಕೊನೆಯದು "ನಿಷ್ಕಾಮವಾದ ನಿರಂಕುಶ ಪ್ರೇಮವೃಷ್ಟಿ" ಇಲ್ಲಿ ಪ್ರೇಮವೆಂದೊಡನೆ ಗಂಡು–ಹೆಣ್ಣಿನ ಪ್ರೇಮವೆಂದೇ ಅರ್ಥ ಹುಟ್ಟ

ಹಳ್ಳಿ–ಪಟ್ಟಣಗಳಲ್ಲಿ, ಬೀದಿ–ಬೀದಿಗಳಲ್ಲಿ ಪ್ರಚಾರವಾಗಬೇಕಾಗಿದ್ದರೆ,

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್ ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ

ಪ್ರಕಾಗಿಲ್ಲ. ಕೆಲವೊಂದು ವಿಶಾತ್ಮರಲ್ಲಿ ಇಡೀ ಪ್ರಪಂಚದ ಬಗೆಗೆ ಉಪಕಾರವಾದ ಅನಿಮಿತ್ತ ಪ್ರೇಮಭಾವ ತುಂಬಿರುತ್ತದೆ. ಆಧುನಿಕ ಪ್ರಪಂಚದಲ್ಲಿ ಗಾಂಧೀಜಿ, ನೆಹರು, ವಿನೋಬಾ ಭಾವೆಯವರ ಹೆಸರುಗಳನ್ನು ಮೇಲಿತ್ತಿ ತೋರಿಸಬಹುದು. ಇಂತಹ ವ್ಯಕ್ತಿಗಳು ಜನಹಿತ ಸಾಧಿಸಲು ತಮ್ಮ ಆತ್ಮಾಹುತಿಯನ್ನು ಕೊಡಲಿಕ್ಕೂ ಸಿದ್ಧರಿರುತ್ತಾರೆ. ಈ ತ್ಯಾಗದ ಪ್ರವೃತ್ತಿಯು ಸಾಮಾನ್ಯರಲ್ಲಿ ಕಂಡುಬರುವ ಸ್ವಾಭಾವಿಕ ಜೀವನ ಪ್ರವೃತ್ತಿ (Life-Impulse)ಯಲ್ಲ; ತನ್ನ ಕೊಲೆಯಾಗುವುದನ್ನು ಕಂಡು ರೊಚ್ಚಿಗೆದ್ದು ತನ್ನ ಜೀವನವನ್ನು ಕಳೆದುಕೊಳ್ಳಲು ಸಿದ್ಧನಾಗುವ ಸಾಮಾನ್ಯ ಮಾನವನ ಉದ್ರೇಕವೂ ಇದಲ್ಲ. ಇಲ್ಲಿ ತಿಳಿವಳಿಕೆಯಿದೆ, ನಿಶ್ಚಲತೆಯಿದೆ ಆದರೂ ವ್ಯಕ್ತಿಯು ತನ್ನ ಬಲಿದಾನ ಕೊಡಲು ಸಿದ್ಧನಾಗುತ್ತಾನೆ.

ಏನು? ಈ ಪ್ರವೃತ್ತಿಯ ಮೂಲನೆಲ್ಲಿದೆ? ಇದು ಇಂದಿನ ಮನಃಶಾಸ್ತ್ರಜ್ಞರಿಗೊಂದು ಗೂಢ ಆಹ್ವಾನವಾಗಿದೆ. ಇದೊಂದು ಉಚ್ಚತಮ ಸ್ವಾರ್ಥ (Enlightened Selfishness) ವೆಂದು ಕರೆದರೂ ಸರಿ! ಧಾರ್ಮಿಕ ಭ್ರಮೆ, ಅಥವಾ ನೈತಿಕ ಸಂಪ್ರದಾಯದ ಬಲವತ್ತರ ಪರಿಣಾಮವೆಂದು ತಿಳಿಯಬಹುದು. ಆದರೆ ಇಂತಹ ಊಹಾತ್ಮಕ ಅಪೂರ್ಣ ವಿವರಣೆಯು ಸಮಾಧಾನಕರವಾದ ಉತ್ತರವಾಗಲಾರದು. ಇದು ನಮ್ಮ ಜೀವನದೃಷ್ಟಿಯನ್ನು ವಿಸ್ತಾರಗೊಳಿಸಲು ಒಪ್ಪದುದರ ಪರಿಣಾಮವೆನ್ನಬಹುದು.

ಮೇಲೆ ವಿವರಿಸಿದ ಮೂರು ದೃಷ್ಟಿಗಳು ಮಾತ್ರವೇ ಮಾನವನು ಕಂಡುಕೊಂಡ ಅತ್ಯುಚ್ಚ ಆದರ್ಶಗಳಲ್ಲ; ಅವು ಶ್ರೇಷ್ಠವೆಂಬುದರಲ್ಲಿ ಸಂಶಯವಿಲ್ಲ. ಆದರೆ ಈ ಮೂರರಲ್ಲಿಯೂ ಸಮನ್ವಯ ಸಾಧಿಸುವುದು ಅತ್ಯಂತ ಕಠಿಣವಾಗಿದೆ. ಇದಲ್ಲದೆ, ಸತ್ಯವೆಂದು ಕಂಡದ್ದನ್ನು ಕಾರ್ಯಗತಮಾಡುವುದೊಂದು ಮಹಾಸಮಸ್ಯೆಯಾಗಿದೆ ಯಾವ ತತ್ತ್ವವನ್ನು ಅರಿಯುವುದರಿಂದ ವ್ಯಷ್ಟಿ-ಸಮಷ್ಟಿಗಳಲ್ಲಿಯೂ ಪ್ರಪಂಚದ ಇತರ ವಿಸಂಖ್ಯದ್ವಂದ್ವಗಳಲ್ಲಿಯೂ ಸಾಮರಸ್ಯವನ್ನು ಸಾಧಿಸಲು ಶಕ್ಯವಾಗುವುದು?

ಯಾವ ತತ್ತ್ವದ ಅರಿವಿನಲ್ಲಿಯೇ ಕ್ರಿಯಾಶಕ್ತಿಯು ನೆಲಸಿದೆ? ಜ್ಞಾನವು ಅಸಹಾಯ ಪೂರ್ಣವಾಗಿದೆ? ಜೀವನವನ್ನು ಪೋಷಿಸಿ ಬೆಳೆಸಲು ಅನುಕೂಲವಾಗಿಸುವ ತತ್ತ್ವಯಾವುದು? ಇದು ಇಂದಿನ ಸಮಸ್ಯೆ.

ನ್ಯಾಯದೃಷ್ಟಿಯು ಶತ್ರು-ಮಿತ್ರರಲ್ಲಿ ಭೇದವೆಣಿಸುವುದಿಲ್ಲ. ಕಾವ್ಯದೃಷ್ಟಿಯು ರಾಮ-ರಾವಣರಲ್ಲಿ ಸಮಾನವಾದ ಆಸಕ್ತಿಯನ್ನು ತೋರಿಸುತ್ತದೆ. ಪ್ರೀತಿಯು ನಿರಂತರವೂ ನಿರಂಕುಶವಾಗಿರುತ್ತದೆ. ದೇಶದ ಕಾನೂನು ಕೊಲೆಗಾರನಿಗೆ ಶಿಕ್ಷೆ ವಿಧಿಸಿದರೆ, ಗಾಂಧೀಜಿ ಕ್ಷಮಿಸಲು ಹೇಳುತ್ತಾರೆ. ರೋಮಿಯೋ ಜ್ಯೂಲಿಯಟರ ಪ್ರೇಮವು ಮನೆತನದ ವೈರವನ್ನು ವಿರೋಧಿಸಿತು. ಸತ್ಯ, ಸೌಂದರ್ಯ ಮತ್ತು ಪ್ರೇಮಗಳಲ್ಲಿ ಯಾಕೆ ಈ ತರದ ಅಂತರ? ಯಾವ ತತ್ತ್ವದಲ್ಲಿ ಈ ಮೂರರ ಸಮನ್ವಯವಾದೀತು?

ಇಲ್ಲಿಯೇ ಉಪನಿಷತ್ತಿನ "ವಿಜ್ಞಾನಮಯಕೋಶ"ದ ಬೆಳಕು ಮಾನವನಿಗೆ ಬೇಕಾಗುವುದು. ಬುದ್ಧಿ, ಹೃದಯ, ರಸದೃಷ್ಟಿಗಳೆಲ್ಲಾ "ಮನೋಮಯಕೋಶ"ಕ್ಕೆ ಸಂಬಂಧಿಸಿದುವುಗಳು. ಮಾನವನ ಎಲ್ಲ ಸಮಸ್ಯೆಗಳೂ ಇಲ್ಲಿಯೇ ಬಗೆಹರಿಯುವುದಿಲ್ಲ. ಅವನು ಈ ಮನೋಮಯಕೋಶವಾಚೆಗಿನ ವಿಜ್ಞಾನಮಯಕೋಶದಲ್ಲಿ ಇನ್ನು ಮೇಲೆ ಪ್ರತಿಷ್ಠಿತನಾಗಬೇಕಾಗಿದೆಯೆಂದು ಶ್ರೀ ಅರವಿಂದರು ಸಾರುತ್ತಾರೆ. ಇಂದು ಮಾನವನಲ್ಲಿ ಅಭಿವ್ಯಕ್ತವಾದ ಸಮಸ್ತ ಸದ್ಗುಣಗಳೂ ಈ ವಿಜ್ಞಾನಮಯಕೋಶದ ಮಹಾಪ್ರಕಾಶದ ಕಿರಣಗಳೇ ಎನ್ನಬಹುದು ವ್ಯಕ್ತಿ, ಸಮಾಜ, ವಿಶ್ವಗಳ ಹಿತದ ಸಮನ್ವಯ, ಬುದ್ಧಿ, ಹೃದಯಗಳ ಸಮನ್ವಯಗಳನ್ನು ಸಾಧಿಸಬೇಕಾದರೆ ಈ ಚತುರ್ಥರಂಗದಲ್ಲಿಯ ಚೈತ್ಯಪುರುಷನನ್ನು (Psychic Being) ಜಾಗ್ರತಿಗೊಳಿಸಬೇಕೆಂಬುದು ಶ್ರೀ ಅರವಿಂದರ ದರ್ಶನದ ಸಾರವಾಗಿದೆ. ಈ ಚೈತ್ಯಪುರುಷನೆಂದರೆ ಪೌರಾಣಿಕ ಸಾಂಕೇತಿಕ ಭಾಷೆಯ ಪ್ರಾಣದೇವರೆಂದೂ, ಆಧುನಿಕ ವೈಜ್ಞಾನಿಕ ಭಾಷೆಯಲ್ಲಿ "ಋತು-ಚಿತ್" (Truth-consciousness) ಎಂದೂ ಹೇಳಬಹುದು. ಇದರ ಮುಖ್ಯ ಲಕ್ಷಣವೆಂದರೆ ಸತ್ಯದ ನೇರವಾದ ಅನುಭವ! ವಿಶ್ವವು ನಿರ್ಜೀವ ನಿಯಮಗಳ ಕಂತೆಯಲ್ಲ! ಜೀವವು ಆ ಬಂಧನದಲ್ಲಿ ಸಿಲುಕಿದ ಅಸಹಾಯ ಜೀವಿಯಲ್ಲ. ಇವೆರಡರಲ್ಲಿಯೂ ಏಕಕಾಲಕ್ಕೆ ಅಪರಿಮಿತ ಸ್ವಾತಂತ್ರ್ಯವೂ ಸಾಮರಸ್ಯವೂ ಸಾಧ್ಯವಾಗುವಂತೆ ಮಾಡಬಲ್ಲ ದಿವ್ಯ ತತ್ತ್ವವಿದೆ ಅದೇ ಪರಮಾತ್ಮ ತತ್ತ್ವ. ವ್ಯಷ್ಟಿಯಲ್ಲಿಯ ಆತ್ಮ, ಸಮಷ್ಟಿಯಲ್ಲಿಯ ಪರಮಾತ್ಮನನ್ನು ಗುರುತಿಸಲು ಸಹಾಯಕವಾಗುವುದೇ ಋತ-ಚಿತ್ ಅಥವಾ ಚೈತ್ಯಪುರುಷ.

ಇಂದು ಸುಸಂಸ್ಕೃತ ಜನರಲ್ಲಿ ನೈತಿಕದೃಷ್ಟಿಯು ಸಾಮಾನ್ಯವಾಗಿರುವಂತೆ ಇನ್ನು ಮುಂದೆ ಮಾನವನಲ್ಲಿ ಈ ಪರಾಪ್ರಜ್ಞೆಯೂ ಸಾಮಾನ್ಯವಾಗುವುದೆಂದು ಶ್ರೀ ಅರವಿಂದರು ಹೇಳುತ್ತಾರೆ. ಜೀವವಿಕಾಸ ಕ್ರಮವನ್ನು ಸೂಕ್ಷ್ಮವಾಗಿ ಅಭ್ಯಸಿಸುತ್ತಿರುವ ವಿಜ್ಞಾನಿಗಳಾದರೂ ಅನಿವಾರ್ಯವಾಗಿ ಇದೇ ನಿರ್ಣಯಕ್ಕೆ ಬರತೊಡಗಿದ್ದಾರೆ. ಶಾಸ್ತಂತಹ ಕಲಾಕಾರನು ಅದೇ ಕನಸು ಕಾಣುತ್ತಿದ್ದಾನೆ.

ಈ ಚೈತ್ಯಪುರುಷನ ಜಾಗ್ರತಿಯಿಂದಾಗುವ ಇನ್ನೊಂದು ಮಹತ್ತ್ವದ ಪರಿಣಾಮವೆಂದರೆ ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿಗಳ ಸಂಯೋಗ. ಇದು ಅತ್ಯಂತ ಮಹತ್ತ್ವದ್ದು. ನ್ಯಾಯವೆಂಬುದು ಗೊತ್ತಿದ್ದು ಸ್ವಾಭಾವಿಕಪ್ರವೃತ್ತಿಗಳಿಗೆ ಬಲಿ ಬಿದ್ದು ಅಸಹಾಯರಾಗುವ ಪ್ರಸಂಗ ಆಗ ಬರುವುದಿಲ್ಲ. ಅಂದರೆ ಅಂಥ ಸಿದ್ಧಿಯನ್ನು ಸಾಧಿಸಿದ ಮಾನವನಲ್ಲಿ ಸತ್ಯವೇ ಜೀವನವಾಗಿ ಬಿಡುತ್ತದೆ. ತಿಳಿದದ್ದೊಂದು ಮಾಡುವುದೊಂದು ಎಂಬಂತಹ ವಿಸಂಗತಿ ಅಲ್ಲಿ ಇರುವುದಿಲ್ಲ. ಅಲ್ಲಿ ಜ್ಞಾನ, ಧರ್ಮ, ಪ್ರೇಮ, ಸೌಂದರ್ಯಗಳು ಒಂದಾಗಿರುತ್ತವೆ. ಅಂತಹ ಮಹಾತ್ಮರನ್ನು ಕುರಿತೇ ಮುಂಡಕೋಪನಿಷತ್ತಿನಲ್ಲಿ ಹೀಗೆ ಹೇಳಿದ್ದಾರೆ:—

"ಆತ್ಮಕ್ರೀಡಃ ಆತ್ಮರತಿಃ ಕ್ರಿಯಾವಾನೇಷಃ ಬ್ರಹ್ಮವಿದಾಂ ವರಿಷ್ಠಃ" ಶ್ರೇಷ್ಠವಾದ ಬ್ರಹ್ಮಜ್ಞಾನಿಯು ಕ್ರಿಯಾವಂತನಾಗಿದ್ದು

ಕೊಂಡೇ ಆತ್ಮಸುಖದಲ್ಲಿ ತಲ್ಲೀನನಾಗಿ, ಅಲ್ಲಿಯೇ, ಅಡುತ್ತಿರುತ್ತಾನೆ. ಅವನ ಕ್ರಿಯಾ ಮತ್ತು ಜ್ಞಾನಗಳು ಹಸುಗೂಸು ತಾಯಿಯ ಮೊಲೆ ಹಾಲು ಕುಡಿಯಲು ಅರಿತುಕೊಂಡಂತೆ ಅತ್ಯಂತ ಸ್ವಾಭಾವಿಕವಾಗಿರುತ್ತವೆ. ಅಂತೆಯೇ ಅವನಿಗೆ "ಬಾಲವತ್ ಕ್ರೀಡೇತ್" ಎಂದು ಹೇಳುವರು.

ಈ ರೀತಿಯಾಗಿ ಜೀವನದಲ್ಲಿ ಯಾವುದನ್ನೂ ತಿರಸ್ಕರಿಸದೆ, ಎಲ್ಲವನ್ನೊಳಕೊಂಡರೂ ಎಲ್ಲವನ್ನು ಮೀರಿ ನಿಲ್ಲುವ ಪೂರ್ಣ ಪರಾದೃಷ್ಟಿಯನ್ನು ಸಾಧಿಸುವುದೇ ಶ್ರೀಅರವಿಂದರ "ಪೂರ್ಣ ಯೋಗದ" ರಹಸ್ಯವಾಗಿದೆ. "ಪೂರ್ಣ" ಎಂಬ ಶಬ್ದದಲ್ಲಿಯೇ ಶ್ರೀಅರವಿಂದರ ದರ್ಶನವಡಗಿದೆ.—!! ಈ ಪೂರ್ಣತೆಯೆಂಬುದು ಆಕಾಶಕುಸುಮವಲ್ಲ. ಬುದ್ಧ-ಕ್ರಿಸ್ತರ ನಿರ್ಮಲ ಪ್ರೀತಿ, ನಿರ್ಮಲ ನ್ಯಾಯದೃಷ್ಟಿ, ಮಹಾಕವಿಗಳ ನಿರ್ಮಲ ಸೌಂದರ್ಯದೃಷ್ಟಿಗಳು ನಮ್ಮನ್ನು ಯಾವ "ವ್ಯಕ್ತ್ಯತೀತ" (Impersonal) ಅವಸ್ಥೆಯ ಬಳಿಗೆ ತಂದು ಬಿಡುತ್ತವೆಯೋ ಆ ಅವಸ್ಥೆಯನ್ನು ಒಂದು ಸಮ್ಯವಸ್ಥಿತ ರೀತಿಯಲ್ಲಿ ಸ್ಥಿರವಾಗಿ ಮಾಡುವುದೇ ಇವರ ಸಾಧನವಾಗಿದೆ. ಜ್ಯೋತ್ಯಪುರುಷನ ಜಾಗ್ರತಿಗೆ ದಾರಿಯಾಗಿದೆ.

ಕಾವ್ಯಪ್ರಪಂಚದಲ್ಲಿ ಹೇಗೆ ವೈಯಕ್ತಿಕ ಸುಖ, ದುಃಖ, ದ್ವೇಷ, ಪ್ರೀತಿಗಳನ್ನು ಬಿಟ್ಟಾಗಲೇ ನಿಜವಾದ ಕಾವ್ಯಸೌಂದರ್ಯವನ್ನು ಸವಿಯಲು ಸಾಧ್ಯವಾಗುವುದೋ, ಹಾಗೆಯೇ ಈ ವಿಜ್ಞಾನಮಯ ಕೋಶದ ಬೆಳಕು ನಮ್ಮಲ್ಲಿ ಬರಬೇಕಾದರೆ ನಮ್ಮ ದೇಹ, ಪ್ರಾಣ, ಮನಸ್ಸುಗಳ ಪ್ರವೃತ್ತಿಗಳನ್ನು ನಿಯಮಿಸಿ ಅವುಗಳನ್ನು ಈ ಸಾಮರಸ್ಯದ ಕಡೆಗೆ ಒಲಿಸಬೇಕು. ಅಲ್ಲಿಯ ಉದ್ವಿಗ್ನತೆ, ಸಂಶಯಗಳನ್ನೂ ನ್ಯಾಯಾನ್ಯಾಯದ ಬಗೆಗಿರುವ ವೈಯಕ್ತಿಕ ಊಹಾಪೋಹಗಳನ್ನೂ ಸಂಕುಚಿತ ವಿಚಾರಗಳನ್ನೂ ನಿಲ್ಲಿಸಿ ಪ್ರಶಾಂತವಾಗಿರಿಸಲು ಪ್ರಯತ್ನಿಸಬೇಕು.

ಎರಡನೆಯದಾಗಿ ಅಹಂಕಾರದ ಉಲ್ಬಣಾವಸ್ಥೆಯಿಂದ ಬಿಡುಗಡೆ ಹೊಂದುವುದು ಅವಶ್ಯವಿದೆ. "ನಾನು" ಎಂಬುದನ್ನು ಮೀರಿದ "ಅವನೂ" ಇರುವನೆಂದು ಅರಿತು, ಆ ಸಮಷ್ಟಿಪುರುಷನಿಗೆ ಅನಿರ್ಬಂಧ ಆತ್ಮಸಮರ್ಪಣ ಮಾಡಿದರೆ ಜ್ಯೋತ್ಯಪುರುಷನ ದಿವ್ಯ ಶಕ್ತಿ, ಜ್ಞಾನಪ್ರಕಾಶ, ಪರಮಾನಂದಗಳು ನಮ್ಮಲ್ಲಿ, ಈ ಇಡೀ ಪ್ರಪಂಚದಲ್ಲಿ ಅವತರಣವಾಗಲು ಪ್ರಾರಂಭವಾಗುತ್ತವೆ. ಆಗ ನಾವು ನ್ಯಾಯಾನ್ಯಾಯ, ಧರ್ಮಾಧರ್ಮಗಳ ಬಂಧನದಿಂದ ಬಿಡುಗಡೆ ಹೊಂದುತ್ತೇವೆ. ಎಂದರೆ ಧರ್ಮ, ನ್ಯಾಯಗಳ ವಿರುದ್ಧ ನಿಲ್ಲುವುದೆಂದು ಅರ್ಥವಲ್ಲ. ಧರ್ಮಾತೀತವಾಗುವುದೆಂದು ಅದರ ಅರ್ಥ. ಮನುಷ್ಯನಲ್ಲಿ ಅರಿಯಬೇಕಾದುದು ಕೇವಲ ವಾಸ್ತವಸತ್ಯ, ಧರ್ಮ, ನ್ಯಾಯ, ಪ್ರೀತಿ-ಸೌಂದರ್ಯಗಳಷ್ಟೇ ಅಲ್ಲ. ಇವೆಲ್ಲವುಗಳನ್ನು ಮೀರಿದ "ಯಜ್ಞ" ಅಥವಾ ಸರ್ವಾರ್ಪಣಭಾವವೂ, ಮೇಲ್ಮಡೆಯಿಂದ ಪರಮ ಮಂಗಲ ವಾತ್ಸಲ್ಯಭಾವವೂ ಅಭಿವ್ಯಕ್ತವಾಗಬೇಕಾಗಿದೆ. ಅದಕ್ಕೆ "ವಾಸುದೇವಸ್ಸರ್ವಂ" ಎಂಬ ದಿವ್ಯ ದೃಷ್ಟಿ ಜಾಗೃತವಾಗಬೇಕು. ಆಗ ಸಮಸ್ತ ಧರ್ಮಬಂಧನಗಳನ್ನು ಮೀರಿದ ಆತ್ಮಾರ್ಪಣವೇ ನಮ್ಮ ಧರ್ಮವಾಗುತ್ತದೆ. ಅಂತೆಯೇ ಗೀತೆಯು ತನ್ನ ಗುಹ್ಯತಮ ಜ್ಞಾನವನ್ನು ಹೀಗೆ ಹೇಳಿದೆ:

"ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ.
(ಸರ್ವಧರ್ಮಗಳನ್ನು ತ್ಯಜಿಸಿ ನನಗೇ ಶರಣು ಬಾ.)

(ಶ್ರೀಅರವಿಂದರು ತಮ್ಮ "ಯೋಗಸಮನ್ವಯ"ವೆಂಬ ಗ್ರಂಥದಲ್ಲಿ ವ್ಯಕ್ತಪಡಿಸಿದ ಕೆಲವು ವಿಚಾರಗಳ ವಿವೇಚನೆಯಿದು. ಲೇ.)

———

೧೦೦೦ ರೂಪಾಯಿ ಬಹುಮಾನ

೩೦ ವರ್ಷಗಳಿಂದ ಅನುಭವಸಿದ್ಧವಾದ—ಮಿರಜಿಯ ವೈದ್ಯ
ವಿ. ಎಸ್. ಕಾಪಸೇಯವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರ ಪಾಕ

[ರಜಿಸ್ಟರ್ಡ್]

ಮೂತ್ರದಲ್ಲಿ ಸ್ವಪ್ನದಲ್ಲಿ ವೀರ್ಯಸ್ಖಲನ, ಸ್ವರಭಿಯಿಂದುಂಟಾದ ಅಶಕ್ತತೆ, ವೀರ್ಯದ ಬೇರೆ ಬೇರೆ ದೋಷಗಳು, ಪಿತ್ತಾಂಶ, ಉಷ್ಣ, ಸೊಂಟನೋವು, ಉಪದಂಶ ಮೇಹರೋಗಗಳಿಂದುಂಟಾಗುವ ಕ್ಷೀಣತೆ—ಇವೆಲ್ಲ ನಷ್ಟವಾಗಿ, ಜೆನ್ನಾಗಿ ಮಲಶುದ್ಧಿಯಾಗುವುದು. ಹಸಿವೆ, ಸ್ಮರಣಶಕ್ತಿ, ದೇಹದ ತೂಕ ಹೆಚ್ಚುವುದು. ಹೊಸ ತಾರುಣ್ಯ ಬಂದಂತಾಗಿ ವೀರ್ಯದಲ್ಲಿ ಗರ್ಭಧಾರಕಶಕ್ತಿ ಬಲಗೊಳ್ಳುವುದು. ಈ ಔಷಧಿಯು ೫೫ ವನಸ್ಪತಿಗಳ ಯೋಗದಿಂದ ಸಿದ್ಧವಾಗಿದೆ ಸಾಲಾಮಿಶ್ರಿ, ಸಫೇದಮುಸ್ಲಿ, ಪಂಜಾಬಮಿಶ್ರಿ, ವಚಕಂದ ಮೊದಲಾದ ಪದಾರ್ಥಗಳಲ್ಲಿ ವೀರ್ಯವರ್ಧಕ ಗುಣವಿಲ್ಲವೆಂದು ಸಿದ್ಧಮಾಡುವವರಿಗೆ ೧೦೦೦ ರೂಪಾಯಿ ಬಹುಮಾನ.

೨೧ ದಿನಗಳಿಗೆ ಸಾಲಬಹುದಾದ ಲಘು ತೋಲೆಯ ಒಂದು ಡಬ್ಬಿಗೆ ೫-೮-೦; ಅಂಚೆಯ ವೆಚ್ಚ ೧-೧೫-೦. ಶೀಘ್ರಗುಣಕಾರಿಯಾದ ಸ್ಪೇಶಲ್ ಡಬ್ಬಿಗೆ ೧೦-೮-೦. (ಇದರಿಂದ ೭ ದಿನಗಳಲ್ಲಿಯೇ ಗುಣವು.) ಅಂಚೆಯ ವೆಚ್ಚ ೧-೮೫-೦. ೩ ಡಬ್ಬಿಗೆ ೧೫-೦-೦ ಅಂಚೆಯ ವೆಚ್ಚ ೪-೭ ೦. ೧ ಡಬ್ಬಿಗೆ ಪ್ಯಾಕಿಂಗ್ ಖರ್ಚು ೦-೩-೦. ಒಮ್ಮೆಲೇ; ೩ ಡಬ್ಬಿಗಳನ್ನು ಬೇಡುವವರು ೩ ರೂ. ಮುಂಗಡ ಕಳಿಸಬೇಕು.

ಮಾಲಕ: ವಿ. ಎಸ್. ಕಾಪಸೇ, ಶನಿವಾರಪೇಟ
ಮು. ಪೋ. ಮಿರಜ

ಹವ-ಆ-ನೋ

(ಸಣ್ಣಕತೆ)

ಶ್ರೀ. ವೆಂ. ಮು. ಜೋಶಿ, ಧಾರವಾಡ

卐

ಮೂಲದ ಕಥೆಯನ್ನು ಬರೆದವರು ಶ್ರೀ ಪಾಟ್ ಫ್ರಾಂಕ್. ಅಮೇರಿಕೆಯ ಓಮ್ನಿಬುಕ್ ಜನೆವರಿ ೧೯೫೫ರ ಸಂಚಿಕೆಯಲ್ಲಿ ಈ ಕಥೆ ಸ್ವತಂತ್ರ ಕಥೆಯಾಗಿ ಪ್ರಕಟವಾಗಿರದೆ, ಸಾಕ್ಷೀಚಿತ್ರ ತೆಗೆಯಲು ಕೋರಿಯಾಕ್ಕೆ ಹೋದ ಶ್ರೀ ಪಾಟ್ ಫ್ರಾಂಕರು ತಮ್ಮ ಅನುಭವಗಳನ್ನು ಲೇಖರೂಪದಲ್ಲಿ ಬರೆಯುತ್ತಿರುವಾಗ, ತನ್ನ ಸಾಕ್ಷೀ ಚಿತ್ರಕ್ಕಾಗಿ ಹೆಣೆದ ಕಥೆಯ ರೂಪ ರೇಷೆಗಳನ್ನು ಆ ಲೇಖನದಲ್ಲಿ ಹೇಳಿದ್ದಾರೆ. ಅದೇ ಕಥೆಯ ರೂಪ-ರೇಷೆಗಳ ಮೇಲೆ ಈ ಕಥೆ ನಿಂತಿದೆ. 'ಹವ-ಆ-ನೋ' ಎಂದರೆ ಕೋರಿಯಾ ಭಾಷೆಯಲ್ಲಿ 'ಏನೂ ಸಿಗಲಿಲ್ಲ' ಎಂದರ್ಥವಾಗುತ್ತದೆ. ಇದು ಮೂಲಕಥೆಯ ಅಕ್ಷರಶಃ ಅನುವಾದವೇನೂ ಅಲ್ಲ. ಇಷ್ಟೇ ಅಲ್ಲದೆ, ಕೆಲ ಘಟನೆಗಳನ್ನು ಅನಿವಾರ್ಯವಾಗಿ ಬದಲಿಸಿಕೊಂಡಿದ್ದೇನೆ. ಮೂಲದ ಕತೆಯಲ್ಲಿಯ ಪ್ರಚಾರಭಾಗವನ್ನು ತೊಡೆದುಹಾಕಿದ್ದೇನೆ. ಯುದ್ಧದ ಕತೆಗಳೂ (ಪ್ರಚಾರಕ್ಕೆ ಸ್ಫಳಕೊಡದೇ ಹೋದರೆ) ಕಲಾತ್ಮಕವಾಗಿ ಕಾಣಬಹುದು. ಎಂತಲೇ ಈ ಕಥೆ ಕಲೆಯದೃಷ್ಟಿಯಿಂದ ನನಗೆ ಸೇರಿತು, ಕಲಾತ್ಮಕದೃಷ್ಟಿಗೆ ಅಡ್ಡಬರುವ ಪ್ರಚಾರ ಭಾಗವನ್ನು ಇಲ್ಲಿ ತೆಗೆದುಹಾಕಿದ್ದೇನೆ.

— ಲೇಖಕ

卐

ಕ್ಯಾಪ್ಟನ್ ಮೇರಿ ಹೇಸ್ಟಿಂಗ್ಸಳು ದಕ್ಷಿಣಕೋರಿಯಾಕ್ಕೆ ಬಂದು ೧೬ ತಿಂಗಳ ಮೇಲಾಗಿತ್ತು. ಅವಳು ಕೆಲಸ ಮಾಡುತ್ತಿರುವ "ಎನುರ್ಜನ್ಸಿ ಸರ್ಜಿಕಲ್ ಸ್ಟೇಶನ್" ಇಲರ ಸಮಾಂತರ ರೇಖೆಯ ತೀರ ಹತ್ತಿರದಲ್ಲಿತ್ತು. ರಾಯ್‌ಫಲ್ ಗುಂಡುಗಳ ಹಾರಾಟ ನಿಲ್ಲುವ ತನಕ ಅವಳಿಗೆ ತೀರ ಕಡಿಮೆ ಇರುತ್ತಿತ್ತು. ಡಾಕ್ಟರ್ ಕ್ಯಾಪ್ಟನ್ ಮೇರಿ ಹೇಸ್ಟಿಂಗ್ಸಳಿಗೆ, ೧೬ ತಿಂಗಳ ವರೆಗಿನ ಸತತ ಕೆಲಸದಿಂದ ಬೇಜಾರು ಬಂದಿರಬೇಕು. ವಿಶ್ರಾಂತಿಯನ್ನು ಪಡೆಯುವ ಇಚ್ಛೆಯಿಂದ ಅವಳು ೫ ದಿನಗಳ ರಜೆ ಪಡೆದುಕೊಂಡು ಸಿಯೋಲ್ ನಗರಕ್ಕೆ ಬಂದಳು. ಸಿಯೋಲ್ ದಕ್ಷಿಣಕೋರಿಯಾದಲ್ಲಿಯ ದೊಡ್ಡ ಪಟ್ಟಣ. ಕೋರಿಯಾದ ವೈಶಿಷ್ಟ್ಯವೆಂದು ಹೆಸರುಪಡೆದ ಕೆಲ ವಸ್ತುಗಳನ್ನು ತನ್ನೂರಿಗೆ ತೆಗೆದುಕೊಂಡು ಹೋಗಬೇಕೆಂದು ಮೇರಿ ಹೇಸ್ಟಿಂಗ್ಸ್, ಸೀಯೋಲ್‌ಪಟ್ಟಣದ ಪೇಟೆಯಲ್ಲಿ ತಿರುಗಾಡತೊಡಗಿದಳು. 'ಹೊಯ್-ಹ್ಯುನ್-ಡೊಂಗ್' ರಸ್ತೆಯನ್ನು ಹಿಡಿದುಕೊಂಡು 'ಪಿ ಎಕ್ಸ್' ಕಾರ್ನರಿನ ದರೆಗೂ ತಿರುಗಿಬಿಡಿದಳು. ಕೊನೆಗೆ ಅವಳು ಬಂದುದು "ಹಾನ್"ನ ಅರಿವೆಯ ಅಂಗಡಿಗೆ, 'ಪೂಕ್-ಚಾಂಗ್-ಜೊಂಗ್' ರಸ್ತೆಯಲ್ಲಿಯ ಅತಿ ದೊಡ್ಡ ಜವುಳಿಯ ಅಂಗಡಿ ಎಂದರೆ ಹಾನ್ ಇವನದೆ.

ಮೇರಿಯು ಅಂಗಡಿಯಲ್ಲಿ ಕಾಲಿಟ್ಟುದೇ ತಡ; ಹಾನ್ ಒಳ್ಳೇ ನಮ್ರತೆಯಿಂದ ನಮಸ್ಕರಿಸಿ ಇಂಗ್ಲಿಷಿನಲ್ಲಿಯೇ ಮಾತನಾಡಿಸಿದ:

"ನನ್ನಿಂದ ತಮಗೆ ಯಾವ ಬಗೆಯ ನೆರವು ಬೇಕು? ದಯವಿಟ್ಟು ಹೇಳುವಿರಾ?"

"ಮಿಸ್ಟರ್ ಹಾನ್, ಕೋರಿಯಾದಲ್ಲಿ ಹಿಂದಿನ ಕಾಲದಲ್ಲಿ ಧರಿಸುತ್ತಿದ್ದ ಬೆಲೆಬಾಳುವ ರೇಶಿಮೆಯ ಎದೆವಸ್ತ್ರಗಳು ನನಗೆ ಬೇಕಾಗಿವೆ ಆ ವಸ್ತ್ರಕ್ಕೆ ಹರಳುಗಳನ್ನೆನೋ ಕೂಡಿಸಿರುತ್ತಾರಂತೆ; ನನ್ನ ತಾಯಿಗೆ ಒಂದನ್ನು ತೆಗೆದುಕೊಂಡು ಹೋಗಬೇಕೆಂದು ಮಾಡಿದ್ದೇನೆ. ನಿಮ್ಮ ಅಂಗಡಿಯಲ್ಲಿ ಅದು ಸಿಗಬಹುದೇ?"

"ಅಯ್ಯೋ ಪಾಪ! ಅದೆಲ್ಲ ಹಳೆಯ ಕಾಲದ ಬಾಬತ್ತು. ಈಗ ಅಂತಹ ವಸ್ತ್ರಗಳು ತೀರ ಅಪರೂಪ. ಸಿಗುವುದೇ ಇಲ್ಲವೆಂದರೂ ತಪ್ಪಾಗಲಾರದು. ಆದರೂ ನಿಮಗೆ ಬೇಕಿದ್ದರೆ, ಒಂದು ಸ್ಥಳ ಹೇಳುವೆ. ಅದೇನೂ ಅಂಗಡಿಯಲ್ಲ. ಚಾಂಗ್ ಮನೆತನದಲ್ಲಿ ಅದು ಸಿಗುವುದು. ಅಂತಹ ಒಂದೇ ಒಂದು ವಸ್ತ್ರ ಚಾಂಗ್ ಮನೆತನದವರ ಹತ್ತಿರ ಇವೆ. ಆ 'ಚಾಂಗ್' ಮನೆತನದ ಹಿರಿಯನ ಗುರುತು ನನಗಿದೆ"

"ಸರಿ! ಅದರ ಬೆಲೆ ಎಷ್ಟಾಗಬಹುದು?"

"ಅಂತಹ ವಸ್ತ್ರಗಳನ್ನು ಹೆಣೆಯುವುದಕ್ಕೆ ಕಲಾವಿದನಿಗೆ ಒಂದು ವರುಷ ಬೇಕಾಗುತ್ತದೆ. ಆ ವಸ್ತ್ರದಲ್ಲಿ ಕಲಾವಿದನ ಒಂದು ವರುಷದ ಜೀವನ ಅಡಗಿರುತ್ತದೆ. ಒಂದು ವರುಷದ ಜೀವನದ ಬೆಲೆ ಎಷ್ಟಾಗಬಹುದು ನೀವೇ ಲೆಕ್ಕ ಹಾಕಿರಿ! ನಿಮ್ಮ ಅಮೇರಿಕೆಯ 'ಫಿಫ್ಟ್ ಅವೆನ್ಯೂ' ರಸ್ತೆಯಲ್ಲಿ, ಅದರ ಬೆಲೆ ಒಂದು ಸಾವಿರ ಡಾಲರುಗಳಾದರೂ ಆಗಬಹುದು. ಆದರೆ ಇಲ್ಲಿ ಕೇವಲ ೩೦೦೦೦ 'ವನ್'ಗಳು ಮಾತ್ರ"

"ಅಂದರೆ, ಕೇವಲ ೫೦ ಡಾಲರುಗಳೇ ?"

"೩೦೦೦೦೦ 'ವನ್'ಗಳು ಕಾಯಿದೆಯ ದೃಷ್ಟಿಯಿಂದ ೫೦ ಡಾಲರು ಎಂದು ಹೇಳಬಹುದು; ಆದರೆ ಕೋರಿಯನರ ಭಾಗ್ಯ ಅಷ್ಟಾದರೂ ಎಲ್ಲಿದೆ? ಪೇಟೆಯಲ್ಲಿ ಕಚ್ಚಾವಸ್ತುಗಳ ಖರೀದಿಗೆ ಹೋದರೆ ೫೦ ಡಾಲರುಗಳಿಗೆ ಸಿಗುವ ಮಾಲಿಗೆ ಇಂದು ೩೦೦೦೦ ವನ್ನುಗಳನ್ನು ಕೊಡಬೇಕಾಗುವುದು. ಇರಲಿ, ಚಾಂಗನ ಮನೆ ಇಲ್ಲಿಂದ ದೂರವಿಲ್ಲ. ಬೇಕಿದ್ದರೆ ನಾನೇ ನಿಮ್ಮನ್ನು ಅಲ್ಲಿಗೆ ಕರೆದೊಯ್ಯುವೆ!"

ಮೇರಿಯು ಸಮ್ಮತಿಯಿತ್ತಳು. ಹಾನ್ ಮೇರಿಯನ್ನು ಕರೆದುಕೊಂಡು ಫೂಕ್‌ಚಾಂಗ್ ರಸ್ತೆಯಗುಂಟ ನಡೆದು, ಬಲಗಡೆಯ ಸಂದಿಯಲ್ಲಿ ಹೊರಳಿದ. ಆ ಸಂದಿ ಬಹಳೇ ಇಕ್ಕಟ್ಟಿನದಾಗಿತ್ತು. ಯಾವುದೇ ಕಾರು-ಮೋಟಾರುಗಳು ಅದ್ದಿಂದ ಹಾಯುವುದು ಅಸಾಧ್ಯವಿತ್ತು. ಕೋರಿಯನ್ ಚಕ್ಕಡಿಗಳಿಗೆ ಮಾತ್ರ ಹಾಯಲು ಅವಕಾಶವಿತ್ತು. ಸ್ವಲ್ಪ ದೂರ ಸಂದಿಯಲ್ಲಿ ನಡೆದಂತೆ, ಒಂದು ಸಣ್ಣ ಮನೆಯ ಮುಂದೆ ಹಾನ್ ನಿಂತುಕೊಂಡು ಮೇರಿಗೆ ಸೂಚನೆಯನ್ನಿತ್ತ.

"ಮನೆಯ ಬಳಿಗೆ ಹೋಗುವ ಮೊದಲು, ಮನೆಯವರ ಬಗೆಗೆ ನಾಲ್ಕು ಮಾತುಗಳನ್ನು ನಿಮಗೆ ತಿಳಿಸಿ ಹೇಳುವುದು ಒಳಿತು. ಈ ಮನೆತನದ ಹಿರಿಯ ಜನರೆಲ್ಲ ಈ ಯುದ್ಧದಲ್ಲಿ ಹಾಳಾಗಿ ಹೋದರು. ಈಗ ಸದ್ಯ ಮನೆಗೆ ಯಜಮಾನನೆಂದರೆ 'ಚಾಂಗ್‌ತಾಯ್.' ಜನವೆಲ್ಲ ಅವನನ್ನು "ಕೋ ಚಿಪ್" ಎಂತಲೇ ಕರೆಯುತ್ತಾರೆ. ಅವನು ನೂಲಿನ ವಸ್ತ್ರಗಳನ್ನು ನೇಯುತ್ತಾನೆ. ಅದೇ ಕೆಲಸವನ್ನು ತನ್ನ ತಂಗಿಯರಿಗೂ ಕಲಿಸಿಹ್ದಾನೆ. ಅವನಿಗೆ ಇಬ್ಬರು ತಂಗಿಯರು. ಒಬ್ಬಳ ಹೆಸರು 'ಕಿ-ಸೂನ್' ಹದಿನೈದು ವರುಷದವಳು. ಇನ್ನೊಬ್ಬಳು. 'ಯಂಗ್-ಸೂನ್"' ಹನ್ನೊಂದು ವರುಷದವಳು. ಈ ಮೂವರೇ ಮನೆಯಲ್ಲಿದ್ದಾರೆ."

"ಉಳಿದವರ ಗತಿ ಏನಾಯ್ತು?" ಕ್ಯಾಪ್ಟನ್ ಮೇರಿ ಕುತೂಹಲಿಯಾಗಿ ಪ್ರಶ್ನಿಸಿದಳು.

"ತಂದೆ-ತಾಯಿಗಳಿಬ್ಬರೂ ಕೊಲ್ಲಲ್ಪಟ್ಟರು. ಅದು ಹೇಗಾಯಿತೋ ನನಗೂ ಗೊತ್ತಿಲ್ಲ ಹಿರಿಯ ಮಗ ಈಗ ಸದ್ಯ ಉತ್ತರ ಕೋರಿಯಾದಲ್ಲಿ ಸೆರೆಯಾಳಾಗಿ ಇದ್ದಾನೆ. ಈ ಮನೆತನದ ಹಿರಿಯನ ಪರಿಚಯ ನನಗಿದ್ದಿತೆಂದು ಹೇಳಿದೆನಲ್ಲ! ಅವನೇ ಚಾಂಗ್ ಯುಂಘಾ! ಈ ಹುಡುಗನ ಅಜ್ಜ. ಅವನು ಕಮ್ಯುನಿಸ್ಟರ 'ಮಾಸ್ಕೋ' ಸೆರೆಮನೆಯಲ್ಲಿ ತೀರಿಕೊಂಡನು." ಎಂದು ಹೇಳಿ ಹಾನ್ ಬಾಗಿಲನ್ನು ಬಡಿದ. ಒಳಗಿನಿಂದ ಕೋರಿಯನ್ ಭಾಷೆಯಲ್ಲಿಯೇ "ಒಳಗೆ ಬನ್ನಿರಿ" ಎಂದು ಯಾರದೋ ಧ್ವನಿ ಕೇಳಿಸಿತು.

ಮೇರಿಯು ಹಾನನ ಜೊತೆಯಲ್ಲಿ ಮನೆಯೊಳಗೆ ಪ್ರವೇಶಿಸಿದಳು. ಇಬ್ಬರು ಹುಡುಗಿಯರು ಚಾಪೆಯ ಮೇಲೆ ಕುಳಿತುಕೊಂಡು, ಚೀನೀ ಮಣ್ಣಿನ ಪಾತ್ರೆಯೊಳಗಿಂದ ಏನನ್ನೋ ತಿನ್ನುತ್ತಲಿದ್ದರು. ಅವರ ಬದಿಯಲ್ಲಿಯೇ ತರುಣನೊಬ್ಬನು ನಿಂತಿದ್ದ. ಆ ತರುಣನನ್ನು ಉದ್ದೇಶಿಸಿ ಹಾನ್ ಮಾತನಾಡಿದ:

"ಕೋ ಚಿಪ್, ನಾನು ಇಂದು ನಿಮ್ಮ ಮನೆಗೆ ಈ ಅಮೇರಿಕನ್ ಮಹಿಳಾ ಕ್ಯಾಪ್ಟನ್‌ರನ್ನು ಕರೆದು ತಂದಿದ್ದೇನೆ. ಇವರಿಗೆ ಆ ಎದೆವಸ್ತ್ರ ಬೇಕಾಗಿದೆಯಂತೆ."

ಕೋ ಚಿಪ್ ಮೇರಿಯನ್ನು ಸ್ವಾಗತಿಸಿದ. ಹಾನ್ ಮತ್ತೆ ಪ್ರಶ್ನಿಸಿದ.

"ಕ್ಯಾಪ್ಟನ್ ಮೇರಿಯವರು ನಿಮ್ಮಲ್ಲಿದ್ದ ಆ ಎದೆವಸ್ತ್ರವನ್ನು ನೋಡಬಹುದಲ್ಲವೇ?"

"ಅವಶ್ಯವಾಗಿ ನೋಡಬಹುದಲ್ಲಾ! ಆದರೆ ನಾನು ಅದನ್ನು ಮಾರಲಿಕ್ಕೆ ಕೊಡಲಾರೆ."

ಕೋ ಚಿಪ್ ಒಳಗೆ ಹೋದವನೇ ಆ ವಸ್ತ್ರವನ್ನು ತೆಗೆದುಕೊಂಡು ಬಂದು, ತೋರಿಸುತ್ತ ಹೇಳಿದನು:

"ನನ್ನ ಪೂರ್ವಜರು ಬಿಟ್ಟುಹೋದ ಒಂದೇ ಒಂದು ಆಸ್ತಿಯೆಂದರೆ ಈ ವಸ್ತ್ರ. ನನ್ನಲ್ಲಿ ಇನ್ನೂ ಸ್ವಲ್ಪ ಆಹಾರ ಇದೆ, ಸ್ವಲ್ಪ ಹಣವೂ ಇದೆ. ಆ ಹಣದಿಂದ ಇಂದೆಯೆ ನೂಲನ್ನು ಖರೀದಿ ಮಾಡುವೆ. ಏಕೆಂದರೆ ದಿನದಿನವೂ ಹತ್ತಿಯ ಬೆಲೆ ಏರತೊಡಗಿದೆ. ನೂಲಿನಿಂದ ಅರಿವೆಯನ್ನು ಮಾಡಿ ಮಾರುವೆ. ಇದರಿಂದ ನನ್ನ ಉಪಜೀವನ ನಡೆಯುತ್ತದೆ. ಸದ್ಯದಲ್ಲಂತೂ ಹೊಟ್ಟೆಗೆ ಹಿಟ್ಟು ಸಿಗುತ್ತಿದೆ ಉಪವಾಸ ಬೀಳುವ ಪ್ರಸಂಗ ಬಂದಾಗಲೇ ಇದನ್ನು ಮಾರಬೇಕೆಂದು ಇಟ್ಟಿರುವೆನು."

ಕ್ಯಾಪ್ಟನ್ ಮೇರಿ ತನ್ನ ಕೋಮಲವಾದ ಬೆರಳುಗಳನ್ನು ಅರಿವೆಯ ಮೇಲೆ ಆಡಿಸಿದಳು. ಒಳ್ಳೇ ಅಪೂರ್ವವಾದ ವಸ್ತ್ರವಾಗಿತ್ತದು. ವಿಸ್ಮಯಗೊಂಡ ಮೇರಿ ಹೇಳಿದಳು:

"ಮಾರಲಿಕ್ಕೆ ಕೊಡುವುದಿಲ್ಲವೆಂದು ಹೇಳುವುದು ಸರಿಯೇ ಇದೆ. ಅದು ನಿನ್ನ ತಪ್ಪೆಂದು ನಾನು ಹೇಳಲಾರೆ!" ಕೋ ಚಿಪ್ ಉತ್ತರಿಸಿದ:

"ನಾನು ತುಂಬಾ ಉಪಕೃತನಿರುವೆ ಕ್ಯಾಪ್ಟನ್!"

"ಆದರೆ ನೀನು ಒಂದು ವೇಳೆ ನಿನ್ನ ಮನಸ್ಸಿನ ನಿಶ್ಚಯವನ್ನು ಬದಲಿಸಿದರೆ, ಅದನ್ನು ನೀನು ನೇರವಾಗಿ ಹಾನರ ಕೈಗೆ ಕೊಡು ನಾನು ೩೦೦೦೦೦ ವನ್ನುಗಳನ್ನು ಅವರಲ್ಲಿರಿಸಿ ಹೋಗಿರುತ್ತೇನೆ."

"೩೦೦೦೦೦ ವನ್ನುಗಳೇ! ಅಬ್ಬಾ! ಆದರೆ ನಾನು ನನ್ನ ಮನಸ್ಸಿನ ನಿಶ್ಚಯವನ್ನು ಬದಲಿಸಲಾರೆ."

ಹಾನ್ ನಸುನಗುತ್ತಲೇ ಮೇರಿಗೆ ಹೇಳಿದ:

"ಜನ ಇವನಿಗೆ ಕೋ ಚಿಪ್ ಎಂದು ಕರೆಯುವುದು ಸುಮ್ಮನೆ ಅಲ್ಲ. ಕೋರಿಯಾ ಭಾಷೆಯಲ್ಲಿ 'ಕೋ ಚಿಪ್' ಎಂದರೆ 'ದೃಢ ನಿಶ್ಚಯವುಳ್ಳವ' ಎಂದರ್ಥವಾಗುತ್ತದೆ."

× × × ×

ಹಾನ್ ಮತ್ತು ಮೇರಿ ಹೊರಟುಹೋದ ನಂತರ ಕೋ ಚಿಪ್ ಮಗ್ಗದ ಕಡೆಗೆ ಹೊರಳಿ ಅದರ ದುರುಸ್ತಿ ನಡೆಸಿದ. ಮಗ್ಗದ ಕೀಲುಗಳನ್ನು ಸರಿಯಾಗಿ ಜೋಡಿಸಿ, ಎಣ್ಣೆಯನ್ನು ಉಣ್ಣಿಸಿದ. ನೂಲನ್ನು

ರುವುದಕ್ಕಾಗಿ ಅವನಿಗೆ ಪೇಟೆಗೆ ಹೋಗಬೇಕಾಗಿತ್ತು. ಪೆಟ್ಟಿಗೆಯನ್ನು ತೆರೆದು ಅದರಲ್ಲಿಯ ಕೊನೆಯ ೧೦೦೦೦೦ ನೋಟುಗಳನ್ನು ಭದ್ರವಾಗಿ ತನ್ನ ಒಳಕಿಸೆಯಲ್ಲಿರಿಸಿಕೊಂಡು, ಪೇಟೆಯ ಕಡೆಗೆ ನಡೆದ.

'ಚೊಂಗ್-ಕೆಯ್-ಜೋನ್ ಕ್ರೀಕ್' ರಸ್ತೆಯಲ್ಲಿಯ ಪಾಕನ ಅಂಗಡಿಗೆ ಬಂದನು. ಕೋಚಿಪ್ಪನ ತಂದೆ ಯಾವಾಗಲೂ ತನ್ನ ವ್ಯಾಪಾರವನ್ನು ಪಾಕನ ಬಳಿಯಲ್ಲಿಯೇ ಮಾಡುತ್ತಿದ್ದನು. ಕೋಚಿಪ್ ಪಾಕನನ್ನು ಮಾತನಾಡಿಸಿದ:

"ನಮಸ್ಕಾರ ಪಾಕ್, ಇಂದು ಯಾವ ಧಾರಣಿ ಮಾಡಿದ್ದೀ ಅಪ್ಪಾ?"

"ಇಪ್ಪತ್ನಾಲ್ಕು!"

ಕೋಚಿಪ್ ಹಣೆಯನ್ನು ಬಡಿದುಕೊಂಡು "ಇಪ್ಪತ್ತುನಾಲ್ಕೆ? ಆಗುವುದಿಲ್ಲಪ್ಪಾ!" ಎಂದು ಹೇಳಿ ಮುಂದೆ ನಡೆದನು. ಆದರೆ ಅವನ ನಡಿಗೆ ಶೀಘ್ರವಾಗಿರಲಿಲ್ಲ. ಬೇಕೆಂತಲೇ ಮೆಲ್ಲನೆ ಹೊರಟನು. ಪಾಕನು ತನ್ನನ್ನು ತಿರುಗಿ ಕರೆಯಬೇಕೆಂಬ ಇಚ್ಛೆಯನ್ನು ಕೋಚಿಪ್ ತನ್ನ ನಡಿಗೆಯಲ್ಲಿ ಪ್ರಕಟಿಸುತ್ತಿದ್ದನು. "ಸ್ವಲ್ಪ ತಡೆ, ಹೋಗ ಬೇಡ!" ಪಾಕ್ ಕೋಚಿಪ್ಪನನ್ನು ತಡೆಹಿಡಿದು ನಿಲ್ಲಿಸಿ, ಅವನ ಹೆಗಲ ಮೇಲೆ ಕೈಯಿರಿಸಿ ಹೇಳಿದ:

"ನೀನು ಒಂದು ಮಾತನ್ನು ಕೇಳಲಾ!"

"ಇಪ್ಪತ್ತು.....ಈ ಧಾರಣೆ ಆದರೆ ನಾನು ಐದು ಕಿಲೋ ನೂಲನ್ನು ಖರೀದಿ ಮಾಡುವೆನು."

"ಇಪ್ಪತ್ತು ಬಹಳ ಕಡಿಮೆಯಾಯ್ತು. ಇಪ್ಪತ್ತೊಂದು ಕೊಡು!"

"ಊಹೂಂ. ಇಪ್ಪತ್ತೇ!"

"ಸರಿ ಆಗಲಿ; ಆದರೆ ಒಂದು ಮಾತು: ಇಪ್ಪತ್ತಕ್ಕೆ ನಾನು ಕೊಟ್ಟೆನೆಂದು ಯಾರ ಮುಂದೆಯೂ ಹೇಳಬೇಡ."

"ಆಗಲಿ, ಯಾರ ಮುಂದೆಯೂ ಹೇಳುವುದಿಲ್ಲ."

ಪಾಕ್ ನೂಲನ್ನು ಕಾಗದದ ಗಂಟಿನಲ್ಲಿ ಕಟ್ಟಿಕೊಟ್ಟ. ಕೋಚಿಪ್ ತನ್ನ ಹಣವನ್ನೆಲ್ಲ ಅವನ ಕೈಯಲ್ಲಿರಿಸಿ ತನ್ನ ಮನೆಯತ್ತ ಹೊರಟ. ಆದರೆ ಬಂದ ಹಾದಿಯಿಂದಲೆ ಮರಳಲಿಲ್ಲ. ಸೌಥ್ ಗೇಟಿನಿಂದ ಮನೆಯತ್ತ ನಡೆದ. ಹೀಗೆ ಹೋಗುವುದರಲ್ಲಿ ಒಂದು ಉದ್ದೇಶವಿತ್ತು. ಸೌಥ್ ಗೇಟಿನಲ್ಲಿ ಅರಿವೆಯ ಧಾರಣಿ, ಯಾವ ಬಗೆಯ ಅರಿವೆಗೆ ಹೆಚ್ಚು ಬೆಲೆ?—ಎಂಬ ಸುದ್ದಿಗಳು ತಿಳಿಯುತ್ತಿದ್ದುವು.

ಈ ವೇಳೆಗಾಗಲೇ ಕೋಚಿಪ್ಪನ ಮನೆಯಲ್ಲಿ ಒಂದು ಸಣ್ಣ ಪ್ರಸಂಗ ನಡೆಯಿತು. ಕಿ-ಸೂನ್ ಮಗ್ಗದ ಮುಂದೆ ಕುಳಿತು ಮಗ್ಗ ನಡೆಸುತ್ತಿದ್ದಳು. ಅಕಸ್ಮಾತ್ ಮಗ್ಗಕ್ಕೆ ಕೂಡಿಸಿದ ಕಬ್ಬಿಣದ ಚಕ್ರ ಮುರಿಯಿತು. ಕಿ-ಸೂನ್ ಗಾಬರಿಗೊಂಡು ಯಂಗ್-ಸೂನಳಿಗೆ ಹೇಳಿದಳು:

"ತಂಗಿ, ಇದನ್ನು ನಾನು ಬೇಕೆಂತಲೇ ಮುರಿಯಲಿಲ್ಲ. ಹೇಗೆ ಮುರಿಯಿತೋ ಏನೋ! ಇನ್ನು ಮಗ್ಗದ ಕೆಲಸ ನಡೆಯುವ ಹಾಗೆಯೆ ಇಲ್ಲ." ಯಂಗ್ ಸೂನ್ ನಿದಾನವಾಗಿ ಹೇಳಿದಳು:

"ಹೌದು ಅಕ್ಕಾ. ಅದು ತಾನಾಗಿಯೇ ಮುರಿಯಿತು. ಅದರಿ ಏನು! ಅಣ್ಣ ಅದನ್ನು ಸರಿಯಾಗಿ ಕೂಡಿಸ ಬಲ್ಲ. ಈಗ ಅಣ್ಣ ಎಲ್ಲಿ ಇರಬಹುದು?"

"ಸಾಮಾನ್ಯವಾಗಿ ಅವನು ಈ ಸಮಯದಲ್ಲಿ ಸೌಥ್‌ಗೇಟಿನಲ್ಲಿ ಇರುತ್ತಾನೆ. ಅರಿವೆಯ ಬೆಲೆಯನ್ನು ತಿಳಿದುಕೊಳ್ಳುತ್ತಿರಬಹುದು."

"ನಾನಲ್ಲಿಗೆ ಇದನ್ನು ತೆಗೆದುಕೊಂಡು ಹೋಗುತ್ತೇನೆ. ಕೂಡಿಸಲಿಕ್ಕೆ ಬರುವಂತಿರದಿದ್ದರೆ, ಎರಡನೆಯದನ್ನಾದರೂ ಕೊಂಡು ತರಲಿ, ವೇಳೆಯನ್ನು ಕಳೆಯುವುದು ಸರಿಯಲ್ಲ."

ಯಂಗ್-ಸೂನ್ ಸೌಥ್‌ಗೇಟಿನತ್ತ ನಡೆದಳು. ಅವಳು ಹೊರಟು ಹೋದದ್ದೇ ತಡ; ಕಿ-ಸೂನ್ ತನ್ನ ಕೆಲಸದ ವಸ್ತ್ರಗಳನ್ನು ತೆಗೆದೊಗೆದು ಹಸನಾದ ಬಟ್ಟೆಗಳನ್ನು ಧರಿಸಿಕೊಂಡಳು. ಹಾಳು ಮಗ್ಗದ ಕೆಲಸದಿಂದ ಬೇಜಾರವಾಗಿತ್ತೇನೋ! ಮುಖವನ್ನು ಸರಿಯಾಗಿ ಅಲಂಕರಿಸಿ ಕೊಂಡಳು. ಆದರೆ ಮನೆಬಿಟ್ಟು ಹೊರಬೀಳುವುದಕ್ಕೆ ಧೈರ್ಯವಾಗಲಿಲ್ಲ. ಫೋಟೋದ ಚೌಕಟ್ಟಿನಲ್ಲಿದ್ದ ಗೊಂಬೆಯಂತೆ, ಬಾಗಿಲ ಚೌಕಟ್ಟಿನಲ್ಲಿ ನಿಂತುಕೊಂಡು, ಬೀದಿಯಲ್ಲಿ ಸೈನಿಕರು ತಿರುಗಾಡುತ್ತಿರುವುದನ್ನು ನೋಡತೊಡಗಿದಳು.

ಕೈಯಲ್ಲಿ ಕಬ್ಬಿಣದ ಚಕ್ರದ ಎರಡು ತುಂಡುಗಳನ್ನು ಹಿಡಿದುಕೊಂಡು ಯಂಗ್-ಸೂನ್ ಸೌಥ್‌ಗೇಟಿನ ಹತ್ತಿರ ಬಂದಳು. ಸೌಥ್ ಗೇಟಿಗೆ ಬಂದಾಗ ಅವಳು ತುಂಬ ಹೆದರಿಹೋದಳು. ಅಲ್ಲ ತರತರದ ಜನರು! ಸಂ. ರಾ. ಸಂಘದ ಪರವಾಗಿ ಹೋದ ಆರು ಬೇರೆ ಬೇರೆ ದೇಶಗಳ ಸೈನಿಕರು—ಬೇರೆ ಬೇರೆ ಭಾಷೆಯ ಸೈನಿಕರು—ಅಲೆದಾಡುತ್ತಿದ್ದರು. ರಸ್ತೆಯ ಒಂದು ಅಂಚಿನಿಂದ ಇನ್ನೊಂದು ಅಂಚಿಗೆ ಯಂಗ್ ಸೂನಳು ಹೋಗಬೇಕಿತ್ತು. ವಾಹನಗಳ ಓಡಾಟ—ಮೋಟರ್ ಸೈಕಲ್ಲುಗಳ ಮೇಲೆ ಹೋಗುವ ಮಿಲ್ಟ್ರೀ ಸಂದೇಶವಾಹಕರ ಓಡಾಟ. ಹೀಗಾಗಿ ರಸ್ತೆಯನ್ನು ಆಡ್ಡವಾಗಿ ದಾಟಿ ಆ ಬದಿಗೆ ಹೋಗುವುದು ದುಸ್ತರವಾಗಿತ್ತು. ಅದರೊಳಗಿಂದಲೆ ಯಂಗ್-ಸೂನ್ ಧೈರ್ಯದಿಂದ ಮುನ್ನಡೆದಳು. ದೈವದ ದುರ್ವಿಲಾಸ! ಒಂದು ಮೋಟಾರ್ ಸಾಯಿಕಲ್ ಅವಳ ಮೇಲೆ ಹಾಯ್ದು ಬಿಟ್ಟಿತು. ಆದರೂ ಎಂತಹ ಸುದೈವ: ಬಲಗೈ ಒಂದರ ಮೇಲಿಂದಲೇ ಅದು ಹಾಯ್ದು ಹೋಗಿತ್ತು. ಈ ಅಪಘಾತವಾದಾಕ್ಷಣ ಆರೇಳು ಭಾಷೆಗಳಲ್ಲಿ ದುಃಖೋದ್ಗಾರಗಳು ಹೊರಟುವು. ಒಬ್ಬ ಮಿಲ್ಟ್ರೀ ಪೋಲೀಸ್ ಓಡುತ್ತ ಬಂದು, ಯಂಗ್ ಸೂನಳನ್ನು ಎಬ್ಬಿಸಿದ. ಅವಳಾಗಲೇ ಮೂರ್ಛೆ ಹೋಗಿದ್ದಳು. ಬದಿಯಲ್ಲಿಯೆ ಮಿಲ್ಟ್ರೀಟ್ರಕ್ಕು ಹೋಗುತ್ತಿತ್ತು. ಮಿಲ್ಟ್ರೀ ಪೋಲೀಸನು ಕೈ ಮಾಡಿ ನಿಲ್ಲಿಸಿ, ಅವಳನ್ನು ಆಸ್ಪತ್ರೆಗೆ ಒಯ್ಯಲು ಕೇಳಿಕೊಂಡನು. ಆ ಟ್ರಕ್ಕು ೬೦-ಇಂಡಿಯನ್ ಫೀಲ್ಡ್ ಅಂಬ್ಯುಲನ್ಸ್ ಯುನಿಟಿನದಾಗಿತ್ತು. ಪಾವುಡ ಸುತ್ತಿದ ಡ್ರಾಯವ್ಹರ್, ಟ್ರಕ್ಕನ್ನು ನಿಲ್ಲಿಸಿ ಮಿಲ್ಟ್ರೀ ಪೋಲೀಸನಿಗೆ ಸಹಾಯಮಾಡಲು ಧಾವಿಸಿಬಂದನು. ಎದುರು ಅಂಗಡಿಯ ಸಾಲುಗಳಲ್ಲಿ ನಿಂತ ಕೋಚಿಪ್ಪನೂ ಅಪಘಾತ ಸಂಭವಿಸಿದ ಸ್ಥಳಕ್ಕೆ ಧಾವಿಸಿ ಬಂದನು ಅಪಘಾತಕ್ಕೀಡಾದನಳು ತನ್ನ ತಂಗಿಯೇ ಎಂಬುದನ್ನು ಅವನು ಭಾವಿಸುವುದು ಅಸಂಭವವಾಗಿತ್ತು. 'ಯಾವ

ದುರ್ದೈವಿಯೊ, ನೋಡಿ ಹೋಗುವಾ!' ಎಂದು ಅವನು ಗುಂಪಿನಲ್ಲಿಂದ ಮುಂದೆ ಬಂದು ಅವನ ಎದೆ ಧಸಕ್ಕೆಂದಿತು. ಒಮ್ಮೆಲೇ ಚೀರಿ ಅವಳನ್ನು ಅಪ್ಪಿಕೊಂಡ. ಮಿಲ್ಟ್ರೀ ಪೋಲೀಸ್ ಸಿಟ್ಟಿಗೆದ್ದು ಅವಳನ್ನು ಕಸಿದುಕೊಂಡು ಅವನನ್ನು ದೂರ ನೂಕಿದ ಗುರುತಿಸಿದ ಕೆಲವರು, ಆ ಹುಡುಗಿಯು ಅಣ್ಣಾನಿವನೆಂದು ಮಿಲ್ಟ್ರೀ ಪೋಲೀಸನಿಗೆ ತಿಳಿಸಿ ಹೇಳಿದರು. ತಾನು ಬರೆಯಲೇಕೆಸ್ಟರ್ ರಿಪೋರ್ಟಿಗೆ ಇವನಿಂದ ಸಹಾಯವಾಗಬೇಕೆಂದು ಮಿಲ್ಟ್ರೀ ಪೋಲೀಸ್, ಕೋಚಿಪ್ಪನನ್ನು ಸಮಾಧಾನಪಡಿಸುವ ಧ್ವನಿಯಲ್ಲಿ ಮಾತನಾಡಿದ:

"ಓಹೋ ನೀನ್ನ ಇವಳ ಅಣ್ಣನೋ? ನಡೆಯಿರಿ ನಮ್ಮ ಜತೆಯಲ್ಲಿ. ಆಸ್ಪತ್ರೆಗೆ ಹೋಗೋಣ!" ಮೂವರೂ ಆಸ್ಪತ್ರೆಗೆ ನಡೆದರು. ಆಸ್ಪತ್ರೆಯನ್ನು ತಲ್ಪುವವರೆಗೆ ಕೋಚಿಪ್ಪನಿಗೂ ಮೈಮೇಲೆ ಎಚ್ಚರವಿರಲಿಲ್ಲ. ಆಸ್ಪತ್ರೆಯ ಎಮರ್ಜೆನ್ಸಿ ವಿಭಾಗದಲ್ಲಿ ಅವಳನ್ನು ಮಲಗಿಸುವಾಗ ಮಾತ್ರ ಕೋಚಿಪ್ಪನಿಗೆ ಮೈಮೇಲೆ ಎಚ್ಚರ ಬಂದಿತು. ತನ್ನ ಮನೆಮಕ್ಕಳಿದ್ದ ಕೊನೆಯ ಬಂಡವಾಳವನ್ನೆಲ್ಲ ಖರ್ಚು ಮಾಡಿದ ನೋವಿನ ಗಂಭೀರ ಅಘಾತವಾದ ಸ್ಥಳದಲ್ಲಿಯೆ ಮರಳಿ ಬಂದದ್ದು ಅವನಿಗೆ ನೆನಪಾಯಿತು. ಒಮ್ಮೆಲೆ ಬಂದ ದಾರಿಯನ್ನು ಹಿಡಿದು ರಭಸದಿಂದ ಓಡತೊಡಗಿದ. ಮಿಲ್ಟ್ರೀ ಪೋಲೀಸನು ದಂಗು ಬಡಿದು, ಸೀಟಿಯನ್ನು ಊದಿ ಗೇಟಿನಲ್ಲಿದ್ದ ಪೋಲೀಸರಿಗೆ ಅವನನ್ನು ತಡೆಯಲು ಹೇಳಿದ. ಕೋಚಿಪ್ ಅಸಹಾಯಸ್ಥಿತಿಯಲ್ಲಿ ನಿಂತು, ಕೋರಿಯನ್ ಭಾಷೆಯಲ್ಲಿ ಬಾಯಿಗೆ ಬಂದಂತೆ ಬೈಯಲು ತೊಡಗಿದ. ಅವನ ಬೈಗಳೊಳಗಿಂದ ತಿಳಿಯಬಹುದಾದಷ್ಟು ಅವನ ಕರುಣಾಕಥೆಯನ್ನು ಆ ಪೋಲೀಸ, ಮಿಲ್ಟ್ರೀ ಪೋಲೀಸನಿಗೆ ತಿಳಿಸಿ ಹೇಳಿದ ಕೊಂಚ ಕರುಣೆ ಬಂದಿರಬೇಕು ಆ ಮಿಲ್ಟ್ರೀ ಪೋಲೀಸನಿಗೆ. ಯಾಂಗ್-ಸೂನಳನ್ನು ಆಸ್ಪತ್ರೆಗೆ ಸಾಗಿಸಿ, ಮರಳಿ ನೋಟಾರನ್ನು ತೆಗೆದುಕೊಂಡು ಬಂದು ಕೋಚಿಪ್ಪನಿಗೆ "ನಡೆ ನಿನ್ನನ್ನು ಅಲ್ಲಿಗ್ಗಕರೆದುಕೊಂಡು ಹೋಗುವೆ. ಆದರೆ ಮತ್ತೆ ನನ್ನ ಜತೆಯಲ್ಲಿ ನೀನು ಇಲ್ಲಿಗೆ ಬರಲೇಬೇಕು" ಎಂದು ಹೇಳಿದ. ಕೋಚಿಪ್ ತಲೆ ಅಲ್ಲಾಡಿಸಿದ.

ಇಬ್ಬರೂ ಅಘಾತ ಸೃಟಿಸಿದ ಸ್ಥಳಕ್ಕೆ ಬಂದರು. ಕೋಚಿಪ್ ತನ್ನ ನೂಲಿನ ಗಂಟನ್ನು ಶೋಧಿಸತೊಡಗಿದ. ಆದರೆ ಅದು ಯಾವಾಗಲೋ ಕಳವಾಗಿ ಹೋಗಿತ್ತು. ಅವನಿಗೆ ಅಲ್ಲಿ ಕಂಡದ್ದು ಆ ಕಬ್ಬಿಣ ಚಕ್ರ. ಎರಡೇ ತುಂಡಲ್ಲ—ಅದು ನೂರಾರು ತುಂಡಾಗಿತ್ತು. ಜೋಲು ಮುಖ ಮಾಡಿ ಕೋಚಿಪ್ ಮತ್ತೆ ಮೋಟಾರನ್ನೇರಿದ. ಅವನ ಜಾಲಿಗೆ ಜಗತ್ತೇ ಶೂನ್ಯವಾದಂತಾಗಿತ್ತು. ಮೋಟಾರು ಮತ್ತೆ ಆಸ್ಪತ್ರೆಯ ಬಾಗಿಲಲ್ಲಿ ನಿಂತಿತು. ಮಿಲ್ಟ್ರೀ ಪೋಲೀಸನು ಕೋಚಿಪ್ ನನ್ನು ಡಾಕ್ಟರರ ಕಡೆಗೆ ಕರೆದುಕೊಂಡು ಹೋಗಿ, ಡಾಕ್ಟರರಿಗೆ ಅವನ ಪರಿಚಯ ಮಾಡಿಕೊಟ್ಟನು. ಡಾಕ್ಟರನು ಸುದ್ದಿವಿದಿಂದ ಕೋರಿಯನ್ನನೇ ಇದ್ದ. ಅವನು ಕೋಚಿಪ್ಪನ ಜತೆಯಲ್ಲಿ ಕೋರಿಯನ್ ಭಾಷೆಯಲ್ಲಿಯೇ ಮಾತನಾಡತೊಡಗಿದ:

"ನಿಮ್ಮ ತಂಗಿಯ ಕೈಯ ಎಲುವು ಮುರಿದಿದೆ: ಅದನ್ನು ಪ್ಲಾಸ್ಟರು ಹಾಕಿ ಕಟ್ಟಿದ್ದೇನೆ."

"..... .. ...." ಕೋಚಿಪ್ ನಿರುತ್ತರನಾಗಿ ನಿಂತ.

"ಆಪಘಾತ ಎಕ್ಸರೇ ಫೋಟೋ ತೆಗೆದಾಗ, ಮತ್ತೊಂದು ಸಂಗತಿ ತಿಳಿಯಿತು." ಅವಳಿಗೆ ಕ್ಷಯರೋಗ ಅಂಟಿಕೊಂಡಿದೆ. ನೀವು ಸ್ವಲ್ಪ ದುಡ್ಡನ್ನು ಖರ್ಚು ಮಾಡಲೇ ಬೇಕು. ಒಳ್ಳೆಯ ಆಹಾರ, ಔಷಧ ಇವನ್ನು ನೀವು ಅವಳಿಗೆ ಕೊಡಿಸಲೇ ಬೇಕು."

"ಕ್ಷಯ, ಔಷಧ, ಆಹಾರ!" ಕೋಚಿಪ್ಪನಿಗೆ ನಿಂತಲ್ಲಿಯೇ ತಲೆ ತಿರುಗಲಾರಂಭಿಸಿತು. ವಿಚಿತ್ರ ನಗೆ ನಗುತ್ತಲೇ ಉತ್ತರಿಸಿದ: "ಇನ್ನು ಕಳವು ಮಾಡಿಯೇ ತರಬೇಕು ದುಡ್ಡು ಡಾಕ್ಟರ್ ಸಾಹೇಬರೆ!"

ಡಾಕ್ಟರರು ಅವನ ಅಸಹಾಯಕತೆಯನ್ನು ಕಂಡು ಮನ್ಮುಲ ಮರುಗಿದರು. ಅವರಾದರೂ ಎಷ್ಟೆಂದು ಉಪಕಾರ ಮಾಡಬಲ್ಲರು. ಪ್ರತಿಯೊಬ್ಬ ಕೋರಿಯಾದ ಮನುಷ್ಯನೂ ಬಡವನಿದ್ದ. ಯಾರಿಗೆಂದು ಉಪಕಾರ ಮಾಡಬೇಕು? ಡಾಕ್ಟರರು ಸಮಾಧಾನಪಡಿಸುವ ಸ್ವರದಲ್ಲಿಯೇ ಹೇಳಿದರು.

"ಈಗ ಅವೆಲ್ಲ ಇರಲಿ! ಹೋಗು ಎಲ್ಲಯಾದರೂ ಪ್ರಯತ್ನ ಪಡು!"

ಭಾರವಾದ ಮನಸ್ಸಿನಿಂದಲೇ ಕೋಚಿಪ್ ಮನೆಗೆ ಬಂದ. ಮಗ್ಗ ಮುರಿದ ಸುದ್ದಿಯನ್ನು ಕೆ-ಸೂನಗಳಿಂದ ಕೇಳಿದಾಗಲಂತೂ ಅವನಿಗೆ ಹುಚ್ಚೇ ಹಿಡಿದಂತಾಯಿತು. ತಲೆ.ತಲಾಂತರಗಳ ಆಸ್ತಿ, ಆ ರೇಶಿಮೆಯ ವಸ್ತ್ರವನ್ನು ಹಾನನ ಅಂಗಡಿಗೆ ಮಾರ್ಪಟ್ಟಿಸಿ, ೩೦೦೦೦ ವನ್ನುಗಳನ್ನು ಹಿಡಿದುಕೊಂಡು ಕಬ್ಬಿಣದ ಅಂಗಡಿಗಳನ್ನೆಲ್ಲ ತಿರುಗಾಡಿದ. ಆದರೆ ೩೦೦೦೦ ವನ್ನುಗಳಿಗೆ ಕಬ್ಬಿಣದ ಚಕ್ರ ಸಿಗಬಹುದೇ? ಮಗ್ಗ ಸರಿಪಡಿಸುವ ಕನಸು ಕನಸಾಗಿಯೇ ಉಳಿಯಿತು. ಆ ಹುಚ್ಚಿನಲ್ಲಿಯೇ ಓಡುತ್ತ ಮಾರ್ಕೆಟ್ಟಿಗೆ ಬಂದು ಪಾಕನ ಅಂಗಡಿಯನ್ನು ಏರಿದ. ಪಾಕ್ ಕೋಚಿಪ್ಪನನ್ನು ಸ್ವಾಗತಿಸಿದ. ಕೋಚಿಪ್ ವಿನಯದಿಂದಲೇ ಕೇಳಿದ:

"ಪಾಕ್, ದಯವಿಟ್ಟು ನಿಮ್ಮ ಅಂಗಡಿಯಲ್ಲಿ ನನಗೆ ನೌಕರಿಯನ್ನು ಕೊಡಿರಿ!"

"ಜಾಗ ಖಾಲೀ ಇಲ್ಲ!"

"ಎರಡು ತಿಂಗಳ ಮಟ್ಟಿಗಾದರೂ ನೀವು ನನಗೆ ನೌಕರಿಯನ್ನು ಕೊಡಲೇ ಬೇಕು. ಬಂದ ಮುಡ್ಡಿನಿಂದ ಕಬ್ಬಿಣ ಚಕ್ರವನ್ನು ಖರೀದ್ದಿ ಮಾಡಿ ಮಗ್ಗವನ್ನು ಸರಿಪಡಿಸುವೆ. ಮಗ್ಗದಿಂದ ದುಡ್ಡು ಗಳಿಸಿ ನನ್ನ ತಂಗಿಗೆ ಔಷಧಿ ಕೊಡಿಸುವೆ. ನನ್ನ ತಂಗಿಗೆ ಕ್ಷಯರೋಗ ತಗುಲಿದೆಯಂತೆ. ಅವಳು ಮೃತ್ಯುವಿನ ದವಡೆಯಲ್ಲಿದ್ದಾಳೆ. ಅವಳನ್ನು ಉಳಿಸಿದ ಶ್ರೇಯಸ್ಸೆಲ್ಲಾ ನಿಮಗೆ. ದಯವಿಟ್ಟು ನೌಕರಿಯನ್ನು ಕೊಡಬೇಕು!"

"ಊಹೂಂ, ಜಾಗವಿಲ್ಲೆಂದು ಹೇಳಲಿಲ್ಲವೇ?"

"ನನ್ನ ಹೆಸರು ನಿನುಗಿರಬೇಕಿತು" ಎನ್ನುತ್ತಲೇ ಕೋಚಿಪ್ ಸೌಫ್ ಗೇಟಿನತ್ತ ನಡೆದ. ಮೈಮೇಲೆ ಪರಿವೆಯಿಲ್ಲದೆ ನಡೆದ ಕೋಚಿಪ್ಪನ ಹೆಗಲ ಮೇಲೆ ಯಾರೋ ಕೈಯನ್ನು ಇಟ್ಟರು. ಕೋಚಿಪ್ ನಿರ್ಲಪ್ತ

ಕ್ಷಣದಿಂದ ಹೊರಳಿ ನೋಡಿದ. ಸಂ. ರಾ. ಸಂಘದ ಒಬ್ಬ ಯುರೇಸಿ ಮನ್ ಸೈನಿಕ, ಕೋಚಿಪ್ಪನ ಬೆನ್ನಮೇಲೆ ಕೈ ಸವರಿ ಅವನನ್ನು ಬದಿಯ ಸಂದಿಗೆ ಕರೆದೊಯ್ದು ಕೇಳಿದ:

"ನಾನು ನಿನ್ನನ್ನು ಗುರುತಿಸುತ್ತೇನೆ. ನೀನೆ ಅಲ್ಲವೇ ಕೋಚಿಪ್? ನಿನಗೆ ಡಾಲರುಗಳ ಅವಶ್ಯಕತೆ ಇದೆಯೇ?"

"ಊ ಹೂಂ, ಇಲ್ಲ!"

"ಮತ್ತೆ ಈಗ ತಾನೇ ಪಾಕನ ಅಂಗಡಿಯಲ್ಲಿ ನೀನು ನೌಕರಿ ಮಾಡುತ್ತಿದ್ದಿಲ್ಲವೇ?"

"ಹೌದು, ನನ್ನ ಮಗ್ಗ ಮುರಿದಿದೆ."

"ಹಾಗಾದರೆ ನಾನು ನಿನಗೆ ಡಾಲರುಗಳನ್ನು ಕೊಡುವೆ; ಆದರೆ ಈ ಚೀಲ ನಿನಗೆ ಕೊಡುವೆ. ಈ ಚೀಲದಲ್ಲಿದ್ದ ಅಚ್ಚಾದ ಕಾಗದಗಳನ್ನು ನೀನು ಮನೆ-ಮನೆಗೆ ಹಂಚುವ ಕೆಲಸ ಮಾಡಬೇಕು!"

ಕೋಚಿಪ್ ಚೀಲದ ಮೂಲೆಗಿದ್ದ ಕೆಂಪುನಕ್ಷತ್ರವನ್ನು ಲಕ್ಷ್ಯಕೊಟ್ಟು ನೋಡಿ, ತಲೆ ಅಲ್ಲಾಡಿಸಿ "ನಾನು ಈ ಕೆಲಸ ಮಾಡಲಾರೆ" ಎಂದು ಹೇಳಿದ.

ಆ ಸೈನಿಕನ ಧ್ವನಿ ಒರಟಾಯಿತು:

"ನೋಡು ನೆನಪಿನಲ್ಲಿಡು ನಿನ್ನ ಅಣ್ಣ. ಇಲನೆಯ ಸಮಾಂತರ ಪಟ್ಟಿಯ ಆ ಬದಿಗಿದ್ದಾನೆ. ನೀನು ಈ ಕೆಲಸ ಮಾಡಲು ಒಪ್ಪದಿದ್ದರೆ, ನಿನಗೆ ಗೌಪ್ಯವಾಗಿ ಸುದ್ದಿಯನ್ನು ಕಳಿಸುವೆ. ನಿನ್ನ ಅಣ್ಣನ ದೇಹವನ್ನು ತುಂಡು-ತುಂಡಾಗಿ ಮಾಡಬಲ್ಲರು ಈಗಾಗಲೇ ತಂಗಿಗೆ ಕ್ಷಯ; ಅಣ್ಣನನ್ನೂ ಕಳೆದುಕೊಳ್ಳಬೇಡ!"

ತಿರಸ್ಕೃತ ದೃಷ್ಟಿಯಿಂದ ನೋಡುತ್ತ ಕೋಚಿಪ್ ಆ ಚೀಲವನ್ನು ತನ್ನ ಕೈಗೆ ತೆಗೆದುಕೊಂಡು, ಮುಖ್ಯಬೀದಿಗೆ ಬಂದು ಚೀಲವಲ್ಲಿದ್ದ ಕಾಗದಗಳನ್ನು ತೆಗೆದು ನೋಡಿದ. ಅವುಗಳ ಮೇಲೆಲ್ಲ ಕೆಂಪು ನಕ್ಷತ್ರಗಳ ಚಿಹ್ನೆಗಳು; ಉತ್ತರ ಕೋರಿಯದ ಧ್ವಜಚಿಹ್ನೆಗಳು; ಪ್ರಚಾರ ಪತ್ರಿಕೆಗಳು. ಕೋಚಿಪ್ ಕಳವಳಗೊಂಡ. ಓಡುತ್ತಲೇ ಮಿಲ್ಟೀ ಪೋಲೀಸನನ್ನು ಹತ್ತಿರ ಕರೆದು, ಆ ಯುರೇಸಿಯನ್ ಸೈನಿಕನ ವಿಶ್ವಾಸಘಾತಕತನವನ್ನು ಬಯಲಿಗೆಳೆದ. ಮಿಲ್ಟೀ ಪೋಲೀಸರು ಆ ಸೈನಿಕನ ವಸ್ತ್ರಗಳನ್ನೆಲ್ಲ ಶೋಧಿಸಿದರು. ಉತ್ತರ ಕೋರಿಯದ ಸಾಹಿತ್ಯ! ಅಕ್ಷೇಪಾರ್ಹ ಸಾಹಿತ್ಯ! ಅವನನ್ನಳಿದುಕೊಂಡು ಮಿಲ್ಟೀ ಪೋಲಿಸರು ತಡೆದರು.

ಊಟದ ಸಮಯವಾಗತೊಡಗಿತ್ತು. ಕೋಚಿಪ್ ಒಂದರೆ ನಿಮಿಷ ತನ್ನನ್ನು ತಾನೇ ಹಳಿದುಕೊಂಡ; ತಾನಾಗಿ ಬಂದ ಹೆಣವನ್ನು ಸ್ವೀಕರಿಸಲಿಕ್ಕಾಗಲಿಲ್ಲವೆಂದು, ಅಂತಹ ವಿಚಾರ ಬಂದದ್ದಕ್ಕೆ ಮತ್ತೆ ತನ್ನ ಮೇಲೆಯೇ ಕೋಪಿಸಿಕೊಂಡ.

ಹೊಟ್ಟೆ ಹಸಿದಿತ್ತಾದರೂ ಮುಖದಲ್ಲಿ ನಿರ್ವಿಣ್ಣವಾದ ಗೆಲವಿನ ನಗೆ ಮೂಡಿತ್ತು.

(ಎಲನೆಯ ಪುಟದಿಂದ ಮುಂದುವರಿದುದು)

ರೆ ಪುಸ್ತಕಗಳನ್ನೂ ಕಾಲಕಾಲಕ್ಕೆ ವಿಮರ್ಶಿಸುತ್ತಿರಬೇಕೆಂದು ಲವು ಜನರಿಂದ ಸಲಹೆಗಳು ಬಂದಿವೆ. ತನ್ನ ವಾಚಕರಿಗೆ ಬೇಕೇ ನಿಸುವಂತಹ ಅಂಕಣಗಳಿಗೆ ಜಯಂತಿ ಅವಕಾಶವನ್ನು ಕೊಟ್ಟೇ ಸುವುದು.

ಜಯಂತಿಯಲ್ಲಿ ಹೊಸ ಹೊಸ ಸೌಂದರ್ಯವಿಭಾಗಗಳನ್ನೂ ಕ್ತಿ-ಸತ್ತ್ವಗಳನ್ನೂ ತುಂಬಿ, ಅದನ್ನು ಕರ್ನಾಟಕದಲ್ಲಿಯ ಆದರ್ಶ ಪತ್ರಿಕೆಯನ್ನಾಗಿಸಬೇಕೆಂದು ನಮ್ಮ ಅಪೇಕ್ಷೆಯಿದೆ; ಕಲ್ಪನೆ ಉತ್ಸಾಹಗಳೂ ಇವೆ. ಆದರೆ ಆರ್ಥಿಕಸಂಕಟಗಳು ಎಲ್ಲವುಗಳ ಮೇಲೂ ತಣ್ಣೀರನ್ನು ಎರಚುತ್ತಲಿದೆ.

ಕನ್ನಡನಾಡಿನಲ್ಲಿಯ ಎಲ್ಲ ಶಾಲೆ-ಕಾಲೇಜುಗಳೂ ವಾಚನಾಲಯಗಳೂ ಜಯಂತಿಯನ್ನು ತಪ್ಪದೆ ತರಿಸಿಕೊಳ್ಳಬೇಕು. ವರ್ಷಕ್ಕೆ ರೂ. ಕೊಟ್ಟು ಚಂದಾದಾರರಾಗುವುದೆಂದರೆ, ಯಾವ ಸುಶಿಕ್ಷಿತ ಕುಟುಂಬಕ್ಕೂ ಭಾರವಲ್ಲ. ಚಂದಾದಾರರ ಬಳಗದ ಬಲ್ಮೆಯೆ ಆಧಾರದಿಂದಲೇ ಜಯಂತಿ ಮುಂದುವರಿಯಬೇಕಾಗಿದೆಯೆಂಬುದನ್ನು ದಯವಿಟ್ಟು ಎಲ್ಲರೂ ಲಕ್ಷ್ಯದಲ್ಲಿ ಇಟ್ಟುಕೊಳ್ಳಬೇಕೆಂದು ನಮ್ಮ ವಿನ್ನಹ.

ಜಯಂತಿಗೆ ಸಹಾಯಧನ

ಕರ್ನಾಟಕ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಶ್ರೀಮಾನ್ ಡಿ. ಸಿ ಪಾವಟೆಯವರು, ತಮ್ಮ ವರ್ಷದ ಚಂದಾಹಣವನ್ನಲ್ಲದೆ ೧೦ ರೂ ಸಹಾಯಧನವನ್ನು ಕಳುಹಿ, ಜಯಂತಿಗೆ ಶುಭವನ್ನು ಕೋರಿ ಕಾಗದ ಬರೆದಿದ್ದಾರೆ. ಅವರ ಸಹಾನುಭೂತಿ ಸಹಕಾರಗಳಿಗಾಗಿ ನಾವು ತುಂಬ ಕೃತಜ್ಞರಾಗಿದ್ದೇವೆ.

—ಸಂಪಾದಕರು

—ಗೆ

(ನವ್ಯಕವನ)

ಶ್ರೀ ಶಾಂತಿನಾಥ ದೇಸಾಯಿ ಎಂ. ಎ. ಮುಂಬಯಿ

ಮುಗಿಯಿತಲ್ಲ ಆಲೆದಾಟ
ಮರುಭೂಮಿ–ಕಾನನ–ಹಸಿವು–ನೀರಡಿಕೆ–ಸಿಂಹ–ಸರ್ಪಗಳು
ಸರಿದು ಹೋದುವು. ಹಿಂದೆ ಉಳಿದುವು :
ಅನೆಲ್ಲ ಬರಿ ನೆನಪುಗಳು !
ನಾ ಕಂಡ ಕಳನಂತ ಕನಸುಗಳು .... ?
ಕಣ್ಣು ಮುಚ್ಚಿ ಕಣ್ಣ ತೆರೆವುದರೊಳಗೆ
ಕಂಡೆ ನನ್ನನ್ನು ಈ
ನಡುಗತ್ತೆಯ ದಂಡೆಯ ಮೇಲೆ ....
ತಂಗಾಳಿ–ನಸುಕು–ಸೂರ್ಯೋದಯ–ಕೆಂಬಣ್ಣ–ಬಣ್ಣ
ಬಣ್ಣಗಳ ಹೂವು
ಅಹಾ !.... ಹಾಯಾಗಿ ಜಗಕೆ ಮೈಯೊಡ್ಡಿ ನಡೆದೆ.
ಅಂತೂ ಮುಗಿಯಿತಲ್ಲ ಆಲೆದಾಟ, ಸಾಹಸದ ಹಾರಾಟ !
(ಅದು ಎಲ್ಲ ನಿನ್ನ ಮಾಯೆಯಾಟ !)
ಅಹಾ ! ಇದು ನನ್ನದೇ ದ್ವೀಪ
ಅಲ್ಲಿ ಬೆಳಗುವ ಎಲ್ಲ ದೀಪಗಳೂ ನನ್ನವು
ಹಸುರು–ಹೂವು–ಗುಡ್ಡ–ಬೆಳುದಿಂಗಳು
ನಸುಕು–ರಾತ್ರಿ–ಮಳೆ–ಗಾಳಿಗಳು
ಎಲ್ಲ ನನ್ನವು
(ನಿನ್ನ ಕೃಪೆಯಿಂದ !)
ಅಗೊ ಅಲ್ಲಿ ನಿಂತಿರುವ ಮಠ–ಮಂದಿರ–ಮನೆಗಳೆಲ್ಲ
ನನ್ನವು
ನನ್ನ ರಾಜ್ಯವೇ ಉದಯಿಸಿದೆ.
ನನ್ನ ಪಟ್ಟಗಟ್ಟಿದೆ ನೀನು
ಹಾದಿಗೆಟ್ಟ ವಿಶ್ವಪ್ರಜೆಯೊರ್ವನನ್ನು
ಎಳತಂದು ಮಾಡಿದೆ
ಒಂದು ದೇಶದರಸನನ್ನು
ತಿರುಕನೊಂದು ಕನಸು ನನಸಾಯಿತೀಗ !
ಅಹುದೆ — ಮುಂದೇನು ?
ಅವನುಳಿದ ಕನಸುಗಳ ಗತಿಯೇನು ?
ನೂರಾರು ದೇಶಗಳಲಂಡಲೆವ ಸ್ವಾತಂತ್ರ್ಯವಿನ್ನೆಲ್ಲಿ
ನಿನ್ನ ಮಾಂಡಲಿಕನಾದ ಮೇಲೆ ?
ಮರುಭೂಮಿ–ಕಾನನ–ಹಸಿವು–ನೀರಡಿಕೆ–ಸಿಂಹ–ಸರ್ಪಗಳ
ದುಃಖಾಮೃತವೆಲ್ಲಿ ?
ಸಾಯ್‌ಕ್ಲೋಪ್ಸ್, ಕ್ಯಾಲಪ್ಸೊ, ಸ್ಕಿಲಾ, ಚಾರಿಬ್ಡಿಸ್,
ಸಾಯರೆನ್–ಸರ್ಸ :
ಯುಲೀಸಿಯಸ್ಸನ ಆಯುಷ್ಯವೆಲ್ಲಿ ?
ಥೂ, ಹಾಳು ಮನಸು .... ಮುಂದಿನದು ಮುಂದೆ !
ಅಂತೂ–ಈಗ
ಮುಗಿಯಿತಲ್ಲ ಆಲೆದಾಟ....ಮುಗಿಯಿತಲ್ಲ
ಧೀರ–ಸಾಹಸ–ಹೆಣಗಾಟ.....
ಇನ್ನು ಮೇಲೆ
ನನ್ನ ರಾಜ್ಯದಲ್ಲಿ
ದಿನಾಲು ಪಾಯಸ–ಹೋಳಿಗೆ–ತುಪ್ಪ–ಮದ್ಯ–ವೀಳ್ಯ–
ಸಿಗರೇಟುಗಳ
ಸೇವಿಸುತ್ತ
ಈಸುತ್ತ
ಜೈಸುತ್ತ
ಇರುವುದೇ ಸಾಜ !

ಜಯಂತಿ ೧೬ನೆಯ ವರ್ಷದ ಸಂಚಿಕೆಗಳು

೧೬ನೆಯ ವರ್ಷದ ಜಯಂತಿಯ ೧೨ ಸಂಚಿಕೆಗಳೂ ನಮ್ಮಲ್ಲಿ ಮಾರಾಟಕ್ಕೆ ದೊರೆಯುವುವು. ಸುಮಾರು ೫೫ ಜನರಿಗೆ ಮಾತ್ರ ಪೂರಯಿಸಲಿಕ್ಕೆ ಸಾಧ್ಯವಿದೆ. ಬೇಕಾದವರು ಐದುರೂಪಾಯಿಗಳನ್ನು ಮನಿಯಾರ್ಡರ್ ಮೂಲಕ ಕಳುಹಬೇಕು. ಅಂಚೆಯ ವೆಚ್ಚವನ್ನು ನಾವೇ ನೋಡಿಕೊಳ್ಳುವೆವು.

ಹಲವಾರು ಸುಂದರ ಸಣ್ಣಕತೆಗಳು, ಏಕಾಂಕ ನಾಟಕಗಳು, ರಸವತ್ತಾದ ಕವನಗಳು ವ್ಯಕ್ತಿಚಿತ್ರ–ಜೀವನಚರಿತ್ರೆ–ಲಘುಪ್ರಬಂಧಗಳು ಇವುಗಳಲ್ಲಿ ತುಂಬಿ ತುಳುಕುತ್ತಿವೆ. ವಿದ್ಯಾರ್ಥಿಗಳಿಗೆ ೪ ರೂಪಾಯಿಗಳಿಗೇ ಇವುಗಳನ್ನು ಸಲ್ಲಿಸುವೆವು. ಬೇಕಾದವರು ಬೇಗನೆ ಹಣಕಳುಹಿ ವಿಳಾಸವನ್ನು ತಿಳುಹಬೇಕು.

ವ್ಯವಸ್ಥಾಪಕ : 'ಜಯಂತಿ' ವಿಜಯರೋಡ್, ಧಾರವಾಡ

ಸಾದರ ಸ್ವೀಕಾರ

೬೬ **ಧನ್ವಂತರಿ** (ಮಾಸಪತ್ರಿಕೆಯ ಜಯಂತಿ ವಿಶೇಷ ಸಂಚಿಕೆ) ಸಂಪಾದಕರು ಮತ್ತು ಪ್ರಕಾಶಕರು ಶ್ರೀಮಾನ್ ಆದ್ಯ ಅನಂತಾಚಾರ್ಯರು, ಧನ್ವಂತರಿ ಕಾರ್ಯಾಲಯ, ವಿಜಾಪುರ. ಡೆ. ೧೭೮ ಪುಟಗಳು. ಬೆಲೆ ೦—೮—೦.

ಇದೊಂದು ಆಯುರ್ವೇದ ವಿಷಯಕವಾದ ಮಾಸಪತ್ರಿಕೆ. ಇದನ್ನು ವಿದ್ವಾಂಸರಾದ ಸಂಪಾದಕರು ಕೇವಲ ಹಟದಿಂದಲೆ ನಡೆಯಿಸಿಕೊಂಡು ಬಂದಿದ್ದಾರೆ. ಜನತೆಯ ಸಹಕಾರ ದೊರೆಯದುದರಿಂದ, ಈ ಪತ್ರಿಕೆಯೂ ಸೊರಗಿದ ವೈಯಿಂದಲೇ ಹೊರಡುತ್ತದೆ. ಇದಕ್ಕೆ ಕಾರಣವೆಂದರೆ ಆಯುರ್ವೇದದ ವಿಷಯದಲ್ಲಿರುವ ಜನತೆಯ ಉಪೇಕ್ಷೆಯೆ.

ಒಂದು ಕಾಲದಲ್ಲಿ ಭಾರತೀಯರ ಆರೋಗ್ಯ-ಸ್ವಾಸ್ಥ್ಯಗಳನ್ನು ನಮ್ಮ ಆಯುರ್ವೇದವಿಜ್ಞಾನವೇ ನೋಡಿಕೊಳ್ಳುತ್ತಿತ್ತು. ಆಗ ನಮ್ಮ ದೇಶದ ಜನರ ಆಯುಷ್ಯದ ಪ್ರಮಾಣ ಹೆಚ್ಚಿಗಿತ್ತು. ಜನರಲ್ಲಿ ಶಕ್ತಿ-ಸಾಮರ್ಥ್ಯಗಳೂ ಹೆಚ್ಚಿಗಿದ್ದುವು. ಆಯುರ್ವೇದವು ಮಾನವ ಜೀವನವನ್ನು ಸರ್ವತೋಮುಖವಾಗಿ ನೋಡಿ ಸಮನಿಸಿದ ಸಿದ್ಧಾಂತಗಳಿಂದ ಕೂಡಿದೆ. ನಮ್ಮ ದೇಶದ ಹವೆ, ನೀರು, ಆಹಾರ, ವಿಹಾರ ಇವುಗಳನ್ನು ಲಕ್ಷ್ಯದಲ್ಲಿರಿಸಿಕೊಂಡೇ ಅದು ಬೆಳೆದುಬಂದಿದೆ. ಆದರೂ ಇಂದು ಆಯುರ್ವೇದವು ಜನತೆಯಿಂದಲೂ ಸರಕಾರದಿಂದಲೂ ನಿರ್ಲಕ್ಷ್ಯಸಲ್ಪಟ್ಟಿದೆಯೆಂದೇ ಹೇಳಬಹುದು.

ಪರಕೀಯರಾದ ಬ್ರಿಟಿಷರು ತಮ್ಮ ಕೈ ನಡೆಯುವಾಗ, ಎಲ್ಲ ಬಗೆಯಿಂದಲೂ ನಮ್ಮನ್ನು ಗುಲಾಮರನ್ನಾಗಿ ಮಾಡಿದರು; ಅದೇನೋ ಸರಿಯೆ! ಈಗ ನಮ್ಮದೇ ಆದ ಸರಕಾರ ಬಂದರೂ, ಭಾರತೀಯರ ಬುದ್ಧಿ-ವಿಜ್ಞಾನಗಳಿಗೆ ಈಗಲೂ ಬೆಲೆಯಿಲ್ಲವಾಗಿದೆ. ನಮ್ಮ ರಾಜಕೀಯ ಗುಲಾಮಗಿರಿಯು ಹೊರಟುಹೋಗಿದ್ದರೂ ಮಾನಸಿಕ ಗುಲಾಮಗಿರಿಯು ಇದ್ದಂತೆಯೆ ಇದೆ—ಅಷ್ಟೇ ಏಕೆ, ಮೊದಲಿಗಿಂತ ಹೆಚ್ಚಾಗುತ್ತ ಹೊರಟಿದೆ. 'ಇಂಗ್ಲಿಷ್ ಭಾಷೆಯನ್ನು ನಾನೆಂದೂ ಬಿಡಲಾಗದು' ಎಂದು ಹೇಳುವ ಇಂಗ್ಲಿಷಿನ ಮಾನಸಪುತ್ರರು, ತಮಗೆರುವ ಅಧಿಕಾರಸ್ಥಾನದ ಬಲದಿಂದ ಕೂಗಿಕೊಳ್ಳುತ್ತಲಿವ್ವಾರೆ. ಆಯುರ್ವೇದವನ್ನೇ ನಮ್ಮ ದೇಶಕ್ಕೆ ಅನ್ಯಾಯಿಸೋಣವೆಂದರೆ, ಅದನ್ನು ಉಪೇಕ್ಷಿಸುವ ಆರೋಗ್ಯಾಧಿಕಾರಿಗಳೇ ನಮ್ಮಲ್ಲಿ ಹೆಚ್ಚಾಗಿದ್ದಾರೆ. ಇಂತಹ ವಿರೋಧಪೂರ್ಣ ಸ್ಥಿತಿಯಲ್ಲಿಯೂ ಶ್ರೀಮಾನ್ ಆದ್ಯ ಅನಂತಾಚಾರ್ಯರಂತಹ ಆಯುರ್ವೇದಾಭಿಮಾನಿಗಳು, ಅದರ ಪ್ರಗತಿ-ಪ್ರಕರ್ಷಕ್ಕಾಗಿ ಹೆಣಗಾಡುತ್ತಿರುವುದು ಅಭಿನಂದನೀಯ ಸಂಗತಿಯಾಗಿದೆ.

'ಧನ್ವಂತರಿ' ಪತ್ರಿಕೆಯು ಜನಪ್ರಿಯವಾಗಿ ಬಹುಕಾಲ ಬಾಳಲಿ; ಆಯುರ್ವೇದದ ಮಹತಿಯೆಂತಹದೆಂಬುದನ್ನು ಜೀವನಕ್ಕೆ ಅನ್ವಯಿಸುವಂತೆ ತಿಳುಹಿಸಿಕೊಡುತ್ತಿರಲಿ.

೬೭ **ಗೀತಾಂಜಲಿ** (ಕವನ ಸಂಕಲನ) ಕವೀಂದ್ರ ರವೀಂದ್ರರ ಗೀತಾಂಜಲಿಯ ಕವನಗಳನ್ನು ಶ್ರೀಮಾನ್ ನರೇಗಲ್ಲ ಪ್ರಲ್ಹಾದರಾಯರು ಎಂ. ಎ, ಬಿ. ಟಿ. ಅವರು ಕನ್ನಡದಲ್ಲಿ ಭಾಷಾಂತರಿಸಿ ಸಂಗ್ರಹಿಸಿದ್ದಾರೆ. ಧಾರವಾಡದ ಮಿಂಚಿನಬಳ್ಳಿಯ ೧೭ನೆಯ ವರ್ಷದ ೧೧ನೆಯ ಕುಡಿ. ಕ್ರೌ. ೪ ೧೧೨ ಪುಟಗಳು. ಬೆಲೆ ಉತ್ತಮಪ್ರತಿಗೆ ೧ -೮—೦; ಸಾಮಾನ್ಯಪ್ರತಿಗೆ ೧—೦—೦.

೬೮ **ಕನ್ನಡಗುಡಿ** (ತ್ರೈಮಾಸಿಕದ ಸಂಯುಕ್ತಕರ್ನಾಟಕ ಸಂಚಿಕೆ) ಸಂಪಾದಕರು ಶ್ರೀಮಾನ್ ವರದರಾಜ ಆದ್ಯ, ಹೊರನಾಡ ಕನ್ನಡಿಗರ ಸಂಸ್ಥೆ, ೩೨ ಬಾಲಕೃಷ್ಣ ಸದನ, ಗೋಖಲೇ ರೋಡ್—ನಾರ್ತ್, ಮುಂಬಯಿ ೧೫. ಕ್ರೌ. ೪ ೧೮೦ ಪುಟಗಳು. ಬೆಲೆ ೨—೦—೦.

ಕರ್ನಾಟಕದಿಂದ ಹೊರಗೆ ಹೋಗಿ ನೆಲಸಿರುವ ಕನ್ನಡಿಗರಿಗೆ ಕರ್ನಾಟಕದಲ್ಲಿ ನಡೆದಿರುವ ಅನೇಕ ಚಟುವಟಿಕೆಗಳು ತಿಳಿಯುವಂತೆ, ಬೇರೆ ಬೇರೆ ಜನರಿಂದ ಲೇಖನಗಳನ್ನು ಬರೆಯಿಸಿ ಇದರಲ್ಲಿ ಪ್ರಕಟಿಸಲಾಗಿದೆ. ಲೇಖಕವರ್ಗದಲ್ಲಿ ಶ್ರೀಯುತರುಗಳಾದ ದೇಸಾಯಿ ಪಾಂಡುರಂಗರಾಯ, ರಾ. ವೆಂಕಟೇಶಮೂರ್ತಿ, ಶಿವರಾಮ ಕಾರಂತ, ಕು. ಶಿ. ಹರಿದಾಸಭಟ್ಟ ಮೊದಲಾದವರಿರುವರು. ಗಡಿನಾಡಿನ ಸಮಸ್ಯೆಗಳನ್ನು ಕುರಿತು ಬರೆದ ಶ್ರೀ. ಜೋಶಿ ಅರವಿಂದರಾಯರು, ಶ್ರೀ. ಕೋ. ಚೆನ್ನಬಸಪ್ಪ, ಶ್ರೀ. ಸಿ. ಕೆ. ನಾಗರಾಜರಾವ್ ಇವರ ಲೇಖನಗಳು ತುಂಬ ಚೆನ್ನಾಗಿವೆ. 'ಸಾಹಿತ್ಯದರ್ಶನ' ಎಂದಿರುವ ಒಂದು ಲೇಖನ, ಅನೇಕ ಬಗೆಯ ವಾದ-ವಿವಾದಗಳಿಗೆ ಆಸ್ಪದ ಕೊಡುವಂತಿದೆ. ಆಧುನಿಕಸಾಹಿತ್ಯವನ್ನು ಹೇಳುವಾಗ, ಕೆಲವೊಂದು ಪ್ರಮುಖ ಸಾಹಿತ್ಯಿಕರ ಹೆಸರುಗಳನ್ನು ಬಿಟ್ಟುದೂ, ಯಾವ್ಯಾವುದೋ ತನುಗೆ ಬೇಕಾದ ಹೆಸರುಗಳನ್ನು ತಾಣಿಸಿದುದೂ ಆಶ್ಚರ್ಯವನ್ನುಂಟುಮಾಡುವಂತಹದಾಗಿದೆ. ವಿಮರ್ಶಕನೂ ಚರಿತ್ರಕಾರನೂ ಪಕ್ಷಪಾತಿಯಾಗಿ ಹೊರಟರೆ, ಸತ್ಯಕ್ಕೆ ಅನ್ಯಾಯ ಮಾಡಿದಂತಾಗುವುದು.

೬೯ **ವಿಕಾಸ** (ದೀಪೋತ್ಸವ ವಿಶೇಷಸಂಚಿಕೆ) ಸಂಪಾದಕರು ಮತ್ತು ಪ್ರಕಾಶಕರು ಶ್ರೀ. ಎಸ್. ಕೆ. ದೇಶಪಾಂಡೆ, ವಿಕಾಸ ಪಬ್ಲಿಕೇಶನ್ಸ್, ಹೆಬಸೂರು ಬಿಲ್ಡಿಂಗ್, ಹುಬ್ಬಳ್ಳಿ. ಡೆ. ೧೭೮ ಪುಟಗಳು ಬೆಲೆ ೦—೬—೦.

ಆಕರ್ಷಕವಾದ ಚಿತ್ರದಿಂದ ಕೂಡಿದ ಸಂಚಿಕೆ. ಸಾಮಾನ್ಯ ಜನರಂಜಕವೆನಿಸುವಂತಹ ವಿವಿಧಲೇಖಗಳು ಇದರಲ್ಲಿವೆ.

೭೦ **ಕನ್ನಡಿಗ** (ವಾರಪತ್ರಿಕೆಯ ಕನ್ನಡ ಸಾಹಿತ್ಯಾಂಶ). ಸಂಪಾದಕರು ಮತ್ತು ಪ್ರಕಾಶಕರು ಶ್ರೀಮಾನ್ ಹುಚ್ಚೇಶ್ವರ ಮೇದಿ, ವಿಶ್ವಭಾರತಿ ಪಬ್ಲಿಕೇಶನ್ಸ್, ಹುಬ್ಬಳ್ಳಿ. ಕ್ರೌ. ೪ ೧೦ ಪುಟಗಳು. ಬೆಲೆ ೦—೮—೦.

ಕನ್ನಡ ಸಾಹಿತ್ಯವನ್ನು ಪರಿಚಯಮಾಡಿಕೊಡುವಂತಹ ಒಳ್ಳೆಯ ಲೇಖನಗಳು ಸಂಕಲಿತವಾಗಿವೆ. ಸಂಚಿಕೆ ಸಂಗ್ರಾಹ್ಯವಾಗಿದೆ.

ಓದಿದರೆ ರಸಪೂರ್ಣ ಕಥೆಗಳು, ಆಡಿದರೆ ಮನೋಹರ ನಾಟಕಗಳು!



ಶ್ರೀ 'ಆನಂದಕಂದರು' (ಜಿ.ಬಿ.ಜೋಶಿ ಕೃಷ್ಣಕರ್ಣ) ಇಂಥ ಒಳ್ಳೆಯ ರೂಪಕಗಳನ್ನು ಪುಸ್ತಕರೂಪದಲ್ಲಿ ತಂದು ಕನ್ನಡಿಗರಿಗೆ ಉಪಕಾರಮಾಡಿದ್ದಾರೆ. ಅವರ ಚಿತ್ರಕ ಸಂಭಾಷಣೆಗೆ, ತಿಳಿಯಾದ ನಗೆಯ ಜುಗ್ಗಿಗೆ, ಮನಮೆಚ್ಚುವ ಪಾತ್ರಸಿರೂಪಣೆಗೆ, ಪ್ರತಿಯೊಬ್ಬರೂ ಓದಲೇಬೇಕಾದ ಕೃತಿ 'ಬೆಂದ ಹೃದಯ'.

—ಪುಸ್ತಕಪ್ರಪಂಚ (ಸಪ್ಟೆಂಬರ್ ೧೯೫೪)

ಕ್ರೌ. ಅ. ೧೩೦ ಪುಟಗಳು ಬೆಲೆ ೧–೪–೦

ಶರತ್ ಪ್ರಕಾಶನಮಂದಿರ, ವಿಜಯರೋಡ್, ಧಾರವಾಡ.

Printed by N. A. Hoskeri at the Vijaya Press, Dharwar, and published for the Proprietors

ಜಯಂತಿ

ಬ್ರವರಿ

ಗಳಿಗೆ

ಬೆಲೆ:

ಆಣೆಗಳು

ಅಭಯವಾಣಿ:

ಧರ್ಮವು ಕಳಿಗುಂದಿ ತಲೆವಾಗಿದಾಗ-ಅ-
ಧರ್ಮವು ಮಲೆತುನಿಂತಾಗ—
ಮರ್ಮವನರಿ ಪಾರ್ಥ ನನ್ನನ್ನು ನಾನೆಯೆ
ನಿರ್ಮಿಸಿಕೊಳುವೆನಾಗಾಗ ॥

* * *

ಒಳ್ಳೆಯ ಜನರನು ಒಲಿದು ಸಲಹಲೆಂದೇ,
ಕಳ್ಳಯವರನೆಲ್ಲ ತವಿಸಲೆಂದೇ—
ಸುಳ್ಳಲ್ಲ, ಸದ್ಧರ್ಮ ಸಂಸ್ಥಾಪಿಸಲೆಂದೇ
ಕೊಳ್ಳುವೆ ಭವನನು ಯುಗ-ಯುಗದೆ ॥

ಭದ್ರಂ! ಶುಭಂ!! ಮಂಗಲಂ!!

ಈ ಸಂಚಿಕೆಯಲ್ಲಿ :

ಸಾಹಿತ್ಯಿಕ ಮತ್ತು ಸಾಮಾಜಿಕ ಪ್ರಜ್ಞೆ (ಸಂಪಾದಕೀಯ)
ಸಂಪಾದಕರು ೩೨೫

ನಾಡನಡೆ (ಸಾಂದರ್ಭಿಕ ಟಿಪ್ಪಣಿಗಳು)
ಕಾಲಭೈರವ ೩೨೭

ಸಾಹಿತ್ಯವಿಮರ್ಶೆಯ ಶಿಕ್ಷಣದಂಗ (ಪುನಃಪ್ರಾರಂಭ)
ಸಂಪಾದಕರು ೩೨೮

ಸಹವಾಸ (ಒಂದು ಜೀವನಕಥೆ)
ಶ್ರೀ. ಬಳ್ಳಾರಿ ಸುಬ್ರಾಯ ಅಡಿಗರು, ಗಂಗೊಳ್ಳಿ ೩೩೯

ಋಣಬಂಧ (ನವ್ಯಕವನ)
ಶ್ರೀ. ಅರವಿಂದ ನಾಡಕರ್ಣಿ ಬಿ. ಎ., ಎಲ್‌ಎಲ್. ಬಿ. ಮುಂಬಯಿ ೩೩೮

ಮಹಾಸ್ಮೃತಿ - ಸಾರ್ಕಲ್ ಟಿಪ್ಪೋ (ವ್ಯಕ್ತಿ ಪರಿಚಯ)
ಶ್ರೀ. ಜೋ. ವೆಂಕಟೇಶ, ಧಾರವಾಡ ೩೩೯

ಸರ್ಜಿಯನ್ ನೈಟ್ (ಅನುವಾದಿತ ಕತೆ)
ಶ್ರೀ. ಗೋವರ್ಧನಾಚಾರ್ಯ ಗಲಗಲಿ ಎಂ. ಎ., ಬಿ. ಟಿ. ಧಾರವಾಡ ೩೪೩

ಬೌದ್ಧಧರ್ಮದ ತತ್ತ್ವಗಳು (ಪರಿಚಯಾತ್ಮಕ)
ಶ್ರೀಮತಿ ಸರೋಜಿನಿ ಮಹಿಷಿ ಎಂ. ಎ ಬೆಳಗಾಂವಿ ೩೪೭

ಮಾಯಾಕವಚ (ಶ್ರುತಿರೂಪಕ)
ಶ್ರೀ. ಶ್ರೀನಿವಾಸ ವೆಂಕಟೇಶ ಗಲಗಲಿ, ಧಾರವಾಡ ೩೪೯

ಎಲ್ಲಿಹಳೊ ನನ್ನವಳು ? (ಕವನ)
ಶ್ರೀ. ಎಸ್. ಬಿ. ಕಡಕೋಳ, ಹಾನಗಲ್ ೩೫೮

ಒಂದಿರುಳು (ಕವನ)
ಶ್ರೀ. ಮುರಕುಂಬಿ ಶಂಕರ, ಬೆಳಗಾಂವಿ ೩೫೮

ಹಳ್ಳಿಗರ ಸಾಹಿತ್ಯದಲ್ಲಿಯ ಒಂದು ರಸಪರ್ವ (ಹೊಲಗೆಲಸದ ಹಾಡುಗಳು)
ಶ್ರೀ. ವಿಜಿ ಅಣ್ಣಾರಾಯರು, ಋಗಾರ ೩೫೯

ತೆರೆಯ ಮರೆಯಲ್ಲಿ (ಸಣ್ಣಕತೆ)
ಕುಮಾರಿ ಚಂದ್ರಿಕಾ ಕೊಪ್ಪರ ಹಳ್ಳಿಯಾಳ ೩೬೨

ಸಾದರ ಸ್ವೀಕಾರ .... (ಹೊದಿಕೆಯ ೩ನೇ ಪುಟದಲ್ಲಿ)

ಜಯಂತಿ

ಸಂಪುಟ ೧೭ ಸಂಚಿಕೆ ೯

ಕುಟುಂಬದಲ್ಲಿಯ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ವ್ಯವಸ್ಥಾಪಕರು:
ಮತ್ತು
ಪ್ರಕಾಶಕರು:
ಶ್ರೀ. ಡಿ. ಶರತ ಕುಮಾರ

**

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

**

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ

**

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

●

ಸಾಹಿತ್ಯಿಕ ಮತ್ತು ಸಾಮಾಜಿಕ ಪ್ರಜ್ಞೆ

ಒಂದು ಕಾಲ ನಮ್ಮಲ್ಲಿ ಹೀಗೂ ಇತ್ತು: ಕರ್ನಾಟಕದಲ್ಲಿ ಸ್ವತಂತ್ರಗ್ರಂಥಗಳನ್ನು ಬರೆಯುವ ಲೇಖಕರು ಹುಟ್ಟುವರೋ ಇಲ್ಲವೋ— ಎಂಬ ಸಂದೇಹ, ಅಭಿಮಾನಿ ಕನ್ನಡಿಗರ ಹೃದಯ ವೇದನೆಗಳನ್ನು ಪೀಡಿಸುತ್ತಿತ್ತು. ಎಲ್ಲಿಯೋ ಅಲ್ಲೊಬ್ಬರು ಇಲ್ಲೊಬ್ಬರು, ಸ್ವತಂತ್ರವಾಗಿ ಬರೆಯುವ ಲೇಖಕರು ಕಣ್ಣಿಗೆ ಕಾಣಬಹುದಾಗಿದ್ದರೂ, ಅವರ ಬರಿಹಗಳಲ್ಲಿ ಸ್ವತಂತ್ರ ವ್ಯಕ್ತಿತ್ವ-ವಿರುತ್ತಿರಲಿಲ್ಲ. ಜೀವನದ ವಾಸ್ತವತೆ ಪಡಿಮೂಡಿರುತ್ತಿರಲಿಲ್ಲ. ಎಂತಲೇ ಆ ಕಾಲದಲ್ಲಿ ನಮ್ಮ ವಾಚಕವರ್ಗ— ಕರ್ನಾಟಕಕ್ಕೆ ಸಾವಿರಾರು ವರ್ಷಗಳ ಉಜ್ವಲ ಇತಿಹಾಸವಿದ್ದರೂ—ಮಹಾರಾಷ್ಟ್ರ, ರಜಪೂತಸ್ತಾನದ ಐತಿಹಾಸಿಕ ಕಾದಂಬರಿಗಳನ್ನೋದಿ ಸಮಾಧಾನಪಡಬೇಕಾಗುತ್ತಿತ್ತು. ಮಹಾರಾಷ್ಟ್ರೀಯ-ಬಂಗಾಲಿಗಳ ಸಾಮಾಜಿಕ ಜೀವನಗಳನ್ನು ಓದಿಯೆ ಮನೋರಂಜನೆ ಮಾಡಿಕೊಳ್ಳಬೇಕಾಗುತ್ತಿತ್ತು. ನಮ್ಮ ಜನಕ್ಕೆ ನಮ್ಮ ಇತಿಹಾಸ, ನಮ್ಮ ಸಂಸ್ಕೃತಿ, ನಮ್ಮ ಜನಜೀವನ ಇವುಗಳನ್ನು ಕೊಡಬಲ್ಲ ಸಾಹಿತ್ಯಕರೇ ಆಗ ಕಂಡುಬರುತ್ತಿರಲಿಲ್ಲ. ಕನ್ನಡಭಾಷೆಯಲ್ಲಿ ಆಗ ಪುಸ್ತಕಗಳು ಹುಟ್ಟತೊಡಗಿದ್ದುನೇ ಹೊರತು, ಕನ್ನಡ ನಾಡು-ನುಡಿಗಳ ಗೌರವವನ್ನು ಹೆಚ್ಚಿಸುವಂತಹ ಸ್ವತಂತ್ರಗ್ರಂಥಗಳೇ ಆಗ ಹುಟ್ಟಲಿಲ್ಲ. ಹೀಗೆ ಹೇಳುವುದು ಅತಿಶಯೋಕ್ತಿಯು ಮಾತೇನೂ ಅಲ್ಲ.

ಮೂವತ್ತು ಮೂವತ್ತೈದು ವರ್ಷಗಳ ಅವಧಿಯಲ್ಲಿ ಅದೆಂತಹ ನಿಲಕ್ಷಣವಾದ ಕ್ರಾಂತಿ! ಇಂದು ಕರ್ನಾಟಕದಲ್ಲಿ ಸ್ವತಂತ್ರವಾಗಿ ಬರೆಯುತ್ತಿರುವ ಲೇಖಕರು ಮೂಲೆ-ಮೂಲೆಗಳಲ್ಲಿಯೂ ಕಣ್ಣಿಗೆ ಬೀಳುತ್ತಲಿದ್ದಾರೆ ಕನ್ನಡಿಗರ ಭೂತ-ವರ್ತಮಾನಗಳ ಜೀವನವನ್ನೆ ಚಿತ್ರಿಸಲು ಅವರೆಲ್ಲ ಸಂಕಲ್ಪಿಸಿದ್ದಾರೆ. ಅವರ ಸಂಕಲ್ಪದ ಫಲವಾಗಿ ಇಂದು ಕನ್ನಡ ವಾಚಕರಿಗೆ ಕರ್ನಾಟಕ ಇತಿಹಾಸದ ಸನ್ನಿವೇಶಗಳನ್ನು ಒಳಗೊಂಡ ನಾಟಕ-ಕಥೆ-ಕಾದಂಬರಿಗಳು ದೊರೆಯುತ್ತಲಿವೆ. ಅದರಂತೆ ಕನ್ನಡಿಗರ ಸಾಮಾಜಿಕಜೀವನವನ್ನು ಚಿತ್ರಿಸುವ ಲಲಿತಸಾಹಿತ್ಯಗ್ರಂಥಗಳೂ ಸಾವಿರಗಟ್ಟಲೆ ನಿರ್ಮಾಣವಾಗಿವೆ; ಆಗುತ್ತಲಿವೆ ಅಂದು ಸ್ವತಂತ್ರ ಸಾಹಿತ್ಯದ ಅಭಾವಕ್ಕಾಗಿ ಮರುಗುತ್ತಲಿದ್ದ ಹಿರಿಯರು ಇದುವರೆಗೆ ಬದುಕಿದ್ದರೆ, ಇಂದಿನ ಹುಲುಸಾದ ನಿರ್ಮಿತಿಯನ್ನು ಕಂಡು ಸಂತೋಷ-ಸಮಾಧಾನಗಳಿಂದ ನಲಿಯುತ್ತಿರಬಹುದು.

ಆಧುನಿಕ ಕನ್ನಡಸಾಹಿತ್ಯದ ನಿರ್ಮಿತಿಯು ಸುಮಾರು ೧೯ಳಂನೆಯ ವರ್ಷದವರೆಗೆ ಒಂದು ಬಗೆಯಾಗಿ ನಡೆಯಿತು ಅಮನರಿಗಿನ ಅವಧಿಯಲ್ಲಿ ಮುಂದೆ ಬಂದ ಸಾಹಿತ್ಯಕರಿಗೆ ನಮ್ಮ ಸಮಾಜದಲ್ಲಿಯ ಕೆಲವೊಂದು ದೋಷಗಳು ಸಾಕಷ್ಟು ಮನವರಿಕೆಯಾಗಿದ್ದುವಾದರೂ, ಸಮಾಜದ ಗುಣಗಳನ್ನೆ ಎದ್ದು ಕಾಣುವಂತೆ ಚಿತ್ರಿಸಿ ಸಾಹಿತ್ಯಕೃತಿಗಳನ್ನು ನಿರ್ಮಿಸಿದರು. ದೋಷಗಳನ್ನು ಸ್ಪಷ್ಟವಾತಿನಿಂದ ಖಂಡಿಸದೆ, ಪರ್ಯಾಯವಾಗಿ ಅವುಗಳ ಅಪಾಯ-ಅನರ್ಥಗಳನ್ನು ವಿವರಿಸುತ್ತಿದ್ದರು. ರೂಢವಾಗಿದ್ದ ಸಾಮಾಜಿಕಪದ್ಧತಿಗಳನ್ನು ಅಮೂಲಾಗ್ರವಾಗಿ ಬದಲಿಸಬೇಕೆಂಬ ವಿಚಾರ ಆ ಕಾಲದ ಸಾಹಿತ್ಯಿಕರಲ್ಲಿ ಹೆಚ್ಚಾಗಿ ಮೂಡಿದಂತಿಲ್ಲ. ಎಂತಲೇ ಅವರ ಸಾಹಿತ್ಯದಲ್ಲಿ ಒಂದು ಬಗೆಯ ಸಾಂಪ್ರತಿಕ ಶ್ರದ್ಧೆ, ವ್ಯಕ್ತಿ-ವ್ಯಕ್ತಿಗಳ ಜೀವನದಲ್ಲಿ ಸಂಯಮವು ಬೇಕೆಂಬ ಉತ್ಪಟತೆ ಇದ್ದು ಸಾಮಾಜಿಕ ಪದ್ಧತಿಗಳಲ್ಲಿಯೇ ತಿದ್ದು ಪಡಿಯಾಗಬೇಕೆನ್ನುವ ವಿಧಾಯಕ ವೃತ್ತಿ ಇರುವುದೇ ಎಂದು ಕಾಣುತ್ತಲಿವೆ.

ಇತ್ತೀಚೆಗೆ ರಂಗಕ್ಕೆ ಮೇಲೆ ಬರುತ್ತಿರುವ ಸಾಹಿತ್ಯಿಕರು ಒಂದು ಬಗೆಯಿಂದ ಸಾಮಾಜಿಕ ಕ್ರಾಂತಿಕಾರರಾಗಿ ಮುಂದೆ ಬರುತ್ತಲಿದ್ದಾರೆ. ಅವರು ನಮ್ಮ ಸಮಾಜದಲ್ಲಿರುವ ಪರಂಪರಾಗತ ಆಚಾರ-ವಿಚಾರಗಳೆಲ್ಲ ಅಮೂಲಾಗ್ರವಾಗಿ ಅಳಿದುಹೋಗಬೇಕೆಂಬ ವಿಚಾರವನ್ನು ತಮ್ಮ ಸಾಹಿತ್ಯ ಕೃತಿಗಳ ಮೂಲಕ ಹೊರಗೆ ಹಾಕುತ್ತಲಿದ್ದಾರೆ. ಆ ಕೃತಿಗಳನ್ನು ನೋಡುತ್ತಹೋದಹಾಗೆಲ್ಲ, ಆ

ಕೃತಿಕಾರರ ಸಾಹಿತ್ಯ ನಿರ್ಮಿತಿಯು, ಸಾಹಿತ್ಯದ ಗುರಿಯಾದ ಸೌಂದರ್ಯೋಪಾಸನೆಯನ್ನು ಬಿಟ್ಟು, ಕ್ರಾಂತಿಕಾರಕ ವಿಚಾರಗಳ ಪ್ರಚಾರವನ್ನೇ ತನ್ನ ಮುಖ್ಯ ಗುರಿಯನ್ನಾಗಿಟ್ಟುಕೊಂಡಿದೆಯೆಂದು ಹೇಳಬಹುದು.

ಕಾಲಾನುಸಾರವಾಗಿ ನಮ್ಮ ಸಮಾಜದ ಪದ್ಧತಿ, ಆಚಾರ-ವಿಚಾರಗಳಲ್ಲಿ ಬದಲಾವಣೆಯಾಗಬೇಕಾಗಿದೆ; ಇದೇನೋ ಸರಿಯಾದ ಮಾತೇ! ಆದರೆ ಯಾವ ಯಾವ ಬದಲಾವಣೆಗಳು ಆಗಬೇಕಾಗಿವೆ-ಯೆಂಬುದನ್ನೂ ಏಕೆ ಆಗಬೇಕಾಗಿವೆಯೆಂಬುದನ್ನೂ ಹೇಳುವವನು ತುಂಬ ಪ್ರಜ್ಞಾವಂತನಾಗಿರಬೇಕಾಗುತ್ತದೆ. ವ್ಯಕ್ತಿಯು ಸಮಾಜದ ಒಂದು ಘಟಕ ಈ ಘಟಕಸ್ವರೂಪಗಳಾದ ವ್ಯಕ್ತಿಗಳು ವ್ಯಕ್ತಸ್ವರೂಪದಲ್ಲಿರುವವು; ಸಮಾಜವೆಂಬುದು ಅವ್ಯಕ್ತಸ್ವರೂಪದಲ್ಲಿರುವುದು. ವ್ಯಕ್ತಸ್ವರೂಪದ ವ್ಯಕ್ತಿಗಳ ಸ್ವಭಾವ, ಅಭಿರುಚಿ, ಆಶೆ, ಆಕಾಕ್ಷೆಗಳು ವಿವಿಧವಾಗಿರುವುವು. ಆದರೆ ಸಮಾಜವಾಗಿ ಬದುಕಬೇಕಾಗಿರುವ ವ್ಯಕ್ತಿಗಳು ತಮ್ಮ ಆ ಸ್ವಭಾವ, ಅಭಿರುಚಿ, ಆಶೆ, ಆಕಾಂಕ್ಷೆಗಳಲ್ಲಿ ಒಂದುಬಗೆಯ ಸಾಮರಸ್ಯವನ್ನು ತಂದುಕೊಳ್ಳಬೇಕಾಗುವುದು. ಹೀಗೆ ಸಾಮರಸ್ಯವನ್ನು ಕಾದುಕೊಳ್ಳುವುದಕ್ಕಾಗಿ, ಎಲ್ಲ ವ್ಯಕ್ತಿಗಳೂ ಜೀವನದಲ್ಲಿ ಕೆಲವು ನಿಯಮಗಳನ್ನು ಹಾಕಿಕೊಳ್ಳಬೇಕಾಗುವುದು. ಇಂತಹ ನಿಯಮಗಳೇ ಸಾಮಾಜಿಕ ನಿಯಮಗಳೆನಿಸಿಕೊಳ್ಳುವುವು ಇವೇ ಸಮಾಜದಲ್ಲಿಯ ವ್ಯಕ್ತಿಗಳಿಗೆ ಪದ್ಧತಿ, ಆಚಾರ-ವಿಚಾರಗಳನ್ನು ಹಾಕಿಕೊಡುವುವು. ಬಹುಜನರ ಸುಖ-ಸಮಾಧಾನಗಳಿಗಾಗಿ ವ್ಯಕ್ತಿಯ ಮಾಡಬೇಕಾದ ತ್ಯಾಗವು ಎಷ್ಟು, ಎಂತಹದು – ಎಂಬುದನ್ನು, ಈ ಸಾಮಾಜಿಕ ನಿಯಮಗಳೇ ಗೊತ್ತುಪಡಿಸುವುವು ಯಾವ ನಿಯಮುಗಳೂ ಇಲ್ಲದ ಸಮಾಜವು ಸಮಾಜವಾಗಿ ಉಳಿಯಲೇ ಆರದು. ಆ ವ್ಯೆರಾಚಾರದ ವ್ಯಕ್ತಿಗಳ ಸಮೂಹದಲ್ಲಿ ಸುಖ-ಸಮಾಧಾನಗಳು ಎಂದೂ ಉಳಿಯಲಾರವು. ಈ ಪ್ರಜ್ಞೆಯಿಲ್ಲದ ವ್ಯಕ್ತಿಗಳಿಂದ ಸಮಾಜದಲ್ಲಿಯ ಬದಲಾವಣೆಯು ಕಾರ್ಯ ಒಳ್ಳೆಯ ರೀತಿಯಿಂದ ಆಗಲಾರದು.

ಸರ್ವರ ಸುಖವನ್ನು ಕಣ್ಣಿಟ್ಟು ಇರಿಸಿ ಮಾಡಿದ ಸಾಮಾಜಿಕ ನಿಯಮಗಳು, ಪ್ರತಿಯೊಂದು ವ್ಯಕ್ತಿಗೂ ಒಂದೊಂದು ಕಾಲದಲ್ಲಿ ಒಂಗೊಂದು ರೀತಿಯಿಂದ ಬಂಧನಕಾರಿಯೆಂದೆನಿಸಬಹುದು; ಅದರಿಂದ ಸ್ವಾರ್ಥಪರತೆಯ ಮೇಲೆ ಬಿಟ್ಟು ಬಿಟ್ಟು ಪೀಡೆಯೂ ಉಂಟಾಗಬಹುದು. ಹೀಗಾದಾಗಲೆಲ್ಲ ವ್ಯಕ್ತಿಗಳು ಸಾಮಾಜಿಕ ನಿಯಮುಗಳಿಗೆ ವಿರೋಧವಾಗಿ ಕೂಗೆಬ್ಬಿಸಿ ಕಲ್ಲು ಬಿಸಿಯುತ್ತಹೋದರೆ, ನಿಯಮುಗಳಿಗೆ ನಿಲುಗಡೆಯೆಲ್ಲಿ? ಎಲ್ಲರೂ ಶ್ರದ್ಧೆಯಿಂದ ಒಪ್ಪಿಕೆ ನಿಯಮುಗಳನ್ನು ಪಡೆಯುತ್ತ ಹೋದರೆ, ಆ ನಿಯಮುಗಳು ಸಮಾಜಕ್ಕೆ ತಾರಕವಾಗಿಬಹುದು ಆದುದರಿಂದಲೇ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸಾಮಾಜಿಕ ಆಚಾರ-ವಿಚಾರಗಳ ಬಗ್ಗೆ ಆಪಾದ-ಅಭಿಮಾನಗಳಿಂದ ಪಡೆದಿರಬೇಕಾಗಿಬೇಕಾಗುವುದು. ಎಲ್ಲರಿಗೂ ಅಹಿತವನ್ನುಂಟುಮಾಡುವಂತಹ ಸಾಮಾಜಿಕ ನಿಯಮು ಒಂದು ಇನವೂ ಬದುಕಿ ಉಳಿಯಲಾರದೆಂಬುದನ್ನು ಬದಲಾವಣೆ ಬೇಕೆನ್ನುವ ವ್ಯಕ್ತಿಗಳು ಚೆನ್ನಾಗಿ ಲಕ್ಷ್ಯದಲ್ಲಿ ಇ ಕ್ಕಬೇಕು.

ಇಂದಿನ ನಮ್ಮ ತರುಣ ಸಾಹಿತ್ಯಕರಿಗೆ ಬೇಕಾಗಿರುವ ಮುಖ್ಯ ಬದಲಾವಣೆಗಳಾವುವೆಂಬುದನ್ನು ನೋಡಿದರೆ, ಈ ಮಾತುಗಳು ನಮಗೆ ಕಂಡುಬರುತ್ತವೆ: ದೇವರೆಂಬವನು ಪಾಪ– ಇದ್ದರೆ ಇರಲಿ; ಹೋದರೆ ಹೋಗಲಿ! ಮತ-ಧರ್ಮಗಳೆಂಬುವೆಲ್ಲ ಹುರುಳಿಲ್ಲದುವುಗಳು. ಜಾತಿ ಭೇದಗಳೆಲ್ಲವೂ ಒಮ್ಮೆಲೇ ನಷ್ಟವಾಗಬೇಕು. ಹಣವು ಸಮಾನವಾಗಿ ಹಂಚಲ್ಪಡಬೇಕು. ಸ್ತ್ರೀಪುರುಷರ ಲೈಂಗಿಕಜೀವನಕ್ಕೆ ಸಂಪೂರ್ಣ ಸ್ವಾತಂತ್ರ್ಯವಿರಬೇಕು. ಸುಳ್ಳು-ಕಳ್ಳತನಗಳನ್ನು ಕರುಣೆಯಿಂದ ನೋಡಬೇಕು. ಧರ್ಮ-ಮತಗಳನ್ನು ಉಪದೇಶಿಸುವವರೆಲ್ಲರೂ ವಂಚಕರು, ಮೋಸಗಾರರು; ಆದುದರಿಂದ ಮತ-ಧರ್ಮಪೀಠಗಳೆಲ್ಲ ನಷ್ಟವಾಗಬೇಕು. ಹಣಗಾರರೆಲ್ಲ ದುರುಳರು, ದುಷ್ಟರು. ಇತರರನ್ನು ಶೋಷಿಸುತ್ತಿರುವುದೇ ಅವರ ಉದ್ಯೋಗ. ಆದುದರಿಂದ, ದೇಶದಲ್ಲಿ ಹಣವಂತರು ಇಲ್ಲದಂತಾಗಬೇಕು. ಆಡಳಿತದ ಅಧಿಕಾರಿಗಳಾಗಿರುವವರೆಲ್ಲ ಪಟಿಂಗರು, ಲಂಚಗುಳಿಗಳು. ಆದಕ್ಕಾಗಿ ಅಧಿಕಾರಿಗಳೂ ಇಲ್ಲದಂತಹ ಆಡಳಿತವು ಬೇಕು – ಇತ್ಯಾದಿ.... ಇತ್ಯಾದಿ.

ಇವೆಲ್ಲ ಬೇಡಿಕೆಗಳು ಸಾಮಾಜಿಕ ಪ್ರಜ್ಞೆಯು ನಸುಪೂ ಇಲ್ಲದೆ ಕೇವಲ ಹುಡುಗಾಟದ ಸ್ವಾರ್ಥದ ಬೇಡಿಕೆಗಳಾಗಿವೆ. ದೇವರು-ಮತ-ಧರ್ಮಗಳ ಮಾತನ್ನು ನಾವು ಬಿಟ್ಟೇಬಿಡೋಣ ಏಕೆಂದರೆ, ನಾವು ಲೌಕಿಕಜೀವನದಲ್ಲಿ ಅವು ಮಹತ್ತ್ವವುಳ್ಳವೆನಿಸಿಕೊಳ್ಳಲಾರವು ಜಾತಿ, ಅರ್ಥ, ಸ್ತ್ರೀ-ಪುರುಷ ಸಂಬಂಧ, ಆಡಳಿತದ ಅಧಿಕಾರ ಇವೆಲ್ಲ ನಮ್ಮ ಲೌಕಿಕ ಜೀವನಕ್ಕೆ ತೀರ ಸಂಬಂಧಿಸಿದುವುಗಳು. ಇವುಗಳ ವಿಷಯದ ಬದಲಾವಣೆ ಆಗಬೇಕೆ? ಆಗತ್ಯವೇ ಆದರೆ, ಎಂತಹ ಬದಲಾವಣೆಯು ಸರ್ವರಿಗೆ ಕಲ್ಯಾಣಕಾರಿಯಾಗಿರಬಹುದೆನ್ನು, ಬದಲಾವಣೆಯನ್ನು ಬೇಕ್ಷಿಸುವ ಸಾಹಿತಿಕರು ಮಾಡಬೇಕಾಗಿಲ್ಲವೆ?

ಯಾವ ಲೌಕಿಕಾನುಭವವೂ ಇಲ್ಲದ ಚಿಗುರುಸಾಹಿತ್ಯಕರು ಕೂಡ ಸಾಮಾಜಿಕ ನಿಯಮುಗಳ ವಿಚಾರದಲ್ಲಿ ಇಂದು ಅಸಹನೆಯನ್ನು ಹುಟ್ಟಿಸುತ್ತಲಿದ್ದಾರೆ ಮನಸ್ಸಿಗೆ ಬಂದಂತೆ ಬೈದು ಬೈದು ಕೂಗುತ್ತಲಿದ್ದಾರೆ. ಅನರೆಲ್ಲ ಮೊದಲು, ಎಂತಹ ಸಮಾಜವು ತಮಗೆ ಬೇಕಾಗುವುದೆಂಬುದನ್ನು ಮೊದಲು ಚೆನ್ನಾಗಿ ಅರಿತುಕೊಳ್ಳಬೇಕು. ಸಮಾಜವೆಂದಮೇಲೆ ಅನರ ಘಟಕವಾದ ವ್ಯಕ್ತಿಗಳೆಲ್ಲ ಒಂದು ನಿಯಮದ ಒಳಗಾಗಿ ನಡೆಯಬೇಕಾಗುವುದೆಂಬುದನ್ನು ಲಕ್ಷ್ಯದಲ್ಲಿರಿಸಿಕೊಳ್ಳಬೇಕು. ಸಮಾಜಶಾಂತಿಯು ವ್ಯಕ್ತಿಗಳ ತ್ಯಾಗ ಸಂಯಮಗಳಲ್ಲಿಯೇ ಇರುವುದೆಂಬುದನ್ನು ಮನವರಿಕೆ ಮಾಡಿಕೊಳ್ಳಬೇಕು. ಇನ್ನಿನ್ನಾ ಜಾತಿಪದ್ಧತಿಯು ಹೋಗಬೇಡವೆಂದರೆ ಇನ್ನೊಂದುಬಗೆಯ ಜಾತಿಪದ್ಧತಿಯನ್ನು ಇರಲೇಬೇಕೆಂದು ಒಪ್ಪಬೇಕಾಗುವುದು. ಯಾವ ಸಮಾಜದಲ್ಲಿಯೂ ಬಯಸಿದ ಎಲ್ಲ ಹೆಣ್ಣನ್ನು ಬಯಸಿದವರಿಗೆ ಸುಲಭವಾಗಿ ದೊರೆಯಲಾರದೆಂಬುದನ್ನು ಮರೆತು ನಡೆಯಲಾಗದು ಸಮಾಜದ ಸುರಕ್ಷಿತತೆ, ಸಂರಕ್ಷಣೆ ನ್ಯಾಯದಾನ, ಸಂಪತ್ತಿನ ಪ್ರಚಾರ ಇವುಗಳಿಗಾಗಿ ಒಂದಿಲ್ಲೊಂದು ಬಗೆಯ ಆಡಳಿತವ್ಯವಸ್ಥೆಗೆ ವ್ಯಕ್ತಿಗಳು ಒಳಗಾಗಿಯೆ ತೀರಬೇಕಾಗುವುದೆಂಬುದನ್ನು ಅರಿತುಕೊಳ್ಳಬೇಕು. ಇವಾವುವೂ ಬೇಡವೆನ್ನುವ ಸಾಹಿತ್ಯಿಕನ ಮಾತು, ಸಮಾಜವೇ ಬೇಡವೆಂದು ಕೇಳಹೊಯ್ದಂತಾಗುವುದು. ಅಂತಹ ಸಾಹಿತ್ಯಿಕರನ್ನು ಸಮಾಜವ ಸ್ವಜ್ಞೆಯಿಲ್ಲದವರೆಂದು ಹೇಳಬೇಕಾಗುವುದು. ಅಮದರಿಂದ ಸಾಮಾಜಿಕ ಬದಲಾವಣೆಯ ವಿಚಾರದಲ್ಲಿ ಸಾಹಿತಿಕರು ಅನಧಿಕಾರಿಗಳೆನಿಸಿಕೊಳ್ಳುವರು.

ನಾಡ ನಡೆ

ಕರ್ನಾಟಕ ಕಾಂಗ್ರೆಸಿಗರ ರಾಜಕಾರಣ

ಕರ್ನಾಟಕದಲ್ಲಿ, ಸುಸಂಘಟಿತವಾದ ಮತ್ತು ಬಲಿಷ್ಠವಾದ ರಾಜಕೀಯ ಪಕ್ಷವೆಂದರೆ ಕಾಂಗ್ರೆಸಿಗರದು ಒಂದೇ ಒಂದು. ಕರ್ನಾಟಕ ಕಾಂಗ್ರೆಸ್ ಕಮೀಟಿಯು ಹುಟ್ಟಿದಂದಿನಿಂದ ಇದುವರೆಗೆ, ಅದರಲ್ಲಿಯ ಪಕ್ಷಭೇದಗಳೂ ವ್ಯಕ್ತಿದ್ವೇಷಗಳೂ ಹೊರಗಿನವರಿಗೆ ಗೊತ್ತಾಗಿರಲಿಲ್ಲ. ಜನತೆಯ ಸಂಸ್ಥೆಯೆಂದ ಮೇಲೆ, ಹಿಂದೆ ಕೂಡ ಚುನಾವಣೆಗಳು ನಡೆಯುತ್ತಿದ್ದವು; ಅಧಿಕಾರಿಗಳ ಸದಸ್ಯರ ಆಯ್ಕೆಯಾಗುತ್ತಿತ್ತು. ಚುನಾವಣೆಯ ಕಾಲದಲ್ಲಿ ಹುರಿಯಾಳು–ಹುರಿಯಾಳುಗಳ ನಡುವೆ ಆಗಲೂ ಸ್ಪರ್ಧೆ–ಮೇಲಾಟಗಳಿರಲಿಲ್ಲವೆಂತಲ್ಲ. ಆದರೆ ಘಟನಾತ್ಮಕ ರೀತಿಯಿಂದ ಚುನಾವಣೆಗಳು ನಡೆದ ಮೇಲೆ, ಎಲ್ಲರೂ ಅದನ್ನು ಒಪ್ಪಿಕೊಂಡು ಒಟ್ಟುಗೂಡಿ ಕೆಲಸ ಮಾಡುತ್ತಿದ್ದರು. ಎಂತಲೇ ಹೊರಗಿನ ಜನರಿಗೆ, ಕರ್ನಾಟಕದ ಕಾಂಗ್ರೆಸಿಗರಲ್ಲಿ ಇದ್ದ ಯಾವ ಪಕ್ಷಭೇದಗಳೂ ವಿಚಾರವೈಷಮ್ಯಗಳೂ ಗೊತ್ತಾಗುತ್ತಿರಲಿಲ್ಲ. ಇದರಿಂದ ಸಂಸ್ಥೆಯ ಸಂಘಟನಾಬಲವು ಹೆಚ್ಚುತ್ತಿದ್ದಿತು; ಜನತೆ ಅದನ್ನು ನಿಷ್ಠೆಯಿಂದ ಕಂಡು, ಅದು ಹೇಳಿದ ಕಾರ್ಯವನ್ನು ಮಾಡಲಿಕ್ಕೂ ಕೇಳಿದ ಸಹಾಯವನ್ನು ನೀಡಲಿಕ್ಕೂ ಸಿದ್ಧವಾಗುತ್ತಿತ್ತು. ಎಂತಲೇ ಕಾಂಗ್ರೆಸಿನ ಯಾವ ಕಾರ್ಯಕ್ರಮವೂ ಕನ್ನಡನಾಡಿನಲ್ಲಿ ಯಶಸ್ವಿಯಾಗಿ ಸಾಗುತ್ತಿತ್ತು. 'ಕರ್ನಾಟಕವೆಂದರೆ ಕಾಂಗ್ರೆಸಿನ ಪ್ರಾಂತ' ಎಂದು ಎಲ್ಲರಿಂದಲೂ ಹೊಗಳಿಸಿಕೊಳ್ಳುತ್ತಿತ್ತು.

ಇಂದಿನ ಕರ್ನಾಟಕದಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯು ಸ್ಥಾನ-ಮಾನಗಳು ಎಂತಹವಿವೆ? ಅಂದಿನದು ಕಾರ್ಯಯುಗ, ಇಂದಿನದು ಅಧಿಕಾರಯುಗ! ಅಂದು ಕಾಂಗ್ರೆಸಿನಲ್ಲಿ ಬಂದು ಸೇರುವವರ ಗುರಿಯು ತ್ಯಾಗಪೂರ್ವಕವಾದ ದೇಶಕಾರ್ಯವಾಗಿತ್ತು; ಇಂದು ಅದು ಹೋಗಿ ಭೋಗದಾಶೆಯ ಅಧಿಕಾರಸ್ಥಾನದ ಆಕ್ರಮಣವು ಕಾಂಗ್ರೆಸಿಗರ ಗುರಿಯಾಗಿದೆಯೆಂದು ಜನಸಾಮಾನ್ಯರು ಭಾವಿಸಿಬಿಟ್ಟಿದ್ದಾರೆ. ಕಳೆದ ಚುನಾವಣೆಯ ಕಾಲದಲ್ಲಿ ಇದ್ದ ಜನತೆಯಲ್ಲಿಯ ಕಾಂಗ್ರೆಸ್ ನಿಷ್ಠೆ ಇಂದು ಇಲ್ಲದಂತಾಗಿದೆ ಇದನ್ನು ದೂರದ ಪ್ರಮಾಣಗಳಿಂದ ಸಿದ್ಧಮಾಡಿಯೇನೂ ತೋರಿಸಬೇಕಾಗಿಲ್ಲ. ಮುಖ್ಯ ಚುನಾವಣೆಯ ತರುವಾಯ ಕರ್ನಾಟಕದಲ್ಲಿ ನಡೆದ ಬೇರೆ ಬೇರೆ ಉಪಚುನಾವಣೆಗಳಲ್ಲಿ, ಕಾಂಗ್ರೆಸಿನ ಹುರಿಯಾಳುಗಳಿಗೆ ಒದಗಿದ ಸೋಲುಗಳು ಎಲ್ಲರಿಗೂ ಗೊತ್ತಿರುವ ಪ್ರತ್ಯಕ್ಷಪ್ರಮಾಣಗಳಾಗಿವೆ. ಕನ್ನಡಿಗರಲ್ಲಿರುವ ಅವಿಚಲವಾದ ಕಾಂಗ್ರೆಸಿನ ನಿಷ್ಠೆ ಕಡಿಮೆಯಾಗುವುದಕ್ಕೆ ಏನಾದರೂ ವಿಶೇಷ ಕಾರಣಗಳು ಇರಲೇಬೇಕು. ಆದಾವುದು ವಿಶೇಷ ಕಾರಣ? ಅಖಿಲ ಭಾರತದ ಕಾಂಗ್ರೆಸ್ ಸಂಸ್ಥೆ, ತನ್ನ ಧ್ಯೇಯ-ಧೋರಣೆಗಳಲ್ಲಿ, ಇದುವರೆಗಂತೂ ಯಾವ ಬದಲಾವಣೆಯನ್ನೂ ಮಾಡಿಕೊಂಡಿರಲಿಲ್ಲ. ಕನ್ನಡ ಜನತೆಗೆ ಅಖಿಲಭಾರತ ಕಾಂಗ್ರೆಸ್ ಸಂಸ್ಥೆಯ ಧ್ಯೇಯ-ಧೋರಣೆಗಳಲ್ಲಿ ಈಗಲೂ ಅಚಲವಾದ ಶ್ರದ್ಧೆ–ವಿಶ್ವಾಸಗಳಿವೆ. ಹೀಗಿರುವಾಗ, ಅದರ ಕಾರ್ಯವನ್ನೇ ಕೈಕೊಂಡು ನಡೆಸುವ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಂಸ್ಥೆಯ ಮಾಗೆಗೆ ಅದು ಏಕೆ ಆಶ್ರದ್ಧೆಯನ್ನು ತಳೆಯಬೇಕು? ತಳೆದಿದೆಯೆಂದ ಮೇಲೆ ಕರ್ನಾಟಕ ಕಾಂಗ್ರೆಸ್ ಸಂಸ್ಥೆಯಲ್ಲಿಯೆ ಏನೋ ದೋಷವಿದೆಯೆಂದು ಭಾವಿಸಬೇಕಾಗುವುದು. ಅದಾವ ದೋಷ? ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ಸಿನ ಜನರು ನುಡಿದಂತೆ ನಡೆಯದ ಅತಾತ್ವಿಕತೆಯೆಂಬುದೇ ಆ ದೋಷ. ವ್ಯಕ್ತಿಗಳ ದೋಷದ ಪರಿಣಾಮವನ್ನು, ಆ ವ್ಯಕ್ತಿಗಳಿಂದ ನಿರ್ಮಿತವಾದ ಸಂಸ್ಥೆ ಅನುಭವಿಸಬೇಕಾದುದು ವಿಷಾದದ ಸಂಗತಿಯು; ನಾಡಿನ ಪ್ರಗತಿಗೆ ತಡೆಯನ್ನು ಒಡ್ಡುವಂತಹ ಸಂಗತಿಯು.

ಈ ಸಲದ ಕರ್ನಾಟಕ ಪ್ರದೇಶ ಕಾಂಗ್ರೆಸ್ಸಿನ ಆಯ್ಕೆ

ಈ ಸಲದ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ವಾರ್ಷಿಕ ಸಭೆಯ ಕಾಲದಲ್ಲಿ, ಆ ಸಂಸ್ಥೆಯಲ್ಲಿ ಸೇರಿದ ವ್ಯಕ್ತಿಗಳ ದೋಷಗಳು ಚೆನ್ನಾಗಿ ಬಯಲಿಗೆ ಬಂದುವೆಂದು ಹೇಳಬಹುದು. ಅಧ್ಯಕ್ಷಪದಕ್ಕಾಗಿ ಇದುವರೆಗೆ ಎಂದೂ ನಡೆದಿರದಂತಹ ಚುನಾವಣೆಯ ಜೋರಾಟ ನಡೆಯಿತು. ಹುರಿಯಾಳಾಗಿ ನಿಂತ ಇಬ್ಬರ ಬೆಂಬಲಕ್ಕೂ ಎರಡು ಬಲಶಾಲಿಗಳಾದ ಪಕ್ಷಗಳಿದ್ದುವು. ತುರುಸಿನ ಸ್ಪರ್ಧೆ ನಡೆಯಿತು. ಇದರ ಪರಿಣಾಮವೆಂದರೆ, ಒಂಬತ್ತು ವರ್ಷಗಳಿಂದಲೂ ಅಧ್ಯಕ್ಷಸ್ಥಾನದಲ್ಲಿದ್ದು ಸಾಕಷ್ಟು ಕಾರ್ಯ ಮಾಡಿದವರೆಂದು ಹೆಸರುಗೊಂಡ ಮುಂದಾಳು ಶ್ರೀಮಾನ್ ನಿಜಲಿಂಗಪ್ಪನವರು ಪರಾಜಿತರಾದರು; ವಿಜಾಪುರ ಜಿಲ್ಲೆಯ ಒಬ್ಬ ಸಾಮಾನ್ಯ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ. ಅಂಬಲಿ ಚೆನ್ನಬಸಪ್ಪನವರು ಅಧ್ಯಕ್ಷಪೀಠಾಧಿಕಾರವನ್ನು ದೊರಕಿಸಿ ನಾಡಿಗರನ್ನೆಲ್ಲ ಬೆರಗುಗೊಳಿಸಿದರು. ಈ ಆಯ್ಕೆಯ ಕಾರ್ಯವು ಘಟನಾತ್ಮಕವಾಗಿ ನಡೆದಿದ್ದರೂ, ಇದನ್ನು ಒಪ್ಪದೆ ಅಲ್ಲಗಳೆಯುವ ಜನರು ಕಾಂಗ್ರೆಸ್ಸಿಗರಲ್ಲಿಯೆ ಇರುವುದು ವಿಚಿತ್ರವೂ ವಿಷಾದಕರವೂ ಆದ ಸಂಗತಿಯಾಗಿದೆ.

ಒಂದು ಸುಸಂಘಟಿತ ಸಂಸ್ಥೆಯ ಸದಸ್ಯರ ಆವಶ್ಯಕಲಕ್ಷಣವೆಂದರೆ, ಆ ಸಂಸ್ಥೆಯ ಘಟನಾತ್ಮಕ ಚುನಾವಣೆಗಳನ್ನೆಲ್ಲ ಒಪ್ಪಿಕೊಂಡು, ಒಟ್ಟುಗೂಡಿ ಆ ಸಂಸ್ಥೆಯ ಧ್ಯೇಯಸಾಧನೆಗಾಗಿ ದುಡಿಯುವುದು. ಅಧ್ಯಕ್ಷರಾಗಿ ಶ್ರೀ. ನಿಜಲಿಂಗಪ್ಪನವರು ಬಂದರೇನು, ಶ್ರೀ ಅಂಬಲಿಯವರು ಬಂದರೇನು? ಅಧ್ಯಕ್ಷತೆನಕ್ಕಾಗಿ ಅಧ್ಯಕ್ಷಪೀಠವಿರುವುದೇ ಹೊರತು, ಅದು ನಿಜಲಿಂಗಪ್ಪನವರಿಗಾಗಿಯೂ ಇರದು; ಅಂಬಲಿಯವರಿಗಾಗಿಯೂ ಇರದು. ಚುನಾವಣೆಯಲ್ಲಿ ಸ್ಪರ್ಧೆ ನಡೆಯಬಾರದಾಗಿತ್ತು; ನಡೆಯಿತು. ಸ್ಪರ್ಧೆ ನಡೆದುದೇನು ಬೆಟ್ಟದಂತಹ ಅಪರಾಧವಲ್ಲ, ಆದರೆ ಒಹುಮತದಿಂದ ಆಯ್ಕೆಯಾಗಿ ಬಂದ ಅಧ್ಯಕ್ಷರನ್ನು, ವೈಯಕ್ತಿಕ ದೋಷಗಳನ್ನು ಆರೋಪಿಸಿ, ಅವರ ಅಧಿಕಾರವನ್ನು ಒಪ್ಪದೆ– ಬೇಕಾದ ಹಾಗೆ ಬೈಯುತ್ತ ತಿರುಗುವುದು ಮಾತ್ರ ಮಹಾಪರಾಧವೆನಿಸುತ್ತದೆ. ಹೀಗೆ ಬೈದಾಡುವ ಜನರನ್ನು ನೋಡುತ್ತಿರುವಾಗ, ಕೆ. ಪಿ. ಸಿ. ಸಿ. ಯು ಅಧಿಕಾರ ಸಾಧನೆಗಾಗಿ ಇದೆಯೊ, ದೇಶದ

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಅಕ್ಟೋಬರ್ ಸಂಚಿಕೆಯಲ್ಲಿ '**ಸಾಂತ-ಅನಂತ**' ಇಲ್ಲವೆ '**ಸಮಸ್ಯೆಯ ಕಳ್ಳ**' ಎಂಬ ಕತೆಯನ್ನು ವಿಮರ್ಶಿಸಿ ವಿಮರ್ಶೆಯ ಮೇಲಾಟಕ್ಕಾಗಿ ಕಳುಹಬೇಕೆಂದು ಕೇಳಿಕೊಳ್ಳಲಾಗಿತ್ತು. ಅದಕ್ಕನುಸಾರವಾಗಿ ಐದು ಜನರು '**ಸಾಂತ-ಅನಂತ**' ಕತೆಯ ವಿಮರ್ಶೆಯನ್ನೂ ಏಳು ಜನರು '**ಸಮಸ್ಯೆಯ ಕಳ್ಳ**' ಕತೆಯ ವಿಮರ್ಶೆಯನ್ನೂ ಕಳುಹಿದರು. ಮುಂದೆ ನವ್ಹೆಂಬರ ಸಂಚಿಕೆಯಲ್ಲಿ ಅವಕಾಶ ಸಾಲದೆ, ಅವುಗಳ ತೀರ್ಮಾನವನ್ನು ಪ್ರಕಟಿಸಲಿಕ್ಕೆ ಸಾಧ್ಯವಿಲ್ಲದೆ ಹೋದುದರಿಂದ ತೀರ್ಮಾನದ ಪ್ರಕಟನೆ ಹಿಂದೆ ಬಿದ್ದುದು ಹಿಂದೆಯೆ ಬಿದ್ದುಹೋಯಿತು. ವಿಮರ್ಶೆಯು ಶಿಕ್ಷಣರಂಗವನ್ನು ಮುಂದುವರಿಸಲಿಕ್ಕೂ ಸಾಧ್ಯವಾಗಲಿಲ್ಲ. ಆ ವಿಭಾಗವನ್ನು ಕುತೂಹಲದಿಂದ ನೋಡುತ್ತಿರುವ ಅನೇಕ ವಾಚಕರಿಂದ ನಮಗೆ ಕಾಗದಗಳು ಬಂದುವು ಈ ವಿಭಾಗವನ್ನು ನಿಲ್ಲಿಸಿದುದಕ್ಕಾಗಿ ಕೆಲವರು ನೊಂದುಕೊಂಡು ವಿಷಾದವನ್ನು ಪ್ರಕಟಿಸಿದ್ದರು ಇನ್ನು ಕೆಲವರು ನಿಲ್ಲಿಸಬೇಡಿರೆಂದು ಬಿನ್ನವಿಸಿ ಬರೆದಿರುವರು.

ನಾಲ್ಕು-ಮೂರು ತಿಂಗಳುಗಳ ದೀರ್ಘಾವಧಿಯು ಕಳೆದುದರಿಂದ, ಹಿಂದಿನ ವಿಮರ್ಶೆಯ ಮೇಲಾಟದ ತೀರ್ಮಾನವನ್ನು ಈಗ—ಇಷ್ಟು ದಿನಗಳ ತರುವಾಯ—ಪ್ರಕಟಿಸುವುದರಲ್ಲಿ ಔಚಿತ್ಯವಿಲ್ಲವೆಂದು ನಮಗೆ ಎನಿಸಿತು ಆದುದರಿಂದ ಆ ಮೇಲಾಟದಲ್ಲಿ ಭಾಗವಹಿಸಿದ ವಿಮರ್ಶಕರಲ್ಲಿ ನಾವು ಕ್ಷಮೆಯನ್ನು ಬೇಡಿಕೊಳ್ಳುತ್ತೇವೆ. ಮುಂದಿನ ಸಂಚಿಕೆಗಾಗಿ ಮತ್ತೆ ವಿಮರ್ಶೆಯ ಮೇಲಾಟವನ್ನು ಪ್ರಾರಂಭಿಸಲಿದ್ದೇವೆ. ಎಂದಿನಂತೆ ನಮ್ಮ ತರುಣ ವಿಮರ್ಶಕ ವರ್ಗ ಈ ಮೇಲಾಟದಲ್ಲಿ ಬಹುಸಂಖ್ಯೆಯಲ್ಲಿ ಭಾಗವಹಿಸಿ, ಈ ವಿಭಾಗದ ಆಕರ್ಷಣೆ—ಪ್ರಯೋಜನಗಳನ್ನು ಹೆಚ್ಚಿಸಬೇಕೆಂದು ಬೇಡಿಕೆ.

ಈ ಸಂಚಿಕೆಯಲ್ಲಿ ಪ್ರಕಟವಾದ '**ಮಾಯಾಕವಚ**' ಎಂಬ ನಾಟಕವನ್ನಾಗಲಿ, '**ಸಹವಾಸ**' ಎಂಬ ಜೀವನ ಕಥೆಯನ್ನಾಗಲಿ ವಿಮರ್ಶಿಸಿ ಇದೇ ಫೆಬ್ರುವರಿ ೨೫ನೆಯ ದಿನಾಂಕದೊಳಗೆ ತಲ್ಪುವಂತೆ ವಿಮರ್ಶೆಗಳನ್ನು ಕಳಿಸಬೇಕು. ಮೊದಲನೆಯ ಕ್ರಮಾಂಕವನ್ನು ಪಡೆದ ವಿಮರ್ಶಕರಿಗೆ ಎರಡು ರೂಪಾಯಿ ಬೆಲೆ ಬಾಳುವ— ಅವರು ಅಪೇಕ್ಷಿಸಿದ— ಕನ್ನಡ ಪುಸ್ತಕವೊಂದನ್ನು ಬಹುಮಾನವಾಗಿ ಕೊಡಲಾಗುವುದು.

—ಸಂಪಾದಕರು.

ಕಾರ್ಯವನ್ನು ಮಾಡುವುದೆಷ್ಟು ಕಷ್ಟವೋ!—ಎಂದು ಜನಸಾಮಾನ್ಯರ ಮನಸ್ಸಿನಲ್ಲಿ ಸಂಶಯ, ಭಾವನೆಯು ಮೂಡದೆ ಇರಲಾರದು. ಬರೀ ತಾವಷ್ಟೇ ಬೈಯುವುದಲ್ಲದೆ ಕೂಲಿಕೊಟ್ಟು ಬೈಸುವ ಕೆಲಸವನ್ನೂ ಮಾಡಿಸಿದ್ದಾರೆ. ಇವೆಲ್ಲಿಂದ ನಮ್ಮ ಕಾಂಗ್ರೆಸ್ಸಿಗರ ತಲೆಹರಟೆಯ ಬಗೆಗೆ ಜನಸಾಮಾನ್ಯರಲ್ಲಿ ಶ್ರದ್ಧೆ-ವಿಶ್ವಾಸಗಳು ಹೇಗೆ ಉಳಿಯಬೇಕು? ಕೆ. ಪಿ. ಸಿ. ಸಿ. ಯೂ ಒಂದು ಜನಸಾಮಾನ್ಯರಲ್ಲಿಯೆ ತರಿಗತಿಗೆ ಇಳಿದಂತಾಯಿತೆಂದು ಜನರ ಕಲ್ಪನೆಯಾದರೆ, ಅವರಲ್ಲಿ ತಪ್ಪೇನಿದೆ? ನಮ್ಮ ನಾಡಿನಲ್ಲಿ ಈ ಮೊದಲು ನಡೆದ ಉಪಚುನಾವಣೆಗಳಲ್ಲಿ ಕಾಂಗ್ರೆಸ್ ಪುರಿಯಾಳುಗಳಿಗೆ ಏಕೆ ಸೋಲಾಯಿತೆಂಬುದನ್ನು ಕೆ ಪಿ ಸಿ ಸಿ ಅಧ್ಯಕ್ಷರೆ ಚುನಾವಣೆಯ ಕಾಲಾನುವ ಚೆನ್ನಾಗಿ ಬೆಳಕಿಗೆ ತಂದು ವಿವರಿಸಿದಂತಾಯಿತು. ಇಂತಹ ಜನರಿಂದ ನಮ್ಮ ಕನ್ನಡ ಜನತೆಯ ಕಲ್ಯಾಣವಾಗಬೇಕು. ದೇವರೇ ಕಾಪಾಡಬೇಕು ಕನ್ನಡ ಜನತೆಯನ್ನು!

ತಾಳ್ಮೆಯ ಮಂತ್ರವೇ ಈಗ ಉಪಕಾರಕ

ಈಗ ಅಂಬಲಿಯವರ ಪಕ್ಷದವರೂ ನಿಜಲಿಂಗಪ್ಪನವರ ಪಕ್ಷದವರೂ ಒಬ್ಬರನ್ನೊಬ್ಬರು ಬೈಯುತ್ತ ಹೋಗುವುದರಿಂದ ಎರಡು ಪಕ್ಷದವರಲ್ಲಿಯೂ ಜನತೆಗೆ ವಿಶ್ವಾಸವು ಇಲ್ಲದಂತಾಗುವುದು. ಇದು ಕಾಂಗ್ರೆಸ್ಸಿನ ಮಹಾಧ್ಯೇಯ-ಸಾಧನೆಗಳ ದೃಷ್ಟಿಯಿಂದ ತುಂಬ ಘಾತಕವಾದುದು. ಈಗ ಅಂಬಲಿಯವರು-ಹುರಿಯಾಳಿಗಿಂತ ನಿಂತು ಬಹುಮತದಿಂದ ಆಯ್ಕೆಯಾದೆವು ಎಂದು ಮೇಲೆ ಅಂಬಲಿಯವರನ್ನು ಬೈಯುವುದೆಂದರೆ, ಅವರಿಗೆ ಮತಕೊಟ್ಟ ಬಹುಸಂಖ್ಯಾಕರನ್ನು ಬೈದಂತೆಯೆ ಅಲ್ಲವೆ? ಹೀಗಾದರೆ ಕಾಂಗ್ರೆಸಿಗರಲ್ಲಿ ಐಕಮತ್ಯ ಒಕ್ಕಟ್ಟುಗಳು ಉಳಿಯುವ ಬಗೆ ಹೇಗೆ? ಮಹಾತ್ಮರ ಹೆಸರನ್ನು ಹೇಳಿ ಕಾರ್ಯಮಾಡುವ ಕಾಂಗ್ರೆಸ್ಸಿಗರು, ಮಹಾತ್ಮರ ಮೂಲಮಂತ್ರವಾದ ತಾಳ್ಮೆಯೆಂಬುದನ್ನು ಏಕೆ ಮರೆಯುವರೋ ಏನೋ! 'ತಾಳುವುದಕಿಂತ ತನ್ನ ತಪವು ಇಲ್ಲ!' ಈಗ ಕಾಂಗ್ರೆಸಿಗರು ತಾಳಿಕೊಂಡು ಮಾಡಿ ನಡೆಯಬೇಕು. ಅಂಬಲಿಯವರಲ್ಲಿ ಅಧ್ಯಕ್ಷರಾಗಿ ಉಳಿಯುವಂತಹ ವ್ಯಕ್ತಿತ್ವವೂ ಸಾಮರ್ಥ್ಯವೂ ಇದ್ದರೆ ಒಳ್ಳೆಯದೇ ಆಯಿತು; ಇಲ್ಲವಾದರೆ ಅಲ್ಲಿ ನಿಂತು ಅವರು ಮಾಡುವುದೇನು? ತ್ಯಾಗಿಯೆ ರಾಜೀನಾಮೆ ಕೊಟ್ಟು ಅಧಿಕಾರಪೀಠದಿಂದ ಅವರು ಕೆಳಗಿಳಿಯಬೇಕು.

ಸಹವಾಸ

(ಒಂದು ಜೀವನಕಥೆ)

ಶ್ರೀ. ಬಳ್ಳೂರು ಸುಬ್ರಾಯ ಅಡಿಗ, ಗಂಗೊಳ್ಳಿ

●

ಜಗತ್ತಿನ ರೀತಿಯೇ ಒಂದು ವಿಚಿತ್ರವಾಗಿದೆ. ದುರ್ಮಾರ್ಗಿಯೆಂದು ತಿಳಿದ ವ್ಯಕ್ತಿ ಒಳ್ಳೆಯ ವಾತಾವರಣ, ಜೀವನದ ಅನುಭವ ಇವುಗಳ ಮೂಲಕ ಸನ್ಮಾರ್ಗಗಾಮಿಯಾಗುತ್ತದೆ. ಸನ್ಮಾರ್ಗಿಯೆಂದು ಭಾವಿಸಿದ ಇನ್ನೊಂದು ವ್ಯಕ್ತಿ, ಅದೇ ಸಮಯದಲ್ಲಿ ಮಾನಸಿಕ ದೌರ್ಬಲ್ಯಕ್ಕೊಳಗಾಗಿ ದುರ್ಮಾರ್ಗಗಾಮಿಯಾಗುತ್ತದೆ.

●

ಕೋಣೆಯ ಬಿರುಗಂಟಿ ೧೧ ಬಾರಿಸಿತು. ಕಮಲಮ್ಮ ಆರಾಮ ಕುರ್ಚಿಯ ಮೇಲೆಯೇ ಒರಗಿ ತೂಕಡಿಸುತ್ತಿದ್ದವಳು ಈ ಶಬ್ದದಿಂದ ಬೆಚ್ಚಿಬಿದ್ದು ಕುಳಿತಳು, ಎದ್ದು ಬಾಗಿಲಿನ ಕಡೆ ನೋಡಿದಳು; ಮೊದಲಿನಂತೆಯೇ ಅರೆ ಮುಚ್ಚಿತ್ತು. ಮಗನು ಬಂದ ಸುಳಿವಿಲ್ಲ. ಅವಳ ನಿದ್ದೆಯ ಕೊಂಪು ಸಂಪೂರ್ಣವಾಗಿ ಹಾರಿಹೋಗಿ, ತಲೆಯಲ್ಲಿ ವಿಚಾರದ ಅಲೆಗಳು ಏಳತೊಡಗಿದುವು. ಅದನ್ನೆಲ್ಲ ಕ್ರಮವಾಗಿ ಹೀಗೆ ಸಂಗ್ರಹಿಸಬಹುದು:

ಪತಿಯ ಮರಣದಿಂದಾರಂಭಿಸಿ ಒಂದೊಂದೇ ಘಟನೆಗಳು ಮನಃಪಟಲದ ಮೇಲೆ ಮೂಡಿಬಂದುವು. ಹನ್ನೆರಡು ವರ್ಷಗಳ ಹಿಂದಿನ ಮಾತು. ಮಗ ಮನೋಹರ ಆಗಿನ್ನೂ ೯ ವರ್ಷದ ಕಿರುಬಾಲನಾಗಿದ್ದ. ತಂದೆ ಇಲ್ಲದ ಏಕಾಕಿಮಗುವನ್ನು ಎದೆಗವಚಿಕೊಂಡು ಗೋಳೋ ಎಂದು ಕಲ್ಲು ಕರಗುವಂತೆ ಅತ್ತಿದ್ದಳಾಕೆ. ಜೀವನವೇ ಬೇಸರವಾಗಿ, ತನ್ನ ವಂಶದ ಕುಡಿಯನ್ನು ಬೆಳೆಯಿಸುವ ಏಕಮಾತ್ರ ಆಶೆಯನ್ನು ಮನಸಿರಿಗಿಟ್ಟುಕೊಂಡು, ಈ ೧೨ ವರ್ಷಗಳನ್ನು ಕಳೆದಿದ್ದಾಳೆ. ಶ್ರೀಮಂತಿಕ ವಂಶಪಾರಂಪರ್ಯವಾಗಿ ಬಂದಿತ್ತು. ಜೀವನದ ಚಿಂತೆ ಪೀಡಿಸುತ್ತಿರಲ್ಲಿಲ್ಲ. ಆದರೆ ಆ ದೊಡ್ಡ ಮನೆಯ ಕಾರಭಾರವನ್ನು ನಡೆಯಿಸಿಕೊಂಡು ಬರುವುದು ತುಂಬ ಕಷ್ಟದ ಕೆಲಸವಾಗಿತ್ತು; ಮನೆಯಲ್ಲಿ ಯಾರೂ ಇದ್ದಿಲ್ಲ. ಮನೆಯ ಒಳಕೆಲಸಕ್ಕೆ ಆಳುಕಾಳುಗಳನ್ನು ಇಟ್ಟುಕೊಂಡಿರಲಿಲ್ಲ. ಎಲ್ಲವನ್ನೂ ತಾನೇ ಮಾಡಬೇಕೆಂದು ಪಣ ತೊಟ್ಟಿದ್ದಳು ಆ ಸ್ವಾಭಿಮಾನಿನಿ. ಹಳ್ಳಿಯಲ್ಲಿದ್ದ ಜಮೀಂದಾರಿಯ ಸಕ್ಕತ್ರವನ್ನಿಡಲು–ಗೇಣಿ ವಸೂಲಿ ಮಾಡಲು ಅಣ್ಣ ನೆರವಾಗುತ್ತಿದ್ದನಷ್ಟೆ. ಅವನಿಗಲ್ಲದೆ ಮತ್ತಾರಿಗೂ ಒಪ್ಪಿಸಲು ಅವಳು ಸಿದ್ಧಳಿರಲಿಲ್ಲ.

ಪಟ್ಟಣದ ವಾತಾವರಣವೇ ಹಾಗೆ. ಹಳ್ಳಿಯಂತೆ ಒಬ್ಬರ ಸುಖ ದುಃಖದ ಅರಿವು ಮತ್ತೊಬ್ಬರಿರುವುದು ಸ್ವಲ್ಪ ಕಡಿಮೆಯೇ. ದೊಡ್ಡ ದೊಡ್ಡ ಪಟ್ಟಣಗಳಲ್ಲಂತೂ ಒಂದೇ ಮನೆಯ ಎರಡು ಕೋಣೆಗಳ ಜನರೊಳಗೂ ಪರಸ್ಪರ ಪರಿಚಯವಿರುವುದಿಲ್ಲ. ಎಲ್ಲ ಯಾಂತ್ರಿಕವಾಗಿ ನಡೆಯುತ್ತದೆ. ಇದೇನೂ ಅಂತಹ ದೊಡ್ಡ ಪಟ್ಟಣವಲ್ಲದಿದ್ದರೂ, ಪರಿಚಯ ಬೆಳೆಸಲು ಕಮಲಮ್ಮನ ಮನಸ್ಸು ಅಳುಕುತಿತ್ತು. ಹೊರಗಿನ ಪ್ರಪಂಚದ ಸಂಬಂಧವನ್ನೇ ಅವಳು ತೊರೆದಂತಿದ್ದಳು. ಮನೆಯ ಹೊರ ಕೆಲಸಕ್ಕಾಗಿ ಇದ್ದ ವಿಶ್ವಾಸಿ ಆಳು 'ಕೊರಗ'ನನ್ನು ಬಿಟ್ಟರೆ ಮತ್ತಾರೂ ಆ ಮನೆಯತ್ತ ಸುಳಿಯುತ್ತಿದ್ದಿಲ್ಲ.

ಕಮಲಮ್ಮನಿಗೆ ಈ ಜೀವನ ಮೊದ-ಮೊದಲು ಕಷ್ಟವಾಗುತ್ತಿತ್ತು; ಪತಿಯಿದ್ದಾಗ ಅಕ್ಕಪಕ್ಕದ ಮನೆಯ ಹೆಂಗಸರೊಡನೆ ವಿಶೇಷ ಸಲುಗೆಯಿಂದಿದ್ದವಳು, ಆ ಬಳಿಕ ಒಮ್ಮಿಂದೊಮ್ಮೆಗೇ ಎಲ್ಲಾ ಸಂಬಂಧವನ್ನೂ ಕಡಿದುಕೊಂಡುಬಿಟ್ಟಳು. ಬಹುಶಃ ವೈರಾಗ್ಯವಿರಬಹುದೆಂದು ಗೆಳತಿಯರೆಲ್ಲ ಊಹಿಸಿದರು. ಆದರೆ ಕಮಲಮ್ಮನಿಗೆ ವೈರಾಗ್ಯಕ್ಕಿಂತಲೂ ಭಯವೇ ಹೆಚ್ಚಾಗಿತ್ತು. ಯಾವ ನಿಷ್ಠುರಗಳಿಗೆಯಲ್ಲಿ ಯಾವ ತೆರದ ಅಪಾಯ ಸಂಭವಿಸುವುದೋ ಎಂಬ ಅಂಜಿಕೆಯಿಂದಲೇ ಅವಳು ಹೊರ-ಪ್ರಪಂಚದಿಂದ ಸಂಪೂರ್ಣ ಬೇರೆಯಾಗಿ ಏಕಾಂತವಾಸವನ್ನನುಭವಿಸುತ್ತಿದ್ದಳು. ಮನೋಹರನೊಬ್ಬನೇ ಅವಳ ಅಪೀವ ಪ್ರೀತಿಯ ಕೇಂದ್ರವಾಗಿದ್ದ.

ಈ ತೆರದ ಜೀವನ ಬರುಬರುತ್ತ ಅವಳಿಗೆ ಅಭ್ಯಾಸವಾಗಿ ಹೋಯಿತು. ಮನೋಹರನೂ ದುಃಸಹವಾಸಕ್ಕೆ ಬಲಿಬೀಳದೆ ಬಳೆಯುತ್ತಹೋದ. ಏಕಾಂತಜೀವನವು ಅವನ ಸ್ವಾಭಾವಿಕ ವಿಕಾಸಕ್ಕೆ ಭಂಗ ತರಬಾರದೆಂದು ಅವಳು ಅವನನ್ನು ನೆರೆಹೊರೆಯ ಹುಡುಗರೊಡನೆ ಆಡಗೊಡುತ್ತಿದ್ದಳು. ಆದರಲ್ಲೂ ದುಷ್ಟ ಹುಡುಗರ ಒಡನಾಟಕ್ಕೊಳಗಾಗದಂತೆ ಜಾಗ್ರತೆ ವಹಿಸುತ್ತಿದ್ದಳು. ಎಂದಾದರೊಮ್ಮೆ ಅವನು ತಪ್ಪು ಮಾಡಿದಾಗ ಅವಳು ಗದರಿಸದೆ ಬುದ್ಧಿ ಹೇಳುತ್ತಿದ್ದಳು. ಮನೋಹರ ತನ್ನ ತಪ್ಪನ್ನು ತಿದ್ದಿಕೊಳ್ಳಲೇಬೇಕಾಗುತ್ತಿತ್ತು. ಹೀಗೆಯೇ ೧೦ ವರ್ಷಗಳು ಅವಿಚ್ಛಿತವಾಗಿ ಉರುಳಿದುವು.

ಮನೋಹರ S. S. L. C. ಕ್ಲಾಸಿಗೆ ಕಾಲಿಟ್ಟ. ಆಗಲೇ ಕೆಲವು ಉಡಾಳ ಹುಡುಗರ ಸಹವಾಸ ಅಂಟಿಕೊಂಡಿತು. ಕಲಿಯುವುದರಲ್ಲೆನೂ ಅವನು ಅಷ್ಟು ಚುರುಕಲ್ಲ. ಆದರಲ್ಲೂ ಸೋಲಿ ಹುಡುಗರ ಕೆಳೆತನ ಅವನ ಅಭ್ಯಾಸಕ್ಕೆ ಧಕ್ಕೆ ತಂದಿತ್ತು. ದಿನವಿಡೀ ತಿರುಗಾಡುವುದು, ಹರಟೆ ಹೊಡೆಯುವುದು — ಇದೆಲ್ಲ ಅವನ ಕಾರ್ಯಕ್ರಮವಾಯಿತು. ಎಷ್ಟೋ ದಿನ ಶಾಲೆಗೂ ಚಕ್ಕರ್ ಹೊಡೆಯುತ್ತಿದ್ದ. ಇದೆಲ್ಲ ಅವಳಿಗೆ ಮೆಲ್ಲಮೆಲ್ಲನೆ ತಿಳಿಯಿತು. 'ಬುದ್ಧಿ ಬಂದ ಹುಡುಗ. ವಿಶೇಷ ಕಟ್ಟು–ಪಾಡುಗಳ ಅಗತ್ಯವೇನು? ಅವನಿಗದೆಲ್ಲ ತಿಳಿಯದೆ?' ಎಂದು ಸುಮ್ಮನಾಗುವಳು. ಮಗನು ಅಳುಕುತ್ತಳುಕುತ್ತ ಮನೆಗೆ ಬರುವ. ತಾಯಿಯ ಸೌಮ್ಯರೂಪವನ್ನು ಕಂಡು ಧೈರ್ಯ ತಾಳುವ. ಎಂದಾದರೊಮ್ಮೆ ತಾಯಿ ಕೇಳಿದರೆ, ಅವನು ಸತ್ಯವನ್ನೇ ಹೇಳುತ್ತಿದ್ದ. ತಾಯಿಯೆದುರಿಗೆ ಸುಳ್ಳುಹೇಳುವುದು ಅವನಿಗೆ ಅಸಾಧ್ಯವೇ ಆಗುತ್ತಿತ್ತು.

ತಾಯಿ ನೊಂದುಕೊಳ್ಳುವಳಲ್ಲ! — ಎಂಬ ಭಾವನೆ ಆಗಾಗ ಅವನಲ್ಲಿ ಮೂಡುತಿತ್ತು. ಆದರೆ ಗೆಳೆಯರೊಡನೆ ಸೇರಿದಾಕ್ಷಣ ಅದೆಲ್ಲ

ನಾಯುವಾಗುವುದು. ಪುನಃ ಎಂದಿನಂತೆ ಅವನು ಅವರೊಡನೆ ಸೇರಿ ವಿದ್ಯಾಭ್ಯಾಸವನ್ನು ಕಡೆಗಣಿಸುತ್ತಿದ್ದ. ಈ ಹೃದಯದೌರ್ಬಲ್ಯ ಅವನನ್ನು ಪತನಗರ್ತದತ್ತ ಬಲಾತ್ಕಾರವಾಗಿ ಎಳೆಯುತ್ತಿತ್ತು.

S S. L. C ಪರೀಕ್ಷೆ ಜರುಗಿತು. ಮುಂದೆ ಫಲಿತಾಂಶವೂ ಬಂತು. ಮನೋಹರ ಫೆಯ್ಲಾಗಿದ್ದ. ತಾಯಿಯ ಹೃದಯ ನೊಂದು ಚೀರಿಬ್ಬಿತು. ಅವರೆ ಅವಳು ಅವನೆದುರಿಗೆ ಅಡಿತೋರಿಸಲಿಲ್ಲ. ತಾಯಿ ಅವನಂತರಂಗ ಬಲ್ಲಳು. ತಾನೂ ಗದರಿಸಿ ದೂರಗೊಳಿಸಿದರೆ ಅವನೆಲ್ಲಿ ಹೋಗಬೇಕು? ಬೇಸರನಿಂದ ಮನೆಯನ್ನೇ ಬಿಟ್ಟು ಹೋದರೆ.....! ಎಂಬ ಅಂಜಿಕೆಯೂ ಇತ್ತು; ಹೀಗಾಗಿ ಅವಳು ಅವನನ್ನು ಸಮಾಧಾನ ಪಡಿಸಿದಳು; ಧೈರ್ಯ ಹೇಳಿದಳು. 'ಇನ್ನೊಂದು ಬಾರಿ ಚೆನ್ನಾಗಿ ಓದಿ ಪಾಸಾಗು; ತುಂಟರ ಸಹವಾಸ ಬಿಟ್ಟುಬಿಡು' ಎಂದಳು. ತನ್ನ ತಾಯಿ ಎಷ್ಟು ಒಳ್ಳೆಯವಳು! –ಎಂಬ ಭಾವನೆ ಅವನಿಗೆ ಮೂಡಿರಬೇಕು. ಆಗಂತೂ ವಿಶೇಷ ಸಮಾಧಾನವಾಯಿತು.

ಆದರೆ ಮನೆಯಿಂದ ಹೊರಬಿದ್ದೊಡನೆಯೇ ತನ್ನ ಉದ್ವೇಶವೆಲ್ಲ ಅವನಿಗೆ ಮರೆತುಹೋಗುತ್ತಿತ್ತು. ತಾನು, ಗೆಳೆಯರು—ಇವೆರಡೇ ಅವನ ಸೃಷ್ಟಿಯಲ್ಲುಳಿಯುವುದು. ಅವರೊಡನೆ ಬೆರೆತು ಅವನು ದುಶ್ಚಟಗಳಿಗೆ ಬಲಿಬಿದ್ದ. ಗೆಳೆಯರೆಂದರೆ ಬೆಲ್ಲಕ್ಕೆ ಮುತ್ತುವ ಇರುವೆಗಳೆಂದು ಅವನೇನು ಬಲ್ಲ! ಗಳಿಗೆ–ಗಳಿಗೆಗೆ ಕಾಫಿ ಕುಡಿಯುವುದು, ಕ್ಷಣಕ್ಷಣಕ್ಕೆ ಸಿಗರೇಟು ಸೇದುವುದು ಅವನ ಅಭ್ಯಾಸವಾಯಿತು. ತಾಯಿಗೂ ಆದರ ಸುಳಿವು ಹತ್ತಿತು. ಮಗನ ಚಲನವಲನಗಳನ್ನು ಕಣ್ಣಿಟ್ಟು ನೋಡುತ್ತಿದ್ದಳಾಕೆ. ಅವರೆ ಮನೆಯಲ್ಲಿದ್ದಾಗ ಎಲ್ಲದಕ್ಕೂ 'ಬ್ರೇಕು' ಹಾಕುತ್ತಿದ್ದ. ತಾಯಿಯ ಕಣ್ಣಿಗೆ ಬೀಳದಂತೆ ಕದ್ದು ಮುಚ್ಚಿ ಸಿಗರೇಟು ಸೇದುತ್ತಿದ್ದ. ಆದರೊನ್ಮೈ ಇದರ ಪತ್ತೆ ಹಚ್ಚಬೇಕೆಂದು ಹೊಂಚುತ್ತಿದ್ದ ಅವಳು, ಅವನ ಕಿಸೆಯಲ್ಲಿ ಸಿಗರೇಟಿನ ಪ್ಯಾಕನ್ನು ಕಂಡು— 'ಇದೆಲ್ಲಿಂದ ಬಂತು?' ಎಂದಳು. ಅವಳ ನೇರವಾದ ಪ್ರಶ್ನೆಗೆ ಅವನ ಮುಖ ಬಿಳುಪೇರಿತು. ತಡವರಿಸುತ್ತಾ ಅವನು ..... 'ನಾನೇ ..... ತಂದೆ.....' ಎಂದನು.

'ಅಂದರೆ.... ನೀನು ಈ ಅಭ್ಯಾಸಕ್ಕೂ ಆರಂಭಿಸಿದೆಯಾ?'

ಮನೋಹರ ಮಾತಾಡದೆ ಬಿಕ್ಕಿಬಿಕ್ಕಿ ಅತ್ತ. ತನ್ನದು ತಪ್ಪಾಯಿತೆಂದು ಹಲುಬಿದ. ತಾನಿನ್ನು ಹಾಗೆ ಮಾಡುವುದಿಲ್ಲವೆಂದು ತಾಯಿಗೆ ಭರವಸೆಯಿತ್ತ. ಅವನ ಅಳುಮುಖವನ್ನು ಕಂಡು ತಾಯಿಯ ಕಂಗಳೂ ಹನಿಗೂಡಿದುವು. ಅವಳು ಬೇರೆಯೇನೂ ಹೇಳದೆ ಅಲ್ಲಿಂದ ಹೊರಟು ಹೋದಳು.

ಮತ್ತೊಂದು ವಾರದವರೆಗೆ ಮನೋಹರ ಮನೆಯಿಂದ ಹೊರಗೆ ಕಾಲಿಡಲಿಲ್ಲ. S. S L. C. ಯ ಪುಸ್ತಕಗಳನ್ನೇ ಓದುತ್ತ ಕುಳಿತುಕೊಂಡ. ಗೆಳೆಯರು ಬಂದರೂ ಏನಾದರೊಂದು ನೆವಹೇಳಿ ಕಳುಹಿಸುತ್ತಿದ್ದ. ಆದರೆ ಇದರಿಂದ ಅವನ ಮನಸ್ಸು ಯಾವಾಗಲೂ ಬೇಸರುತ್ತಿತ್ತು. ತಾಯಿ ಮಗನ ಒಲವನ್ನು ಬಲ್ಲಳು. ಇದೇ ರೀತಿ ಇದ್ದರೆ ಇವನು ಕಾಯಿಲೆ ಬಿದ್ದಾನೆಂದು ಬಗೆದು 'ಸಂಜೆಯ ತಿರುಗಾಟಕ್ಕೆ ಹೋಗಬೇಕು' ಎಂದು ಒತ್ತಾಯಿಸಿದಳು. ಸರಿ; ಮತ್ತೆ ಅವನ ಮೊದಲಿನ ಕ್ರಮವೇ ಜಾರಿಯಾಯಿತು. ತಾಯಿ ಹಣೆಪಣೆ ಚಚ್ಚಿಕೊಂಡಳು....!

ಬಾಗಿಲಿನ ಶಬ್ದ ಕೇಳಿದಾಗ ವಿಚಾರಸರಣಿ ಫಕ್ಕನೆ ನಿಂತಿತು. ಕಣ್ಣು ತಿರುಗಿಸಿ ನೋಡಿದಳು. ಹಾಳು ಬೆಕ್ಕು ಸಂದಿನಲ್ಲಿ ತಲೆಹಾ ದೂಡಿದ್ದುದರಿಂದಲೇ ಆ ಶಬ್ದವಾಗಿತ್ತು. ಅವಳು ನಿರಾಶೆಯಿಂದ ಗಡಿಯಾರದತ್ತ ನೋಡಿದಳು. ಗಂಟೆ ಒಂದೇ ಒಂದು ಮಿಸಿಟಿತ್ತು....

'ಠಣ್!' ಎಂದು ಬಾರಿಸಿ ಗಡಿಯಾರ ಮೌನವಾಯಿತು. 'ಇನ್ನೂ ಬಂದಿಲ್ಲ.. ಕ್ಲಬ್ಬಿನಲ್ಲಿ ಕುಳಿತರೆ ಹೊತ್ತೇ ಹೋಗುವುದಿಲ್ಲ. ಮತ್ತೆ ಸಿನೇಮಾ ನೋಡಲು ಹೋಗಿರಬೇಕು; ಊಟವಾಡಿ ಹೋಗಿರೇನಾಗುತ್ತಿತ್ತು? ಆರೋಗ್ಯದ ಕಡೆಗೂ ಲಕ್ಷ್ಯವಿಲ್ಲ' ಎಂದು ಗೊಣಗಿದಳು. ಮತ್ತೆ ಅವಳ ಯೋಚನೆ ಮುಂದುವರಿಯಿತು—

S S. L. C. ಯಲ್ಲಿ ಎರಡನೆಯ ಬಾರಿಯೂ ಪಾಸಾಗಲಿಲ್ಲ ಈ ಬಾರಿ ಪರೀಕ್ಷೆಯ ವೇಳೆಯಲ್ಲಿ ಅವನು ಮನಃಪೂರ್ವಕವಾ ಕೆಲಸ ಮಾಡಿದ್ದ. ಮನೆಬಿಟ್ಟು ಹೋಗಿರಲಿಲ್ಲ ಈ ಪೀಡೆಯೊಂ ತೊಲಗಿದರೆ ಮತ್ತೆ ತಾನು ಸ್ವತಂತ್ರನೆಂಬ ಭಾವನೆ ಅವನಿಗಾಗಿ ಬೇಕು.

ಆದರೆ ಈ ಸಲವೂ ಪಾಸಾಗದುದನ್ನು ಕಂಡು, ತಾಯಿಗೆ ತನ ಮಗನ ವಿದ್ಯೆ ಇಲ್ಲಿಗೇ ನುಗಿಯಿತೆಂದು ಖಚಿತವಾಯಿತು. ಅವಕ್ಕಾ ಅವಳಿಗೇನೂ ಬೇಸರವಾಗಲಿಲ್ಲ. ಕೆಲವರ ಬುದ್ಧಿಯೇ ಸ್ವಲ್ಪ ಮಂದ ಎಂದು ಸಮಾಧಾನ ತಾಳಿದಳು. ಆದರೆ ಅವನು ತುಂಟರ ಒಡನಾ ದಿಂದ ಹಾಳಾಗದೆ ಬಾಳಿದರೇನೇ ಸಾಕು —ಎಂದು ಅವಳು ಕುಲದೇ ರೊಡನೆ ಆಗಾಗ ಬೇಡಿಕೊಳ್ಳುತ್ತಿದ್ದಳು.

ಮನೆಯ ಹೊಣೆಗಾರಿಕೆ ತಲೆಯನೇಲೆ ಬಿದ್ದರೆ ಸ್ವಲ್ಪ ಸುಧಾರಿ ಬಹುದೆಂದು ಅವಳು ಭಾವಿಸಿದಳು ಅಣ್ಣನೂ ಅದಕ್ಕೆ ಒಪ್ಪಿಬಟ್ಟ ಜಮೀಂದಾರಿಯ ಲೆಕ್ಕಪತ್ರ, ಆಸ್ತಿಯ ವಹಿವಾಟು—ಎಲ್ಲ ಅವನಿ ಒಪ್ಪಿಸಲಾಯಿತು. ಖಜಾನೆಯ ಬೀಗದ ಕೈಯೂ ಅವನಲ್ಲಿತ್ತು ಇನ್ನಾದರೂ ತನ್ನ ಹೆಣ ತನ್ನ ಆಸ್ತಿಯೆಂಬ ಭಾವನೆಯಿಂದ ಸ್ವ ಜಾಗ್ರತೆ ವಹಿಸುವನೆಂದು ಅವಳು ಭಾವಿಸಿದಳು. ಆದರೆ ಅವಳಾ ಬಯಲಾಸೆಯಾಯಿತು; ಅವನ ಸ್ವಭಾವದಲ್ಲಿ ಬದಲಾವಣೆಯಾಗಲೇ ಇಲ್ಲ. ಗೆಳೆಯರ ಹಾವಳಿ ಹೆಚ್ಚಾಯಿತು. ಮನೆಯಲ್ಲೂ ಬಂ ಗುಂಪು ಸೇರತೊಡಗಿದರು. ಬೆಳಗಿನಿಂದ ಸಂಜೆಯವರೆಗೆ ಅವರೊಡ ನಗುತ್ತ ಕೆಲೆಯುತ್ತ ಹರಟೆ ಹೊಡೆಯುತ್ತಿದ್ದ. ಈಗ ಓದಿನ ಕಾಟವೂ ಇದ್ದಿರಲಿಲ್ಲ. ತಾಯಿ ಮಗನ ಪತನವನ್ನು ಕಣ್ಣಾರೆ ಕಂಡೂ ಅಸಹಾಯಕಳಾಗಿದ್ದಾಳೆ ಈ ರೋಗಕ್ಕಾವ ಔಷಧಿಯೆಂದು ಅವಳಿಗಿನ್ನೂ ಅರಿವಾಗದಾಗಿದೆ.

ಮಗನಿಗೆ ಇಸ್ಪೀಟಿನ ಚಟವೂ ಅಂಟಿದೆಯೆಂದು ಅವಳಿಗೆ ಗೆಳೆಯರ ಮಾತು-ಕತೆಯಿಂದಲೇ ನೊನ್ನೆ ನೊನ್ನೆ ಅರಿವಾಗಿದೆ. ಅ ಜೂಜಿನ ರೂಪವನ್ನೂ ಹಿಡಿದಿರಬಹುದೆ? ಎಂಬ ಶಂಕೆಯಿಂದ ಥರಥರ ನಡುಗುತ್ತಿದ್ದಾಳೆ!

ಪತನದ ಹಾದಿಯಲ್ಲಿ ಅವನು ಭರದಿಂದ ಸಾಗುತ್ತಿದ್ದಾನೆಂಬುದು ಅವಳಿಗೂ ಅರ್ಥವಾಗುತ್ತಿದೆ. ಆದರೆ ಅವಳು ಏನು ಮಾಡಬಲ್ಲಳು? ಸ್ವಲ್ಪ ಹೆಚ್ಚು ಕಡಿಮೆ ಮಾತಾಡಿದರೆ ಮನೆಯಿಂದ ಓಡಿಹೋದಾನೆಂಬ ಅಂಜಿಕೆ. ಅದು ಈ ಎಲ್ಲ ದುಃಖಗಳನ್ನು ಮೆಟ್ಟಿ ನಿಲ್ಲುತ್ತದೆ. ಅಣ್ಣನ ಬಲಹೆಗಳನ್ನು ಕೇಳಿದರೂ ಪ್ರಯೋಜನವಾಗಲಿಲ್ಲ. ಅವನೇನೆಂದಾನು? ಹೆದರಿಸಿ ಬೆದರಿಸಿ ಅಂಕೆಯಲ್ಲಿಟ್ಟುಕೊಳ್ಳಬೇಕೆಂಬ ಭಾವನೆ ಎಂದೋ ಅಳಿಸಿಹೋಗಿದೆ. ತನ್ನ ಮಾತನ್ನು ಮೀರುವಂತಹ ಪೋಲಿಯಲ್ಲದಿದ್ದರೂ ಅವನ ದೌರ್ಬಲ್ಯ ಅವಳಿಗೂ ಗೊತ್ತು. ಗೆಳೆಯರೊಡನೆ ಬೆರೆತಾಗ ಯಾವ ಉಪದೇಶವೂ ನೆನಪಾಗುವುದಿಲ್ಲ.

ದುರ್ಗುಣಗಳನ್ನೆಲ್ಲ ದೂರಗೊಳಿಸಲು ಅವನಿಗೊಬ್ಬ ಉತ್ತಮ ಗೆಳೆಯನನ್ನು ತಂದುಕೊಡಬೇಕು. ಅವನ ಪ್ರಭಾವಕ್ಕೆ ಇವನು ಒಳಗಾಗುವಂತಿರಬೇಕು. ಆಗ ಮಾತ್ರ ಇವನು ದಾರಿಗೆ ಬಂದಾನು– ಎಂದು ಅವಳ ಮನಸ್ಸು ಒಂದೆರಡು ದಿನಗಳಿಂದೀಚೆಗೆ ವಿಚಾರ ಮಾಡುತ್ತಿದೆ. ಆದರೆ ಅಂತಹ ಯೋಗ್ಯನು ಯಾರು ಸಿಗಬಹುದು?

ಯೋಚಿಸುತ್ತಿದ್ದಂತೆಯೇ ಅವಳಿಗೆ ತನ್ನ ತಂಗಿಯ ಮಗ ವಾಸುದೇವನ ನೆನಪಾಯಿತು. ಇದುವರೆಗೂ ಮನದಲ್ಲಿ ಕೊರೆಯುತ್ತಿದ್ದ ಚಿಂತಾಕೀಟವು ನಾಶವಾದೀತೆಂಬ ಹೆಮ್ಮೆಸ್ಸಿನಿಂದ ಆಗಲೇ ಬಹು ದೂರದ ಹಳ್ಳಿಯಲ್ಲಿದ್ದ ತನ್ನ ತಂಗಿಗೆ ಪತ್ರ ಬರೆದಳು:

"ನಚ್ಚಿನ ತಂಗಿ

ನಮ್ಮಿ ಬ್ಬರಲ್ಲಿ ಪತ್ರವ್ಯವಹಾರವು ನಡೆಯದೆ ಬಹುದಿನಗಳಾದುವು. ಆದರೆ ಇದರಿಂದ ನಮ್ಮ ಆಂತರಿಕ ಪ್ರೀತಿಗೆ ಕೊರತೆಯಿದೆಯೆ? ನೀನಲ್ಲಿ ಕುಶಲವಾಗಿರುವೆಯೆಂದು ಊಹಿಸುವೆ ಆದರೆ ನನ್ನ ಮನದ ಗೊಂದಲವನ್ನೇನೆಂದು ಹೇಳಲಿ? ಇಷ್ಟು ವರ್ಷಗಳವರೆಗೆ ಮಮತೆಯಿಂದ ಸಾಕಿದ ಹುಡುಗ ಇಂದು ನನ್ನ ದುರ್ದೈವದಿಂದ ಕಣ್ಣೆದುರಿಗೇ ಹಾಳಾಗುತ್ತಿದ್ದಾನೆ. ಇದನ್ನು ನನ್ನ ಹಾಳು ಕಣ್ಣುಗಳು ಕಾಣಬೇಕಾಗಿವೆ. ಅವನು ತುಂಟ ಹುಡುಗರ ಸಹವಾಸಕ್ಕೆ ಬಲಿಬಿದ್ದು ಹಣವನ್ನು ಪೋಲುಮಾಡುವುದಲ್ಲದೆ ನಡತೆಯನ್ನೂ ಕೆಡಿಸಿಕೊಳ್ಳುತ್ತಿದ್ದಾನೆ. ಈ ವಿಚಾರವಾಗಿ ಚಿಂತಿಸುತ್ತ ಚಿಂತಿಸುತ್ತ ನನ್ನ ಬಗೆಯೇ ಕದಡಿಹೋಗಿದೆ. ಎಷ್ಟೋ ದಿನಗಳಿಂದ ಇದಕ್ಕೇನಾದರೂ ಪರಿಹಾರ ಮಾಡಬೇಕೆಂದು ಯೋಚಿಸುತ್ತಿದ್ದೇನೆ. ಆಗ ನಿನ್ನ ಮಗ ವಾಸುದೇವನ ನೆನಪಾಯಿತು. ಅವನ ಸಹವಾಸ ಇವನ ದುರ್ಗುಣಗಳನ್ನು ತಿದ್ದಬಹುದೆಂಬ ಹಿರಿಯಾಸೆ ನನಗೆ. ಅವನನ್ನು ಕೆಲವು ಸಮಯದವರೆಗಾದರೂ ಕಳುಹಿಸಿಕೊಟ್ಟು ನಿನ್ನ ಅಕ್ಕನ ಮನೆಯನ್ನು ಉಳಿಸುವ ಪುಣ್ಯ ಕಟ್ಟಿಕೊಳ್ಳಲಾರೆಯಾ?

ಇಂತು,
ನಿನ್ನ ಅಕ್ಕ."

ಪತ್ರವನ್ನು ಕವರಿನೊಳಗಿಟ್ಟು ವಿಳಾಸ ಬರೆಯುತ್ತಿದ್ದಾಗಲೇ ಬಾಗಿಲು ದೂಡಿದ ಸದ್ದಾಯಿತು. ಅವಳು ತಲೆಯೆತ್ತಿ ನೋಡಿದಳು. ಮನೋಹರ ಮೆಲ್ಲಮೆಲ್ಲನೆ ಹೆದ-ಹೆದರುತ್ತ ಒಳಗೆ ಕಾಲಿಟ್ಟ. ಅವನ ಕಂದಿದ ಮೋರೆಯನ್ನು ಕಂಡಾಗಲೇ ಇಂದೇನೋ ವಿಶೇಷ ಅಘಾತವಾಗಿರಬೇಕೆಂದು ಊಹಿಸಿದಳಾಕೆ.

'ಇಷ್ಟು ಹೊತ್ತು ಎಲ್ಲಿದ್ದಿ?' — ಬಿರುಸಾಗಿಯೇ ಅವಳು ಪ್ರಶ್ನಿಸಿದಳು. ಕ್ಲಬ್ಬಿನಲ್ಲಿ.... .. !

'ಕ್ಲಬ್ಬಿನಲ್ಲಿ? ೧೨ ಗಂಟೆಯವರೆಗೂ? ಇಸ್ಪೀಟಾಟ ಸಾಗಿತ್ತೆ?'

'ಹೌದು..... ....!'

'ಅಂದರೆ.... ಜೂಜಾಟ....! ಎಷ್ಟು ಹಣ ಹೋಯಿತು?'— ಅವನ ಮುಖಭಾವವನ್ನು ಕಂಡೇ ಅವಳು ಪ್ರಶ್ನಿಸಿದಳು.

'ಇನ್ನೂರು ರೂಪಾಯಿ' — ಸುಳ್ಳು ಹೇಳುವ ಯೋಗ್ಯತೆಯೇ ಇಲ್ಲದ ಅವನು ಹೇಳಿದ.

'ಒಳ್ಳೇ ಉದ್ಯೋಗ.... .. ಮನೆಯ ಉದ್ಧಾರದ ಹಂಬಿಕೆ. ಬೀದಿಯ ಭಿಕಾರಿಗಳಾಗುವ ಯೋಗ.... ... !'

ಮನೋಹರ ತಾಯಿಯ ಸಿಟ್ಟನ್ನು ಎದುರಿಸುವನೆಂತು? ತನ್ನ ತಪ್ಪು ಅವನಿಗರಿಯದೆ? ತಲೆ ತಗ್ಗಿಸಿ ಅಳುತ್ತಾ ನಿಂತ.

ತಾಯಿಗೆ ಆ ಸಿಟ್ಟಿನಲ್ಲೂ ಮಗನು ಹಸಿದಿದ್ದ ನೆನಪಾಗಿ ಹೊಟ್ಟೆ ಉರಿಯಿತು. ಸಿಟ್ಟೆಲ್ಲ ಹಾರಿಹೋಗಿ ಆ ಸ್ಥಾನವನ್ನು ಮಮತೆ ಆವರಿಸಿತು. ಮೆತ್ತಗಾಗುತ್ತ –'ಕೈಕಾಲು ತೊಳೆದು ಬಾ; ಅಡುಗೆಯೆಲ್ಲ ಆರಿಹೋಗಿದೆ; ಹೊತ್ತಿಗೆ ಸರಿಯಾಗಿ ಊಟಕ್ಕೂ ಬರಬಾರದೆ?' ಎಂದಳು.

× × × ×

ಪ್ರಶಾಂತವಾದುದೊಂದು ಹಳ್ಳಿಯ ನಡುವೆ ಚೆಕ್ಕದಾದರೂ ಜೊಕ್ಕದಾದ ಹುಲ್ಲಿನ ಮನೆ. ಮನೆಯ ಹಿಂಬದಿಯಲ್ಲಿ ವಿಶಾಲವಾದ ತೋಟ. ಒಂದೆಡೆ ಹೂಗಿಡಗಳಿವೆ. ಮತ್ತೊಂದೆಡೆ ಫಲಗೊಡುವ ಮರಗಳಿವೆ. ಗಣೇಶರಾಯರು ಹೂಗಿಡಗಳಿಗೆ ನೀರೆರೆಯುತ್ತಿದ್ದಾರೆ. ಅವರ ಮೊಗದ ಮೇಲೆ ಸಂತಸದ ಸುಳಿವಿದೆ. ಅವರು ಆ ಕಾರ್ಯದಲ್ಲೇ ತಲ್ಲೀನರಾದಂತಿದೆ

'ರಾಯರೆ.....!' ಎಂಬ ಗಾಬರಿಯ ದನಿ ಕೇಳಿ ಅವರು ಬೆಚ್ಚಿ ಹಿಂದಿರುಗಿದರು. ಹಳ್ಳಿಯ ಮುದಿರೈತ ಚೆನ್ನನನ್ನು ನೋಡಿ– 'ಏನು ಬಂದೆ ಚೆನ್ನಾ?' ಎನ್ನುತ್ತಾರೆ.

'ನನ್ನ ಮಗ ಗದ್ದೆಯಿಂದ ಬಂದವನು ಇದ್ದಕ್ಕಿದ್ದಂತೆ ಬಿದ್ದುಬಿಟ್ಟ. ಮೈಮೇಲಿನ ಎಚ್ಚರವೇ ಇಲ್ಲ. ಇದುವರೆಗೆ ಹೀಗಾದುದಿಲ್ಲ.'

'ವಾಸೂ.... .!'— ರಾಯರು ಮಗನನ್ನು ಕೂಗಿದರು.

ಮಗ್ಗುದ ಮೇಲೆ ಬಟ್ಟೆನೇಯುತ್ತಿದ್ದ ವಾಸುದೇವ ತಂದೆಯ ಕರೆಯನ್ನು ಕೇಳುತ್ತಲೇ ಹೊರಗೆ ಬಂದನು. ತುಂಬಿದ ದೇಹದ ನವಯುವಕ. ೨೧–೨೨ರ ಹರೆಯ; ಟೊಂಕಕ್ಕೆ ಖಾದಿಯ ಪಂಜೆಯನ್ನು ಸುತ್ತಿ ಮೇಲೆ ಖದ್ದರ್ ಜುಬ್ಬವನ್ನು ಧರಿಸಿದ್ದಾನೆ. ಮುಖದ ಮೇಲೆ ಗಾಂಭೀರ್ಯ ನೆಲಸಿದೆ. 'ಏನಪ್ಪಾ?'

'ಚೆನ್ನನ ಮಗ ಫಕ್ಕನೆ ಮೂರ್ಛೆ ಹೋದನಂತೆ. ಒಮ್ಮೆ ನೋಡಿ ಬಾ.'

ವಾಸುದೇವ ತಡಮಾಡದೆ ಅವನೊಟ್ಟಿಗೆ ಹೊರಟುಬಿಟ್ಟನು. ಗಣೇಶರಾಯರು ಪುನಃ ನೀರೆರೆಯುವುದರಲ್ಲೇ ಮಗ್ನರಾದರು.

ದೇಶಸೇವಕ ಗಣೇಶರಾಯರು ಹದಿನಾರಾಣೆ ಗಾಂಧೀಭಕ್ತರು. ಬಾಲ್ಯದಿಂದಲೇ ಅವರ ಒಲವು ಗಾಂಧಿಯವರ ರಚನಾತ್ಮಕ ಕಾರ್ಯಕ್ರಮಗಳ ಕಡೆ ಹರಿದಿತ್ತು. ವಿದ್ಯಾಭ್ಯಾಸ ಮುಗಿಯುತ್ತಲೇ ಪೇಟೆಯಲ್ಲಿಯ ತಮ್ಮ ಮನೆ-ತೋಟಗಳನ್ನು ಮಾರಿ ಈ ಹಳ್ಳಿಯಲ್ಲಿ ಬಂದು ನೆಲಸಿದ್ದರು. ನಾಗರಿಕತೆಯ ಸೋಗಿಗೆ ಮರುಳಾಗದೆ ಹಳ್ಳಿಯೇ ತಮ್ಮ ಕಾರ್ಯಕ್ಷೇತ್ರವೆಂದು ಬಗೆದು ಕಾರ್ಯೋನ್ಮುಖರಾಗಿದ್ದರು. ಗಾಂಧೀ-ವಿನೋಬಾ ಭಾವೆಯವರ ಪ್ರಭಾವ ಅವರ ಮೇಲೆ ಸಂಪೂರ್ಣಬಿದ್ದಿತ್ತು. ಸ್ವಾತಂತ್ರ್ಯ ಚಳವಳಿಯ ವೇಳೆ ಎರಡು ಬಾರಿ ಅವರು ಸೆರೆಮನೆ ಕಂಡಿದ್ದರು.

ಗಣೇಶರಾಯರು ನಗುಮೊಗದ ಸೌಮ್ಯಮೂರ್ತಿ. ಹಳ್ಳಿಯೇ ತಮ್ಮ ಮನೆಯೆಂಬ ಭಾವನೆಯವರದು. ತಮ್ಮಿಂದಾದಷ್ಟು ಹಳ್ಳಿಯ ಉದ್ಧಾರ ಮಾಡಬೇಕೆಂದು ಮನಸ್ಸುಮಾಡಿದ್ದರು. ಆ ಹಳ್ಳಿಯನ್ನಾದರೂ 'ಮಾದರಿ ಹಳ್ಳಿ'ಯಾಗಿ ಮಾಡಬೇಕೆಂದು ಪಣತೊಟ್ಟಿದ್ದರು. ಇವರಂತಹ ಮೃದುಸ್ವಭಾವದವರಿಗೆ ಸರಳ ಹಳ್ಳಿಗರ ಮನವೊಲಿಸುವುದು ಕಷ್ಟದ ಕೆಲಸವಾಗಲಿಲ್ಲ. ರೈತರೊಡನೆ ನಿಸ್ಸಂಕೋಚವಾಗಿ ಬೆರೆತು, ಅವರ ಸುಖ-ದುಃಖಗಳಲ್ಲಿ ತಾವೂ ಸಮಭಾಗಿಯಾಗುತ್ತಿದ್ದರು. ಕಷ್ಟಗಳಿಂದ ದೂರವಾಗುವ ಉಪಾಯ ಹೇಳುತ್ತಿದ್ದರು. ಅವರಿಗೆ ತಮ್ಮಿಂದಾದಷ್ಟು ಸಹಕಾರ ನೀಡುತ್ತಿದ್ದರು.

ನಿರಕ್ಷರತೆಯ ಸಮಸ್ಯೆಯು ಹಳ್ಳಿಗರ ಪ್ರಗತಿಗೆ ಅಡ್ಡಗೋಡೆಯೆಂದು ಬಗೆದು ಅದನ್ನು ನಿರ್ಮೂಲಗೊಳಿಸಲು ಅವರು ಟೊಂಕ ಕಟ್ಟಿದರು. ಅವರ ಸತತ ಪರಿಶ್ರಮಕ್ಕೆ ತಕ್ಕ ಫಲಸಿಕ್ಕದೆ ಹೋಗಲಿಲ್ಲ. ಹಳ್ಳಿಗರು ಒಮ್ಮೆ ಒಬ್ಬರನ್ನು ನಂಬಿದರೆಂದರೆ ಕೊನೆಯವರೆಗೂ ನಂಬಿಯೇ ಬಿಡುತ್ತಾರೆ. ಹೀಗಾಗಿ ಎಷ್ಟೋ ಸ್ವಾರ್ಥಸಾಧಕರು ಅವರಿಂದ ಅನುಚಿತ ಲಾಭಪಡೆಯುವುದುಂಟು. ಒಮ್ಮೆ ಕೈ ಸುಟ್ಟುಕೊಂಡ ಜನ ತೆನ್ನಾಲಿರಾಮನ ಬೆಕ್ಕಿನಂತೆ ಹೆದರುತ್ತಲೇ ಇರುತ್ತದೆ. ಹೀಗಾಗಿ ನಿಃಸ್ವಾರ್ಥಿಗಳಿಗೂ ಒಮ್ಮೊಮ್ಮೆ ಸಾಫಲ್ಯಸಿಗುವುದಿಲ್ಲ. ಪಟ್ಟಣಿಗರೆಂದರೆ ಬೆಚ್ಚಿಬೀಳುವ ಹಳ್ಳಿಗರು ಹಾಲಿನಲ್ಲೂ ಹಾಲಾಹಲವನ್ನು ಶಂಕಿಸುತ್ತಾರೆ.

ಆದರೆ ಗಣೇಶರಾಯರಿಗೆ ಅಂತಹ ದುಃಸ್ಥಿತಿ ಒದಗಲಿಲ್ಲ. ಯಾವುದನ್ನೂ ಗಡಿಬಿಡಿಯಲ್ಲೇ ಮುಗಿಸಿಬಿಡುವ ಸ್ವಭಾವ ಅವರದಲ್ಲ. ಒಂದೊಂದೇ ರೀತಿಯಿಂದ ಹಳ್ಳಿಗರ ವಿಶ್ವಾಸವನ್ನು ಗಳಿಸಿಕೊಂಡು ಅವರನ್ನು ತಮ್ಮ ಕಡೆಗೆ ಆಕರ್ಷಿಸಿದರು. ದೊಡ್ಡ ದೊಡ್ಡ ಮುಖಂಡರಂತೆ ಮಾರುದ್ದದ ಭಾಷಣವಿತ್ತು ಸುಮ್ಮನಾಗಲಿಲ್ಲ. ಹೇಳಿದ್ದನ್ನು ಮಾಡಿತೋರಿಸಿ ಉಳಿದವರಿಗೆ ಮೇಲ್ಪಂಕ್ತಿ ಹಾಕಿಕೊಟ್ಟರು. ಅವರ ಮಾತಿನಲ್ಲಿ ರೈತರಿಗೆ ವಿಶ್ವಾಸಹುಟ್ಟಿತು. ಹಳ್ಳಿಗರ ಸಹಕಾರ ಪಡೆಯಲು ವೈದ್ಯಕೀಯವು ಉತ್ತಮಸಾಧನವೆಂದು ಬಗೆದು ಗಿಡಮೂಲಿಕೆಯ ಔಷಧವನ್ನು ಕಲಿತುಕೊಂಡರು. ಕಾಸುಖರ್ಚಿಲ್ಲದ ಈ ಸೇವೆ ಹಳ್ಳಿಗರ ಮೇಲೆ ವಿಶೇಷ ಪ್ರಭಾವ ಬೀರಿತು. ಗಣೇಶರಾಯರು ತಮ್ಮ ಪಾಲಿನ ದೇವರೆಂದೇ ಆ ಜನ ಭಾವಿಸುತ್ತಿದ್ದರು.

ಇಷ್ಟೆಲ್ಲ ಪ್ರೀತಿ ವಿಶ್ವಾಸಗಳನ್ನು ಪಡೆದ ಮೇಲೆ ಅವರನ್ನು ತಮ್ಮ ಮಾರ್ಗಕ್ಕೆ ಎಳೆಯುವುದು ವಿಶೇಷ ಕಷ್ಟವಾಗಲಿಲ್ಲ. ಹೀಗೆ ಕ್ರಮವಾಗಿ ಸ್ವಚ್ಛತೆ, ಖಾದೀ ಪ್ರಚಾರ, ವಿದ್ಯಾಭ್ಯಾಸ ಮೊದಲಾದುವು ಬಳಕೆಯಾದುವು. ಹೆಚ್ಚು ಕಡಿಮೆ ಪ್ರತಿಯೊಬ್ಬನೂ ಖಾದಿಯನ್ನೇ ಧರಿಸುತ್ತಿದ್ದನು.

ಈ ಕಾರ್ಯದಲ್ಲಿ ಪತ್ನಿಯೂ ಮಗನೂ ತುಂಬಾ ನೆರವಾಗುತ್ತಿದ್ದರು. ಅವರ ಮನೆ ಸಣ್ಣ 'ಸೇವಾಶ್ರಮ'ವೇ ಎನಿಸಿತ್ತು. ಬಿಡುವಿನ ವೇಳೆಯಲ್ಲಿ ನೂಲುವುದು ಪತ್ನಿಯ ಕೆಲಸ. ಮಗನು ಹಳ್ಳಿಯ ಹುಡುಗರಿಗೆ ಪಾಠ ಹೇಳುತ್ತಿದ್ದ, ಔಷಧಕೊಡುತ್ತಿದ್ದ. ಬಟ್ಟೆ ನೇಯುತ್ತಿದ್ದ. ಗದ್ದೆಯಲ್ಲೂ ಕೆಲಸಮಾಡುತ್ತಿದ್ದ. ಅವರ ಮನೆ ಆಡಂಬರ ಶೂನ್ಯವಾಗಿತ್ತು. ಕಷ್ಟಪಟ್ಟು ದುಡಿದು ಜೀವನ ಸಾಗಿಸುವುದರಲ್ಲೇ ನಿಜವಾದ ಶಾಂತಿಯಿದೆಯೆಂದು ಅವರು ಬಗೆದಿದ್ದರು

ಭಾರತಾಂಬೆಯ ಬಂಧನ ಕಳಚಿ ಸ್ವಾತಂತ್ರ್ಯಸೂರ್ಯನ ಉದಯವಾಯಿತು. ಎಷ್ಟೋ ಜನರು ಓತಿಕೇತದಂತೆ ಬಣ್ಣಬದಲಾಯಿಸಿ ಪದವಿಗಳಿಸಿಕೊಂಡರು. ರಚನಾತ್ಮಕ ಕಾರ್ಯಕ್ರಮಗಳ ವಿಚಾರವಾಗಿ ತಾಸುಗಟ್ಟಲೆ ಭಾಷಣಕೊಟ್ಟರು. ಆದರೆ ಕಾರ್ಯತಃ ಏನೂ ಮಾಡಲಿಲ್ಲ. ಹುಟ್ಟಿದಾರಭ್ಯ ಹಳ್ಳಿಯನ್ನೇ ಕಾಣದವರು 'ಹಳ್ಳಿಗರ ಏಳಿಗೆ'ಯ ಕುರಿತು ಚರ್ಚಿಸಿದರು. ಬಾಯಿ ಅಗಲಿಸಿದವರಿಗೆಲ್ಲ ಹುದ್ದೆಸಿಕ್ಕಿತು. ಆದರೆ ಈ ಮೂಕ ಕಾರ್ಯಕರ್ತರ ಸುದ್ದಿಯೇ ಯಾರಿಗೂ ಗೊತ್ತಿರಲಿಲ್ಲ. ಇವರಿಗೂ ಆ ಆಡಂಬರದ ಸೋಗು ಬೇಕಿರಲಿಲ್ಲ. ತಮ್ಮ ಜೀವನ ಹೀಗೆಯೇ ಸಾಗಿದರೆ ಸಾಕೆಂದು ಅವರು ತೃಪ್ತಿತಾಳುತ್ತಿದ್ದರು.

× × × ×

"ಅಕ್ಕಾ,

ಅಕಸ್ಮಾತ್ ನಿನ್ನ ಕಾಗದವನ್ನು ಕಂಡು ಎನಂದವಾಯಿತು. ಆದರೆ ನಿನ್ನ ದುರ್ಭಾಗ್ಯವನ್ನು ತಿಳಿದು ಕಳವಳವೂ ಆಯಿತು. ಒಬ್ಬನೇ ಒಬ್ಬ ಮಗ ಹೀಗೆ ಕೆಡುತ್ತಿರಬೇಕೆ? ಅವನು ಅಂತಹ ಹುಟಮಾರಿಯಲ್ಲವೆಂದು ನನ್ನೆಣಿಕೆ. ಆಗಲಿ; ನನ್ನಿಂದ ನಿನ್ನ ಮನೆಯೊಂದು ಉಳಿಯುವುದಾದರೆ ವಾಸುವನ್ನು ಖಂಡಿತ ಕಳುಹಿಸುತ್ತೇನೆ. 'ಅವರೂ' ಆದಕ್ಕೆ ಸಂತೋಷದಿಂದ ಒಪ್ಪಿದ್ದಾರೆ. ಆದರೆ ಒಂದು ಮಾತು; ವಾಸು ಪಟ್ಟಣದ ರೀತಿ-ನೀತಿಗಳನ್ನು ಅರಿತವನಲ್ಲ. ಹಳ್ಳಿಯಲ್ಲೇ ಬೆಳೆದು ಹಳ್ಳಿಗರೊಡನೆ ಹಳ್ಳಿಗನಾಗಿಯೇ ಕಾಲ ಕಳೆದವನು. ಅವನ ವರ್ತನೆ ಉಳಿದವರಿಗೆ ವಿಚಿತ್ರವೆನಿಸಬಹುದು. ಕೆಲವರು ಗೇಲಿಮಾಡಲೂ ಬಹುದು. ನೀನು ಅವನ್ನೆಲ್ಲ ಸುಧಾರಿಸಿಕೊಂಡು ಹೋಗಬಹುದೆಂಬ ಭರವಸೆಯಿದೆ.

ನಾಡದು ಬೆಳಗ್ಗೆ ಅವನು ಇಲ್ಲಿಂದ ಹೊರಡುತ್ತಾನೆ. ಸಂಜೆಯ ರೈಲಿನಿಂದ ಅಲ್ಲಿಗೆ ಬರಬಹುದು. ಎಷ್ಟೋ ವರ್ಷಗಳ ಹಿಂದೆ ಒಮ್ಮೆ

ಅಲ್ಲಿಗೆ ಬಂದಿದ್ದರೂ ಮನೆ ಹುಡುಗಲು ಸ್ವಲ್ಪ ಕಷ್ಟವೆನಿಸಬಹುದು. ಯಾರನ್ನಾದರೂ ಸ್ಟೇಶನ್ನಿಗೆ ಕಳುಹಿಸಿಕೊಡು ವಿಶೇಷಕ್ಕೆ ಬರಿಯುತ್ತಿರು. ನಿನ್ನ ತಂಗಿ."

ಕಮಲಮ್ಮ ಕಲೆಂಡರ್ ನೋಡಿದಳು. ಇಂದೇ ವಾಸುದೇವ ಬರುವ ದಿನ! ತುಸು ಗಟ್ಟಿಯಾಗಿ....." ಮನೋಹರ" ಎಂದಳು

ಮನೋಹರ ಹೊರ-ಹೊರಡುವ ಸಿದ್ಧತೆಯಲ್ಲಿದ್ದ. ತಾಯಿಯ ಕರೆಕೇಳಿ—'ಏನಮ್ಮಾ?'—ಎಂದ. 'ಇಂದು ಸಂಜೆ ವಾಸುದೇವ ಬರುತ್ತಾನೆ. ಆ ಸಮಯಕ್ಕೆ ಸ್ವಲ್ಪ ಸ್ಟೇಶನ್ನಿಗೆ ಹೋಗಿ ಬಾ?'

'ಆಗಲಮ್ಮ' ಎಂದು ತಲೆಯಲ್ಲಾಡಿಸುತ್ತ ಅವನು ಕೋಣೆಯಿಂದ ಹೊರಬಿದ್ದ.

ಸಂಜೆ ವಾಸುದೇವ ರೈಲಿನಿಂದ ಕೆಳಗಿಳಿದಾಗ, ಮನೋಹರ ಅವನಿಗಾಗಿ ಸ್ಟೇಶನ್ನಿನಲ್ಲಿ ಕಾಯುತ್ತಿದ್ದ. ವಾಸುದೇವನಿಗೆ ಪರಿಚಿತವಾದ ವಾತಾವರಣವೇ ಹೊಸದು. ಮನೋಹರನಿಗೆ ಅವನ ಸರಳವರ್ತನೆ ಹಾಗೂ ಗಂಭೀರ ಮುಖಭಾವವನ್ನು ಕಂಡು ಒಂದು ರೀತಿಯ ಪೂಜ್ಯಭಾವ ಉದಯಿಸಿತು ಇಬ್ಬರ ವಯಸ್ಸೂ ಸುಮಾರು ಸರಿಸಮಾನವಿದ್ದರೂ, ನೋಡಲು ವಾಸುದೇವನೇ ಹಿರಿಯನಾಗಿ ತೋರುತ್ತಿದ್ದ.

ಮನೆಯಲ್ಲಿ ಕಮಲಮ್ಮ ಅವರ ಹಾದಿ ಕಾಯುತ್ತಿದ್ದಳು. ವಾಸುದೇವ ದೊಡ್ಡಮ್ಮನನ್ನು ಕಂಡು ನಮಸ್ಕರಿಸಿದ ಅವಳು ಮಮತೆಯಿಂದ ಅವನ ಕುಶಲಸಮಾಚಾರ ವಿಚಾರಿಸಿದಳು. ಉಪಾಹಾರ ಸ್ವೀಕರಿಸಿದನೇಲೆ ಪ್ರಯಾಣದ ಪರಿವಾರಿಸಿಕೊಳ್ಳಲೆಂದು ವಾಸುದೇವ ಮನೆಯಲ್ಲೇ ಕುಳಿತ. ಮನೋಹರ ತಿರುಗಾಡಿ ಬರುತ್ತೇನೆಂದು ಹೊರಹೊರಟ

ಸ್ವಲ್ಪ ಹೊತ್ತಿನಲ್ಲೇ ಕಮಲಮ್ಮ ಅವನ ಬಳಿ ಬಂದು ಕುಳಿತಳು. ಗದ್ಗದ ತುಂಬ — 'ಮಗೂ! ಇಲ್ಲಿಯ ಸ್ಥಿತಿಗತಿಗಳನ್ನೆಲ್ಲ ತಾಯಿಯಿಂದ ನೀನು ತಿಳಿದಿರಬಹುದು. ಮನೋಹರನ ವರ್ತನೆ ನಿನಗೆ ಅಳೆಯೇ ಅರ್ಥವಾದೀತು ಅವನನ್ನು ದುರ್ಮಿತ್ರರ ಒಡನಾಟದಿಂದ ಪಟ್ಟಿ ದಾರಿಗೆ ತರಬೇಕೆಂದು ನಿನ್ನೊಡನೆ ಬೇಡಿಕೊಳ್ಳುತ್ತೇನೆ ನಿನ್ನಲ್ಲಿ ವರ್ಚಸ್ಸು ಇದೆಯೆಂದು ನನಗೆ ಭರವಸೆಯಿದೆ ಈ ಮನೆಯಲ್ಲಿ ನೀನು ಯಾವ ರೀತಿಯ ಸಂಕೋಚವನ್ನೂ ಇಟ್ಟುಕೊಳ್ಳಬೇಡ ನಿನ್ನ ಮನೆಯೆಂದೇ ತಿಳಿದು ನೆಮ್ಮದಿಯಿಂದಿರು' ಎಂದಳು. ಅಲ್ಲದೆ ಮಗನ ವರ್ತನೆಗಳನ್ನೆಲ್ಲ ಚಾಚೂ ತಪ್ಪದೆ ತನಗೆ ತಿಳಿದಷ್ಟು ವರ್ಣಿಸಿದಳು. ವಾಸುದೇವ ಮೌನವಾಗಿ ದಿಗಂತದತ್ತ ನಿಟ್ಟಿಸುತ್ತಿದ್ದ. ಅವನು ಮುಂದಿನ ಮಾರ್ಗವನ್ನು ಆಗಲೇ ಗೊತ್ತು ಪಡಿಸಿಕೊಳ್ಳಬೇಕಿತ್ತು. ಇದೇನು ಸುಲಭ ಕೆಲಸವೆ? ಜೀವನಕ್ರಮವನ್ನೇ ಬದಲಾಯಿಸಲು ತುಂಬ ಯೋಚಿಸಬೇಕು. ಅತಿ ಜಾಗ್ರತೆಯೂ ಅಗತ್ಯ. ತುಸು ಎಡವಿದರೆ ಮತ್ತೆ ಸಾತಾಲನೇ ಗತಿ. ಹೀಗಾಗಿ ಜೀವನು ದೊಡ್ಡಮ್ಮನ ಮಾತಿಗೆ ಉತ್ತರಿಸದೆ ಆಳವಾದ ಚಿಂತೆಯಲ್ಲಿ ಮುಳುಗಿದ.

ಮರುದಿನ ಬೆಳಗ್ಗೆ ಅವನೊಂದು ನಿರ್ಧಾರಕ್ಕೆ ಬಂದ. ತನ್ನೆಣಿಕೆಯಂತೇ ಕಾರ್ಯ ನೆರವೇರಿಸಬೇಕೆಂದು ಲೆಕ್ಕಾಚಾರದ ಮನೋಹರನ ಮನಸ್ಸು ತಿರುಗುವವರೆಗೆ ಒಂದು ಮಿನಿಟಿನವರೆಗೂ ಅವನನ್ನು ಬಿಟ್ಟಗಲಾರದೆಂದು ಸಂಕಲ್ಪಿಸಿದ.

ಆನಂದ ಗ್ರಂಥಮಾಲಾ, ಹುಬ್ಬಳ್ಳಿ

ಗೌ. ಸಂಪಾದಕರು ಶ್ರೀ. ಪಿ. ವೆಂಕೋಬಾಚಾರ್ಯ ಬಿ. ಎ. ಬಿ. ಟಿ

ವರುಷದ ಹೊಸ ಪ್ರಕಟನೆಗಳು

ಆ ರಾತ್ರಿ: (ಮೂರಂಕದ ನಾಟಕ) ೦—೧೪—೦
ಶ್ರೀ. ಗೋಪಾಲಕೃಷ್ಣ, ನಾಯಕ

ಗುಣ: (ಸರಸ ಸಾಮಾಜಿಕ) ೧— ೬—೦
ಕಾದಂಬರಿ· ಶ್ರೀ. ವೆಂಕೋಬಾಚಾರ್ಯ

ಕುಂಕುಮ ಬಲ

(ಹೆಣ್ಣಿನ ಬಾಳಿನ ಸಣ್ಣಕತೆಗಳು) ೧— ೦—೦
ಶ್ರೀಮತಿ ಶಾಂತಾದೇವಿ ಮಾಳವಾಡ

ಪುಸ್ತಕ ವ್ಯಾಪಾರಿಗಳಿಗೆ ಧಾರಾಳವಾದ ಕಮೀಷನ್.

ಸಂಚಾಲಕರು
ಆನಂದ ಗ್ರಂಥಮಾಲಾ

ಒಂದು ವರುಷದಲ್ಲಿ ಸುಂದರ ಐದು ಪುಸ್ತಕಗಳು
ವಾರ್ಷಿಕ ಚಂದಾ: ಸಾದಾ ಪ್ರತಿ ರೂ. ೫. ಬೈಂಡು ಪ್ರತಿ ೬ ರೂ.

ಅವನು ಮನಸ್ಸಿನಲ್ಲಿ ಯೋಚಿಸಿದ್ದಂತೆ ಅವನ ಮಿತ್ರರೂ ಬಂದರು. ಪರಸ್ಪರ ಪರಿಚಯವಾಯಿತು. ಇವನ ಬರಿಮೈ ಪೋಷಾಕನ್ನು ಕಂಡು ಅವರಿಗೆ ಆಶ್ಚರ್ಯವೂ ಸಂತೋಷವೂ ಏನಿಸಿದ್ದರೂ, ಸಮ್ಮುಸ್ಥಭಾವವು ಮೆಚ್ಚಿಕೆಯಾಯಿತು. ನಿತ್ಯದಂತೆ ಅವರು ತಮ್ಮ ಕ್ಲಬ್ಬಿನ ಕಡೆ ಹೊರಟರು. ವಾಸುದೇವನೂ ಹೊರಟ ಆ ಕ್ಲಬ್ಬೆಂದರೆ ನಿರುದ್ಯೋಗಿ ತರುಣರದೊಂದು ಕೂಟ. ಮೊದಮೊದಲು ಹರಟೆಯಲ್ಲೇ ಆರಂಭವಾಗಿ ನಿಸೇಮಾವಲ್ಲೋ ಬ್ಯಾಡ್ಮಿಂಟನ್ನಿನಲ್ಲೋ ಪರ್ಯವಸಾನ ಹೊಂದುತ್ತಿತ್ತು. ಬರುಬರುತ್ತ ಹೊಸ ಉದ್ಯೋಗವಾಗಿ ಇಸ್ಪೀಟನ್ನೂ ಸೇರಿಸಿಕೊಂಡಿದ್ದರು. ಸಂಜೆಯ ವೇಳೆ ಎಷ್ಟೋ ಶ್ರೀಮಂತ ಯುವಕರು ಅಲ್ಲಿ ಕಲೆಯುತ್ತಿದ್ದರು. ಅಷ್ಟರನರೆಗೆ ಉಳಿದವರ ಗಜಬಿಜಿಯಿರುತ್ತಿತ್ತು.

ಮನೋಹರ ಕಂಡು ಸಂಜೆ ಇಸ್ಪೀಟಾಟಕ್ಕೆ ನಿಲ್ಲಲಿಲ್ಲ. ವಾಸುದೇವನಿದ್ದಾಗ ಹಿಡುವುದಕ್ಕೆ ಅವೇಕೋ ಮನಸ್ಸು ಒಳುಕುತ್ತಿತ್ತು. ಹೊಸ ಗೆಳೆಯನಿಗೆ ನಿಸೇಮಾ ತೋರಿಸಬೇಕೆಂದು ಅವನು ಹೊರಟ. ನಾಲ್ಕಾರು ಜನರೂ ಅವನನ್ನು ಹಿಂಬಾಲಿಸಿದರು. ಅವರಿಗೆಲ್ಲ ಅವನ ಲೆಕ್ಕಾಚಾರದಲ್ಲೇ ನಿಸೇಮಾ ನೋಡುವ ಸುಯೋಗವಲ್ಲವೆ?

ಮರುದಿನ ಬೆಳಗ್ಗೆ ಆ ಗೆಳೆಯರಿಂದ ದೂರವಿರಬೇಕೆಂದು ವಾಸುದೇವ ಒಂದು ಉಪಾಯ ಹೂಡಿದ. 'ನಾನೊಮ್ಮೆ ಪಟ್ಟಣವನ್ನು ಬಿಟ್ಟು ಬರಬೇಕೆಂದಿದ್ದೇನೆ. ಅಭ್ಯಂತರವಿಲ್ಲ; ಬರುತ್ತೀಯಾ?' ಎಂದ.

ಅವನ ಮಾತಿನಲ್ಲಿ ಅದೇಕೋ ಒಂದು ತೆರದ ಆಕರ್ಷಣವಿತ್ತು. ಮನೋಹರ ಒಪ್ಪಿದ. ಗೆಳೆಯರು ಅಲ್ಲಿಗೆ ಬರುವ ಮೊದಲೇ ಇವರು ಹೊರಬಿದ್ದರು.

ಅವರಿಬ್ಬರೂ ನೆಪಕ್ಕೆಂಬಂತೆ ಅಲ್ಪಸ್ವಲ್ಪ ತಿರುಗಾಡಿದರು. ಕೊನೆಗೆ ಒಂದು ಪಾರ್ಕಿಗೆ ಹೋಗಿ ಕುಳಿತುಕೊಂಡರು.

ಬೆಳಗಿನ ಪ್ರಶಾಂತ ವಾತಾವರಣ ತಪಸ್ಸಿಗೆ ತಕ್ಕುವಾದ ಏಕಾಂತಸ್ಥಳ. ಮನಸ್ಸಿನಲ್ಲಿ ಉತ್ಸಾಹ ತುಂಬಿತ್ತು. ಇಂತಹ ಸನ್ನಿವೇಶವನ್ನೇ ಕಾಯುತ್ತಿದ್ದ ವಾಸುದೇವ ಗಂಭೀರನಾಗಿ..... 'ಮನೋಹರ' ಎಂದ

ಮನೋಹರ ತಲೆಯೆತ್ತಿ ನೋಡಿದ ಗೆಳೆಯನ ಮುಖದ ಮೇಲೆ ಮುಗ್ಧಗಾಂಭೀರ್ಯವಿತ್ತು. ಅಪೂರ್ವಕಾಂತಿಯಿತ್ತು. ಅವನೆದುರಿಗೆ ತಾನು ಕ್ಷುಲ್ಲಕನೆಂಬ ಭಾವನೆಯುಂಟಾಯಿತು

'ನಾನೇಕೆ ನಿಮ್ಮಿಬ್ಬರ ಜೊತೆಯಲ್ಲಿ ಬಂದಿದ್ದೆನೆಂದು ನಿನಗೆ ಗೊತ್ತಿದೆಯೆ?'

'ಹೌದು.' 'ನೀನು ಬೇಕೆಂದೇ ನಿನ್ನಷ್ಟಕ್ಕೆ ನೀನೊಬ್ಬನೇ ಅಲೆದರೆ ಮನೆತನ ಹೇಗೆ ನಡೆದೀತು?'

'.....'

'ಗಂಟಿಗೊಮ್ಮೆ ಕಾಸಿ. ಕ್ಷಣಕ್ಷಣಕ್ಕೆ ಸಿಗರೇಟು – ಇವುಗಳಿಂದ ಆರೋಗ್ಯದ ಮೇಲಾಗುವ ಮಸ್ಪರಿಣಾಮದ ಊಹೆಯಿದೆಯೆ?'

'... .....'

'ತಾಯಿ ನಿನ್ನ ಅವನತಿಗಾಗಿ ಅದೆಷ್ಟು ಕೊರಗುವಳೆಂಬುದನ್ನು ಬಲ್ಲೆಯಾ?'

'.....'

'ಇದರಲ್ಲಿ ಹಣ ವೆಚ್ಚವಾಗುವ ಪ್ರಶ್ನೆಯೊಂದೇ ಅಲ್ಲ; ಆರೋಗ್ಯ, ನಡತೆ, ಮನಸ್ಸು, ಆತ್ಮೋನ್ನತಿ — ಇವೆಲ್ಲಕ್ಕೂ ಕೆಡುಕಿದೆ. ನಿರುದ್ಯೋಗವೇ ಇವೆಲ್ಲ ಕೆಡುಕಿಗೂ ಮೂಲಕಾರಣ; ಎಂತಹ ಅಗರ್ಭ-ಶ್ರೀಮಂತನಿಗೂ ಮೈಗಳ್ಳತನ ಸಲ್ಲದು. ನಿರುದ್ಯೋಗಿಯ ಮನಸ್ಸು ಅಲ್ಲಸಲ್ಲದ ಕಾರ್ಯಗಳ ಕಡೆಗೆ ಓಡುತ್ತಿದೆಯೆಂಬುದು ನಿನಗೂ ತಿಳಿದಿರಬಹುದು. ನಿನ್ನ ಪರಿಸ್ಥಿತಿ ಸುಧಾರಿಸಬೇಕಾದರೆ, ಯಾವುದಾದರೊಂದು ಕೆಲಸ ಮಾಡುತ್ತಿರಬೇಕು.

ಮನುಷ್ಯನಿಗೆ ಚಿತ್ತಿಕಶಾಂತಿ ಮುಖ್ಯ; ನಿನ್ನೀ ಗೆಳೆಯರ ಸಹವಾಸದಿಂದ ನೀನು ಇದುತನಕ ಸಾಧಿಸಿದುದೇನು? ಅದೇ ಸಮಯವನ್ನು ವ್ಯಾಸಂಗದಲ್ಲಿ ವ್ಯಯಿಸಿದ್ದರೆ ಎಷ್ಟು ಒಳಿತಾಗುತ್ತಿತ್ತು! 'ಗಾಂಧೀಜಿಯವರ ಮಾರ್ಗ ನಮಗೆಲ್ಲ ಮೇಲ್ಪಂಕ್ತಿಯಾಗಿದೆ. ಇಷ್ಟು ವರ್ಷದ ಅನುಭವದಿಂದ ನಾನೀಮಾತನ್ನು ಹೇಳುತ್ತಿದ್ದೇನೆ. ಬಿಡು ಸಮಯದಲ್ಲಿ ನೂಲುವುದು, ಉತ್ತಮಗ್ರಂಥಗಳ ಪಠನೆ, ತೋಟಗಾರಿಕೆ—ಇವೆಲ್ಲದರಿಂದ ನಿಜವಾದ ಶಾಂತಿ ಸಿಗುತ್ತದೆ. ಹೊಟ್ಟೆಯ ಪ್ರಶ್ನೆ ಇಲ್ಲದಿದ್ದರೂ ಶಾಂತಿಗಾಗಿ ಹಂಬಲಿಸುವುದು ಎಂತಹವನಿಗೂ ತಪ್ಪಿದ್ದಲ್ಲ.

ಇದುತನಕ ಪಟ್ಟಣದ ವಾತಾವರಣದಲ್ಲಿ ಮನಬಂದಂತೆ ಕಾಲ ಕಳೆದ ನೀನು, ಈ ಹೊಸ ಕ್ರಮವನ್ನು ಕೈಕೊಂಡು ನೋಡು. ಯಾವುದು ಹೆಚ್ಚು ಲಾಭಕಾರಿಯೆಂದು ನೀನೇ ಅನುಭವದಿಂದ ತಿಳಿ ಮೊದಮೊದಲು ತುಸು ಕಷ್ಟವೆನಿಸಬಹುದು. ಗೆಳೆಯರ ನೆನಪಾದಾಗ ಮನೆ ಬಿಟ್ಟೋಡಲು ಮನಸ್ಸು ತವಕಿಸಬಹುದು. ಆದರೆ ದಿನ ಹೋದಂತೆ ಇದೇ ಬಳಕೆಯಾಗಿ ಮತ್ತೆ ಬಿಟ್ಟುಬಿಡಲು ಮನಸ್ಸಿ ಒಪ್ಪಲಾರದು.

ಸಂಜೆ ನೀನು ತಿರುಗಾಡಲು ಹೋಗಬಹುದು ಯಾವ ತೆರ ಬಂಧನವೂ ನಿನಗಿಲ್ಲ. ಆದರೆ ಜೂಜಿನ ವ್ಯವಹಾರವನ್ನು ಸಂಪೂರ್ಣ ಬಿಟ್ಟುಬಿಡಬೇಕು. ಸಿಗರೇಟುಸೇವನೆಯನ್ನು ಒಮ್ಮೆಲೇ ತ್ಯಜಿಸುವುದು ಕಷ್ಟವೆನಿಸಿದರೂ, ಅದಷ್ಟು ಕಡಿಮೆ ಸೇದುತ್ತೇನೆಂದು ಪ್ರತಿಜ್ಞೆ ಮಾಡಿ ಕೊಳ್ಳಬೇಕು. ಕೊನೆಗೆ ಅದನ್ನು ಪೂರ್ತಿಯಾಗಿ ನಿಲ್ಲಿಸಿಬಿಡ ಬಹುದು.....'

ಮನೋಹರ ಮೌನವಾಗಿ ಅವನ ಮಾತುಗಳನ್ನು ಕೇಳುತ್ತಿದ್ದ ಯಾವುದನ್ನೂ ಅಲ್ಲಗಳೆಯುವ ಸಾಹಸವಾಗಲಿಲ್ಲ. ಸಾಹಸವೇಕೆ ಮನಸ್ಸೂ ಆಗಲಿಲ್ಲ. ಮಾಂತ್ರಿಕನ ಮೋಡಿಗೆ ಒಳಗಾದಂತೆ ಅವನ ವಾಸುದೇವನಿಗೆ ತನಗರಿಯದಂತೆಯೇ ವಶನಾಗಿದ್ದ. ತನ್ನ ತಪ್ಪು ಅವನಿಗೂ ಅರ್ಥವಾಗುತ್ತಿತ್ತು. ಆದರೆ ಅದರಿಂದ ತಪ್ಪಿಸಿಕೊಳ್ಳುವ ಉಪಾಯ ಕಾಣದೆ ಪುನಃ ಪುನಃ ಅದನ್ನೇ ಮಾಡುತ್ತಿದ್ದ. ಈ ಜಂಜಡಗಳಿಂದ ಬಿಡುಗಡೆ ಹೊಂದುವ ಸರಳೋಪಾಯವನ್ನು ತಿಳಿದು ಅವನಿಗೆ ಹರ್ಷವೇ ಆಗಿತ್ತು. ಕೆಲವರ ಮನೋಭಾವನೆಯೇ ಹಾಗೆ. ಅವರಿಗೆ ಸ್ವತಂತ್ರ ವ್ಯಕ್ತಿತ್ವವಿರುವುದೇ ಇಲ್ಲ. ಸಂಗಾತಿಯ ಪ್ರಭಾವಕ್ಕೆ ಫಕ್ಕನೆ ಒಳಗಾಗುತ್ತಾರೆ; ಮನೋಹರನೂ ಆ ಗುಂಪಿಗೆ ಸೇರಿದ್ದ.

ವಾಸುದೇವನಿಗೂ ಅವನ ಈ ದೌರ್ಬಲ್ಯ ಗೊತ್ತಾಗಿತ್ತು. ಇ ಅವನನ್ನು ತನ್ನಿಂದ ದೂರ ಇರಗೊಡಬಾರದೆಂದು ನಿರ್ಧರಿಸಿ ಪಾರ್ಕಿನಿಂದ ಏಳುವಾಗ ತನಗುಂಟಾದ ವಿಜಯಕ್ಕಾಗಿ ಅವ ತುಂಬಾ ಉಲ್ಲಸಿತನಾಗಿದ್ದ.

ಅಂದಿನಿಂದ ಮನೋಹರನ ದಿನಚರಿ ಬದಲಾಯಿತು. ವ್ಯರ್ಥವಾಗಿ ಕಳೆಯುತ್ತಿದ್ದ ಸಮಯ ಸಾರ್ಥಕವಾಯಿತು. ಗೆಳೆಯರ ಕಡೆಗೆ ಓಗೊಡದೆ, ಅವರನ್ನು ಉಪಾಯದಿಂದ ಬೇಳ್ಕೊಡುತ್ತಿದ್ದ ಕೋಣೆಯ ಒಂದು ಮೂಲೆಯಲ್ಲಿ 'ಚರಖಾ' ವಿರಾಜಿಸುತ್ತಿತ್ತು. ಕಪಾಟಿನಲ್ಲಿ ಗಾಂಧೀಸಾಹಿತ್ಯಕ್ಕೆ ಸಂಬಂಧಿಸಿದ ಪುಸ್ತಕಗಳೇ ತುಂಬಿ ಹೋದವು. 'ವಿನೋಬಾ ಭಾವೆ' ಯವರು ಬರೆದ ಪುಸ್ತಕಗಳು ತುಂಬಾ ಹಿತವೆನಿಸಿದುವು. ದಿನಾಲೂ ಗೀತೆಯೋದುವುದು ಒಂದು ಕರ್ತವ್ಯವಾಯಿತು ವಾಸುದೇವನ ಹಲಹೆಯಂತೆ ಮನೆಯ ಹಿ ಒಂದು ಹೂದೋಟವನ್ನು ಬೆಳೆಸಿದ. ದಿನಗಳು ಬಹು ಸುಗಮವಾ ಸಾಗತೊಡಗಿದುವು.

ಗೆಳೆಯರು ಇವನ ಆಕಸ್ಮಿಕ ಪರಿವರ್ತನೆಯನ್ನು ಕಂಡು ಗಾಬರಿಯಾದರು. ಅತ್ಯುತ್ತಮ ಬಟ್ಟೆ ಧರಿಸುತ್ತಿದ್ದವನು ಈಗ ಒರಟು ಬಟ್ಟೆ ಧರಿಸುವುದನ್ನು ಕಂಡು ಆಶ್ಚರ್ಯಪಟ್ಟರು. ವಾಸುದೇವನಿಂದಾಗಿ ಚೆನ್ನಾಗಿ ಪುಕ್ಕಟೆಯಾಗಿ ಸಿಗುವ ಕಾಫಿ-ಸಿನೇಮಾಗಳಿಗೆ ಸಂಚಕಾರ ಬಿದ್ದಿತು.

ತಮ್ಮ ಸಿಟ್ಟನ್ನು ಯಾರೊಡನೆ ತೋಡಿಕೊಳ್ಳಬೇಕು? ಮನೋಹರನನ್ನು ಪುನಃ ಪೂರ್ವಸ್ಥಿತಿಗೆ ಒಯ್ಯುವುದಕ್ಕೂ ಆಸ್ಪದವಿರಲಿಲ್ಲ. ಅವನು ಮನೆ ಬಿಟ್ಟು ಹೊರಡುವ ಲಕ್ಷಣವೇ ಇದ್ದಿಲ್ಲ. ಸಂಜೆಯ ವೇಳೆ ಬ್ಯಾಡ್‌ಮಿಂಟನ್ ಆಡಲು ಕೆಲವೊಮ್ಮೆ ಬಂದರೂ ಆ 'ಶನಿ' ಒಟ್ಟಿಗೆ ಇದ್ದೇ ಇರುತ್ತಿದ್ದ. ಅವರು ಕೈಕೈ ಹೊಸೆದುಕೊಳ್ಳುತ್ತಿದ್ದರು.

× × × ×

ರಾತ್ರಿಯ ಹತ್ತು ಗಂಟೆ. ಮನೋಹರ ಕೋಣೆಯಲ್ಲೇ ಕುಳಿತು ಯಾವುದೋ ಪುಸ್ತಕ ಓದುತ್ತಿದ್ದಾನೆ. ವಾಸುದೇವನಿನ್ನೂ ಬಂದಿಲ್ಲ. ಅವನು ಬಾರದೆ ಊಟಮಾಡುವ ಅಭ್ಯಾಸವೇ ಅವನಿಗಿರಲಿಲ್ಲ. ಈ ಮೂರು ತಿಂಗಳಲ್ಲಿ ಅವನು ಇಷ್ಟು ಆತ್ಮೀಯನಾಗಿದ್ದ. ಕಮಲಮ್ಮ ನಂತೂ ಅವನನ್ನು ದೇವರೆಂದು ಬಗೆದಿದ್ದಳು

ಸಮಯ ಕಳೆಯುವುದಕ್ಕೆಂದು ಅವಳು ತಂಗಿಗೆ ಕಾಗದ ಬರೆಯತೊಡಗಿದಳು:

'ತಂಗಿ, ನಿನ್ನ ಉಪಕಾರದಿಂದ ನನ್ನ ಮನೆ ಉಳಿದಂತಾಯಿತು. ವಾಸುದೇವನ ಕರ್ತೃತ್ವಶಕ್ತಿಯನ್ನೇನೆಂದು ವರ್ಣಿಸಲಿ? ಅವನ ಮಾತುಗಳಲ್ಲಿ ಅದೆಂಥ ಮೋಡಿಯೊ! ಯಾರಿಗೂ ಕಿವಿಗೊಡದ ಮನೋಹರ ಇಂದು ಅವನ ಕೇಳಿಕೆಯಂತೆ ನಡೆಯುತ್ತಿದ್ದಾನೆ. ಪೋಲಿಹುಡುಗರ ಸಹವಾಸದಿಂದ ಪೂರ್ಣವಾಗಿ ಬೇರೆಯಾಗಿದ್ದಾನೆ. ಒಂದು ಕ್ಷಣವನ್ನೂ ವ್ಯರ್ಥವಾಗಿ ಹಾಳು ಮಾಡುವುದಿಲ್ಲ. ವಾಸುದೇವನೂ ಹಾಗೆಯೇ. ಯಾವಾಗಲೂ ಬಡವರಿಗೆ ಸಹಾಯ ಮಾಡುತ್ತಾನೆ. ಒಂದು ಕಾಸೂ ಖರ್ಚಿಲ್ಲದಂತೆ ಕಾಹಿಲೆಯನ್ನು ಗುಣಪಡಿಸುತ್ತಾನೆ. ಅದಕ್ಕಾಗಿ ಎಷ್ಟು ಕಷ್ಟಪಡುತ್ತಾನೆ ಬಲ್ಲೆಯಾ? ಗಿಡ-ಮೂಲಿಕೆಗಳು ಈ ಪಟ್ಟಣದಲ್ಲಿಲ್ಲಿ ಸಿಗಬೇಕು? ತಾನೇ ಎರಡು ಮೂರು ಮೈಲುಗಳವರೆಗೆ ನಡೆದು, ಪರಿಶ್ರಮದಿಂದ ತಂದುಕೊಡುತ್ತಿದ್ದಾನೆ. ಸ್ನೇಹಭಾವನೆಯ ಮೂರ್ತಿಮತ್ತ ಸ್ವರೂಪನಾಗಿದ್ದಾನೆ; ಪರೋಪಕಾರದ ಭರದಲ್ಲಿ ಎಷ್ಟೋ ಬಾರಿ ಹೊತ್ತಿಗೆ ಸರಿಯಾಗಿ ಊಟಕ್ಕೆ ಬರಲೂ ಬಿಡುವು ಸಿಗುವುದಿಲ್ಲ ನಾನೇನಾದರೂ ಹೇಳಿದರೆ ಅವನು — 'ದೊಡ್ಡಮ್ಮಾ! ನಾವು ದೇಹ ಧರಿಸಿರುವುದು ಇತರರಿಗೆ ಉಪಕಾರ ಮಾಡುವುದಕ್ಕಾಗಿ. ಎಷ್ಟೋ ಜನರು ಜೀವದ ಹಂಗು ತೊರೆದು ಇತರರನ್ನು ಕಾಪಾಡಿದ ಉದಾಹರಣೆಗಳಿವೆ ಅಂತಹ ಮಹಾತ್ಮರನ್ನನುಕರಿಸುವ ಸಾಹಸ ನಮಗಿಲ್ಲದಿದ್ದರೂ, ನಮ್ಮಿಂದಾದಷ್ಟು ಪ್ರಯತ್ನಿಸಬೇಡವೆ? ಈ ದೇಹವೇನೂ ಸ್ಥಿರವಲ್ಲ; ಇನ್ನಷ್ಟು ದಿನ ಸತ್ಕಾರ್ಯದಲ್ಲಿ ಸವೆದು ಸಾರ್ಥಕ ಹೊಂದಬೇಡವೆ,—ಎನ್ನುತ್ತಾನೆ. ಮನೋಹರನ ಉದ್ಧಾರಕ್ಕೆ ಬಗ್ಗಕಂಕಣನಾಗಿದ್ದಾನೆ ಹೆಚ್ಚೇನು ಬರೆಯಲಿ? ಅವನು ಎರಡುಮೂರು ತಿಂಗಳು ಇಲ್ಲೇ ಇರಲಿ; ಅಷ್ಟರೊಳಗೆ ಮನೋಹರನ ಹೊಸ ಜೀವನಕ್ರಮವು ಸ್ಥಿರವಾದೀತು? ನಿನ್ನ ಅಕ್ಕ'

ಪತ್ರವನ್ನು ಮುಗಿಸಿ ಹಾಗೆಯೇ ತುಸುಹೊತ್ತು ಕುಳಿತಳು. ವಾಸುದೇವನ ಸುಳಿವು ಕಾಣಲಿಲ್ಲ. ಮೆಲ್ಲನೆ ಮಗನ ಕೋಣೆಗೆ ಬಂದಳು. ಕಪಾಟಿನಲ್ಲಿದ್ದ ಪುಸ್ತಕವೊಂದನ್ನು ತೆಗೆದು ಓದುವುದರಲ್ಲೇ ಮಗ್ನಳಾದಳು.

ಹೀಗೆಯೇ ಎಷ್ಟು ಸಮಯ ಕಳೆಯಿತೋ ಯಾರಿಗೂ ಅರಿವು ಇರಲಿಲ್ಲ ವಾಸುದೇವ ರಪರಪನೆ ಹೆಜ್ಜೆಯಿಡುತ್ತ ಅಲ್ಲಿಗೆ ಬಂದಾಗಲೇ ಇಬ್ಬರೂ ಭಾವಸಮಾಧಿಯಿಂದ ಎಚ್ಚತ್ತರು.

'ಗಂಟೆ ಎಷ್ಟಾಯಿತು ವಾಸು?' 'ಹನ್ನೊಂದು.'

ಇಷ್ಟರ ವರೆಗೂ ಹಸಿವಿನ ನೆನಪಾಗಲಿಲ್ಲವೆ?—ವಾತ್ಸಲ್ಯದಿಂದ ಕೇಳಿದಳು ಕಮಲಮ್ಮ. 'ಸಂಜೆ ತಿರುಗುತ್ತ ತಿರುಗುತ್ತ ಬಹುದೂರ ಹೋಗಿಬಿಟ್ಟಿದ್ದೆ. ಕತ್ತಲಾದಾಗ ಹಿಂದಿರುಗುವ ಮನಸ್ಸಾದರೂ, ಒಬ್ಬ ರೋಗಿಯನ್ನು ಕಾಣಬೇಕಾದುದರಿಂದ ಬೇಗ ಬರಲಾಗಲಿಲ್ಲ.'

'ಅಂದರೆ ಕಾಹಿಲೆ ಇಷ್ಟು ವಿಪರೀತಕ್ಕಿಟ್ಟುಕೊಂಡಿತ್ತೆ?'

'ಹೌದು; ಸನ್ನಿಪಾತಜ್ವರ. ಹಳ್ಳಿಗರಿಗೆ ಕಾಹಿಲೆಯ ಜ್ಞಾನ ವಿರುತ್ತದೆಯೆ? ಪಟ್ಟಣಿಗರಾದರೆ ಕೂಡಲೇ ಡಾಕ್ಟರರನ್ನು ಕರೆಯಿಸುತ್ತಾರೆ. ಇವರಿಗೆ ದೇವರ ಮೇಲೆಯೇ ಭರವಸೆ ಹೆಚ್ಚು! ಗುರುತಿನವನೊಬ್ಬನು ಅಲ್ಲಿಗೆ ನನ್ನನ್ನು ಕರೆದೊಯ್ದ. ಔಷಧದ ಸಾಮಗ್ರಿಗಳನ್ನು ಹುಡುಕಿ ತಂದು ತಯಾರಿಸಿ ಕೊಡಬೇಕಾದರೆ ಇಷ್ಟು ಹೊತ್ತು ಹಿಡಿಯಿತು. ಅಲ್ಲದೆ ಅಲ್ಲಿಂದ ನಾಲ್ಕು ಮೈಲು ನಡೆದು ಬರಬೇಡನೆ?'

'ನೀನೊಬ್ಬನೇ ಹೊರಟುಬಂದೆಯಾ ಇಷ್ಟು ರಾತ್ರಿಗೆ?'

'ಇಲ್ಲ; ಒಬ್ಬ ಆಳನ್ನು ನನ್ನೊಟ್ಟಿಗೆ ಕಳುಹಿದ್ದರು. ಪಟ್ಟಣದ ವರೆಗೆ ಬಂದು ಅವನು ಹಿಂದಿರುಗಿದ.'

ವಾಸುದೇವ ಈ ಮಾತುಗಳಿಂದ ಅವರಿಬ್ಬರನ್ನೇನೋ ಸಮಾಧಾನಪಡಿಸಿದ. ಆದರೆ ಅವನಾತ್ಮ — 'ನೀನೀ ರೀತಿ ಸುಳ್ಳು ಹೇಳಬಹುದೆ?' ಎಂದು ಧಿಕ್ಕರಿಸುತ್ತಿತ್ತು. ವಾಸ್ತವವಾಗಿ ಅಂದು ಅವನು ೯ ಗಂಟೆಯ ವರೆಗೆ ಗೆಳೆಯರೊಡನೆ ಸಿನೇಮಾ ನೋಡಿದ್ದ. ಮರಳಿ ಕ್ಲಬ್ಬಿಗೆ ಬಂದವನು ಸುಮಾರು ೩ ಗಂಟೆಗಳ ಕಾಲ ಇಸ್ಪೀಟಾಟದಲ್ಲೇ ಮಗ್ನನಾಗಿದ್ದ. ಆದರೆ ಈ ಅಪ್ರಿಯಸತ್ಯವನ್ನು ಅವನೆಂತು ಪ್ರಕಟಪಡಿಸಬಲ್ಲ?

ವಾಸುದೇವನ ಈ ಆಕಸ್ಮಿಕ ಅಧಃಪತನವು ಹಲವರಿಗೆ ಆಶ್ಚರ್ಯಕರವಾಗಿ ತೋರಬಹುದು. ಅದುನರಿಗಿನ ಜೀವನವನ್ನೇ ಗಾಢಪರಿಶ್ರಮದಲ್ಲಿ ಸವೆಸಿದ ಆ ಸತ್ಯಸಂಧ ಕರ್ಮನಿಷ್ಠನು ಫಕ್ಕನೆ ತನ್ನೆಲ್ಲ ತತ್ತ್ವಗಳನ್ನು ಗಾಳಿಗೆ ತೂರಿ ಪತನದ ಹಾದಿಯಲ್ಲಿ ಮುಂದರಿಯುತ್ತಿರುವುದು ಅಸ್ವಾಭಾವಿಕವೆನಿಸಬಹುದು. ಆದರೆ ಅವನ ಜೀವನದ ಸನ್ನಿವೇಶಗಳನ್ನು ನಾವು ಮರೆಯಬಾರದು ಹಳ್ಳಿಯಲ್ಲಿ ತಂದೆಯ ಬಂಧನಕ್ಕೊಳಗಾಗಿ ತಪಸ್ವೀಜೀವನವನ್ನು ನಡೆಯಿಸಿರಬಹುದು ಪಟ್ಟಣದ ಗಾಳಿಯೇ ವಿಷದ ಆ ಊರಲ್ಲಿ ಅವನು ಬಾರಿ ತಪ್ಪಲು ಎಡೆಗಳಿರಲಿಲ್ಲ. ಇದ್ದರೂ ಹೆತ್ತವರ ಹೆದರಿಕೆ ಅದನ್ನು ಹತ್ತಿಕ್ಕುತ್ತಿತ್ತು. ಹೀಗಾಗಿ ಅವನ ಜೇಬಿನ ಬೆಂಕಿ ತಕ್ಕ ಅವಕಾಶವಿಲ್ಲದೆ ಒಡಲೊಳಗೇ ಹುದುಗಿಕೊಂಡಿತ್ತು.

ಸುಬ್ಬಣಕವನ. ನಿತ್ಯರನ್ನು ಉನ್ಮರಿಸುವ ಪನ ಸ್ಪೀಕರಿಂಲೇ ಹೊಸ ಆಸರೆ ಚಲ್ಲಿನ-ಥಳಕು-ಬೆಳಕುಗಳಿಗೆ ಅವನ ಮನ ಸೋತಿತು ಹೊಸತನ್ನು ಕಂಡು ಹಿಗ್ಗುವ ಮನಸ್ಸು ಚಿತ್ತ ಒಲೆಯಿತು. ಕೆಲಸ ಮಾಡಲು ಏನು ಇದ್ದಿಲ್ಲ. ತಿರುಗಾಟ. ಪೋಲಿಪುಡುಗರ ಸಹವಾಸ, ಸಿನೇಮಾ. ಕಾಫಿ— ಇವುಗಳಲ್ಲೇ ವೇಳೆಕಳೆಯುತಿತ್ತು. ಮನೋಹರ ಇವನ ಉಪದೇಶದಿಂದ ಮನೆಯಲ್ಲೇ ಹೆಚ್ಚಾಗಿ ಇರತೊಡಗಿದ್ದ ಇವನನ್ನು ತಡೆಯುವವರೂ ಇದ್ದಿಲ್ಲ ಹಣದ ಪೆಟ್ಟಿಗೆಯ ಬಾಗಿಲ ಇವನಿಗಾಗಿ ತೆರೆದೇ ಇತ್ತು. ಪೋಲಿ ಪುಡುಗರಂತೂ ಇವನನ್ನ ಸುತ್ತುಗಟ್ಟಿಯೇ ಇರುತ್ತಿದ್ದರು ಅವರಿಗೆ ಯಾರಾದರೇನು? ಖರ್ಚಿಗೆ ಹಣ ಸಿಕ್ಕರೆ ಸರಿಯಷ್ಟೆ!

ಸ್ವಾಭಾವಿಕವಾಗಿ ಹರಿಯುವ ಪ್ರವಾಹಕ್ಕೆ ಅಡ್ಡವಾಗಿ ಆಣೆಕಟ್ಟು ಪಾಕಿನವರೆ ಸ್ವಲ್ಪ ಸಮಯವನ್ನೇನೋ ತಡೆಯಬಹುದು. ಆದರೆ ಮಧ್ಯೆ ತುಸು ಎಡೆಸಿಕ್ಕಿತೆಂದರೆ ಎಲ್ಲವನ್ನೂ ಕೊಚ್ಚಿಕೊಂಡು ಹೋಗುವುದು. ವಾಸುದೇವನ ಜೀವನದಲ್ಲಿಯೂ ಹಾಗಾಯಿತು. ಬಲಾತ್ಕಾರವಾಗಿ ಹಾಕಿದ್ದ ಸಂಯಮದ ಬಂಧನ ಕಡಿದು, ನಿಯಮಪಾಲನೆ. ಗಾಂಧೀತತ್ತ್ವ. ಹಳ್ಳಿಯ ಉದ್ಧಾರ ಮೊದಲಾದವುಗಳೆಲ್ಲ ಆ ಮಹಾ ಪ್ರವಾಹದ ಸಳೆತಕ್ಕೆ ಸಿಕ್ಕಿ ತೇಲಿಹೋದವು. ಇದರ ಅರಿವು ಕಮಲಮ್ಮನಿಗಾಗಲೆ ಮನೋಹರನಿಗಾಗಲೆ ಇರಲಿಲ್ಲ

ಮನೋಹರ ಮಾಡಿದ ತಪ್ಪನ್ನು ಇದ್ದಕ್ಕಿದ್ದಂತೆ ಒಪ್ಪಿಕೊಳ್ಳುತ್ತಿದ್ದ. ಈ ವೌರ್ಖ್ಯದಿಂದಲೇ ಅವನ ಉದ್ಧಾರ ಸಾಧ್ಯವಾಯಿತು. ಆದರೆ ವಾಸುದೇವ ಇದಕ್ಕೆ ಸಿದ್ಧನಿರಲಿಲ್ಲ ಆಗ ಅವನ ವರ್ತನೆ ಪಾಶ್ಚಾತ್ಯರ ನೆನಪುತ್ತಿತ್ತು. ತನ್ನ ತಪ್ಪನ್ನು ಮರೆಮಾಚಲು ಅವನು ಬುದ್ಧಿಯ ಮರೆಹೊಕ್ಕ ಖಾದಿಯನ್ನು ತೊರೆದು ಅಂದವಾದ ಸಿಲ್ಕ್ ಬಟ್ಟೆಯನ್ನು ತೊಡುತ್ತಿದ್ದ. ಈ ಪರಿವರ್ತನೆಯೂ ಸಹಿತ ಪ್ರಸ್ತಾಪನೆಯಾಗಿ..... 'ನಾನೇ ಕೆ ಯಾರೆ ನೂತು ನೆಯ್ದು, ಉಡುವ ಅಚ್ಛಾಪ ಸನ್ನದು. ಹಣ ಕೊಟ್ಟು ಕೊಂಡ ಬಟ್ಟೆಯನ್ನು ಉಡುವುದರಿಂದೇನು ಲಾಭ? ಅದೆಲ್ಲ ಮಳೆ ಬಂದಂತೆ ಕೊಡೆಹಿಡಿಯುವ ಸಂದರ್ಭಸಾಧಕರ ಗುಣ! ಖಾದಿಯುಡುವುದೊಂದು ಫೇಶನ್ ಆಗಿದೆಯೆಂದು ತಂಭಾಹಾರಕಾಗಿ ನಾನು ತೊಡಬಯಸುವುದಿಲ್ಲ ನಮ್ಮ ಹಳ್ಳಿಯಲ್ಲಿ ಅದಕ್ಕೆಲ್ಲ ಬಿಡುವಿತ್ತು. ಇಲ್ಲಿ ಅಂತಹ ಸೌಕರ್ಯವಿಲ್ಲ' ಎನ್ನುತ್ತಿದ್ದ.

ಇವನ ಹೆಚ್ಚಿನ ಸಮಯ ಮನೆಯ ಹೊರಗೇ ಕಳೆಯುತಿತ್ತು ಅದಕ್ಕೆ ಕಾರಣವಿರದಿರಲಿಲ್ಲ. 'ಇಂದು ಆ ಹಳ್ಳಿಗೆ ಹೋಗಿದ್ದೆ. ಇಂದು ಇಂಥಾ ರೋಗಿಯನ್ನು ನೋಡಿದ್ದೆ. ಔಷಧದ ಬೇರುಗಳು ಸಿಕ್ಕುವುದು ಬಹಳ ಕಷ್ಟವಾಯಿತು' ಎಂದು ಮುಂತಾಗಿ ನೆಪಹೇಳಿ ಮನೆಯವರ ಸ್ನೂಪ್ಸಿಸುತ್ತಿದ್ದ. ಆ ಕಲೆ ಚೆನ್ನಾಗಿಯೇ ಸಾಧಿಸಿದ್ದರಿಂದ, ಸಿಕ್ಕಿಬೀಳುವ ಭಯವಿದ್ದಿಲ್ಲ.

ಎಲ್ಲಕ್ಕಿಂತಲೂ ಮಿಗಿಲಾಗಿ ಇವನಿಗೂ ಜಾಜಿನ ಹುಚ್ಚು ಅಂಟಿಕೊಂಡಿತು. ಮನೋರಂಜನೆಗೆಂದು ಕಲಿತ ವಿದ್ಯೆ ಆಕಸ್ಮಿಕವಾಗಿ ಇದರಿಂದ ಹಣ ಗಳಿಸಿದರೆ ಸುಖವಾಗಿ ಬದುಕಬಹುದೆಂಬ ಬಯಕೆ ತಲೆಗಡರಿತು. ಧನ ಸಂಪಾದನೆಯೊಂದೇ ಜೀವನದ ಪರಮೋದ್ದೇಶವಾಯಿತು; ಉತ್ಸಾಹಕ್ಕೆ ವಿಘ್ನಗಳು ಹೆಚ್ಚಿರುವಂತೆ ಸಾಧನಕ್ಕೆ ಅನುಕೂಲತೆಗಳೂ ಹೆಚ್ಚು. ಮಾಯೆ ಮಾನವನನ್ನು ಆ ಗರ್ತಕ್ಕೆ ತಳ್ಳಲು ತನ್ನ ಕಸುವನ್ನೆಲ್ಲ ಉಪಯೋಗಿಸುತ್ತದೆ. ಅದರ ಮೋಹಕ ರೂಪಿಗೆ ಮರುಳಾಗಿ ಪಥಭ್ರಷ್ಟರಾಗುವವರೇ ಹಲವು ಮಂದಿ. ಇದೂ ಹಣದ ಆಕರ್ಷಣೆಯಿದ್ದಲ್ಲಿ ಕೇಳಬೇಕೆ!

ವಾಸುದೇವ ಹಣವಿಟ್ಟು ಆಡತೊಡಗಿದ ಅನೇಕ ಬಾರಿ ಇವನಿಗೆ ಕಲ್ಪನೆಗಿಂತಲೂ ಹೆಚ್ಚಾಗಿ ಜಯ ಲಭಿಸಿತು. ಅದರಿಂದ ಹುರುಪು ಹೆಚ್ಚಿ ಮತ್ತೂ ಮತ್ತೂ ಆಡತೊಡಗಿದ. ಹಣಕ್ಕಾಗಿ ತಲೆ ಕರೆನುಕೊಳ್ಳಬೇಕಿದ್ದಿಲ್ಲ. ಒಂದೆಡೆ ಜಯಿಸಿದ ಹಣವಿತ್ತು, ಮತ್ತೊಂದೆಡೆ ಮನೋಹರನ ಪೆಟ್ಟಿಗೆಯಿತ್ತು. ಆಶಾತೃಷ್ಣೆ ಹೆಚ್ಚುತ್ತಹೋಯಿತು. ಇದರಿಂದ ಅವನಿಗೆ ವಿಶೇಷ ಆರ್ಥಿಕ ಹಾನಿ ಸಂಭವಿಸದಿದ್ದರೂ ತಂದೆಯ ಆದರ್ಶ ಮಣ್ಣುಗೂಡಿತು.

ಚರಿತ್ರ ಪತನವು ದೇಹದ ಮೇಲೂ ಪರಿಣಾಮ ಬೀರಿತು. ಕ್ರಮ ತಪ್ಪಿದ ವ್ಯವಹಾರ ಆರೋಗ್ಯವನ್ನು ಹಾಳುಮಾಡಿತು ಮುಖದ ಮೇಲಿನ ಸೌಮ್ಯಕಾಂತಿಯಾಗಲಿ, ಗಾಂಭೀರ್ಯವಾಗಲಿ ಉಳಿಯಲಿಲ್ಲ. ನಿದ್ದೆಗಟ್ಟು ಕಂಗಳು ಗುಳಿಬಿದ್ದವು ಬೆವರಿಳಿಸಿ ದುಡಿದು ತುಂಬಿದ್ದ ಮೈ ತಕ್ಕ ವ್ಯಾಯಾಮವಿಲ್ಲದೆ ಒಡಮಾಯಿತು.

ಈ ಮಾರ್ಪಾಟವನ್ನು ಲಕ್ಷಿಸಿ ಕಮಲಮ್ಮ ಚಿಂತಿತಳಾದಳು. ತನ್ನ ಮನೆಯುಳಿಸುವುದಕ್ಕಾಗಿ ಬಂದ ವಾಸುದೇವ ಹೀಗೆ ದಿನದಿನಕ್ಕೆ ಕೃಶನಾಗುತಿದ್ದರೆ ಅವಳಿಗೆಷ್ಟು ದುಃಖವಾಗದು? ತಂಗಿಗೆ ಏನೆಂದು ಉತ್ತರ ಕೊಟ್ಟಾಳು? ಪಟ್ಟಣದ ಹವೆ ಆ ಹಳ್ಳಿಯ ಸರಳ ಜೀವನಕ್ಕೆ ಹಿಡಿಸುವುದಿಲ್ಲ. ಅದಕ್ಕಾಗಿ ಅವನನ್ನು ಕಳುಹಿಸಿ ತನ್ನ ಹೊಣೆಗಾರಿಕೆಯನ್ನು ತಪ್ಪಿಸಿಕೊಳ್ಳಬೇಕು. ಮನೋಹರ ಸದ್ಯಕ್ಕೆ ಹಾದಿ ತಪ್ಪಲಾರನೆಂದೆನಿಸುತ್ತದೆ. ಅಂತಹ ಅಗತ್ಯ ಬಂದರೆ ಮುಂದೆ ಕರೆಯಿಸಿಕೊಂಡರೆ ಸರಿ; ಸ್ವಾರ್ಥವಶರಾಗಿ ಅವನನ್ನು ಬಲಿ ತೆಗೆದುಕೊಳ್ಳುವುದೆ? ಎಂದು ಅವಳು ಆ ವಿಷಯವನ್ನು ವಾಸುದೇವನಿಗೆ ತಿಳಿಸಿದಳು.

'ಮಗೂ; ನೀನು ಹೋಗಬೇಕೆಂದೇನೂ ನನ್ನ ಇಷ್ಟವಿಲ್ಲ. ನೀನಿದ್ದರೆ ನನಗೆಷ್ಟೋ ಆಧಾರ ಆದರೆ ನಿನ್ನ ದೇಹಸ್ಥಿತಿಯನ್ನು ಕಂಡು ನನಗೆ ಭಯವೇ ಎನಿಸುತ್ತದೆ. ಇಲ್ಲಿಯ ವಾತಾವರಣ ನಿನಗೆ ಒಗ್ಗುವುದಲ್ಲ ಕೆಲವು ತಿಂಗಳ ಕಾಲ ಮನೆಯಲ್ಲಿದ್ದು ಮತ್ತೆ ಬಾ' ಎಂದು ಬಹು ಕಷ್ಟದಿಂದ ಹೇಳಿದಳು.

ವಾಸುದೇವ ಮೌನವಾಗಿ ಎಲ್ಲವನ್ನೂ ಕೇಳಿದ. ತಾನಲ್ಲಿಂದ ಹೊರಡುವ ವಿಷಯಗಳಿಗೆ ಇಷ್ಟು ಬೇಗ ಬಂಡೀತೆಂದು ಅವನು ಸ್ವಪ್ನದಲ್ಲೂ ಎಣಿಸಿರಲಿಲ್ಲ. ಆದರೆ ಈಗ ಬೇರಾವ ಉಪಾಯವಿದೆ?

'ನಾಳೆಯೇ ಹೊರಡಬೇಕು. ಮತ್ತೆ ಆ ಹಳ್ಳಿಯ ಜೀವನ.... ದಪ್ಪನೆಯ ಖಾದಿ ಬೇಸಾಯ....ಕತ್ತೆಯ ದುಡಿತ! ಆಗಾಗ ಕುಡಿಯುವ ಕಾಫಿಯೆಲ್ಲಿ? ಸಿನೇಮಾ ನಾಟಕಗಳೆಲ್ಲಿ? ಆ ಬರದ ಬಾಳಿಗೆ ಪುನಃ ಹೊಂದಿಕೊಳ್ಳಬೇಕು .....' ವಾಸುದೇವನ ತಲೆ ತಿರುಗತೊಡಗಿತು.

ಆ ದಿನವನ್ನು ಹೇಗೋ ಕಳೆದ. ಯಾವುದಕ್ಕೂ ಉತ್ಸಾಹವಿಲ್ಲ. ಎಲ್ಲ ಯಾಂತ್ರಿಕವಾಗಿ ನೆರವೇರಿತು. ಗೆಳೆಯರೊಡನೆಯೂ ಸರಿಯಾಗಿ ಮಾತಾಡಲಿಲ್ಲ. ಮುಂದೇನು?—ಎಂಬ ಸಮಸ್ಯೆಯೇ ಪೆಡಂಭೂತವಾಗಿ ಎದುರು ನಿಂತಿತ್ತು. ಅಲ್ಲಿಯೇ ಉಳಿಯಲೂ ಆರ. ಹಳ್ಳಿಗೆ ಹಿಂದಿರುಗಲೂ ಆರ. ಹಳೆಯ ಜೀವನ ರೋಸಿಹೋಗಿದೆ; ಹೊಸ ಜೀವನ ಕನ್ನಡಿಯ ಗಂಟಾಗುತ್ತಿದೆ. ಈ ಇಬ್ಬಗೆಯ ವಿಚಾರಗಳ ನಡುವೆ ಸಿಲುಕಿ ಅವನ ಮನಸ್ಸು ಪೇಚಾಡುತ್ತಿದೆ. ಹೊರಬರುವ ಹಾದಿಯೇ ಕಾಣದಾಗಿದೆ

ಬೆಳಗ್ಗೆ ಊಟವನ್ನು ಮುಗಿಸಿ ಹೊರಟೇ ಬಿಟ್ಟ. ಕಮಲಮ್ಮ ತುಂಬಿದ ಕಣ್ಣುಗಳಿಂದ ಬೀಳ್ಕೊಟ್ಟಳು; ಖರ್ಚಿಗೆಂದು ನೂರು ರೂಪಾಯಿಗಳನ್ನು ಕೊಟ್ಟಿದ್ದಳು. ಮನೋಹರ ಸ್ಟೇಶನ್ನಿನವರೆಗೆ ಬಂದು; ಇಬ್ಬರೂ ಕಷ್ಟದಿಂದ ಬೀಳ್ಕೊಂಡರು. 'ನಿನ್ನ ಉಪಕಾರವನ್ನು ನಾನು ಎಂದಿಗೂ ಮರೆಯಲಾರೆ. ಆಗಾಗ್ಗೆ ಪತ್ರ ಬರೆಯುತ್ತಿರು. ವರ್ಷಕ್ಕೊಮ್ಮೆಯಾದರೂ ಬಂದುಹೋಗು' ಎಂದು ಹಾರ್ದಿಕವಾಗಿ ಮನೋಹರ ಹೇಳಿದ ವಾಸುದೇವ ಒಣನಗುವನ್ನು ನಕ್ಕು ಮುಖ ತಿರುಗಿಸಿಕೊಂಡ ಅವನಿಗೆ ದುಃಖ ಉಕ್ಕಿ ಬಂದಿತ್ತು.

ರೈಲು ಹೊರಟಿತು. ಗೆಳೆಯನ ಮುಖ ಕಾಣುವವರೆಗೂ ಮನೋಹರ ಅಲ್ಲೇ ನಿಂತು ನಿರೀಕ್ಷಿಸುತ್ತಿದ್ದ. ರೈಲು ಕಣ್ಮರೆಯಾದಾಗ ಆಳವಾದ ನಿಟ್ಟುಸಿರು ಬಿಟ್ಟು ಅವನು ಹಿಂದಿರುಗಿದ ಆ ಗೆಳೆಯನನ್ನು ಎಂದೆಂದಿಗೂ ಅಗಲುತ್ತಿದ್ದೇನೆಂದು ಅವನಿಗೆ ಅದೇಕೋ ಭಾಸವಾಗುತ್ತಿತ್ತು.

× × × ×

ನಾಲ್ಕಾರು ದಿನಗಳ ಬಳಿಕ ಮನೋಹರನಿಗೊಂದು ಪತ್ರ ಬಂತು. ಅವನು ಆತುರದಿಂದ ಬಿಚ್ಚಿ ಓದಿದ :—

'ಮನೋಹರ,

ನಿನ್ನ ತಾಯಿಯ ಕೋರಿಕೆಯ ಮೇರೆಗೆ ನಿನ್ನನ್ನು ಕರಿದಾರಿಗೆ ಕರಲೆಂದು ನಾನು ನಿಮ್ಮಲ್ಲಿಗೆ ಬಂದೆ. ಅವಳ ಇಚ್ಛೆಯೇನೋ ಈಡೇರಿತು. ನೀನು ಮುಂದೆ ಹೀಗೆಯೇ ಸನ್ಮಾರ್ಗದಲ್ಲಿ ಮುಂದುವರಿಯುವೆಯೆಂಬ ಭರವಸೆ ನನಗಿದೆ. ಆದರೆ ಈ ನಡುವೆ ನನ್ನ ಕುರಿತೂ ನಾಲ್ಕು ಮಾತು ಬರೆಯಬೇಕಾಗಿದೆ. ಹಳ್ಳಿಯಿಂದ ಪಟ್ಟಣಕ್ಕೆ ಬಂದ ನನಗೆ ಇಲ್ಲಿನ ಹವೆಯೇ ಒಗ್ಗಿಹೋಯಿತು. ಮೆಲ್ಲಮೆಲ್ಲನೆ ಕಡುಕಿನ ಕಡೆಗೇ ನನ್ನ ಮನಸ್ಸು ಓಡುತಿತ್ತು. ಮೈಗಳ್ಳನಾಗಿದ್ದು ದುಶ್ಚಟಗಳಿಗೆ ಬಲಿಯಾದೆ. ನಿನಗಿದ್ದ ದುರ್ಗುಣಗಳೇ ನನಗೂ ಅಂಟಿಕೊಂಡುವು. ಅವರಿ ಇದರ ಸುಳಿವು ನಿಮಗುಂಟಾಗದಂತೆ ಎಚ್ಚರ ವಹಿಸಿದ್ದೆ. ಗೆಳೆಯರಿಗೂ ಜಾಗ್ರತೆ ವಹಿಸಿದ್ದೆ

ನಾನು ಮಾಡುತ್ತಿರುವುದು ಅನ್ಯಾಯವೆಂದು ಆಗ ನನಗೂ ಎನ್ನಿಸುತ್ತಿತ್ತು. ಆದರೆ ನಿನ್ನಂತೆ ನಾನು ದೃಢಮನಸ್ಕನಲ್ಲ. ಎಸ್ಟು ಯತ್ನಿಸಿದರೂ ಚಟಬಿಟ್ಟು ಹೋಗಲೊಲ್ಲದು. ಇದಕ್ಕೆ ನನ್ನ ದುರ್ದೈವವನ್ನದೆ ಮತ್ತೇನೆನ್ನಲಿ ?

ಅಗಲುವ ದಿನ ಬಂದಾಗ ನನ್ನ ಮನಸ್ಸಿನ್ನು ನೊಂದಿತು ಬಲ್ಲೆಯಾ? ಮುಂದಿನ ಮಾರ್ಗವೇ ಕಾಣಿಸಲಿಲ್ಲ. ಮನೆಗೆ ಮರಳಿ ತಂದೆಗೆ ಈ ಕಲಂಕಿತ ಮುಖವನ್ನು ತೋರಿಸುವುದು ಆಗದ ಮಾತು! ಒಂದು ವೇಳೆ ತಂದೆಯೊಡನೆ ಸತ್ಯವನ್ನುಸುರಿ ಕ್ಷಮೆ ಬೇಡಿದರೂ ಮುಂದೆ ಹಳ್ಳಿಯ ಬಾಳಿನಲ್ಲೇ ತೃಪ್ತಿ ಕಾಣುವೆನೆಂಬ ನಂಬಿಕೆ ನನಗಿಲ್ಲ. ಹೀಗಿರಲು ಅಲ್ಲಿಗೇಕೆ ತೆರಳಲಿ ?

ಮುಂದಿನ ದಾರಿ.....? ಅದಂತೂ ಅನಿಶ್ಚಿತವೇ. ಗುರುತು ಪರಿಚಯವಿಲ್ಲದ ಯಾವುದಾದರೂ ಊರಿಗೆ ಹೋಗಿ ಹೇಗಾದರೂ ಜೀವನ ಸಾಗಿಸಬೇಕೆಂದಿದ್ದೇನೆ. ಅದಷ್ಟು ದೂರ ರೈಲಿನಲ್ಲೇ ಹೋಗುತ್ತೇನೆ ಮತ್ತೆ ಅದೃಷ್ಟದಲ್ಲಿದ್ದಂತಾಗುವುದು.

ಬರುವಾಗ ದೊಡ್ಡಮ್ಮ ೧೦೦ ರೂಪಾಯಿ ಕೊಟ್ಟಿದ್ದಳು. ನಾನೂ ನನ್ನ ಪೆಟ್ಟಿಗೆಯಿಂದ ೦೦ ರೂಪಾಯಿ ತೆಗೆದಿದ್ದೇನೆ. ಎಲ್ಲಾದರೂ ನೆಲೆ ನಿಲ್ಲುವ ವರೆಗೆ ಖರ್ಚಿಗೆ ಬೇಕಷ್ಟೆ ? ಇದೇನೂ ಹೆಚ್ಚು ಹಣವಲ್ಲ; ಇದಕ್ಕಾಗಿ ನನ್ನ ಆತ್ಮವನ್ನೇ ಮಾರಲಿಲ್ಲವೆ ? ....

ನಾನು ಮನೆಯಲ್ಲೇ ಇರುತ್ತಿದ್ದರೆ ... ... ! ದೊಡ್ಡಮ್ಮನ ಕಾಗದ ಬಾರದಿರುತ್ತಿದ್ದರೆ .... ಅಥವಾ ತಂದೆ ಕಳುಹದಿರುತ್ತಿದ್ದರೆ .. ನನಗೀ ದುರವಸ್ಥೆ ಉಂಟಾಗುತ್ತಿತ್ತೆ ? ತಂದೆ-ತಾಯಿಂದಿರ ವಾತ್ಸಲ್ಯವನ್ನು ನೆನೆದು ಕಣ್ಣು ಹನಿಗೂಡುತ್ತಿದೆ ಹೋಗಲಿ ಇನ್ನೇಕೆ ಆ ಮಾತು ?

ನನ್ನಿಂದಾಗಿ ನೀನೊಬ್ಬನಾದರೂ ಉದ್ಧಾರವಾದೆಯಲ್ಲ—ಇಷ್ಟೇ ನನಗೆ ಸಂತೋಷ; ಅದನ್ನೇ ಹೊತ್ತು ಸಾಗುತ್ತಿದ್ದೇನೆ.

ನನ್ನನ್ನು ಹುಡುಕಲು ವ್ಯರ್ಥವಾಗಿ ಪ್ರಯತ್ನಿಸಬೇಕಿಲ್ಲ, ನಾನು ಸಿಗುವಂತಿಲ್ಲ ಸಿಕ್ಕರೂ ಹಿಂದಿರುಗಲಾರೆ.

ನಿನಗೆ ಮಂಗಳವಾಗಲಿ; ದೊಡ್ಡಮ್ಮನಿಗೆ ನನ್ನ ನಮಸ್ಕಾರಗಳನ್ನು ತಿಳಿಸು ಆ ಅಪಾಯಕರ ಗೆಳೆಯರಿಂದ ದೂರವಾಗಿರು.

ಹತಭಾಗ್ಯನಾದ ನನ್ನ ನೆನವು ಆಗಾಗ ನಿನಗೆ ಆಗುತ್ತಿರಲಿ; ಅದರಿಂದ ಕೆಲವರಾದರೂ ಬುದ್ಧಿ ಗಲಿಯಲಿ.

ಇನ್ನೆಂದು ಭೇಟಿಯೋ ಆ ಭಾಗ್ಯ ಇದೆಯೋ ಇಲ್ಲವೊ!

—ನಿನ್ನ ನಿರ್ಭಾಗ್ಯ ಮಿತ್ರ
ವಾಸುದೇವ.'

ಕವರಿನ ಮೇಲೆ ಉತ್ತರಹಿಂದುಸ್ತಾನದ ಯಾವುದೋ ಊರಿನ ಮುದ್ರೆಯಿತ್ತು. ವಾಸುದೇವ ಊರು ಬಿಟ್ಟನೆಂಬುದರಲ್ಲಿ ಸಂದೇಹವೇ ಉಳಿಯಲಿಲ್ಲ

ಮನೋಹರನ ಕಣ್ಣೆದುರಿಗೆ ವಾಸುದೇವನ ಮುಗ್ಧಗಂಭೀರ ಮುಖ ನಲಿದಾಡಿತು. ಅಂತಹನ ದುರ್ಗತಿಯನ್ನು ನೆನೆದು ಅಳುವು ಉಕ್ಕಿ ಬಂತು. ಕಣ್ಣೀರ ಹನಿಗಳು ಕಾಗದದ ಮೇಲೆ ಪಟಪಟನೆ ಉದುರಿದುವು.

ದುಃಖದ ಆವೇಗವನ್ನು ಕಡಿಮೆ ಮಾಡಿ ಶಾಂತಿ ಪಡೆಯಲೆಂದು ಅವನು ಮೆಲ್ಲನೆ ಗೀತೆಯನ್ನು ಬಿಡಿಸಿ ಓದತೊಡಗಿದ.

ಉಗೆಬಂಡಿ

(ನವ್ಯಕವನ)

ಶ್ರೀ. ಅರವಿಂದ ನಾಡಕರ್ಣಿ, ಮುಂಬೈ

ಧಡ ಧತ ಧಡ ಧತ ಓಡಾಡುತಿದೆ ಉಗೆಬಂಡಿ–
ಮನೆ ಆಫೀಸುಗಳ ಮಧ್ಯೆ.

ಬೆಳಗಿನ ಐದುಗಂಟೆಯ ಅಲಾರಮ್ಮು ಕಿರ್ರನೆ ಕಿರಲಿತು,
ಒಜ್ಜೆಕಣ್ಣು ಉಜ್ಜಿ ಪಟಪಟ ಜಿಗಿದರು ಶಯ್ಯಾಸನ ಸುರುಳಿ
ಮೂಲೆಗೊತ್ತಿ.
ಝಗ್ಗನೆ ಬೆಳಗಿತು ವಿದ್ಯುದ್ದೀಪ ಹೆಗಲು
ಚಟಕ್ಕನೆ ಮುಗಿಯಿತು ಸಕಲವಿಧಿ ಒಂದೇ ಉಸಿರಿನಲಿ.

ಖಟ್ ಖಟ್ ಖಟ್
ಉಗೆಬಂಡಿ ನಿಂತಿದೆ ನಿಲ್ದಾಣದಿ ಶೋಣಿತಪಟ ಓಲಾಡಿಸುತ
ಒಡಲಕಾಂತೆಯಲಿ ಭರಭರ ಮೇಲೋಗರ ಮುದ್ದೆ ತುರುಕಿ
ಉಸಿರಬಿಗಿದು ನಿಂತಿಹರು ನವಯುಗ ಕಲಿಗಳು ತಿತ್ತಿರಿ ತೀವಿ.
ಆ ಸೂಟು ಬೂಟು ಕುಂತಳ ಕತಲಿನಲಿ ಯಾರ ಹೆಗಲುಗಳ
ಮೇಲೆ ಯಾರ ತಲೆಗಳೋ!

ಕಿರ್ರನೆ ಕಿರಲಿ ನಿಲ್ದಾಣಕಿತ್ತು ಉಗೆಬಂಡಿ
ಜೇಂಗೊಡಕೆ ಜಂಟ್ಟಿತು ಸಕ್ಕ ಅಳಿಜೊಂಪ ಜೊಂಪ.
ಖಟ್ ಖಟ್ ಖಟ್ ಖಟ್ ಧಡ ಧಡ ಧಡ ಧಡ
ಓಡುತಿದೆ ಉಗೆಬಂಡಿ ಮನೆ–ಆಫೀಸುಗಳ ನುಡ್ಯೆ.
ತರುಲತೆಗುಲ್ಮ ಶಡ್ವಲವೀಥಿ ಸುಮಕುಂಜ ಸೀಲಾದ್ರಿ
ಮುಗಿಲ ನವರತ್ನನಿಕರ ಗೋವ್ಯೂಂಪ ಪಕ್ಷಿಕೂಟ
ಒಂದೊಂದಾಗಿ ಹಿಂದೋಡಿ ತಿರುತಿರುಗಿ ವಕ್ರವಿಕೃತವಾಗಿ
ಮಸುಳಿ ಅಡಗಿದುವು ಶೂನ್ಯಹವೆಯಲಿ.
ಬಂಡಿ ಕಾರಿದ ಕಬ್ಬೊಗೆ ಹಬ್ಬಿತು ದಿಕ್ಕುಟ
ಕಣ್ಮುಂದೆ ಬಿತ್ತರಿಸಿದೆ ವಾಳುಕಕ್ಷೇತ್ರ ನೂರಾರುಮೈಲು
ದೂರದೂರದ ಬಂಡೆಗಲ್ಲಿನ ಮೇಲೆ ಕೂತು ಗುಜ್ಜುಗುಂಡಿನಾಟ
ಕಮಲದಲ ತೃಣಾಂಕುರ ರಚಿತ ಎದೆ ಹೊಸೆದು
ಲೋಹದೆಳೆಯಿಂದ ಹೆಣೆ ಹೊಸತೆದೆಯ.
ಒಂಟೆ ಸವಾರಿಯಾಗಿ ರಾಟಳ ಗಿರಗಿರ ತಿರುಗಿಸಿ
ಸುತ್ತಾಡು ಸರಸರ ಸಂಜೆಯನಕ

ಖಟ್ ಖಟ್ ಖಟ್ ಖಟ್
ಉಗೆಬಂಡಿಯೆತ್ತಿದೆ ಬೈಗಿನ ರಕ್ತನಿಶಾನೆ
ಧಡಧಡ ಓಡಿಬಂದು ಪಟಪಟ ನುಗ್ಗಿದರು ಗಾಡಿಯೊಳಗೆ
ಜೆಲ್ಲಾಪಿಲ್ಲಿ.

ಸಿಳ್ಳುಹಾಕಿ ಓಡಿತು ಉಗೆಬಂಡಿ ಮರಳಿ ಮನೆಗೆ
'ಮುಬ್ಬಿಗಿಳಿದ ಸಾಲು ಸಾಲು ಅಮೃತಶಿಲೆಯ ಗೋರಿ'
ಬೆಮರನುಜ್ಜಿ ತಂಡುಲಪಿಂಡ ಕಟಕಟ ಕಡಿದು
ಭರಭರ ತುರುಕಿ ಒಡಲಗೋಣಿಯಲಿ
ಇಪ್ಪೀಟನಾಟ ಸಿನೇಮಾ ತುಸುಹಂಟಿ ಹುಸಿಗೇಲಿಗೊಂದಲ
ಕರಕರೆ ಕೆಲನಿಮಿಷ
ನಂತರ ನಿದ್ದೆಭಾರದಿ ನುಗ್ಗಿದರು ಸೊಳ್ಳೆಪರದೆಯೊಳಗೆ
ಕಿರಿಕಿರಿ ನಗುತ
'ಏ ಸಿದ್ದೆ, ನೀನಿಲ್ಲದಿರೆ ಈ ಬಾಳನೆ ಗೆದ್ದಿದ್ದೆ'!

ಧಡ ಧಡ ಓಡಾಡುತಿದೆ ಉಗೆಬಂಡಿ
ಬಾಳುದ್ದ
ಕಬ್ಬಿಣದ ಹಳಿಗಳ ಮೇಲೆ,
ಆಸೆ ನಿರಾಸೆ ಬದುಕು ಸಾವು ದುರ್ಗಗೋರಿಗಳ ಮಧ್ಯೆ,
ಹೊಟ್ಟೆ ತುಂಬಿಸಿ ನೆತ್ತರ ಕಾವ ಸಂದಿಸಿ
ಸಂತಾನ ಸೂರೆಬಿಡುವ ಮೃಗರಹಣಿ
ಮನೆ—ಆಫೀಸು—ಆಫೀಸು—ಮನೆ—
ಸಂಬಳ—ಸಂತಾನ—
"ಮೃತ್ಯೋರ್ಮಾ ಅಮೃತಂ ಗಮಯ!"

ಮಹಾವ್ಯಕ್ತಿ "ಮಾರ್ಶಲ್ ಟಿಟೋ"

(ವ್ಯಕ್ತಿಪರಿಚಯ)

ಶ್ರೀ. ಜೋ. ವೆಂಕಟೇಶ, ಧಾರವಾಡ

卐

ಯುಗೋಸ್ಲೊವಿಯಾದ ಮೇಲಾಳು ಮಾರ್ಶಲ್ ಟಿಟೊ ಮೊನ್ನೆ ಮೊನ್ನೆ ಭಾರತಕ್ಕೆ ಬಂದು, ಭಾರತದೊಂದಿಗೆ ಹೆಚ್ಚಿನ ಸ್ನೇಹಸಂಬಂಧವನ್ನು ಬೆಳಸಿ ಹೋದನು. ಅತನ ಜೀವನದ ಪರಿಚಯವು ಎಲ್ಲರಿಗೂ ಆಗಬೇಕಾದುದು ಅಗತ್ಯ, ಉರುನಲು ಕಟ್ಟಿಗೆ ಮಾರಿ ಜೀವನ ನಡೆಸುತ್ತಿದ್ದವನ ಮಗನಿಂದು, ಯುಗೊಸ್ಲಾವ್ ರಾಷ್ಟ್ರದ ಚೈತನ್ಯಪುರುಷನಾಗಿದ್ದಾನೆ.

卐

ಕಳೆದ ಜಾಗತಿಕ ಮಹಾಯುದ್ಧದಲ್ಲಿ ಯುಗೋಸ್ಲಾವಿಯಾ ಕ್ಷಣಮಾತ್ರದಲ್ಲಿ ಜರ್ಮನಿಯ ಕೈವಶವಾಯಿತು. ಯುಗೋಸ್ಲಾವಿಯಾದ ತಲ-ತಲಾಂತರಗಳಿಂದ ನಡೆದುಬಂದ ರಾಜ್ಯಸಿಂಹಾಸನ ಕುಪ್ಪಳಿಸಿಕೊಂಡು ಬಿದ್ದಿತು. ಸಿಂಹಾಸನದ ಮೇಲಿದ್ದ ರಾಜ ದಾರಿ ಸಿಕ್ಕದ್ದತ್ತ ಓಡಿ ನಡೆದ. ಅವನ ಹೆಸರಿನಿಂದ ರಾಜ್ಯಕಾರಭಾರ ನಡೆಸಿದ ರಾಜಮಂಡಳ ಹೇಳಹೆಸರಿಲ್ಲದಾಯಿತು ಗೆದ್ದ ಎತ್ತಿನ ಬಾಲ ಹಿಡಿದ ಕೆಲವು ಜನ ಜರ್ಮನಿಯ ನಾಝೀ ರಕ್ತುಂದ ಛತ್ರದಡಿಯಲ್ಲಿ ಆಶ್ರಯ ಪಡೆಯಿತು. ನಿಮಿಷದ ಹಿಂದೆ ಇದ್ದ ಒಂದು ಸ್ವತಂತ್ರ ದೇಶ ಪಾರತಂತ್ರ್ಯದ ಸುಳಿಗೆ ಸಿಲುಕಿ ಹೊಯ್ದಾಡತೊಡಗಿತು. ಯುಗೋಸ್ಲಾವಿಯಾದ ಸ್ವಾತಂತ್ರ್ಯಪ್ರಿಯ ಜನತೆ ಪಂಜರದೊಳಗೆ ಸಿಲುಕಿದ ಸಿಂಹದಂತೆ. ಒಳಗೊಳಗೇ ಚಡಪಡಿಸತೊಡಗಿತು. ಅಲ್ಲಿ ಸಿಂಹಕ್ಕೆ ಸಿಂಹನಾದವನ್ನು ಹೊರಡಿಸುವ ಸ್ವಾತಂತ್ರ್ಯವಾದರೂ ಇರುತ್ತದೆ; ಆದರೆ ಈ ಸ್ವಾತಂತ್ರ್ಯಪ್ರಿಯ ಜನತೆಯ ಬಾಯಿಗೆ ಛದ್ರವಾದ ಬೀಗ ಜಡಿವ ಕಾರ್ಯವನ್ನು ಜರ್ಮನಿಯ ನಾಝೀ ಸರಕಾರ ಕೈಗೊಂಡಿತ್ತು. ನಾಯಕನಿಲ್ಲದ ಜನತೆಯ ಈ ಇಚ್ಛಾಶಕ್ತಿ ರಚನಾತ್ಮಕ ಕಾರ್ಯವನ್ನು ಮಾಡಲು ಅಸಮರ್ಥವಾಗಿ ಹಾಳಾಗಿ ಹರಿಯತೊಡಗಿತ್ತು. ಈ ಪ್ರವಾಹಕ್ಕೆ ಒಡ್ಡು ನಿಲ್ಲಿಸಿ ಅದನ್ನು ಕೇಂದ್ರೀಕರಿಸಿದ ಶ್ರೇಯಸ್ಸು "ಜೋಸೆಫ್ ಬ್ರಾಝ್" ನಿಗೆ ನಿಃಸಂದೇಹವಾಗಿ ಸಲ್ಲಲೇಬೇಕು. ಈ ಜೋಸೆಫ್ ಬ್ರಾಝ್‌ನೇ ಮಹಾವ್ಯಕ್ತಿ ಮಾರ್ಶಲ್ ಟಿಟೋ. ಪರಕೀಯ ಮಿತ್ರರ ಸಹಾಯವನ್ನು ಅನಲಂಬಿಸದೆ ಈತನು ಕೇವಲ ಸ್ವಾತಂತ್ರ್ಯಪ್ರಿಯ ಜನರ ಇಚ್ಛಾಶಕ್ತಿಯ ಮೇಲೆಯೆ ಯುಗೋಸ್ಲಾವಿಯವನ್ನು ಪರದಾಸ್ಯದಿಂದ ಮುಕ್ತಗೊಳಿಸಿದ ಬಗೆ ಆಶ್ಚರ್ಯಕರವಾದುದು; ಅಷ್ಟೇ ಅಲ್ಲ, ಅದೊಂದು ಅಘಟಿತ ಘಟನೆ, ಸವಾಡವೆಂದಾದರೂ ತಪ್ಪಾಗಲಾರದು. ಯುಗೋಸ್ಲಾವಿಯಾದ ಸ್ವಾತಂತ್ರ್ಯದ ಇತಿಹಾಸವೆಂದರೆ, ಮಾರ್ಶಲ್ ಟಿಟೋ ತನ್ನ ಸಹಕಾರಿಗಳೊಂದಿಗೆ ಪಟ್ಟ ಕಷ್ಟ, ತೋರಿದ ತ್ಯಾಗಗಳ ಕತೆಯೇ ಆಗಿದೆ.

ಮಾರ್ಶಲ್ ಟಿಟೋ 'ಕುಮೇರೋ ವೆಲ್ಸ್' ಎಂಬ ಹಳ್ಳಿಯಲ್ಲಿ ಒಂದು ಬಡ ರೈತ ಕುಟುಂಬದಲ್ಲಿ, ಕ್ರಿ.ಶ. ೨೫ನೇಯ ಮೇ ೧೮೯೦ ರಲ್ಲಿ ಹುಟ್ಟಿದನು. ಟಿಟೋನ ತಂದೆ ಅಡವಿಯಲ್ಲಿಯ ಕಟ್ಟಿಗೆಗಳನ್ನು ಕಡಿದು ತಂದು ಅವುಗಳನ್ನು ಮಾರಿ ಜೀವನವನ್ನು ನಿರ್ವಹಿಸುತ್ತಿದ್ದನು. ಟಿಟೋನ ಅಜ್ಜ (ತಾಯಿಯ ತಂದೆ) ಇದ್ದಲುಗಳ ಭಟ್ಟಿಯನ್ನು ನಡೆಸುತ್ತಿದ್ದರು. ಟಿಟೋ ಮೊನಲಿನಿಂದಲೂ ಶ್ರಮಜೀವಿ ಎಂಬುದಕ್ಕೆ ಅವರ ತಂದೆ-ತಾಯಿಗಳ ಈ ವ್ಯವಸಾಯವೇ ಸಾಕ್ಷಿ ಹೇಳುತ್ತಿದೆ. ಟಿಟೋ ಚಿಕ್ಕವನಿರುವಾಗ ಯುಗೋಸ್ಲಾವಿಯಾ ಈಗಿದ್ದಂತೆ ಪೂರ್ಣ ರಾಜ್ಯವಾಗಿ ಇರಲಿಲ್ಲ. ಆಗಿನ ಕಾಲದ ಜನತೆಯ ಮನಸಿನಲ್ಲಿ ಈ ಊನತೆ ತುಂಬಾ ಕಟಿಯುತ್ತಿರಬೇಕು ಎಂತಲೆ ಪಾನ್-ಸ್ಲಾವ್ ಚಳವಳಿ ಉಗ್ರರೂಪ ಧಾರಣಮಾಡಿತು. ಈ ಚಳವಳಿಯ ಉದ್ದೇಶ ಯುಗೋಸ್ಲಾವದ ಏಕೀಕರಣವೇ ಆಗಿತ್ತು. ಟಿಟೋನ ತರುಣ ಮನಸ್ಸನ್ನು ಈ ಚಳವಳಿ ಆಕರ್ಷಿಸಿಕೊಂಡಿತು. ಟಿಟೋ ಉತ್ಸಾಹಿತನಾಗಿ ಚಳವಳಿಯಲ್ಲಿ ಸೇರಿಕೊಂಡನು.

೧೯೧೦ ರಿಂದ ೧೯೧೪ ರ ನಡುವಿನ ಕಾಲ, ಯುರೋಪದಲ್ಲಿ ಒಂದು ವಿಲಕ್ಷಣ ರಾಜ್ಯಕ್ರಾಂತಿಯ ಕಾಲವಾಗಿತ್ತು. ಆಸ್ಟ್ರೊ-ಹಂಗೇರಿಯನ್ ಸಾಮ್ರಾಜ್ಯದಲ್ಲಿ ಸಾಮ್ಯವಾದವನ್ನು ವಿಚಾರಪ್ರಣಾಲಿ ಬಹು ವೇಗದಿಂದ ಪ್ರಚಾರವಾಗತೊಡಗಿತ್ತು. ಈ ಪ್ರಚಾರದ ಪರಿಣಾಮ ಟಿಟೋನ ಮನಸ್ಸಿನ ಮೇಲಾಗದೆ ಹೋಗಲಿಲ್ಲ. ಆಗ ಟಿಟೋ ಒಂದು ಮೆಟಲ್ ವರ್ಕ್ಸ್ ಯೂನಿಯನ್ನಿನ ಕಾರ್ಯಕರ್ತನಾಗಿದ್ದ. ಈ ಸಾಮ್ಯವಾದದ ಪರಿಣಾಮದಿಂದ ಟಿಟೋ ಕ್ರೋಷಿಯನ್ ಸೋಶಾಲಿಸ್ಟ್ ಡೆಮಾಕ್ರೆಟಿಕ್ ಪಾರ್ಟಿಯ ಸಭಾಸದನಾದ. ಮುಂದೆ ಕೆಲ ಅವಧಿ ಟಿಟೋ ಆಸ್ಟ್ರಿಯಾ, ಯುಗೋಸ್ಲಾವಾಕಿಯಾ, ಜರ್ಮನಿ ದೇಶಗಳನ್ನು ಸಂಚರಿಸಿದ. ಬೇರೆ ಬೇರೆ ಕಾರಖಾನೆಗಳಲ್ಲಿ ದುಡಿಯುತ್ತ ಉದರ ನಿರ್ವಹಣ ಮಾಡುತ್ತ ಟಿಟೋ ಪ್ರವಾಸ ಕೈಕೊಂಡಿದ್ದ. ಹೋದ-ಹೋದಲ್ಲೆಲ್ಲ ಸೋಶಾಲಿಸ್ಟ್ ಪಂಗಡಗಳ ಸಭಾಸದನಾಗುತ್ತಿದ್ದ. ಉಪನ್ಯಾಸ

ಗಳನ್ನು ತಪ್ಪದೇ ಕೇಳುತ್ತಿದ್ದ. ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಈ ವಿಷಯದ ಮೇಲಿನ ಭಾಷಣಗಳನ್ನೂ ಒಳ್ಳೇ ಆಸ್ಥೆವಹಿಸಿ ಕೇಳುತ್ತಿದ್ದ. ತಿರುಗಿ ಕ್ರೋಶಿಯಾಕ್ಕೆ ಬಂದು ಸೈನ್ಯಖಾತೆಯಲ್ಲಿ ಸೇರಿಕೊಂಡ. ಮುಂದೆ ಸ್ವಲ್ಪೇ ದಿನಗಳಲ್ಲಿ ನೊದಲನೆಯ ಮಹಾಯುದ್ಧ ಪ್ರಾರಂಭವಾಯಿತು.

ಅಲ್ಪಾವಧಿ ಸೈನಿಕಶಿಕ್ಷಣವನ್ನು ಮುಗಿಸಿದ ಟಟೋನನ್ನು ರಣರಂಗದ ಮೇಲೆ ಕಳಿಸಲಾಯಿತು. ಅಲ್ಲಿ ಕಾದಾಡುವ ಪ್ರಸಂಗ ಬರುವ ನೊದಲೇ ರಶಿಯಾದ ಸೈನಿಕರು ಟಟೋನನ್ನು ಸೆರೆ ಹಿಡಿದರು. ಟಟೋ ಸೆರೆಯಾಳಾಗಿ ರಶಿಯಾಕ್ಕೆ ಬರಬೇಕಾಯಿತು. ಅದರಿ ಟಟೋನ ಜೀವನವೂ ಕನಲೊಡೆದಂತೆ, ಅವನ ಜೀವನದಲ್ಲಿ ನಡೆದ ಘಟನೆಗಳೂ ಕನಲೊಡೆದು ಬೇರೆ ಬೇರೆ ದಾರಿಯನ್ನು ಅವನಿಗೆ ತೋರಿಸತೊಡಗಿದುವು. ರಶಿಯಾದಲ್ಲಿ ರಾಜ್ಯಕ್ರಾಂತಿಯಾಗಿ ರಶಿಯದ ರಾಜ್ಯ ಸಿಂಹಾಸನ ತತ್ತರಿಸಿ ಬಿದ್ದಾಗ, ಟಟೋ ಸೆರೆಮನೆಯಿಂದ ಮುಕ್ತತೆಯನ್ನು ಪಡೆದ. ರಶಿಯದಲ್ಲಿ ಸ್ಥಾಪಿತವಾದ ಇಂಟರ್ ನ್ಯಾಶನಲ್ ರೆಡ್ ಗಾರ್ಡನಲ್ಲಿ ಸೇರಿಕೊಂಡ. ಕೆಲ ದಿನ ಟಟೋನಿಗೆ ರಶಿಯವಲ್ಲಿಯೇ ಇರಬೇಕಾಯಿತು. ಕೆಲ ದಿನಗಳ ತರುವಾಯ ಟಟೋ ವರಳಿ ತಾಯ್ನಾಡಿಗೆ ಬಂದ. ಆಗ ಯುಗೋಸ್ಲಾವೀಯದ ಪರಿಸ್ಥಿತಿ ತೀರ ಮರುಕಳಿಸಿದ ರೋಗದಂತಿತ್ತು. ಎಲ್ಲಿ ನೋಡಿದಲ್ಲಿ ಅಸಂತೋಷದ ಘಟಸರ್ಪ ಹೆಡೆಯೆತ್ತಿ ನರ್ತನ ನಡೆಸಿತ್ತು. ಅಲ್ಲಿಯ ಜನಜೀವನದಲ್ಲಿಯು ವಿಷಮ ಪರಿಸ್ಥಿತಿಯೇ ಈ ಅಳತವಿರದ ಅಸಂತೋಷಕ್ಕೆ ಎಡೆಗೊಟ್ಟಿತ್ತು, ಟಟೋ ವಿಷಮಪರಿಸ್ಥಿತಿಯನ್ನು ಗಮನಿಸಿ, ಅಲ್ಲಿಯ ಕಮ್ಯುನಿಸ್ಟ್ ಪಕ್ಷದ ಸಭಾಸದನಾದನು

ಆಗ ಅಸ್ತಿತ್ವದಲ್ಲಿದ್ದ ಕಾಯಿದೆಯ ನಿರ್ಬಂಧಗಳ ಮೂಲಕ ಕಮ್ಯುನಿಸ್ಟ್ ಪಕ್ಷ ಪರಿಪೂರ್ಣಗೊಂಡಿರಲಿಲ್ಲ. ಟಟೋ ತನ್ನ ಪಕ್ಷವನ್ನು ಬಲಗೊಳಿಸಲು ಟೊಂಕ ಕಟ್ಟಿ ನಿಂತನು. ಈ ಕಾರ್ಯದಲ್ಲಿ ತೊಡಗಿದಾಗ, ಆಡಳಿತದಲ್ಲಿದ್ದ ಸರಕಾರ ಟಟೋನನ್ನು ೧೯೩೪ ರಲ್ಲಿ ಸೆರೆ ಹಿಡಿದು ಅವನಿಗೆ ೬ ವರುಷಗಳ ಸಶ್ರಮಶಿಕ್ಷೆಯನ್ನು ವಿಧಿಸಿತು. ಟಟೋರ ಇಂದಿನ ಸಹಕಾರಿ 'ಮೋಶಾ ಪಿಜಾದೆ' ಅವರನ್ನು ಅಂದು ಮೊದಲ ಸಲ ಕಾರಾಗೃಹದಲ್ಲಿ ಟಟೋ ಕಂಡನು.

೧೯೩೪ ರಲ್ಲಿ ಟಟೋ ಆರು ವರುಷಗಳ ಜೇಲು ಸುಖವನ್ನು ಅನುಭವಿಸಿ ಹೊರಬಂದನು. ಆಗ ಹೊರಗಿನ ಪರಿಸ್ಥಿತಿ ತೀರ ವಿಚಿತ್ರವಾಗಿತ್ತು. ಜರ್ಮನಿಯಲ್ಲಿ ಹಿಟ್ಲರ್ ಸರ್ವಾಧಿಕಾರಿಯಾಗಿದ್ದ. ಜಪಾನು ಮಂಚೂರಿಯವನ್ನು ಆಕ್ರಮಿಸಿಕೊಂಡಿತ್ತು. "ಲೀಗ್ ಆಫ್ ನೇಶನ್ಸ್" ಒಂದು ನಿಸ್ಸತ್ವ ಸಂಸ್ಥೆಯಾಗಿತ್ತು. ಜಪಾನು ಮಂಚೂರಿಯವನ್ನು ನುಂಗಿದ್ದನ್ನು ನೋಡಿಯೂ, ಲೀಗ್ ಆಫ್ ನೇಶನ್ಸ್ ತನ್ನ ಉದಾಸೀನತೆಯನ್ನು ತೋರಿಸಿತ್ತು. ಯುಗೋಸ್ಲಾವಿಯಾದಲ್ಲಿ ಅರಸು ಅಲೆಕ್ಸ್ಯಾಂಡರ್ ಮನಬಂದಂತೆ ಕುಣಿದಾಡತೊಡಗಿದ್ದ. ಅವನ ಆಡಳಿತೆಯಲ್ಲಿ ಯುಗೋಸ್ಲಾವ್ಹದ ನಾಗರಿಕರ, ಹಿತರಕ್ಷಣೆ, ಹಕ್ಕುಬಾಧ್ಯತೆಗೆ ಎಡೆ ಇರಲಿಲ್ಲ. ಹೊರನಾಡ ಕಮ್ಯುನಿಸ್ಟ್ ಪಕ್ಷಗಳ ಜನತೆಯಲ್ಲಿ ಇದ್ದ ಸಂಬಂಧವನ್ನು ಮುರಿದು ಕೊಂಡಿತ್ತು. ಪಕ್ಷವನ್ನು ಪುನರ್ರಚಿಸುವ ಕಾರ್ಯ ಟಟೋನ ಪಾಲಿಗೆ ಬಂದಿತು ಸ್ಲಾವ್ಹದ ಜನತೆ ಟಟೋನನ್ನು ಪಕ್ಷದ ಸೆಕ್ರೆಟರಿ ಜನರಲ್ ಸ್ಥಳಕ್ಕೆ ಆರಿಸಿದರು.

ಮುಂದೆ ಎರಡನೆಯ ಮಹಾಯುದ್ಧದಿಂದ ಜಗತ್ತಿನಲ್ಲಿಯೇ ಬಹಳ ಬದಲಾವಣೆಗಳು ಕಾಣಿಸಿಕೊಂಡವು ರಶಿಯಾ, ಜರ್ಮನಿ ಒಪ್ಪಂದವಾದಾಗಲೇ, ಕಮ್ಯುನಿಸ್ಟ್ ಪಕ್ಷಗಳಲ್ಲಿ ಸ್ವಲ್ಪ ಮನಸ್ತಾಪ ಕಾಣಿಸಿಕೊಂಡಿತು. ಈ ಒಪ್ಪಂದವನ್ನು ವಿರೋಧಿಸದಿದ್ದರೂ, ಒಂದೇ ಮೇಲೆ ಜರ್ಮನಿಯು ಯುಗೋಸ್ಲಾವ್ಹದ ಮೇಲೆ ದಾಳಿ ಮಾಡಿದರೆ, ಕಮ್ಯುನಿಸ್ಟ್ ಪಕ್ಷ ಅದನು ತೀವ್ರವಾಗಿ ವಿರೋಧಿಸುವುದು — ಎಂದು ಟಟೋ ಜಾಹೀರು ಮಾಡಿದ ಯುಗೊಸ್ಲಾವ್ಹದ ಯುವರಾಜ ಪಾಲನು ಜರ್ಮನಿ ಮತ್ತು ಇಟಲಿಯ ಜನತೆಯಲ್ಲಿ ವ್ಯಾಪಿಸಿನಾದಲ್ಲಿ ತ್ರಿಪಕ್ಷ ಕರಾರನ್ನು ಮಾಡಿಕೊಂಡನು ಈ ಕರಾರಿನ ವಿರುದ್ಧ ಯುಗೋಸ್ಲಾವ್ಹದ ಕಮ್ಯುನಿಸ್ಟ್ ಪಕ್ಷ ತೀವ್ರ ನಿಷೇಧವನ್ನು ವ್ಯಕ್ತಪಡಿಸಿತು. ಈ ಕರಾರುಗಳ ಅನುಸಾರವಾಗಿ ಯುಗೋಸ್ಲಾವ್ಹ ಫ್ಯಾಸೀಝಂ ತತ್ವಗಳನ್ನು ಮನ್ನಿಸಿದಂತಾಗಿತ್ತು ಈ ಕಾರಣದಿಂದ ಯುಗೋಸ್ಲಾವ್ಹದ ಜನತೆಯಲ್ಲಿ ತೀವ್ರ ಅಸಂತುಷ್ಟಿಯು ತಲೆ ಎತ್ತಿತು.

ಶಾಂತಿ ಸೇವಾಸದನದ ಹೊಸ ಪ್ರಕಟಣೆಗಳು

ಹಾಲು-ಹಣ್ಣು (ಕವನ ಸಂಗ್ರಹ)	೧– ೮–೦
ಶ್ರೀ. ಭುಜೇಂದ್ರ ಮಹಿಷವಾಡಿ	
ಬಾಳ-ಬಂಡಿ (ಕವನ ಸಂಗ್ರಹ)	೦– ೮–೦
ಶ್ರೀ. ಬಾಳ ಬಿ ಉಪಾಧ್ಯೆ	
ಮೂಲ ಶಿಕ್ಷಣದ ಮೌಲ್ಯವಾಪಣ	೦–೧೪–೦
ಶ್ರೀ. ವಿರ್ಜಿ ಅಣ್ಣಾರಾಯರು	
ಭರತೇಶನ ನಾಲ್ಕು ಚಿತ್ರಗಳು	೧– ೪–೦
ಶ್ರೀ. ವಿರ್ಜಿ ಅಣ್ಣಾರಾಯರು	
ಶ್ರೀ ಶಾಂತಿಸಾಗರ	೦– ೪–೦

ವ್ಯಾಪಾರಿಗಳಿಗೆ ಧಾರಾಳವಾದ ಕಮಿಶನ್ನು

ಪ್ರತಿಗಳಿಗಾಗಿ ಬರೆಯಿರಿ:

ಶ್ರೀ. ವಿರ್ಜಿ ಅಣ್ಣಾರಾಯರು

ಪೋ. ಉಗಾರ ಬದ್ರುಕ್ (ಜಿಲ್ಲಾ ಬೆಳಗಾಂವಿ)

ಈ ಅಸಂತೋಷದ ಪರಿಣಾಮವಾಗಿ ಯುಗೋಸ್ಲಾವ್ಯದ ರೀಜನ್ಸಿ ಸರಕಾರ ಬುಡಮೇಲಾಯಿತು. ಹಿಟ್ಲರನಿಗೆ ಇದೊಂದೇ ಕಾರಣವಾಯಿತು. ನಾಝಿ ಸೈನಿಕರು ಯುಗೊಸ್ಲಾವ್ಯ ದೇಶದ ಗಡಿ ಗೆರೆಗಳನ್ನು ದಾಟಿದರು.

೧೯೪೧ರ ಏಪ್ರಿಲ್ ೬ನೆಯ ತಾರೀಖಿನ ದಿನ ನಾಝೀ ಸೈನಿಕರು ನಾಲ್ಕೂ ಬದಿಯಿಂದ ಯುಗೋಸ್ಲಾವ್ಯವನ್ನು ಪ್ರವೇಶಿಸಿತು. ಆಗ ರೀಜನ್ಸಿ ಸರಕಾರವನ್ನು ಕಡಿದು ರಾಜನ ಸಿಂಹಾಸನದ ಮೇಲೆ ಕುಳಿತ ಕಿಂಗ್ ಪೀಟರ್, ನಾಝೀ ಆಕ್ರಮಣ ತಡೆಯದೇ ಕಾಯರೋಕ್ಕೆ ಓಡಿಹೋದನು. ಹೀಗೆ ಅನಾಯಾಸವಾಗಿ ಯುಗೋಸ್ಲಾವ್ಯವನ್ನು ಹಿಟ್ಲರನು ನುಂಗಿಕೊಂಡನು.

೧೦೦೦ ರೂಪಾಯಿ ಬಹುಮಾನ

೩೦ ವರ್ಷಗಳಿಂದ ಅನುಭವಸಿದ್ಧವಾದ—ಮಿರಜೆಯ ವೈದ್ಯ
ವಿ. ಎಸ್. ಕಾಪಸೇಯವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರ ಪಾಕ

[ರಜಿಸ್ಟರ್ಡ್]

ಮೂತ್ರದಲ್ಲಿ ಸ್ವಪ್ನದಲ್ಲಿ ವೀರ್ಯಸ್ಖಲನ, ಸ್ವರತಿಯಿಂದುಂಟಾದ ಅಶಕ್ತತೆ, ವೀರ್ಯದ ಬೇರೆ ಬೇರೆ ದೋಷಗಳು, ಪಿತ್ತಾಂಶ, ಉಷ್ಣ, ಸೊಂಟನೋವು, ಉಪದಂಶ ಮೇಹರೋಗಗಳಿಂದುಂಟಾಗುವ ಕ್ಷೀಣತೆ—ಇವೆಲ್ಲ ನಷ್ಟವಾಗಿ, ಚೆನ್ನಾಗಿ ಮಲಶುದ್ಧಿಯಾಗುವದು. ಹಸಿವೆ. ಸ್ಮರಣಶಕ್ತಿ, ದೇಹದ ತೂಕ ಹೆಚ್ಚುವದು. ಹೊಸ ತಾರುಣ್ಯ ಬಂದಂತಾಗಿ ವೀರ್ಯದಲ್ಲಿ ಗರ್ಭಧಾರಕಶಕ್ತಿ ಬಲಗೊಳ್ಳುವದು. ಈ ಔಷಧಿಯು ೫೩ ವನಸ್ಪತಿಗಳ ಯೋಗದಿಂದ ಸಿದ್ಧವಾಗಿದೆ. ಸಾಲಾಮಿಶ್ರಿ, ಸಫೇದಮಿಶ್ರಿ, ಪಂಜಾಬಮಿಶ್ರಿ, ವಚಕಂದ ಮೊದಲಾದ ಪದಾರ್ಥಗಳಲ್ಲಿ ವೀರ್ಯವರ್ಧಕ ಗುಣವಿಲ್ಲವೆಂದು ಸಿದ್ಧಮಾಡುವವರಿಗೆ ೧೦೦೦ ರೂಪಾಯಿ ಬಹುಮಾನ

೫೧ ದಿನಗಳಿಗೆ ಸಾಲಬಹುದಾದ ೬೪ ತೋಲೆಯ ಒಂದು ಡಬ್ಬಿಗೆ ೫-೪-೦; ಅಂಚೆಯ ವೆಚ್ಚ ೧-೧೫-೦ ಶೀಘ್ರೆ-ಗುಣಕಾರಿಯಾದ ಸ್ಪೆಶಲ್ ಡಬ್ಬಿಗೆ ೧೦-೪-೦. (ಇದರಿಂದ ೭ ದಿನಗಳಲ್ಲಿಯೇ ಗುಣವು.) ಅಂಚೆಯ ವೆಚ್ಚ ೧-೮೫-೦. ೩ ಡಬ್ಬಿಗೆ ೧೫-೦-೦; ಅಂಚೆಯ ವೆಚ್ಚ ೪-೭ ೦.೧ ಡಬ್ಬಿಗೆ ಕ್ಯಾಶಿಂಗ್ ಖರ್ಚು ೦-೩-೦. ಒಮ್ಮೆಲೇ; ೩ ಡಬ್ಬಿಗಳನ್ನು ಬೇಡುವವರು ೫ ರೂ. ಮುಂಗಡ ಕಳಿಸಬೇಕು.

ಮಾಲಕ: ಶ್ರಿ. ಎಸ್. ಕಾಪಸೇ, ಶನಿವಾರಪೇಟೆ
ಮು. ಪೋ. ಮಿರಜ

ಈ ವರೆಗೆ ಎಂದೂ ಪರಕೀಯ ಆಡಳಿತದ ಕಡೆಗೆ ಇರದ ಯುಗೋಸ್ಲಾವ್ಯ ಜನತೆ, ನಾಝೀ ಆಕ್ರಮಣದಿಂದ ಚಡಪಡಿಸಿತು. ಅದನ್ನು ಪ್ರತಿಭಟಿಸುವುದಕ್ಕಾಗಿ ಕಮ್ಯುನಿಸ್ಟ್ ಪಕ್ಷದ ಮುಂದಾಳು ಟಿಟೋ ಜನತೆಗೆ ಆಹ್ವಾನವನ್ನಿತ್ತನು. ಜನತೆ ತನು-ಮನಧನದಿಂದ ಟಿಟೋನ ನೆರವಿಗೆ ಬಂದರು. ಈ ಜನತೆಯು ಪಥಕವನ್ನು ಸೈನಿಕ ಪಡೆಗಳನ್ನಾಗಿ ಮಾರ್ಪಡಿಸಿ, ಟಿಟೋ ಅದರ ಮುಖ್ಯ ಸೇನಾಪತಿಯಾದನು. ೧೯೪೧ರ ಜುಲೈ ೭ನೆಯ ತಾರೀಖಿನಿಂದ ಈ ಪ್ರತಿಭಟನೆ ಅಲ್ಲಲ್ಲಿ ಪ್ರಾರಂಭವಾಯಿತು. ಈ ಸೈನ್ಯಪಡೆ (Army of National Liberation) ಅಲ್ಲಲ್ಲಿ ತನ್ನ ಚಟುವಟಿಕೆಗಳನ್ನು ಪ್ರಾರಂಭಿಸಿತು. ಈ ಸೈನ್ಯಪಡೆಯ ನಿರ್ಮಾಣವೇ ಟಿಟೋನ್ನ ಸಂಘಟನಾ ಕೌಶಲ್ಯ, ಧೈರ್ಯ, ಆತ್ಮವಿಶ್ವಾಸ, ಯುದ್ಧನೈಪುಣ್ಯ ಗುಣಗಳ ದ್ಯೋತಕವಾಗಿದೆ. ಆಗ ಟಿಟೋನಿಗೆ ಕೇವಲ ಹೊರಗಿನ ದುಷ್ಟಶಕ್ತಿಗಳ ಜತೆಯಲ್ಲಿಯಷ್ಟೆ ಹೋರಾಡುವುದಾಗಿರಲಿಲ್ಲ ಅಂತರ್ಗತ ಕೆಲವು ತೊಂದರೆಗಳನ್ನೂ ಅವನು ಎದುರಿಸಬೇಕಿತ್ತು. ಯುಗೋಸ್ಲಾವ್ಯದ ಸಾಮ್ರಾಜ್ಯಶಾಹಿಯ ಪುರಸ್ಕರ್ತನಾದ ಜನರಲ್ ಡ್ರಾಝಾ ಮಿಹೆಲಾವಿಚ್ ಇವನು ಕೂಡ ತನ್ನ ಗನೀಮಿ ಯುದ್ಧ-ಪ್ರವೀಣ ಪಡೆಯೊಂದಿಗೆ ನಾಝೀ ಆಕ್ರಮಣಗಾರರನ್ನು ಪ್ರತಿಭಟಿಸುತ್ತಿದ್ದ. ಟಿಟೋ ಮತ್ತು ಡ್ರಾಝಾ ರಾಜಕೀಯ ಕ್ಷೇತ್ರದಲ್ಲಿ ಪರಸ್ಪರ ವಿರೋಧಿ ವ್ಯಕ್ತಿಗಳಾಗಿದ್ದರೂ, ಪ್ರತಿಕಾರ ಶಕ್ತಿಯ (Reactionay Element) ಪ್ರವಾಹ ಒಂದೇ ಕಡೆಗೆ ಇದ್ದುದರಿಂದಲೂ ತಾತ್ಪರ್ಪಿಕ ಸಹಕಾರ ಇಬ್ಬರಲ್ಲಿಯೂ ಇತ್ತು. ಆದರೂ ಒಬ್ಬರನ್ನೊಬ್ಬರು ಸಾಶಂಕಿತ ದೃಷ್ಟಿಯಿಂದ ನೋಡದೇ ಇರುತ್ತಿರಲಿಲ್ಲ. ಶತ್ರುವನ್ನು ಮನೆಯಿಂದ ಹೊರಗಟ್ಟಿದ ನಂತರ, ಇವನೆಲ್ಲಿ ಕಮ್ಯುನಿಸ್ಟ್ ಸರಕಾರ ರಚಿಸುವನೋ ಎಂಬ ಭೀತಿ ಜನರಲ್ ಡ್ರಾಝುನಲ್ಲಿದ್ದರೆ, ಟಿಟೋನಿಗೆ ಡ್ರಾಝುನೆಲ್ಲಿ ಸಾಮ್ರಾಜ್ಯಶಾಹೀ ಸರಕಾರವನ್ನು ಮರಳಿ ಪ್ರಸ್ಥಾಪಿಸುವನೋ ಎಂಬ ಭಯ. ಒಳಗೂ ಹೊರಗೂ ನಡೆದ ಈ ಹಗ್ಗದಾಟದಲ್ಲಿ ಟಿಟೋ ತನ್ನ ಲಕ್ಷ್ಯವನ್ನು ಕೊಡಬೇಕಾಗಿತ್ತು.

ಈ ವಿಕ್ಷಿಪ್ತ ವಿರೋಧಾಭಾಸದ ಪರಿಣಾಮ, ಆಗಿನ ರಾಜಕೀಯ ಪಕ್ಷಗಳ ಮೇಲಾಗದೇ ಇರಲಿಲ್ಲ. ಮೊದ-ಮೊದಲು ಇಂಗ್ಲಂಡ್, ರಶಿಯಾ, ಅಮೇರಿಕಾ ದೇಶಗಳು ತಮ್ಮ ಸಹಾಯವನ್ನೆಲ್ಲ ಜನರಲ್ ಡ್ರಾಝುನಿಗೆ ಕಳಿಸತೊಡಗಿದರು. ಮಾರ್ಶಲ್ ಟಿಟೋ ವಿಕಾಕೆಯಾದ. ಆದರೂ ತಾನು ಕಮ್ಯುನಿಸ್ಟ್; ಆದಕಾರಣ ತನಗೆ ಸಹಾಯ ಕೊಡಲೇ ಬೇಕೆಂದು ರಶಿಯಾಕ್ಕೆ ಟಿಟೋ ಪ್ರಾರ್ಥಿಸಿಕೊಂಡ. ಆದರೆ ರಶಿಯ ತನ್ನ ಸಹಾಯವನ್ನು ಕಳುಹಿಸುವುದರ ಬದಲು, ಟಿಟೋ ಡ್ರಾಝುನ ಅನುಮತಿಯಂತೆ ನಡೆಯಬೇಕೆಂದು ಉಪದೇಶಿಸಿತು. ಟಿಟೋನಿಗೆ ಈ ಉಪದೇಶ ಪಾಂಡಿತ್ಯ ಸೇರಲಿಲ್ಲ. ತನ್ನ ಸ್ವಂತದ ಬಲದ ಮೇಲೆಯೇ ನಾಝಿ ದಾಳಿಗಾರರನ್ನು ತಡೆಹಿಡಿದು ನಿಲ್ಲಿಸಿದ. ಆದರೆ ಜನರಲ್ ಡ್ರಾಝುನ ಸೈನಿಕಚಟುವಟಿಕೆಗಳು ಮಂದವಾಗಿ ನಡೆಯತೊಡಗಿತು ಜನರಲ್ ಡ್ರಾಝು, ತನ್ನ ಸೈನ್ಯಶಕ್ತಿಯನ್ನು ಮಹಾಯುದ್ಧ ನಿಲ್ಲುವ

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್

ಧಾರವಾಡ

ಗಡಿಯಾರ, ಚಾಕೀಸು, ರೇಡಿಯೊ, ಗ್ರಾಮೊಫೋನ್
ಮಾರಾಟಮಾಡುವವರು, ರಿಸೇರಿ ಮಾಡುವವರು.

ನಂಬುಗೆಯ ನಾಲು! ಪ್ರಾಮಾಣಿಕ ವ್ಯವಹಾರ!

ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ
ನಡೆದಿದ್ದು ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: **ಬಿ. ಜೆ. ಮುತ್ತಗಿ**

ಚಿನ್ನ ಕಾಣತೊಡಗಿದ್ದರಿಂದ ಹೆಚ್ಚಾಗಿ ಬಳಸದೆ, ಅದನ್ನು ಕಾಯ್ದಿರಿಸ-ತೊಡಗಿದ ಅಂತರ್ಗತ ಸರಕಾರ ಸ್ಥಾಪಿಸುವ ಪ್ರಶ್ನೆ ಬಂದಾಗ ಟಿಟೋನನ್ನು ಹಣಿಯಲೆಂದು, ತನ್ನ ಸೈನ್ಯಶಕ್ತಿಯನ್ನೂ ಈ ಯುದ್ಧದಲ್ಲಿ ವೆಚ್ಚ ಮಾಡದೇ ಕಾದಿರಿಸಿಕೊಳ್ಳತೊಡಗಿದ. ಜನರಲ್ ಡ್ರಾಝುನ ಸೈನಿಕ ಚಟುವಟಿಕೆಗಳು ಕ್ಷೀಣಗೊಂಡದ್ದನ್ನು ನೋಡಿ ಬ್ರಿಟನ್ನು ತನ್ನ ಸಹಾಯವನ್ನು ನೇರವಾಗಿ ಮಾರ್ಶಲ್ ಟಿಟೋನಿಗೆ ಕಳಿಸತೊಡಗಿತು. ೧೯೪೪ನೆಯ ಇಸ್ವಿಯ ಕೊನೆಯ ದಿನಗಳಲ್ಲಿ ಯುಗೋಸ್ಲಾವ್ಯಿಯಾ ಪುನಃ ಸ್ವಾತಂತ್ರ್ಯವನ್ನು ಪಡೆಯಿತು.

ಯುದ್ಧ ಮುಗಿದನಂತರ, ಮಾರ್ಶಲ್ ಟಿಟೋ ತನ್ನ ಪಕ್ಷದ ಸರಕಾರವನ್ನು ಸ್ಥಾಪಿಸಿದನು. ಸ್ಟಾಲಿನ್ ಮೆಲ್ಲನೆ ಯುಗೋಸ್ಲಾವ್ಯಿಯದ ಮೇಲೆ ರಾಜಕೀಯ ಅರ್ಧಿಕ ಪ್ರಭುತ್ವವನ್ನು ಬೀರತೊಡಗಿದನು. ಆದರೆ ಮಾರ್ಶಲ್ ಟಿಟೋ ಮತ್ತು ಅವನ ಸಹಕಾರಿಗಳು ಸೇರಿ ಆ ಪ್ರಯತ್ನವನ್ನು ಅದರ ಶೈಶವಾವಸ್ಥೆಯಲ್ಲಿಯೇ ಭಗ್ನಗೊಳಿಸಿದರು. ಟಿಟೋ ಕಮ್ಯುನಿಸ್ಟನಾದರೂ, ಉಳಿದ ಕಮ್ಯುನಿಸ್ಟ್ ರಾಷ್ಟ್ರಗಳಂತೆ, ರಶಿಯಾದ ಗುಲಾಮನಾಗಿ ಬಾಳುವುದು ಅವನಿಗೆ ಸೇರಿಕೆ ಇರಲಿಲ್ಲ. ಟಿಟೋ ಸ್ಟಾಲಿನ್‌ನ ಜತೆಯಲ್ಲಿ ಸ್ನೇಹದ ಕೈಯನ್ನು ಮುಂದೊಡ್ಡಬಲ್ಲ; ಆದರೆ ದಾಸವೃತ್ತಿಯಿಂದ ತಲೆಯನ್ನು ಬಗ್ಗಿಸಲಾರ. ಟಿಟೋ ಮಾರ್ಕ್ಸ್ ಮತ್ತು ಲೆನಿನ್ ವಾದಗಳನ್ನು ಅಭ್ಯಸಿಸಿದ್ದಾನೆ. ಅವುಗಳ ತತ್ತ್ವಗಳನ್ನು ಆಯಾ ದೇಶದ ಪರಿಸ್ಥಿತಿಗನುಗುಣವಾಗಿ ಜಾರಿಯಲ್ಲಿ ತರಬೇಕೆಂಬ ಸಮನ್ವಯವಾದವೇ ಟಿಟೋನ ಗುರಿ. ಅವನ ಈ ನಡೆವಳಿ ಸ್ಟಾಲಿನ್‌ನಿಗೆ ಸರಿ ಬೀಳಲಿಲ್ಲ. ೧೯೪೭ರಲ್ಲಿ ಬುಖಾರೆಸ್ಟಿನಲ್ಲಿ ಕೂಡಿದ ಅಧಿವೇಶನದಲ್ಲಿ 'ಕೊಮಿನ್ ಫಾರ್ಮ' ಯುಗೋಸ್ಲಾವ್ಯದ ವಿರುದ್ಧ ಠರಾವನ್ನು ಮಂಡಿಸಿ ಪಾಸುಮಾಡಿ ಯುಗೋಸ್ಲಾವ್ಯವನ್ನು 'ಕೊಮಿನ್ ಫಾರ್ಮ್' ನಿಂದ ತೆಗೆದೊಗೆದಿತು.

ಇಷ್ಟಕ್ಕೆ ಈ ವಿರೋಧ ನಿಲ್ಲಲಿಲ್ಲ. ರಶಿಯಾ ಮತ್ತು ಇತರ ಅದರ ಅಂಕಿತ ರಾಷ್ಟ್ರಗಳು ಪರೋಕ್ಷವಾಗಿ ಮಾರ್ಶಲ್ ಟಿಟೋನನ್ನು ಟೀಕಿಸತೊಡಗಿದರು. "ಟಿಟೋ ದೇಶದ್ರೋಹಿ. ಅತ ಸಾಶ್ಚಾತ್ಯ ಸಾಮ್ರಾಜ್ಯಶಾಹಿಯ ಹಸ್ತಕ. ಇವನನ್ನು ಯುಗೋಸ್ಲಾವದ ಜನರೇ ಹೊರದೂಡಲಿ" ಎಂಬ ಆಶಯದ ಟೀಕೆಗಳು ರಶಿಯಾದಲ್ಲಿ ಪ್ರಚಲಿತವಾಗತೊಡಗಿದುವು. ಆದರೆ ಟಿಟೋ ಇಂಥ ಬೆದರಿಕೆಗಳಿಗೆ ಸೊಪ್ಪು ಹಾಕಲಿಲ್ಲ. "ಒಂದು ವೇಳೆ ನನ್ನ ದೇಶದ ಮೇಲೆ ನೀವು ದಾಳಿ ಮಾಡಿದರೆ ಧೈರ್ಯದಿಂದ ನಿಮ್ಮನ್ನು ಎದುರಿಸುವೆ" ಎಂದು ಖಂಡಿತವಾಗಿ ಟಿಟೋ ಸ್ಟಾಲಿನ್‌ರಿಗೆ ತಿಳಿಸಿದ.

ಜಗತ್ತಿನಲ್ಲಿ ಸಹಜೀವನ ಸಾಧ್ಯವಿದೆ. ಭಾರತ ಪ್ರಧಾನಿ ನೆಹರೂ ತೋರಿಸಿದ ಪಂಚತತ್ತ್ವಗಳಲ್ಲಿ ಟಿಟೋನಿಗೆ ಅಚಲ ವಿಶ್ವಾಸವಿದೆ. ಇಂಥ ತತ್ತ್ವಗಳನ್ನು ಟಿಟೋ ಪಾಲಿಸಿದ್ದಾನೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಯುಗೋಸ್ಲಾವ್ಯದ ಅಧಿಬದಿಯಲ್ಲಿದ್ದ ತುರ್ಕಸ್ತಾನ ಗ್ರೀಸ್ ದೇಶಗಳ ಜತೆಯಲ್ಲಿ ವಿ.ತತ್ತ್ವವನ್ನು ಬಳಸಿಕೊಂಡು ಆ ರಾಷ್ಟ್ರಗಳ ಜತೆಯಲ್ಲಿ ಸಂಯುಕ್ತ ಸಂರಕ್ಷಣ ಒಪ್ಪಂದವನ್ನು ಮಾಡಿಕೊಂಡಿದ್ದಾನೆ ಟಿಟೋ. ರಶಿಯಾದ ಜತೆಯಲ್ಲಿಯೂ ಈ ಮೊದಲಿನ ಶತ್ರುತ್ವ ಭಾವನೆ ಉಳಿದಿಲ್ಲ. ಮೊದಲಿನ ಅಪಪ್ರಚಾರಗಳು ಮಾಯವಾಗತೊಡಗಿವೆ ಆರ್ಥಿಕ ದೃಷ್ಟಿಯಿಂದ ತನ್ನ ದೇಶವನ್ನು ಪ್ರಬಲಗೊಳಿಸಬೇಕೆಂಬ ಹೆಬ್ಬಯಕೆ ಟಿಟೋನಲ್ಲಿದೆ.

ಈ ಮಹಾವ್ಯಕ್ತಿ ಭಾರತಕ್ಕೆ ಹೋದ ತಿಂಗಳು ಭೇಟಿ ಕೊಟ್ಟಿದ್ದು ವಿಶೇಷ ಸಂಗತಿಯಾಗಿದೆ. ಜಗತ್ತಿನ ತತ್ತ್ವಯಾನಗಳನ್ನು ಸಮನ್ವಯದೃಷ್ಟಿಯಿಂದ ನೋಡುತ್ತಾ ಬಂದ ಭಾರತದ ಪ್ರಧಾನಿ ನೆಹರೂ ಮತ್ತು ಟಿಟೋ ಭೇಟಿ ಜಾಗತಿಕ ಶಾಂತಿಯ ದೃಷ್ಟಿಯಿಂದ ಅತೀವ ಮಹತ್ತ್ವದ್ದಾಗಿದೆ.

———

ಹಳ್ಳಿ–ಪಟ್ಟಣಗಳಲ್ಲಿ, ಬೀದಿ–ಬೀದಿಗಳಲ್ಲಿ
ಪ್ರಚಾರವಾಗಬೇಕಾಗಿದ್ದರೆ,

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್ ಲ್ಯಾಂಟರ್ನ್–ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ

ಸರ್ಬಿಯನ್ ನೈಟ್

(ಅನುವಾದಿತ ಕತೆ)

ಲೇ. ಗೋವರ್ಧನಾಚಾರ್ಯ ಗಲಗಲಿ, M. A. B. T. ಧಾರವಾಡ

卐

ಅರೇಬಿಯನ್ ನೈಟ್ಸ್ ಕತೆಗಳನ್ನು ಓದಿ ಅಲ್ಲಿಯ ಶೃಂಗಾರಾದ್ಭುತರಸದಿಂದ ಪುಲಕಿತರಾದವರಿಗೆ ಈ ಸರ್ಬಿಯನ್ ನೈಟ್ ಕಥೆಯಲ್ಲಿ ಶೃಂಗಾರ ರಸದೊಂದಿಗೆ ಬೇರೊಂದು ರಸಾಸ್ವಾದನೆ ಲಭಿಸುವುದು. ಮೊದಲನೆಯ ಮಹಾಯುದ್ಧದ ಹಿನ್ನೆಲೆಯಲ್ಲಿ ಬರೆದ ಈ ಕಥೆಯು ಮಾರ್ಶಲ್ ಟೀಟೊರವರ ನಾಡು ಪಟ್ಟ ಬವಣೆಯನ್ನು ಬಹಳ ಹೃದಯದ್ರಾವಕವಾಗಿ ಬಣ್ಣಿಸುತ್ತದೆ.

卐

ಆಗ ರಾತ್ರಿ ಹನ್ನೊಂದು ಗಂಟೆಯಾಗಿತ್ತು. ಪ್ಯಾರಿಸ್ಸಿನ ನಾಟ್ಯಗೃಹಗಳೆಲ್ಲ ಮುಚ್ಚುವ ವೇಳೆ ಅದು. ಯುದ್ಧದ ಸನುಯವಿದ್ದುದರಿಂದ ಎಲ್ಲದರ ಬಗೆಗೂ ಕಟ್ಟಪ್ಪಣೆ. ಇದಕ್ಕಿಂತ ಅರ್ಧ ತಾಸು ಮೊದಲೇ ಎಲ್ಲ ಹೊಟೆಲಿನ ರೆಸ್ಟಾರಂಟುಗಳು ಬರಿದಾಗಿದ್ದುವು. ಪ್ಯಾರಿಸಿನ ವಿಶಾಲವಾದ ರಾಜಬೀದಿಯೊಂದರ ಮಗ್ಗುಲಿಗೆ ಮುಂದೇನು ಮಾಡಬೇಕೆಂದು ತಿಳಿಯದೆ ನಾವು ನಿಂತಿದ್ದೆವು. ವಿಕಾರಸ್ಥಳಗಳಿಂದ ಹೊರಬಂದ ಗುಂಪು ಕತ್ತಲಲ್ಲಿ ಮಾಯವಾಗುತ್ತಿತ್ತು. ಅಲ್ಲೊಂದು ಇಲ್ಲೊಂದು ದೂರದೂರವಲ್ಲಿರುವ ಬಾರುಕೆ ಹಾಕಿದ ದೀಪಗಳು, ಬೀದಿಯ ಮೇಲೆ ಮಂದಪ್ರಕಾಶವನ್ನು ಚೆಲ್ಲುತ್ತಿದ್ದು ಅದನ್ನು ಕತ್ತಲು ತೀವ್ರವೇ ನುಂಗುವಂತೆ ಭಾಸವಾಗುತ್ತಿತ್ತು. ರಾತ್ರಿಯು ಮಿನುಗುವ ಚಿಕ್ಕೆಗಣ್ಣುಗಳನ್ನು ಮುಚ್ಚಲೊ ತೆರೆಯಲೊ ಎಂದು ಅನುಮಾನಿಸುತ್ತಿರುವಂತೆ ತೋರಿತು ಹಿಂದಕ್ಕೆ ಆಕಾಶದಲ್ಲಿ ನಕ್ಷತ್ರಗಳಷ್ಟೇ ಇರುತ್ತಿದ್ದುವು ಈಗ ಪರ್ಚಲೈಟಿನ ವಿಸ್ತೃತ ಪ್ರಕಾಶಸಭವು ಬೈಪ್ಲಿಲ್ ವಿಮಾನದ ಸಿಗರೇಟಿನಂಥ ಮಂದಪ್ರಕಾಶಬಿಂದುವನ್ನೂ ಪ್ರಕಟಿಸುತ್ತಿತ್ತು.

ಇನ್ನಿಷ್ಟು ಹೆಚ್ಚು ಹೊತ್ತು ಎಲ್ಲಿಯಾದರೂ ಮನೋರಂಜನೆಯಲ್ಲಿ ಕಳೆಯಬೇಕೆಂದು ನಮ್ಮ ಬಯಕೆ. ನಾವು ಒಟ್ಟು ನಾಲ್ವರಿದ್ದೆವು; ಒಬ್ಬ ಫ್ರೆಂಚ್ ಬರೆಪಗಾರ, ಇಬ್ಬರು ಸರ್ಬಿಯನ್ ಕಪ್ತಾನರು ಮತ್ತು ನಾನು. ಎಲ್ಲ ಬಾಗಿಲುಗಳೂ ಮುಚ್ಚಿದ ಈ ಅಂಧಕಾರಮಯ ಪ್ಯಾರಿಸಿನಲ್ಲಿ ಎಲ್ಲಿ ಹೋಗಬೇಕು ? ಗಿರಾಕಿಗಳಿಗಾಗಿ ಇಡಿಯ ರಾತ್ರಿಯೆಲ್ಲ ತೆರೆದಿರುವ ಒಂದು ಫ್ಯಾಶನೇಬಲ್ ಹೊಟೆಲಿದೆಯೆಂದು ಆ ಸರ್ಬಿಯನ್ ಕಪ್ತಾನರಲ್ಲಿ ಒಬ್ಬನು ಸೂಚಿಸಿದನು ರಾತ್ರಿಯೆಲ್ಲ ವಿಹಾರದಲ್ಲಿ ಕಳೆಯಬೇಕೆಂದು ಬಯಸುವ ಮಿಲಿಟರಿ ಆಫೀಸರರು ಅದು ತಮ್ಮ ಸ್ವಂತದ ಮನೆಯೇ ಎಂಬಂತೆ ಅದರಲ್ಲಿ ಮೆಲ್ಲಗೆ ನುಸುಳುತ್ತಿದ್ದರು. ವಿಶ್ರಾಂತಿಗಾಗಿ ರಜೆಪಡೆದು ಪ್ಯಾರಿಸಿನಲ್ಲೆ ಕೆಲವು ದಿವಸ ಕಳೆಯಬೇಕೆಂದು ಹೊರಟು ನಿಂತಾಗ, ಈ ಔಪ್ಯವನ್ನು ಎಲ್ಲ ರಾಷ್ಟ್ರಗಳ ಸೈನಿಕಬಂಧುಗಳು ಒಬ್ಬರಿಗೊಬ್ಬರು ತಿಳಿಸುತ್ತಿದ್ದರು. 'ನಮ್ಮನ್ನು ಯಾರೂ ನೋಡುತ್ತಿರಲಿಕ್ಕಿಲ್ಲವಲ್ಲ' ಎಂದು ಜಾಗರೂಕತೆಯಿಂದ ಆ ಹೊಟೆಲನ್ನು ಪ್ರವೇಶಿಸಿದೆವು. ಕತ್ತಲೆ ಕವಿದಿರುವ ಬೀದಿಗೂ ಈ ಸ್ಥಳಕ್ಕೂ ಎಷ್ಟು ಅಂತರ! ವಿದ್ಯುದ್ದೀಪದ ಸೂರಾರು ಗುಚ್ಛಗಳು ಸೂರಾರು ಕನ್ನಡಿಗಳಲ್ಲಿ ಪ್ರತಿಬಿಂಬಿತವಾಗಿದ್ದುವು. ನಾವು ಎರಡು ವರ್ಷಗಳ ಹಿಂದಿನ ಕಾಲಾವಧಿಯಲ್ಲಿ ಕಾಲಿಟ್ಟಂತಾಯಿತು. ಝಗಿಮ್ಮುಗಿಸುವ ಸುಂದರ ಸ್ತ್ರೀಯರು, ಸೆರೆ ನರ್ತನಕ್ಕಾಗಿ ಆಹ್ವಾನವನ್ನೀಯುವ ಮೃದುಮಧುರ ತಂತುವಾದ್ಯಗಳು—ಇದೆಲ್ಲ ಯುದ್ಧಪೂರ್ವದ ದೃಶ್ಯವಾಗಿತ್ತು. ಆದರೆ ಪುರುಷರಲ್ಲಿ ಸಾಮಾನ್ಯವಾದ ಉಡುಪನ್ನು ಧರಿಸಿದವನು ಯಾವನೂ ಇರಲಿಲ್ಲ. ಫ್ರೆಂಚ್, ಬೆಲ್ಜಿಯನ್, ಇಂಗ್ಲಿಶ್, ರಶಿಯನ್, ಸರ್ಬಿಯನ್ ಎಲ್ಲರೂ ಹೊಲಸಾದ ಮಿಲಿಟರಿ ಸನುವಸ್ತ್ರವನ್ನು ಧರಿಸಿದವರೇ. ಮೊದಲು ಕಂಪುವಸ್ತ್ರವನ್ನು ಧರಿಸಿ ವಾದನಪಟುಗಳು ಕೂಡುತ್ತಿದ್ದ ಸ್ಥಳದಲ್ಲಿ. ಈಗ ಕೆಲವು ಬ್ರಿಟಿಶ್ ಸೈನಿಕರು ಕುಳಿತು ತಂತುವಾದ್ಯಗಳನ್ನು ಬಾರಿಸುತ್ತಿದ್ದರು ನರ್ತಕರ ಮೆಚ್ಚುಗೆಯನ್ನು ಮಂದಹಾಸದಿಂದ ಸ್ವೀಕರಿಸುತ್ತಿದ್ದರು. ಅವರಲ್ಲಿ ಒಬ್ಬನ ಕಡೆಗೆ ಸ್ತ್ರೀಯರು ಬೊಟ್ಟುಮಾಡಿ "ಅಗೋ ಆತನು ಕೋಟ್ಯಧೀಶನಾದ, ಪ್ರಸಿದ್ಧ ವಂಶದ ಲಾರ್ಡ್—ಇವನ ಮಗನು" ಎಂದು ಬೆರಗಿನಿಂದ ಉಸುರುತ್ತಿದ್ದರು. "ಮಿತ್ರರೆ, ಮೋಜಿನಿಂದ ರಾತ್ರಿಯನ್ನು ಕಳೆಯೋಣ, ನಾಳೆ ನಾವು ಸಾಯಬಹುದು!"

ಮರಣದೇವತೆಯ ಕುಂಡದಲ್ಲಿ ತಮ್ಮ ಆಯುಷ್ಯವನ್ನು ತೂರಲು ಸಿದ್ಧರಾದ ಈ ಪುರುಷರು ಜೀವನವನ್ನು ದೊಡ್ಡ ದೊಡ್ಡ ತುತ್ತಿನಲ್ಲಿ ಗಪಗಸ ನುಂಗುತ್ತಿದ್ದರು. ದಂಡೆಯ ಮೇಲೆ ಒಂದು ರಾತ್ರಿಯ ಮಟ್ಟಿಗೆ ಉಳಿದು, ಬೆಳಗು ಹರಿಯುತ್ತಲೇ ಪುನಃ ಬಿರುಗಾಳಿಯನ್ನು ಎದುರಿಸಲು ಹೊರಡಬೇಕಾದ ನಾವಿಕರಂತೆ ಇವರು ಉಚ್ಚಂ ಖಲ—ಉನ್ಮತ್ತ ಉತ್ಸಾಹದಿಂದ ನಗುತ್ತಿದ್ದರು, ಹಾಡುತ್ತಿದ್ದರು, ಪ್ರಣಯಕೇಳಿಯಲ್ಲಿ ತೊಡಗುತ್ತಿದ್ದರು.

ಆ ಇಬ್ಬರೂ ಸರ್ಬಿಯನರು ತರುಣರಿದ್ದರು. ಯುದ್ಧದ ಧಕ್ಕೆ ಮುಕ್ಕಿಯು ತಮ್ಮನ್ನು ಸುವರ್ಣ-ಸ್ವಪ್ನನಗರಿಯಾದ ಪ್ಯಾರಿಸಿಗೆ ತಂದುದು ಅವರಿಗೆ ಸಮಾಧಾನವನ್ನುಂಟು ಮಾಡಿದಂತೆ ತೋರಿತು. ತಮ್ಮ ದೇಶದಲ್ಲಿಯು ಒಂದು ವಿಕಾಕ—ಬೇಜಾರು ಬರುವ–ದುರ್ಗದಲ್ಲಿ ಕಾವಲಿದ್ದಾಗ, ಈ ಪಟ್ಟಣವು ಅವರ ಕನಸಿನಲ್ಲಿ ಎಷ್ಟೋ ಸಲ ಸುಳಿದಾಡಿತ್ತು. ಇಬ್ಬರಿಗೂ ಕಥೆಹೇಳುವ ಕಲೆಯು ಗೊತ್ತಿತ್ತು. ಸಾಮಾನ್ಯವಾಗಿ ಎಲ್ಲರೂ ಕವಿಗಳಾಗಿರುವ ಆ ನಾಡಿನಲ್ಲಿ ಇದೇನು ಅಷ್ಟು ದೊಡ್ಡ ವರವಲ್ಲ. ನೂರು ವರ್ಷದ ಹಿಂದೆ ಲಾಮರ್ಟಿನ್ ಎಂಬ ಗ್ರಂಥಕರ್ತನು, ಆಗ ಟರ್ಕಿಶ್ ಸಾಮ್ರಾಜ್ಯದ ಒಂದು ಭಾಗವಾಗಿದ್ದ ಆ ದೇಶವನ್ನು ದಾಟಿ ಹೋಗುವಾಗ, ಶೂರಯೋಧರು ಮತ್ತು ದನ-ಗಾಹಿಗಳು ವಾಸಿಸುವ ಆ ನಾಡಿನಲ್ಲಿ ಕವಿತೆಗೆ ಇದ್ದ ಮಹತ್ತ್ವವನ್ನು ಕಂಡು ಚಕಿತನಾಗಿದ್ದನು. ನಿರಕ್ಷರಕುಕ್ಷಿಗಳಿಂದ ತುಂಬಿದ ಅವರಲ್ಲಿ ವಿಚಾರಗಳು, ಹಿಂದಿನ ನೆನಹುಗಳು ಕವಿತೆಯ ಮುಖಾಂತರವೇ ಪರಂಪರಾಗತವಾಗಿ ಇಳಿದು ಬಂದಿದ್ದವು.

ಆ ಇಬ್ಬರೂ ಕಪ್ತಾನರು ಸೆರೆ ಕುಡಿಯುತ್ತ, ಕೆಲವು ತಿಂಗಳುಗಳ ಹಿಂದೆ ತಮ್ಮ ಸೆರೆವು ಹಿನ್ನಡೆಯುವಾಗ ಪಟ್ಟ ಕಷ್ಟ ಅನುಭವಗಳನ್ನು ಹೇಳಹತ್ತಿದರು. ಹತ್ತಾರು ವಿರುದ್ಧ ಒಬ್ಬನಂತೆ ನಡೆಸಿದ ಹಿಮದಲ್ಲಿಯ ಆ ಯುದ್ಧ; ಹಸಿವೆ-ಶೀತಗಳಿಂದ ಬಳಲುವುದು; ಅಂಜಿಕೆಯಿಂದ ಮನುಷ್ಯರು ಪ್ರಾಣಿಗಳು ಕೂಡಿಯೇ ಗೊಂದಲದಲ್ಲಿ ದಿಕ್ಕುಪಾಲಾಗಿ ಓಡುವುದು; ತಮ್ಮ ಹಿಂದೆ, ಮಶಿನ್‌ಗನ್ನು ಮತ್ತು ರೈಫಲ್‌ಗಳ ಅವಿರತ ಸಪ್ಪಳ; ಹಳ್ಳಿಗಳು ಉರಿಯುತ್ತಿರುವದು; ಆ ಉರಿಯಲ್ಲಿ ಗಾಯಾಳುಗಳ ಗೋಳಾಟ; ಅಂಗವಿಹೀನರಾದ ಅಬಲೆಯರು ಮತ್ತು ಅವರ ಮೇಲೆ ಹಾರಾಡುವ ಕಾಗೆಗಳು; ಅವರ ಮುದುಕ ಅರಸು ಪೀಟರ್ ಅರ್ಧಾಂಗವಾಯುವಿನಿಂದ ಪೀಡಿತನಾಗಿದ್ದರೂ, ಆ ಹಿಮಾಚ್ಛಾದಿತ ಒಂಡೆಗಲ್ಲುಗಳ ಮಧ್ಯದಲ್ಲಿ ಒಂದು ಕಟ್ಟಿಗೆಯ ಹೊರತು ಮತ್ತೇನೂ ಆಧಾರವಿಲ್ಲದೆ ಆಲೆಯುವ ರೀತಿ;—ಇದೆಲ್ಲವನ್ನೂ ಒಳ್ಳೇ ಚಿತ್ರವತ್ತಾಗಿ ವರ್ಣಿಸಿದರು. ಪ್ಯಾರಿಸಿನ ಈ ಹಾಟೆಲಿನಲ್ಲಿ ತಮ್ಮ ಅನುಭವಗಳನ್ನು ಹೇಳುತ್ತಿದ್ದ ಈ ಯುವಕರು ಕಲವೇ ದಿವಸಗಳ ಹಿಂದೆ ಮರಣದ ಜೊತೆಗೆ ಹೆಗಲಿಗೆ ಹೆಗಲು ಹಚ್ಚಿ ನಡೆದಿದ್ದರು. ಮಾನವ ಜನಾಂಗದ ನಿಷ್ಠುರ—ನಿಷ್ಕರುಣ—ವಿದಿದಶೆಯನ್ನು ದಾಟಿ ಪಾರಾಗಿ ಬಂದಿದ್ದರು.

ಇಷ್ಟು ಹೊತ್ತಿಗೆ ನಮ್ಮ ಫ್ರೆಂಚ್ ಗೆಳೆಯನು ಹೊಟೆಲ್ಲನ್ನು ತೊರೆದು ಹೋದನು ಆ ಸರ್ಬಿಯನ್ ಕಪ್ತಾನರಲ್ಲಿ ಒಬ್ಬನು ತನ್ನ ಕಥೆಯ ಜೊತೆಗೆ ಬಾಜುವಿನ ಟೇಬಲ್ಲಿನ ಕಡೆಗೆ ಕಟಾಕ್ಷಕ್ಷೇಪ ಮಾಡುತ್ತಿದ್ದನು. ಅಲ್ಲಿಂದ ಎರಡು ವಿಶಾಲ ಮದಾಲಸ ನೇತ್ರಗಳು ಇವನನ್ನು ಈಕ್ಷಿಸುತ್ತಿದ್ದುವು. ನಿಃಸಂಶಯವಾಗಿ ಇವನ ಲಕ್ಷ್ಯವನ್ನೆಲ್ಲ ಅವು ಸೆರೆಗೈದಿದ್ದುವು. ಕೊನೆಗೆ ಒಂದು ಅಪ್ರತಿರೋಧ ಶಕ್ತಿಯಿಂದ ಆಕರ್ಷಿತಪ್ಪಟ್ಟವನಂತೆ, ನಮ್ಮ ಟೇಬಲನ್ನು ತೊರೆದು ಆ ಬಾಜುವಿನ ಟೇಬಲ್ಲಿಗೆ ಹೋಗಿ ಕುಳಿತನು. ಮುಂದೆ ಸ್ವಲ್ಪ ಹೊತ್ತಿನಲ್ಲಿಯೇ ಅವನು ಮಾಯವಾದನು; ಮತ್ತು ಅವನ ಜೊತೆಗೆ ಆ ಎರಡೂ ಕಣ್ಣುಗಳೂ ಕಣ್ಮರೆಯಾದುವು.

ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ
ಕೊಡುತ್ತದೆ.

ನಾನು ಮತ್ತು ಆ ಕಪ್ತಾನರಲ್ಲಿ ಚಿಕ್ಕವನು ಇಬ್ಬರೇ ಉಳಿದೆವು. ಅವನು ಒಂದು ಬಾಟ್ಲಯನ್ನುಬರಿದು ಮಾಡಿದನು. ಗಡಿಯಾರದ ಕಡೆಗೆ ನೋಡಿದನು ಮತ್ತೊಂದು ಬಾಟ್ಲಯನ್ನು ಬರಿದು ಮಾಡಿದನು. ಒಂದು ರಹಸ್ಯವನ್ನು ಅರುಹಲು ಬಯಸುವವನಂತೆ ವಿಚಿತ್ರಕಟಾಕ್ಷದಿಂದ ನನ್ನೆಡೆಗೆ ನೋಡಿದನು. ಅಂತರಂಗದಲ್ಲಿ ಭಾರವಾಗಿ ಕುಳಿತು, ಸ್ಮೃತಿಯನ್ನು ಕೊರೆಯುವ ಯಾವುದೋ ಒಂದು ಕೊರಗನ್ನು ಸ್ನಿಗ್ಧ ಜನರಿಗೆ ಹೇಳಿ, ಸಹ್ಯವೇದನೆಯನ್ನಾಗಿ ಮಾಡಿಕೊಳ್ಳಬೇಕೆಂಬ ಅವಶ್ಯಕತೆಯನ್ನು ಅವನಲ್ಲಿ ನಾನು ಕಂಡೆನು. ಅವನು ಗಡಿಯಾರದ ಕಡೆಗೆ ಮತ್ತೊಮ್ಮೆ ನೋಡಿದನು. ಒಂದು ಹೊಡೆದಿತ್ತು.

" ಸರಿಯಾಗಿ ನಾಲ್ಕು ತಿಂಗಳ ಹಿಂದೆ, ಇದೇ ವೇಳೆಗೇ " ಎಂದು ಅವನು ಪ್ರಾರಂಭ ಮಾಡಿದನು.

ಅವನು ಆ ಕರುಣ ಕಥೆಯನ್ನು ಹೇಳುತ್ತ ಹೋದಂತೆ, ಆ ಅಂಧಕಾರಮಯ ರಾತ್ರಿ, ಆ ಹಿಮದಿಂದ ತುಂಬಿದ ಕೊಳ್ಳ, ಸೂಚೀಪರ್ಣ ವೃಕ್ಷಾಚ್ಛಾದಿತ ಆ ಪರ್ವತ, ಯುದ್ಧೋದ್ಧ್ವಸ್ತ ಒಂದು ಹಳ್ಳಿ, ಮತ್ತು ಆ ಭಗ್ನಮಂದಿರಗಳೊಳಗಿಂದ ಅಡ್ರಿಯಾಟಿಕ್ ಸಮುದ್ರದ

ಹಿನ್ನಡೆಯುತ್ತಿರುವ ಒಂದು ಸರ್ಬಿಯನ್ ಸೈನ್ಯದ ಅವಶೇಷ—ಳುವೂ ನನ್ನ ಕಣ್ಣಿಗೆ ದುರು ಕಟ್ಟಿದಂತಾದುವು.

ಈ ಕಪ್ತಾನನೇ ಆ ಸೈನ್ಯದ ಅಧಿಪತಿಯಾಗಿದ್ದನು. ಮೊದಲು ಒಂದು ಸುಸಜ್ಜಿತ ಸೈನ್ಯ, ಆದರೆ ಈಗ ಮಾತ್ರ ಅದೊಂದು ಜಾಗುಳಿ. ಸುತ್ತಲಿನ ನಿವಾಸಿಗಳೆಲ್ಲ ಬಂದು ಕೂಡಿ ಅದರ ಸೈಯನ್ನು ಹೆಚ್ಚಿಸಿದ್ದರು. ಅವರು ಭಯ ಮತ್ತು ಕಷ್ಟ ಪರಂಪರೆಯಿಂದ ತುಂಬ ವಿಹ್ವಲರಾಗಿದ್ದರು ಪಶುಗಳಂತೆ ಹೊಡೆದು ತನ್ನು ಮುಂದಕ್ಕೆ ಅಟ್ಟಬೇಕಾಗುತ್ತಿತ್ತು. ಚಿಕ್ಕ ಮಗುಗಳನ್ನು ದುಕೊಂಡು ಹೆಂಗುಸರು ನಡೆದಿದ್ದರು. ಈ ಒಜ್ಜೆ ಇಲ್ಲದ ಸ್ತ್ರೀಯರು ತ್ತಬಿದ್ದ ಸೈನಿಕರ ಬಂದೂಕು ಮತ್ತು ಕಾಡತೋಸಿನ ಸರಗಳನ್ನು ತ್ತಲು ಕಣ್ಣೀರಿನೊಂದಿಗೆ ಮೌನವಾಗಿ ಬಾಗುತ್ತಿದ್ದರು

ಆ ಹಳ್ಳಿಯ ಭಗ್ನಮಂದಿರಗಳಿಂದ ಹಾರಿಸಲ್ಪಟ್ಟ ಬಂದೂಕು-ಳ ದಟ್ಟವಾದ ಕಾಳಿಮೆಗೆ ಕೆಂಪು ಗೆರೆಯನ್ನು ಕೊರೆಯುತ್ತಿದ್ದುವು. ಯ ಗಭೀರ ಅಂತರಾಳದಿಂದ ಮರಣಾಂತಿಕ ಮಿಂಚುಗಳು ಯಾಗಿ ಉತ್ತರ ಕೊಡುತ್ತಿದ್ದುವು. ಆ ಅಂಧಕಾರದಲ್ಲಿ ಗುಂಡುಗಳು, ಯ ಅದೃಶ್ಯಹುಳುಗಳಂತೆ ಗುಂಯ್‌ಗುಡುತ್ತ ಹಾರಾಡು-ವು.

ಬೆಳಗಿನ ಕೂಡ ಅವರನ್ನು ನಿರ್ನಾಮ ಮಾಡುವ ಆಕ್ರಮಣವು ವುದು. ರಾತ್ರಿಯಲ್ಲಿ ಮೂರೂ ಬದಿಗಳಿಂದ ಬೆನ್ನಟ್ಟಿ ಬರುವ ಶತ್ರುವು ಯಾರು ಎಂಬುದು ತಿಳಿದಿರಲಿಲ್ಲ. ಅವರು ಜರ್ಮನರೋ, ಯನರೋ, ಬಲ್ಗೇರಿಯನರೋ, ಅಥವಾ ತುರ್ಕರೊ ?..... ನ್ನೆಲ್ಲ ಅವರು ಎದುರಿಸಬೇಕಾಗಿತ್ತು

" ನಾವು ಬಹಳ ಒತ್ತರದಿಂದ ಹಿನ್ನಡೆಯಬೇಕಾಗಿತ್ತು. ನಮ್ಮನ್ನು ಮಾಡಲು ಹಚ್ಚುವವರನ್ನೆಲ್ಲ ಹಿಂದೆ ಬಿಟ್ಟು, ಬೆಳಗಾಗುವಷ್ಟರಲ್ಲಿ ರ್ವತವನ್ನು ತಲುಪಬೇಕಾಗಿತ್ತು " ಎಂದು ಆ ಕಪ್ತಾನನು ಪ್ರಾರಂಭಿಸಿದನು.

ದೀರ್ಘವಾಗಿ ಸಾಲುಗೊಂಡು ಬರುವ ಹೆಂಗುಸರು, ಹುಡುಗರು, ಮುದುಕರು ಹಾಗೂ ಒಜ್ಜೆ ಹೊತ್ತ ಪಶುಗಳನ್ನು ರಾತ್ರಿಯು ನುಂಗಿ ರು ಕುಡಿದುಬಿಟ್ಟಿತು. ಆಗ ಆ ಹಳ್ಳಿಯಲ್ಲಿ ಉಳಿದವರೆಂದರೆ ನಲ ಸಶಕ್ತ ಸೈನಿಕರೇ. ಅವರು ಮುರುಕುಗೋಡೆಗಳ ಮರೆಗೆ ತು ಗುಂಡುಹಾರಿಸುತ್ತಿದ್ದರು. ಅವರಾದರೂ ತೀವ್ರವೇ ಆ ಳಿಯನ್ನು ತೊರೆಯಬೇಕಾಗಿತ್ತು.

ಒಮ್ಮೆಲೇ ಆ ಕಪ್ತಾನನಿಗೆ ನೆನಪಾಯಿತು : " ಗಾಯಾಳು. ಗಳ ಅವರನ್ನೇನು ಮಾಡಬೇಕು ? " ಗುಂಡುಗಳು ಅನೇಕ ತೂತು-ನ್ನು ಕೆಡಹಿದ ಚಪ್ಪರವುಳ್ಳ ಒಂದು ದನದ ಕೊಟ್ಟಿಗೆಯಲ್ಲಿ ಐವತ್ತ-ಂತ ಹೆಚ್ಚು ಗಾಯಾಳುಗಳನ್ನು ಹುಲ್ಲಿನ ಮೇಲೆ ಮಲಗಿಸಲಾಗಿತ್ತು. ವರಲ್ಲಿ ಕೆಲವರು ಯಾತನೆಯಿಂದ ಹೊರಳಾಡುತ್ತಿದ್ದರೆ, ಕೆಲವರು ರ್ಛೆ ಹೊಂದಿದ್ದರು. ಕೆಲವರು ಎಷ್ಟೋ ದಿವಸಗಳ ಹಿಂದೆ

ಮಕ್ಕಳ ಸದೃಢತೆ-ಗಾಗಿ

" ಬಗನ ಬಾಲಾ-ಮೃತ "

ಹಲ್ಲು ಬರುವಾಗ

" ಎಸ್ಸೆನ್ ಗ್ರಾಇಪ್ " ಹೀಲರ್

ಜಂತು ಆದರೆ

" ವರ್ಮ್ ಆಯಿಲ್ "

ಉಪಯೋಗಿಸಿರಿ. ಇವು ಪ್ರತಿಯೊಬ್ಬ ಕುಟುಂಬಸ್ಥರಿಗೆ ಉಪಯೋಗಬೀಳುವ ಔಷಧಗಳು

The National Pharmacies & Pharmaceuticals Ltd., Dharwar

ಗಾಯಗೊಂಡಿದ್ದು, ಅಲ್ಲಿಯ ವರೆಗೆ ಹೇಗೋ ತೊಳಲುತ್ತ ಬಳಲುತ್ತ ಬಿದ್ದಿದ್ದರು. ಮತ್ತೆ ಕೆಲವರಿಗೆ ಅದೇ ರಾತ್ರಿ ಗುಂಡು ತಗುಲಿದ್ದುವು.

ಕೊಳೆಯುವ ಮಾಂಸ, ಒಣಗಿದ ರಕ್ತ, ಹೊಲಸು ಆರಿವೆ, ಮತ್ತು ದುರ್ವಾಸನೆಯ ಉಸಿರಿನಿಂದ ಅಸಹ್ಯವಾದ ಈ ಆಶ್ರಯಸ್ಥಾನವನ್ನು ಆ ಕಪ್ತಾನನು ಪ್ರವೇಶಿಸಿದನು. ಅವನ ಬಾಯಿಂದ ಶಬ್ದ ಬರುತ್ತಲೇ, ಇನ್ನೂ ಅಲ್ಪ ಸ್ವಲ್ಪ ಸಾಮರ್ಥ್ಯ ಉಳಿದವರೆಲ್ಲ ಕಂದೀಲಿನ ಪ್ರಕಾಶದ ಸಮೀಪಕ್ಕೆ ಬಂದರು. ನರಳಾಟವು ನಿಂತಿತು. ಆ ಮರಣೋನ್ಮುಖ್ಖ ಮಾನವರೆಲ್ಲ ಮರಣಕ್ಕಿಂತಲೂ ಹೆಚ್ಚು ಭಯಾನಕವಾದುದನ್ನು ಎದುರಿಸಬೇಕಾಗಿ ಬಂದಿತಲ್ಲ—ಎಂಬಂತೆ ಹೆದರಿಕೆಯಿಂದ ಅವಾಕ್ಕಾದರು.

ಶತ್ರುಗಳ ಕರುಣೆಗೆ ಅವರನ್ನು ಬಿಟ್ಟು ಹೋಗಬೇಕಾಗುವುದು—ಎಂದು ಕೇಳಿದ ಕೂಡಲೆ, ಅವರೆಲ್ಲರೂ ಏಳಲು ಪ್ರಯತ್ನಿಸಿದರು; ಆದರೆ ಬಹುತರ ಎಲ್ಲರೂ ಪುನಃ ಕೆಳಗೆ ಬಿದ್ದರು.

ಕಪ್ತಾನ್ ಹಾಗೂ ಅವನ ಜೊತೆಗಿದ್ದ ಸೈನಿಕರತ್ತ, ತಮ್ಮನ್ನು ಹಾಗೆ ಬಿಟ್ಟು ಹೋಗಬೇಡಿರಿ—ಎಂದು ಎತ್ತಲೂ ಏಕಕಂಠದಿಂದ ವಿನಂತಿ-ಪ್ರಾರ್ಥನೆ-ಮೊರೆಗಳು ಮೊಳಗಹತ್ತಿದುವು.



" ಭಾಯಿ, ದೇವರಾಣೆ, ನಮ್ಮನ್ನು ತೊರೆಯಬೇಡಿರಿ "

ಅನಂತರ ತನ್ಮನ್ನು ತೊರೆಯಲೇ ಬೇಕಾಗಿ ಬಂದ ಅವಶ್ಯಕತೆಯ ಅರಿವು ಮೆಲ್ಲಗೆ ಅವರ ಮನದಲ್ಲಿ ಮೂಡಹತ್ತಿತು ಅದೃಷ್ಟದಲ್ಲಿದ್ದಂತೆ ಆಗುವುದೆಂದು ಸುಮ್ಮನಾದರು. ಆದರೆ ಶತ್ರುಗಳ ಕೈಯಲ್ಲಿ ಬೀಳುವುದೆಂದರೆ! ಅನೇಕ ಶತಮಾನಗಳಿಂದ ಬವ್ವೇರಿಗಳಾದ ಬಲ್ಗೇರಿಯನರ–ತುರ್ಕರ–ಕೈಯಲ್ಲಿ ಸಿಗುವುದೆಂದರೆ! ಯಾವುದನ್ನು ಉಸುರಲು ಅವರ ನಾಲಗೆಯು ಹೆದರುತ್ತಿತ್ತೊ ಅದನ್ನು ಅವರ ಕಣ್ಣುಗಳು ನುಡಿದುವು. ಸೆರೆ ಸಿಕ್ಕಾಗ ಸರ್ಬನಾಗಿರುವುದು ಘೋರ ಪಾತಕ! ಮರಣದ ಬಾಗಿಲಿಗೆ ತೀರ ಹತ್ತಿರವಿದ್ದವರೂ ಈ ವಿಚಾರದಿಂದ ಬೆಚ್ಚಿ ಬಿದ್ದರು. ಬಾಲ್ಕನ್ನರ ಸೇಡು ಭಯಾನಕವಾದುದು.

" ಭಾಯಿ, ಭಾಯಿ— "

ಈ ಕೂಗಿನಲ್ಲಿ ಅತಿಕರವಾದ ಇಚ್ಛೆಯನ್ನು ಬೂಹಿಸಿ, ಕಪ್ತಾನನು ತನ್ನ ದೃಷ್ಟಿಯನ್ನು ಬೇರೆಡೆಗೆ ಹೊರಳಿಸಿದನು.

" ಹಾಗಾದರೆ. ನಾನು ನಿಮ್ಮನ್ನು..... ..... ಎಂದು ಬಯಸುವೆನೊ ? " ಎಂದು ಅವನು ಅನೇಕ ಸಲ ತಡವರಿಸುತ್ತ ಪ್ರಶ್ನಿಸಿದನು. ಏನು ಎಂಬುದನ್ನು ಅವನ ನಾಲಗೆಯು ಉಚ್ಚರಿಸಲೊಲ್ಲದು.

ಎಲ್ಲರೂ ಹೌದೆಂದು ಗೋಣುಹಾಕಿದರು. ಹೀಗೆ ಅವರನ್ನು ತೊರೆದು ಹೋಗುವುದು ಅನಿವಾರ್ಯವೇ ಆದಲ್ಲಿ, ಒಬ್ಬ ಸರ್ಬನಾದರೂ ಜೀವಂತ ಬಿಟ್ಟು ಹೋಗತಕ್ಕದ್ದಲ್ಲ.

ಅವರ ಸ್ಥಳದಲ್ಲಿ ಅವನಿದ್ದರೆ, ತಾನೂ ಇದನ್ನೇ ಬೇಡುತ್ತಿರಲಿಲ್ಲವೇ ?

ಹಿನ್ನಡೆಯುವಾಗ ಅವರ ಹತ್ತಿರ ಕಾಡತೂಸು ಸಾಕಷ್ಟಿರಲಿಲ್ಲ. ಅವನ್ನು ಉಳಿಸುವುದು ಅತ್ಯಾವಶ್ಯಕವಿದ್ದಿತು. ಕಪ್ತಾನನು ಒರೆಯಿಂದ ತನ್ನ ಕತ್ತಿಯನ್ನು ಹಿರಿದನು. ಇಷ್ಟರಲ್ಲಿ ಅವನ ಸಂಗಡವಿದ್ದ ಸೈನಿಕರು ಬಂದೂಕಿನ ಸಂಗಿನಿಯಿಂದ ತಮ್ಮ ಕಾರ್ಯವನ್ನು ಸುರುವು ಮಾಡಿದ್ದರು. ಆದರೆ, ಅದು ನೀಟಾಗಿ ನಡೆಯದೆ. ಅಸ್ತವ್ಯಸ್ತವಾಗಿ ಸಾಗಿದ್ದಿತು. ಎತ್ತ ಬೇಕಾದತ್ತ ತಿವಿತ-ಹೊಡೆತಗಳಿಂದ ರಕ್ತದ ಪ್ರವಾಹವೇ ಹರಿಯಹತ್ತಿತು; ಅಸಹ್ಯ ಯಾತನೆಗೂ ಕಾರಣವಾಯಿತು.

ಇದನ್ನು ಕಂಡು ಆ ಗಾಯಾಳುಗಳೆಲ್ಲ ಕಪ್ತಾನನನ್ನೇ ಮುಕುರಿದರು ಉಚ್ಚಾಧಿಕಾರಿಯಾದ ಅವನ ಕೈಯಿಂದ ಮರಣವು ಅವರಿಗೆ ಗೌರವವೆನಿಸಿತು. ಮತ್ತು ಅವನ ಕೌಶಲ್ಯದ ಮೂಲಕ ಅಷ್ಟು ವೇದನೆಯನ್ನು ಉಂಟು ಮಾಡುತ್ತಿರಲಿಲ್ಲ.

" ಇಕೊ, ಭಾಯಿ ನನ್ನನ್ನು, ನನ್ನನ್ನು !..... "

ತನ್ನ ಖಡ್ಗದ ಧಾರೆಯನ್ನು ಅವರ ಕುತ್ತಿಗೆಯಲ್ಲಿ ತಿವಿದು ಒಂದೇ ಹೊಡೆತದಿಂದ ನಾಡಿಯನ್ನು ಕತ್ತರಿಸುತ್ತಿದ್ದನು.

" ಕಟ್, ಕಟ್ " ಎನ್ನುತ್ತ ಆ ಕಪ್ತಾನನು ಆ ಭಯಂಕರ ದೃಶ್ಯವನ್ನು ನನ್ನ ಕಣ್ಣೆದುರು ಕಟ್ಟಿದನು.

ಹಸ್ತ - ಪಾದಗಳ ಮೇಲೆ ಸವರುತ್ತ, ಅವನನ್ನು ಮುತ್ತಿದ್ದ ಕತ್ತಲೊಳಗಿಂದ ಕೀಟಕಗಳು ಮುಕುರುವಂತೆ ಅವನ ಪಾದದ ಮೇಲೆ ಬಂದು ಬಂದು ಬಿದ್ದರು. ತಾನು ಗೈಯ್ಯುತ್ತಿರುವುದನ್ನು ನೋಡಲಾರದೆ ಮೊದಲು ಮೊದಲು ಅವನು ತನ್ನ ನೋರೆಯನ್ನು ಎರಡನೆಯ ಕಡೆ ತಿರುವಿದನು. ಕಣ್ಣಲ್ಲಿ ನೀರು ತುಂಬಿತು. ಆದರೆ ಆ ದೌರ್ಬಲ್ಯದ ಪರಿಣಾಮವಾಗಿ ಅವನ ಹೊಡೆತಗಳು ಸರಿಯಾಗಿ ಬೀಳುತ್ತಿರಲಿಲ್ಲ. ಪುನಃಪುನಃ ಹೊಡೆದು ಅವರ ನೋವನ್ನು ಹೆಚ್ಚಿಸಬೇಕಾಯಿತು. ಇದನ್ನು ನೋಡಿ ಮನಸ್ಸು ಗಟ್ಟಿಮಾಡಿ, ಕಲ್ಲೆದೆಯವನಾಗಿ, ನಡುಗುವ ಕೈಯಿಂದ ಕೆಲಸ ಸಾಗಿಸಿದನು. " ಕಟ್ ಕಟ್, ಕಟ್ ಕಟ್ "

" ಭಾಯಿ, ಇಕೊ ನನ್ನನ್ನು, ಇಕೊ ನನ್ನನ್ನು ! "

'ನಾನು ಮೊದಲು, ನಾನು ಮೊದಲು' ಎಂದು ಪಾಳಿಪಾಳಿಯಲುವಾಗಿ ಅವರಲ್ಲಿ ಬಡಿದಾಟ ನಡೆದಿತ್ತು. ಈ ಬಾಂಧುಭಾವದ ದಯಾಮಯ ಯಜ್ಞವು ಮುಗಿಯುವುದರೊಳಗಾಗಿ ಶತ್ರುಗಳು ಬರಬಹುದೆಂದು ಅವರು ಹೆದರಿದ್ದರೇನೊ! ಈ ಪರಿಸ್ಥಿತಿಯಲ್ಲಿ ಯಾವುದೂ ಒಳ್ಳೆಯದೆಂಬುದು ಅವಂಗೆ ತಾನಾಗಿಯೇ ಹೊಳೆದಿತ್ತು. ಕತ್ತಿ ಹೊಡೆತಕ್ಕಾಗಿ ಕುತ್ತಿಗೆಯ ಶಿರವು ಎದ್ದು ಕಾಣುವಂತೆ ಪ್ರತಿಯೊಬ್ಬನು ಅದನ್ನು ಒತ್ತಟ್ಟಿಗೆ ಹೊರಳಿಸಿ ನಿಶ್ಚಲನಾಗಿ ನಿಲ್ಲುತ್ತಿದ್ದನು.

"ಭಾಯಿ, ಇಕೊ ನನ್ನನ್ನು!" ರಕ್ತದ ಕಾರಂಜಿಯು ಪುಟಿಯುತ್ತಲೇ, ಮತ್ತೊಬ್ಬನು ಆ ಹೆಣಗಳ ರಾಶಿಯ ಮೇಲೆ ಬೀಳುತ್ತಿದ್ದ. ಅವೆಲ್ಲ ಕೆಂಪು ಸೆರೆಯ ತೊಗಲಿನ ಚೀಲಗಳಂತೆ ಸಾವಕಾಶವಾಗಿ ಖಾಲಿಯಾಗುತ್ತಿದ್ದುವು.

ಹೊಟೇಲು ಬರಿಯದಾಗಹತ್ತಿತು. ಸೈನಿಕರ ಕೈಯಲ್ಲಿ ಪಾಕಿಕೊಂಡು, ಸುಗಂಧ ವಾಸನೆಯನ್ನು ಹಿಂದೆ ಬಿಡುತ್ತ ಲಲನೆಯರ ತೆರಳಹತ್ತಿದರು. ಉಲ್ಲಾಸದ ಕಿಲಕಿಲಾಟದ ಮಧ್ಯದಲ್ಲಿ ತಂತಿವಾದ್ಯಗಳು ಕೊನೆಯ ಪಲ್ಲವಿಯನ್ನು ಉಸುರಿದುವು.

ಆ ಸರ್ಬನ ಕೈಯಲ್ಲಿ ಒಂದು ಕೆನೆಯ ಬಣ್ಣದ ಚಿಕ್ಕ ಕಾಗದ ಇತ್ತು. ಅದರಿಂದ ಅವನು ಆ ಮೇಜಿನ ಮೇಲೆ ಯಾಂತ್ರಿಕವಾಗಿ ಸಪ್ಪಳ ಮಾಡಹತ್ತಿದನು. ಎಂದೂ ಮರೆಯದ, ಮರೆಯಲು ಸಾಧ್ಯವಿಲ್ಲದ ಆ ಸಪ್ಪಳವನ್ನು " ಕಟ್, ಕಟ್.... ಕಟ್, ಕಟ್ " ಎಂ

[" ಇಟ್ಯಾನೆಸ್ಕು " ಅವರ ಒಂದು ಸ್ಪ್ಯಾನಿಶ್ ಕತೆಯ ಅನುವಾದ

ಬೌದ್ಧಧರ್ಮದ ಹನ್ನೆರಡು ತತ್ತ್ವಗಳು

ಡಾ. ಸರೋಜಿನಿ ಮಹಿಷಿ, ಎಂ. ಎ. ಬೆಳಗಾಂವಿ

ಬೌದ್ಧಧರ್ಮವು ಇಂದು ಜಗತ್ತಿನ ಮೂರರಲ್ಲೊಂದು ಭಾಗಕ್ಕಿಂತ ಹೆಚ್ಚಿನ ಪ್ರದೇಶದಲ್ಲಿ ಹರಡಿ ನಿಂತಿದೆ. ಬುದ್ಧಿಗಮ್ಯವಾದ ಅದರ ತತ್ತ್ವಜ್ಞಾನವು ಎಲ್ಲರ ಮನಸ್ಸು-ಬುದ್ಧಿ-ವ್ಯವಹಾರಗಳಿಗೂ ಒಪ್ಪಿಗೆಯೆನಿಸುವಂತಹದಾಗಿದೆ. ವ್ಯಕ್ತಿಯ ಆತ್ಮವಿಕಾಸ, ಸಮಾಜದ ಸುಖ-ಶಾಂತಿ-ಇವೇ ಬೌದ್ಧಧರ್ಮದ ಆದರ್ಶಗಳು!

ಎರಡುವರೆ ಸಾವಿರ ವರ್ಷಗಳಿಂದಲೂ ಚೀನ, ಜಪಾನ, ಕಾಂಬೋಡಿಯಾ, ಸಿಲೋನ್, ಬರ್ಮಾ, ಸಿಕಿಂ, ಇಂಗ್ಲಂಡುಗಳಲ್ಲಿ ಪ್ರಚಾರದಲ್ಲಿರುವ ಬೌದ್ಧಧರ್ಮವು ಜನಪ್ರಿಯವಾಗಿರುವುದು, ಅದರ ಲ್ಲಡಗಿದ ಚಿರುತನ ಸತ್ಯದಿಂದಲೇ. ವಿದ್ವಾಂಸರಾದಂತಹ ಅನೇಕ ವಿದೇಶೀಯರು, ಧರ್ಮಕೇಂದ್ರಗಳನ್ನು ಸ್ಥಾಪಿಸಿ, ಸಂಘಗಳನ್ನು ಕಟ್ಟಿ, ಸಾಹಿತ್ಯರಚನೆ ಮಾಡಿ, ಈ ಸತ್ಯದ ಪ್ರಸಾರಕ್ಕಾಗಿ ಪರಿಶ್ರಮಿಸುತ್ತಿದ್ದಾರೆ. ತಂತಹ ಧರ್ಮದ ಪ್ರಸಾರಕನು ಜನ್ಮತಾಳಿದ್ದು, ಬುದ್ಧನಾದದ್ದು, ಭಾರತದಲ್ಲಿ. ಬುದ್ಧನ ಜನ್ಮವಾದೆಡೆಯಲ್ಲಿ ಅಶೋಕನು ಚಿರಸ್ಥಾಯಿಯಾದ ಸ್ತಂಭವನ್ನು ನಿಲ್ಲಿಸಿದ್ದಾನೆ!.....ಸದ್ಯ ಸ್ವತಂತ್ರ ಭಾರತದಲ್ಲಿ ಬೌದ್ಧರ ಪ್ರಮುಖ ಕೇಂದ್ರವಾಗಿದ್ದ ಸಾಂಚಿಯಲ್ಲಿ ದೊರೆತ ಅವಶೇಷಗಳನ್ನು ಬೆಳಕಿಗೆ ತರಲಾಗುತ್ತಿದೆ ಡಾ. ಅಂಬೇಡಕರರು ಬೆಂಗಳೂರಿನ 'ಭಾರತೀಯ ವಿಜ್ಞಾನಮಂದಿರ'ದ ಬಳಿ, ಬೌದ್ಧಧರ್ಮದ ತತ್ತ್ವಪ್ರಸಾರಕ್ಕಾಗಿ ಕಟ್ಟಡವೊಂದನ್ನು ಕಟ್ಟುವ ಯೋಚನೆಯಲ್ಲಿ ಇದ್ದಾರೆ. ಬ್ರಹ್ಮದೇಶದ ಬೌದ್ಧರು ಅದಕ್ಕೆ ಮನವಾರೆ ಸಹಾಯ ಸಲ್ಲಿಸುವುದಾಗಿ ವಚನವಿತ್ತಿದ್ದಾರೆ! ಇದರಿಂದ ಅವಶೇಷಗಳೊಂದಿಗೆ ತತ್ತ್ವಗಳೂ ಬೆಳಕಿಗೆ ಬರಬಹುದು. ಬೌದ್ಧಧರ್ಮದ ಪ್ರಧಾನ ತತ್ತ್ವಗಳು ಇಂತಿವೆ. —

(೧) ಪ್ರತಿಯೊಬ್ಬ ಮನುಷ್ಯನಿಗೂ ತನ್ನ ಮುಕ್ತಿಯೇ ಅತ್ಯಂತಿಕ ಕರ್ತವ್ಯ. ವಿಷಯುಕ್ತ ಬಾಣಗಳು ಮನುಷ್ಯನ ಹೃದಯದಲ್ಲಿ ಒಳಸೇರಿದ್ದರೆ, ಅವುಗಳನ್ನು ತತ್‌ಕ್ಷಣ ಕಿತ್ತು ಬಿಸುಟುವುದನ್ನು ಬಿಟ್ಟು 'ಈ ಬಾಣ ಬಿಟ್ಟವರು ಯಾರು? ಬಾಣವನ್ನು ಎಲ್ಲ ನೂಡಲಾಗಿದೆ? ಅದರ ಉದ್ದಳತೆಯೆಷ್ಟು?' ಎಂದು ಕೇಳುವುದರಲ್ಲಿ ವಿಳಂಬ ಮಾಡಬಹುದೇ? ಎಷ್ಟು ಕೇಳಿದರೂ ತೀರದ ಉಪದೇಶ, ದಾರಿಯುದ್ದಕ್ಕೂ ಇದ್ದೇ ಇದೆ. ಅದರ ನಡುವೆ ಪ್ರತ್ಯಕ್ಷವಾದ ನಿನ್ನ ಅನುಭವದಿಂದ ವಿದ್ಯೆ ಗಳಿಸು. ಜೀವನವನ್ನು ಇದ್ದಂತೆ ಎದುರಿಸಲು ಸಿದ್ಧನಾಗು.

(೨) ಕ್ಷಣಕ್ಷಣಕ್ಕೂ ವ್ಯತ್ಯಾಸ ಹೊಂದುವ ಅಥವಾ ಅಸ್ಥಿರತೆಯು ನಿಸರ್ಗ ನಿಯಮವೇ ಅಸ್ತಿತ್ವದ ಲಕ್ಷಣ! ಇರುವುದೆಲ್ಲವೂ—ಅಣುವಿರಲಿ ಪರ್ವತವಿರಲಿ, ವಿಚಾರವಿರಲಿ ಸಾಮ್ರಾಜ್ಯವಿರಲಿ.—ಜನ್ಮ-ವಿಕಾಸ, ಕ್ಷಯ, ಮೃತ್ಯುಗಳ ಚಕ್ರದಲ್ಲಿ ಸಂತತವೂ ತಿರುಗುತ್ತಲೇ ಇರುತ್ತದೆ! ಜೀವ ಮಾತ್ರ ಹೊಸರೂಪಗಳಲ್ಲಿ ಅಭಿವ್ಯಕ್ತವಾಗುತ್ತ ಮುಂದುವರಿಯುತ್ತದೆ. ಅದಕ್ಕಾಗಿ 'ಜೀವನವು ಒಂದು ಸೇತುವೆ ಅದರ ಮೇಲೆ ಮನೆಯನ್ನು ಕಟ್ಟಬಹುದೇ? ಅದೊಂದು ಅವ್ಯಾಹತ ಪ್ರವಾಹ. ಎಷ್ಟೇ ಸುಂದರವಾಗಿದ್ದರೂ ಅದರ ಮಧ್ಯೆ ಸಿಲುಕಿ ಪ್ರವಾಹದ ವಿರುದ್ಧ ಹೋರಾಡಬಹುದೇ?

(೩) ವ್ಯತ್ಯಾಸದ ನಿಸರ್ಗನಿಯಮ ಆತ್ಮಕ್ಕೂ ಅನ್ವಯಿಸುತ್ತದೆ. ವ್ಯಕ್ತಿಯಲ್ಲಿ ಶಾಶ್ವತವಾದ ಯಾವ ತತ್ತ್ವವೂ ಇಲ್ಲ. ಅನಾಮಧ್ಯೇಯವಾದ ಅನಂತಸತ್ಯ ಮಾತ್ರ ವ್ಯತ್ಯಾಸಕ್ಕೆ ದೂರವಾಗಿದೆ. ಮನುಷ್ಯನನ್ನೊಳಗೊಂಡು ಜೀವನ ವಿವಿಧರೂಪಗಳೆಲ್ಲವೂ ಈ ಸತ್ಯದ ಅಭಿವ್ಯಕ್ತಿ! ಒಳಗೆ ಅಖಂಡವಾಗಿ ಹರಿಯುವ ಜೀವ ಯಾರ ಸಂಪತ್ತು? ವಿದ್ಯುದ್ದೀಪದ ಗುಂಡ ಗಾಜು ವಿದ್ಯುತ್‌ಪ್ರವಾಹವನ್ನು ತನ್ನ ಸಂಪತ್ತೆಂದು ಕರೆಯಬಹುದೇ?

(೪) ವಿಶ್ವವು ನೈಸರ್ಗಿಕ ನಿಯಮಗಳ ಅಭಿವ್ಯಕ್ತಿ; ಪ್ರತಿಯೊಂದು ಕಾರ್ಯಕ್ಕೂ ಹಿಂದೆ ಕಾರಣವಿದ್ದಂತೆ, ಮನುಷ್ಯನ ಆತ್ಮವೂ ಅವನ ಹಿಂದಣ ಜನ್ಮಗಳ ಕರ್ಮಪರಿಪಾಕ! ಕ್ರಿಯೆ ಪ್ರತಿಕ್ರಿಯೆಗಳ ಪ್ರಧಾನವಾದ ಕರ್ಮವು ಅಸ್ತಿತ್ವವುಳ್ಳ ಯಾವ ವಸ್ತುವನ್ನೂ ಬಿಟ್ಟೆಲ್ಲ ತನ್ನದೇ ಆದ ಪರಿಸರವನ್ನು ನಿರ್ಮಿಸಿ, ಪ್ರತಿಕ್ರಿಯೆಯನ್ನು ತೋರಿಸಿ ಭವಿಷ್ಯವನ್ನು ರಚಿಸಿ, ಹಣೆಯ ಬರಹವನ್ನೇ ಬರೆಯುವ ಶಕ್ತಿ ಮಾನವನಲ್ಲದೆ! ಸಮ್ಯಕ್ ವಿಚಾರ-ಆಚಾರಗಳಿಂದ ಅವನು ತನ್ನ ಅಂತಃಕರಣವನ್ನು ಶುದ್ಧವಾಗಿಡಬಲ್ಲನು. ಅಂತೆಯೆ ಕ್ರಮವಾಗಿ ಆತ್ಮನನ್ನರಿತು ಜನ್ಮ-ಮರಣಗಳ ಜಂಜಡದಿಂದ ಮುಕ್ತಿಯನ್ನೂ ಪಡೆಯಬಲ್ಲನು! ಆದರೆ ಇದಕ್ಕೆ ಬೇಕಾಗುವ ಅವಧಿ ಬಹಳ! ಭೂಮಿಯ ಮೇಲೆ ಜನ್ಮ-ಜನ್ಮಗಳನ್ನೂ ಅದು ಒಳಕೊಂಡಿರಬಹುದು. ಅದರೂ ಕೊನೆಗೆ ಪ್ರತಿಜೀವಿಯೂ 'ಬುದ್ಧಾವಸ್ಥೆ'ಯನ್ನು ಪಡೆಯಬಲ್ಲನು.

(೫) ಜೀವವು ಏಕ ಮತ್ತು ಅಖಂಡ! ಅದರ ಅಭಿವ್ಯಕ್ತಿಯ ವಿವಿಧರೂಪಗಳು ಮಾತ್ರ ಅಸಂಖ್ಯ ಮತ್ತು ನಶ್ವರ! ಪ್ರತಿಯೊಂದು ರೂಪವು ನಷ್ಟಹೊಂದುವುವಾದರೂ, ಮೃತ್ಯುವೆಂಬುದು ನಿಜವಲ್ಲ. ಜೀವದ ಏಕತ್ವವನ್ನರಿತರೆ ದಯೆಯಾಗಲಿ, ಇನ್ನೊಂದು ಜೀವದೊಡನೆ ಸಾಮರಸ್ಯವಾಗಲಿ ತನಗೆ ತಾನೇ ರೂಪುಗೊಳ್ಳುವುವು. ದಯೆ, ನಿಯಮಗಳ ಅಧಿದೇವತೆ, ಚಿರಂತನ ಸಾಮರಸ್ಯದ ಪ್ರತೀಕ! ಜೀವದ ಈ ಸಾಮರಸ್ಯಕ್ಕೆ ಭಂಗತಂದವನು ದುಃಖವನ್ನನುಭವಿಸಲೇಕಾಗುತ್ತದೆ. ಅದರಂತೆ 'ಬುದ್ಧ'ನಾಗಲೂ ವಿಳಂಬವಾಗುತ್ತದೆ.

(೬) ಜೀವನ ಅಖಂಡ: ಬಳಿಕ ಅದರ ಒಂದೊಂದು ಭಾಗದ ಹಿತವೂ, ಜೀವನದ ಹಿತಸಾಧನೆಯಾಗಬೇಕು. ಅಜ್ಞಾನದಲ್ಲಿ ಮನುಷ್ಯನು ತನ್ನೊಬ್ಬನ ಹಿತಸಾಧನೆಯನ್ನು ತಾನು ಯಶಸ್ವಿಯಾಗಿ ಮಾಡಿಕೊಳ್ಳಬಲ್ಲೆನೆಂದು ತಿಳಿಯುತ್ತಾನೆ. ಮಾರ್ಗತಪ್ಪಿ ಹೊರಟ ಅವನ ಈ ಶಕ್ತಿ ಸ್ವಾರ್ಥವನ್ನೂ ದುಃಖವನ್ನೂ ತಂದೊಡ್ಡುತ್ತದೆ. ದುಃಖಾನುಭವದಿಂದಲೇ ಅವನು ದುಃಖದ ಕಾರಣವನ್ನು ನಿವಾರಿಸಲು ಸಮರ್ಥನಾಗುತ್ತಾನೆ ಭಗವಾನ್ ಬುದ್ಧನು ವೈದ್ಯಶಾಸ್ತ್ರದ ನಾಲ್ಕು ರೂಪುಗಳನ್ನು ವಿವರಿಸಿದನು: (ಅ) ದುಃಖದ ಸರ್ವವ್ಯಾಪಕತೆ (ಬ) ಅದರ ಕಾರಣ, ಮತ್ತು ಮಾರ್ಗದಲ್ಲಿದ ಇಚ್ಛೆ (ಕ) ನಿವಾರಣೋಪಾಯ ಕಾರಣವನ್ನು ದೂರ ಸರಿಸುವುದು (ಡ) ದುಃಖವನ್ನು ನಾಶಗೊಳಿಸುವ ಶಾಶ್ವತ ವಿಕಾಸದ ಅಷ್ಟವಿಧ ಮಾರ್ಗ!

(೭) ನೀವದಲು ಸರಿಯಾಗಿ ತಿಳಿಯುವಲ್ಲಿ, ಸಮ್ಯಕ್ ಉದ್ದೇಶದಲ್ಲಿ, ಸಮ್ಯಗ್‌ವಾಣಿಯಲ್ಲಿ, ಸಮ್ಯಗ್‌ಜೀವದಲ್ಲಿ ಸಮ್ಯಕ್‌ವೃತ್ತಿ, ಸಮ್ಯಕ್‌ಪ್ರಯತ್ನ, ಸಮ್ಯಕ್‌ನಿಷ್ಠೆ, ಸಮ್ಯಕ್‌ಸಮಾಧಿಗಳಲ್ಲಿ ಅಂತಹ ಅಷ್ಟವಿಧ ಮಾರ್ಗವಡಗಿದೆ. ಅದೇ "ಬುದ್ಧತ್ವ"ವನ್ನು ತಿಳಿಸಿಕೊಡುವುದು. ಬೌದ್ಧ ಧರ್ಮದ ತತ್ತ್ವಗಳು ಕೇವಲ ಪುಸ್ತಕಕ್ಕಾಗಿಯಿಲ್ಲ. ಪ್ರತ್ಯಕ್ಷ ಜೀವನಕ್ಕಾಗಿ—ಇವೆ: ಅದಕ್ಕಾಗಿ ಅಷ್ಟವಿಧ ಮಾರ್ಗದ ಅತ್ಯಂತತ್ವವನ್ನರಿಯಲು ಅವಶ್ಯಕ. "ಅನಿಷ್ಟವನ್ನು ನಿಲ್ಲಿಸಿ; ಎಲ್ಲರ ಹಿತವನ್ನು ಸಾಧಿಸಿ, ನಿಮ್ಮ ಹೃದಯವನ್ನು ನಿರ್ಮಲವಾಗಿಟ್ಟುಕೊಳ್ಳಿ" ಇದೇ ಬುದ್ಧರು ಹೇಳುವ ಮಾತು!

(೮) ಅನಂತಸತ್ಯವು ಅನಿರ್ವಚನೀಯ! ಸಗುಣದೇವನೇ ಅನಂತಸತ್ಯನಲ್ಲ. ಇನ್ನು ಮನುಷ್ಯನೇ 'ಬುದ್ಧ'ನಾದನು; 'ಬುದ್ಧ'ನಾಗಬಲ್ಲನು! 'ಬುದ್ಧತ್ವ' ಪ್ರಾಪ್ತಿಯೇ ಮನುಷ್ಯಜೀವನದ ಗುರಿ! ಪೂರ್ಣ ಚೈತನ್ಯಾವಸ್ಥೆಯೇ ನಿರ್ವಾಣ, ಸಂಕುಚಿತವಾದ ಆತ್ಮನ ಮೂರ್ಖಾದಿತ ರೂಪವಿನಾಶ! ಇದನ್ನು ಪೃಥ್ವಿಯ ಮೇಲೆಯೇ ಪಡೆಯಬಹುದು. 'ಬುದ್ಧನಾಗುವ ಶಕ್ತಿ ಎಲ್ಲ ಮನುಷ್ಯರಲ್ಲಿಯೂ ಹುದುಗಿದೆ: ಜೀವದ ಎಲ್ಲ ರೂಪಗಳಲ್ಲಿಯೂ ಅಡಗಿದೆ. ಈ ಶಕ್ತಿಯನ್ನು ಮತ್ತೆ ಬೆಳಕಿಗೆ ತರುವುದೇ ಬುದ್ಧರ ಮಾರ್ಗ! "ನಿನ್ನ ಅಂತರಾಳದಲ್ಲಿ ಇಣಿಕಿ ನೋಡು. ನೀನೇ ಬುದ್ಧನಾಗಿರುವಿ"

(೯) ಈ ಶಕ್ತಿವಿಕಾಸದ ಪ್ರಾರಂಭದಿಂದ ಬುದ್ಧತ್ವ ಪ್ರಾಪ್ತಿಯವರೆಗಿನ ಮಾರ್ಗದಲ್ಲಿ ಅಷ್ಟವಿಧ ಮಾರ್ಗವಿದೆ:—'ಇಚ್ಛೆ'ಯಿಂದ 'ಶಾಂತಿ'ಯ ವರೆಗೆ. ದ್ವಂದ್ವಗಳ ಮಧ್ಯೆ ಅಡಗಿರುವ ಆತ್ಮವಿಕಾಸದ ಮಾರ್ಗ! ಕೊನೆಯವರೆಗೂ ಭಗವಾನ್ ಬುದ್ಧನ ಮಾರ್ಗವು ಇದೇ ಆಗಿತ್ತು! ನಮ್ಮ ಮಾರ್ಗದರ್ಶಕನು ಹಿಡಿದ ಮಾರ್ಗವನ್ನು ನಾವೂ ಹಿಡಿಯಬೇಕೆನ್ನುವ ವಿಶ್ವಾಸ ನಮ್ಮೆಲ್ಲರ ಮುಖ್ಯ! ಆ ಮಾರ್ಗವನ್ನು ಕಾಯಾ–ವಾಚಾ–ಮನಸಾ ಅನುಸರಿಸಬೇಕು; ಹೃದಯ ಬುದ್ಧಿ ಒಪ್ಪಿ ವಿಕಾಸ ಹೊಂದಿರಬೇಕು! ಭಗವಾನ್ ಬುದ್ಧನು ದಯೆಯ ಮೂರ್ತಿ. ಅರಿವಿನ ರೂಪು!

(೧೦) ಅಂತರಂಗದ ನಿಷ್ಠೆ ಮತ್ತು ಧ್ಯಾನಕ್ಕೆ ಬೌದ್ಧಧರ್ಮವು ಹೆಚ್ಚು ಮಹತ್ತ್ವವನ್ನು ಕೊಡುತ್ತದೆ. ಅಂತರಂಗದ ಆಧ್ಯಾತ್ಮಿಕ ಶಕ್ತಿ ಕವಲೊಡೆಯಲು ಇದೇ ಸಹಾಯಕಾರಿ! ನಿತ್ಯ ನಡೆದಾಟದಲ್ಲಿಯೇ ಈ ಭಾವನಾಜೀವನವೂ ಮಹತ್ತ್ವಪೂರ್ಣವಾದುದು. ಅಂತರಂಗದ ವಿಕಾಸಕ್ಕಿರುವ ಮೌನದ ಅವಧಿ ಜೀವನವನ್ನು ಒಂದೇ ಪಾತಳಿಯಲ್ಲಿರಿಸಬಲ್ಲದು. ಬೌದ್ಧಧರ್ಮದ ಅನುಯಾಯಿ ಯಾವಾವಾಗಲೂ ತನ್ನನ್ನು ತಾನು ಅರಿತುಕೊಳ್ಳುವ ಸ್ಥಿತಿಯಲ್ಲಿರಬೇಕು ಆಡಂಬರದ ಪ್ರದರ್ಶನವನ್ನು ಅವರು ಮನಸ್ಸಿನಲ್ಲಿಯೂ ಮೆಚ್ಚಬಾರದು. ತಾನೇ ನಿರ್ಮಿಸಿದ ಪಂಸರವನ್ನು ಸೂಕ್ಷ್ಮವಾಗಿ ಅವಲೋಕಿಸುವುದು, ಅದರ ಪ್ರತಿಕ್ರಿಯೆಯನ್ನು ಹಿಡಿತದಲ್ಲಿಟ್ಟುಕೊಳ್ಳಲು ಅನುಕೂಲವಾಗುತ್ತದೆ.

(೧೧) ಭಗವಾನ್ ಬುದ್ಧನೆಂದನು: "ನಿಮ್ಮ ಮುಕ್ತಿಗಾಗಿ ದಕ್ಷತೆಯಿಂದ ನೀವೇ ಪ್ರಯತ್ನಿಸಿ" ಬೌದ್ಧಧರ್ಮದಲ್ಲಿ ಮನುಷ್ಯನ ಅಂತಃಪ್ರೇರಣೆಯಲ್ಲದೆ ಸತ್ಯಕ್ಕೆ ಬೇರಾವ ಸಾಕ್ಷಿಯೂ ಇಲ್ಲ. ತನ್ನ ಕ್ರಿಯೆಗಳ ಕಟುವಾದ ಪರಿಣಾಮವನ್ನು ಅನುಭವಿಸಿ, ಅಂತಹ ಪ್ರಸಂಗಗಳು ಬಂದಾಗ ತನ್ನವರಿಗೆ ಆತ್ಮವಿಕಾಸಕ್ಕಾಗಿ ಸಹಕರಿಸಿ, ತಾನೂ ಅರಿತುಕೊಳ್ಳುತ್ತಾನೆ. ಬುದ್ಧನನ್ನೇ ಅಗಲಿ ಮತ್ತೊಬ್ಬ ದೇವರನ್ನೇ ಅಗಲಿ ಮೊರೆಹೊಕ್ಕರೆ. ಕಾರ್ಯ–ಕಾರಣ ಮಾತ್ರ ತಪ್ಪಲಾರದು. ಬೌದ್ಧ ಸಂನ್ಯಾಸಿಗಳು ಗುರುಗಳಾಗಬಹುದು; ಆದರೆ ಆ ಅನಂತ ಸತ್ಯಕ್ಕೂ, ಮಾನವನಿಗೂ ಮಧ್ಯಸ್ಥನಾಗಲಾರನು! ಉಳಿದೆಲ್ಲ ಧರ್ಮಗಳ ಬಗ್ಗೆಯೂ, ತತ್ತ್ವಗಳಬಗ್ಗೆಯೂ ಬೌದ್ಧಧರ್ಮವು ಸಹಿಷ್ಣುತೆಯನ್ನು ವ್ಯಕ್ತಪಡಿಸುತ್ತದೆ. ಅನಂತ ಸತ್ಯಕ್ಕಾಗಿ ಹೋರಾಡುವ ನೆರೆಮನೆಯವರ ಮಾರ್ಗದಲ್ಲಿ ಅಡ್ಡಬರಲು ಅದೆಂದೂ ಅಪೇಕ್ಷಿಸದು.

(೧೨) ಬೌದ್ಧಧರ್ಮವು ನಿರಾಶಾವಾದಿಯಲ್ಲ: ಜೀವನದಿಂದ ಪಾರಾಗಿ ಹೋಗುವ ಇಚ್ಛೆಯೂ ಅದಕ್ಕಿಲ್ಲ.; ದೇವರ ಅಥವಾ ಆತ್ಮನ ಬಗ್ಗೆ ನಾಸ್ತಿಕತೆ ಅಲ್ಲಿಲ್ಲ–ತನ್ನವೇ ಅರ್ಥಗಳು ಬೇರೆಯಿದ್ದರೂ ಕೂಡ–ಅದೂ ಒಂದು ವಿಚಾರಪ್ರಣಾಲಿ, ಒಂದು ಧರ್ಮ, ಒಂದು ಆಧ್ಯಾತ್ಮಿಕ ಶಾಸ್ತ್ರ, ಜೀವದ ಮಾರ್ಗ. ಸಯುಕ್ತಿಕವೂ ಆಹುದು, ವ್ಯಾವಹಾರಿಕವೂ ಆಹುದು, ಸರ್ವವ್ಯಾಪಿಯೂ ಆಹುದು! ಕಳೆದ ಎರಡು ಸಾವಿರ ವರುಷಗಳಿಂದ, ಮೂರರಲ್ಲೊಂದು ಪಾಲು ಮಾನವವರ್ಗದ ಆಧ್ಯಾತ್ಮಿಕ ಬೇಡಿಕೆಗಳನ್ನು ಅದು ಪೂರಯಿಸುತ್ತ ಬಂದಿದೆ. ಈ ಧರ್ಮ ಮಾನವನ ಹೃದಯಕ್ಕೂ ಬುದ್ಧಿಗೂ ಒಮ್ಮೆಲೇ ಮೆಚ್ಚಿಕೆಯಾಗಿದೆ. ಬೇರೆ ಧರ್ಮಗಳ ಬಗ್ಗೆ ಸಹಿಷ್ಣುತೆಯನ್ನು ವ್ಯಕ್ತಮಾಡಿಯೂ, ಆತ್ಮವಿಕಾಸದ ಗುರಿಯನ್ನು ಅದು ಇಟ್ಟುಕೊಂಡಿದೆ; ಅಲ್ಲದೆ ಶಾಸ್ತ್ರ, ಧರ್ಮ, ತತ್ತ್ವ, ಮನೋವಿಶ್ಲೇಷಣ, ಕಲೆ ಎಲ್ಲವನ್ನೂ ಒಳಕೊಂಡಿದೆ. ಇಷ್ಟೆಲ್ಲದರ ತನ್ನ ವರ್ತಮಾನವನ್ನು ಭವಿಷ್ಯವನ್ನೂ ರೂಪಿಸುವವನು ಮಾನವನೇ ಎಂಬ ವಿಶ್ವಾಸವನ್ನು ಬೇರೆ ಕೊಡುತ್ತದೆ. ಬಳಿಕ ಅದು ವೈಜ್ಞಾನಿಕತೆಗೂ ಮೆಚ್ಚಿಕೆಯಾಗುವುದರಲ್ಲಿ ಆಶ್ಚರ್ಯವೇನು?'

ಬೌದ್ಧಧರ್ಮವು ಕರ್ಮಸಂನ್ಯಾಸವನ್ನು ಹೇಳುವುದಿಲ್ಲವೆಂಬುದು ಇದರಿಂದ ತಾನೇ ಸಿದ್ಧವಾಗುವುದು. 'ಕರ್ಮ'ವನ್ನು ಸಾಮಾನ್ಯರು ತಿಳಿಯುವ ಅರ್ಥದಲ್ಲಿ ಅದು ಬೆಳೆಸುವುದಿಲ್ಲವೆಂಬುದೇ, ಅದರ ಮೇಲಿನ ಈ ಆರೋಪಕ್ಕೆ ಕಾರಣವಾಗಿರಬಹುದು. ಹಿಂದೂಧರ್ಮದ ತತ್ತ್ವಗಳಿಗೂ ಬೌದ್ಧಧರ್ಮದ ತತ್ತ್ವಗಳಿಗೂ ನಿಕಟವಾದ ಸಂಬಂಧವಿದೆ. ಕೆಲವರ ಅಧಿಕಾರವೇ ಮಾತ್ರವಾಗಿದ್ದ ಜ್ಞಾನವನ್ನು ಎಲ್ಲರಿಗೂ ತೆರೆದಿಟ್ಟು ಬೌದ್ಧಧರ್ಮ ಇನ್ನೂ ಸ್ತ್ರಿಯವಾಗಿದೆ, ವಿಶಾಲವಾಗಿದೆ!

ಕ್ರಿಸಮಸ್ ಹಂಫ್ರೇಯವರ Buddism' ಎಂಬ ಪುಸ್ತಕದ ಆಧಾರದಿಂದ

ಮಾಯಾಕವಚ

(ಶ್ರುತಿರೂಪಕ)

ಲೇ. ಶ್ರೀನಿವಾಸ ವೆಂಕಟೇಶ ಗಲಗಲಿ, ಧಾರವಾಡ

卐

ಪಾತ್ರಪರಿಚಯ

ಮೃತಜೀವ:— ಭೂಲೋಕದ ಯಾತ್ರೆಯನ್ನು ಮುಗಿಸಿದುದು.
ತೇಜೋಜೀವ: — ಭೂಲೋಕದಲ್ಲಿ ಹುಟ್ಟಲೆಂದು ಬರುವುದು.
ಮಾಯಾ:— ಮಾಯಾಲೋಕದ ಅಧಿದೇವಿ.
ಇವರಲ್ಲದೆ ಬ್ರಹ್ಮರಾಕ್ಷಸ ಮತ್ತು ಪಿಶಾಚಿಗಳು.

卐

ಕಥಾಸಾರಾಂಶ:— ಮೃತಜೀವವು ಭೂಲೋಕದ ಯಾತ್ರೆಯನ್ನು ಮುಗಿಸಿ, ಪೈಶಾಚಿಕಜೀವನಗಳನ್ನು ಕಂಡು ಮಾಯಾಲೋಕಕ್ಕೆ ಹೋಗುವುದು. ಮಾಯೆಯು ಮೃತಜೀವಿಗೆ 'ಮಾಯಾಕವಚ'ವನ್ನು ತೊಡಲಿಕ್ಕೆ ಕೊಡುವಳು. ಮೃತಜೀವವು ಸಂಶಯಗೊಳ್ಳುವುದು. ಅಷ್ಟರಲ್ಲಿ ಚಂದ್ರಲೋಕದಿಂದ 'ತೇಜೋಜೀವ'ವು ಭೂಲೋಕದಲ್ಲಿ ಹುಟ್ಟುವ ತವಕದಿಂದ ಬರುವುದು. ಮಾಯೆಯಿಂದ ಭೂಲೋಕದ ದಾರಿಯನ್ನೂ ವಾಸ್ತವ್ಯವನ್ನೂ ತಿಳಿದುಕೊಂಡು, ಮೃತಜೀವದೊಡನೆ ಮಾತಾಡುವುದು. ಬಳಿಕ ಮಾಯಾಕವಚವನ್ನು ಬಿಟ್ಟು ಮೃತಜೀವವು ಚಂದ್ರಲೋಕಕ್ಕೂ, ಮಾಯಾಕವಚವನ್ನು ಧರಿಸಿಕೊಂಡ ತೇಜೋಜೀವವು ಭೂಲೋಕಕ್ಕೂ ಹೋಗುವವು ಸವಿಸ್ತರ ರಂಗತಿಯನ್ನು ಆಯಾ ಪಾತ್ರಗಳ ಮುಖದಿಂದಲೇ ಕೇಳೋಣ. ಅಕೋ. ಮೃತಜೀವವು.....

ಮೃ. ಜೀವ: — ನಾನು ಸತ್ತು ಇಂದಿಗೆ ಹತ್ತು ದಿನಗಳಾಗುತ್ತ ಬಂದುವು. ನನು ಆ ಮರಣವೇದನೆಯು! ಪಂಚ ಮಹಾಭೂತಗಳಿಂದ ಕೂಡಿದ ದೇಹವನ್ನು ಬಿಟ್ಟು ಬರುವಾಗ, ಆದ ತೀವ್ರತಾಪವನ್ನು ನೆನಪಿಗೆ ತಂದರೆ, ಈಗಲೂ ಆ ವೇದನೆಯನ್ನು ಅನುಭವಿಸಿದಂತಾಗಿ ಮೈ ಜುಮ್ಮೆನ್ನುತ್ತದೆ. ಧ್ವನಿ, ವಾಯುಶಕ್ತಿ, ರಕ್ತ, ಮಾಂಸಗಳಲ್ಲಿ ಬೆರೆತ ಅತ್ಮತೇಜವು ಹೃದಯದಲ್ಲಿ ಕೇಂದ್ರೀಭೂತವಾಗುವ ಮುಂದಿನ ವೇದನೆಯು ಅಷ್ಟಿಷ್ಟೆಂದು ಹೇಳಲಿಕ್ಕೆ ಬರುವಂತಿಲ್ಲ! ಕರುಳಿಗೆ ಸಾವಿರಾರು ಚೇಳು ಕಡಿದರೆ ಆಗುವ ನೋವು ಆ ಸಂಕಷ್ಟದ ಪಾಸಂಗಕ್ಕೆ ಹೋಲಲಾರದು.

(Effect:- ತೀವ್ರವೇದನೆಯಿಂದ ನರಳುವುದು.)

ಮೃ. ಜೀವ:— ಅಂತರಂಗದಲ್ಲಿ ಈ ವೇದನೆ. ಬಹಿರಂಗದಲ್ಲಿ....

(Effect:- ಮನೆಯವರೆಲ್ಲರೂ ಗಾಬರಿಗೊಂಡು 'ಅಯ್ಯೋ' ಎಂದು ಎದೆ ಬಡಿದುಕೊಂಡು ಅಳುವುದು.)

ಮೃ. ಜೀವ — ನಾನು ಇಹದೇಹವನ್ನು ಬಿಡುವೆನೆಂದು, ಸತಿ-ಸುತ-ಹಿತೈಷಿಗಳೆಲ್ಲರು ಗಾಬರಿಗೊಂಡು ಶೋಕಿಸುವ ವೇದನೆ! ಈ ಎರಡೂ ಅಸಹ್ಯವೇದನೆಗಳಿಂದ ಪಾರಾದ ಹೊರತು ಗತ್ಯಂತರ ಉಳಿಯಲಿಲ್ಲ. ನವರಂಧ್ರಗಳಲ್ಲಿ ತೀರ ಸಮೀಪ ಸುಲಭವಾದುದನ್ನು ಆರಿಸಿಕೊಂಡು, ತನ್ನಾರ್ಗವಾಗಿ ಆತ್ಮವು ಶರೀರಪಾಶದಿಂದ ಬಿಡುಗಡೆ ಹೊಂದಿತು! ಶರೀರವು ತಣ್ಣಗಾಯಿತು— ತೇಜೋಹೀನವಾಯಿತು. ನಾನು ಭೂಲೋಕದ ದೃಷ್ಟಿಯಿಂದ ಸತ್ತೆ— ಸೂಕ್ಷ್ಮಶರೀರವನ್ನು ಸೇರಿದೆ..... ಈ ಹತ್ತು ದಿನಗಳಲ್ಲಿ ನನ್ನ ಸೂಕ್ಷ್ಮ ಶರೀರವು ಪೂರ್ಣವಾಗುತ್ತ ಬಂದಿದೆ. ಈ ಅವಧಿಯಲ್ಲಿ ಎಂತೆಂತಹ ದೃಶ್ಯಗಳನ್ನು ಕಂಡೆನಲ್ಲ! ಅತೃಪ್ತ ವಾಸನಾಮಯ ಜೀವಗಳು ಭೂತ, ವೇತಾಳ, ಬ್ರಹ್ಮರಾಕ್ಷಸಗಳಾಗಿ, ಅದ್ಭುತ-ಬೀಭತ್ಸ ರೂಪಗಳಲ್ಲಿ ಕಂಡುಬಂದರೂ ಪರಸ್ಪರರಲ್ಲಿ ಜಗಳವಾಡುವುದಿಲ್ಲ— ಹಾನಿಮಾಡಿಕೊಳ್ಳುವುದಿಲ್ಲ.

Effect:- [ಹುಚ್ಚಾಟದ ನಗೆ ಮತ್ತು ಕುಣಿತ. (ಇದು ಮುಗಿಯುವಷ್ಟರಲ್ಲಿ ಕೆಲವು ಭೂತಗಳು ಕೆಳಗಿನ ಪದ್ಯವನ್ನು ಹಾಡುತ್ತ ಕುಣಿಯುವುವು)

ಪದ್ಯ:— ಗಾಳಿಯ ದೇಹಾ! ಗಾಳಿಯ ಊಟಾ!
ಗಾಳಿಯೆ ಎಲ್ಲಾ! ಹ ಹ್ಹ ಹಾ!
ಗಾಳಿಯ ಏರಿಯೆ, ಕಾಡಿದ ಜೀವಿಯ
ಕಾಡುವೆ ಜಗದಲಿ ಹ ಹ್ಹ ಹಾ!]

ಮೃ. ಜೀವ:— 'ಬದುಕಬೇಕು ಬದುಕಿರಗೊಡಬೇಕು' ಎಂಬ ಮಾತಿನ ಮರ್ಮ ತಿಳಿದಂತೆ ಬಾಳುತ್ತನೆ ಪಿಶಾಚಿಗಳು. ಸೌಮ್ಯ ಶಾಂತರಾಗಿ ತೋರುವ ಭೂಲೋಕದ ಜನರು ಮಾಡುವ ಕ್ರೂರ ಕೃತ್ಯಗಳನ್ನು ನೆನಪಿಗೆ ತಂದರೆ, ಬೀಭತ್ಸರಮ್ಯವಾಗಿ ತೋರುವ ಪೈಶಾಚಿಕ ಲೋಕವೇ ಮೇಲ್ತರಗತಿಯದೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಅದೋ! ಅಲ್ಲಿ ಬ್ರಹ್ಮರಾಕ್ಷಸವು.....

(Effect:- ಒರ್ವ ವಿದ್ಯಾರ್ಥಿಯು 'ಶಕ್ಲ್ರು ಪಚ್ ಮುಚಿ'.... ಎಂಬದನ್ನು ಅಶುದ್ಧವಾಗಿ ಅನ್ನುವನು.)

ಬ್ರಹ್ಮರಾಕ್ಷಸ: - (ಗಂಭೀರ ಸ್ವರದಿಂದ) ಏ! ಏನಂತಿಯೋ? ಇದು ಸಂಸ್ಕೃತ ಭಾಷೆ, ಶುದ್ಧವಾಗಿ ಅನ್ನಬೇಕು. ಹೂ. ಅನ್ನು.. ...

ಶಕ್ಲ್ರು ಪಚ್ ಮುಚಿ ರಿಚ್ ವಚ್ ವಿಚ್ | ಸಿಚ್ ಸೃಚ್ಚಿ
ತ್ಯಜ್ಯ ನಿಜಧೃಜಃ ||

ಭಂಜ್ ಭುಜ್ ಭ್ರಸ್ಜ ಮಸ್ಜಿ | ಯಜ್ಯುಜ್ರುಚ್ ರಂಜ್
ವಿಜಸ್ವಂಜ ಸಂಜ್ ಸೃಜಃ ||

ಹೀಂಗ ಅನಬೇಕು.

(Effect:- ಮತ್ತೊರ್ವ ವಿದ್ಯಾರ್ಥಿಯು ' ಸಹನಾವವತು '
ಎಂಬುದನ್ನು ಅಸಹ್ಯವಾಗಿ ಅನ್ನುವನು.)

ಬ್ರಹ್ಮರಾಕ್ಷಸ:— ಏ! ಏನಂತೀಯೋ ಮಂತ್ರಾ! ಸಾಲ್ಯಾಗಿನ ಹುಡುಗರು ಕವಿತಾ ಅಂಧಾಂಗ ಅಂತೀಯಲಾ! ಸ್ವರಾಘಾತ ತಪ್ಪಿಸಬಾರದು, ಮಂತ್ರಾ ಅನ್ನೂಮುಂದ. ಸ್ವರಾಘಾತ ತಪ್ಪಿತೂ ಅಂದ್ರ ಅಪಾರ್ಥ ಆಗತದಪಾ! ಅನ್ನು. ಸಹನಾವವತು ಸಹನೌಭುನಕ್ತು ಸಹವೀರ್ಯಂ ಕರವಾವಹೈ....ಸರ್ವೇ ಭದ್ರಾಣಿಪಶ್ಯಂತು. ಸರ್ವೇ ಜನಾಃ ಸುಖಿನೋ ಭವಂತು.

ಮೃ. ಜೀವ:— ಮತ್ತೊಂದು ಕಡೆ, ಸವತಿಯ ಕಾಟದಿಂದ ಬಾವಿಯಲ್ಲಿ ಬಿದ್ದು ಮೃತಳಾದ ಸ್ತ್ರೀಯು ಪಿಶಾಚಿಯಾಗಿ.....

ಪಿಶಾಚಿ:— (ಕುನಿಸಿನಿಂದ) ಏ ಭಾಗೀ! ಭಾಗೀರತಿ! ಗಂಗಾ ಭಾಗೀರತಿಯಾಗು.

(Effect:- ಅಳುವು.)

ಪಿಶಾಚಿ:— (ಪರಿಹಾಸದಿಂದ) ಐಹಹಹ! ಅಳತೀಯೇನು?.... ಇನ್ನ ಕಾಡಲಿಕ್ಕೆ ಯಾರೂ ಉಳಿಲಿಲ್ಲಾ ಅಂತ ಅಳತೀಯೇನು?..... ನನಗೆಲ್ಲಾ ತಿಳೀತವ . ... ಏನಿಮ ಮನಸ್ಯಾನ ಸ್ವಭಾವಾ ಅಂತೀನಿ! ಹುಟ್ಟಿದ್ದು ಹಿಡಕೊಂಡು ಸಾಯೂತನಕಾ, ಒಳಗೊಂದು ಹೊರಗೊಂದು. ಇದ್ದವ್ದನ್ನು ಮುಚ್ಚಿ ಇಲ್ಲದ್ದನ್ನು ತೋರಿಸತಾರಲಾ!..... ಏ, ಹಸೀ ಬಾಣಂತಿ ಇದ್ದ ನನ್ನ, ಹಿತ್ತಲವ ಭಾವ್ಯಾಗ ನುಗಿಸಿ ಕೊಂದು, ನೀ ಸುಖದಿಂದ ಇರಬೇಕಂತೀಯಾ? ಹ್ಯಾಂಗ್ಯಾಂಗ ಇರತೀ ನೋಡತೀನಿ. ನಿನ್ನ ಬಿಡತೀನೇನು?

(Effect:- ಕೂಸಿನ ಅಳುವು.)

ಪಿಶಾಚಿ:— (ಅಂತಃಕರಣದ ಕಳವಳದಿಂದ) ಅಯ್ಯ! ನನ್ನ ಮಗಾ-ನನ್ನ ಕೂಸು ಅಳತದ....ಅಕಡೆ ಲಕ್ಷ್ಯೇ ಇಲ್ಲ ನಿನ್ನದು! ಅದೇ ನಿನ್ನ ಹೊಟ್ಟೇ ಕೂಸು ಇತ್ತಂದ್ರ ಹೀಂಗ ಸುಮ್ಮನೇ ಇರತೀದ್ಯಾ ನೀನು? ಹೊಟ್ಟಿಗೆ ಕುಡಿಸ್ತಿದ್ದಿ; ಹಾಲು ಹಾಕತಿದ್ದಿ; ಬ್ಯಾನಿ ಬ್ಯಾಸರಕಿ ಬರಬಾರದಂತ ಗುಟ್ಟೇಹಾಕತಿದ್ದಿ....ಈ ರಂಗ ನಿನ್ನ ಸವತೀ ಮಗಾ ಅಲ್ಲ! ಇವ ಬದುಕಿ ಬಾಳವರ, ನಿನ್ನ ಮಗನ ಸರಿಜೋಡೀ ಪಾಲಾ ಬೇಡ್ಯಾನೂ ಅಂತ, ಅವನನ್ನೂ ನನ್ನ ಹಾದೀನೇ ಹಿಡಿಸಬೇಕಂತ ಮಾಡೀಯೇನು ಮಸಲತ್ತು?....(ರೋಷದಿಂದ) ಇಗಾ, ನನ್ತ ಕೂಸಿನ ಕೂದಲ ಎಳೇಗೆ ಧಕ್ಕಿ ಆತೂ ಅಂದ್ರ, ನಿನ್ನ ಜೀವವೇ ನಿನಗ ಎರವು ಆತೂ ಅಂತ ತಿಳಕೊ!.....(ಕನಿಕರದಿಂದ) ಏಕಾ, ಅತ್ತತ್ತು ಕೂಸು ಮಲಗಿತು. ತೊಟ್ಟಿಲದಾಗ ಮಲಗಿಸಿ ಜೋಗಳಾ ಐರಿ ಹಾಡು..... ಅಯ್ಯs! ಮೂಗು ಮುರೀಬ್ಯಾಡs ಹಿಂಗ?.....ಮಗೂ ರಂಗಾ, ಮಲಗಪಾ. ನಾ ಜೋಗಳಾ ಅಂತೀನಿ.

ಜೋssss ಜೋssss ‖ ೪ ‖
ಜೋ ಕಂದ ಜೋ ಲಾಲಿ ಜೋ ಮುದ್ದು ಕಂದಾ |
ಜೋ ಬಾಳ ಬಳ್ಳೀಯ ಹೂಮಕರಂದಾ ‖ ೧ ‖
ಜೋ ಬಾಳಕಡಲೀನ ಅಮೃತssದ ಕೆನೆ ಜೋ |
ಜೋ ಹಾಲ ಹೆಸುಳೆಯೆ ಮುದ್ದೀನ ಗೊನೆ ಜೋ ‖ ೨ ‖
ನಿನಗಿನ್ನು ಈ ಜಗದ ಗುರುತಿಲ್ಲ ಜೋ ಜೋ |
ಜಗದೆಲ್ಲ ಮೋಸssದ ಅರಿವಿಲ್ಲ ಜೋ ಜೋ ‖ ೩ ‖
ಚಂದ್ರssನ ಕಲೆಯಂತೆ ದಿನದೀನ ಬೆಳಿ ಕಂದ |
ಈ ಜಗದ ಜಂಜಾಟ ಧೈರ್ಯದಿ ತುಳಿ ಕಂದ ‖ ೪ ‖
ಬಾಳೂವ ಜೀವಿಗೆ ಬಲವೊಂದೆ ಅಮೃತಾ
ಅದ ಗಳಿಸಿ ಬಾಳಯ್ಯ ಸುಖದಲಿ ಸತತಾ ‖ ೫ ‖

ಮೃ. ಜೀವ:— ಅಲ್ಲಿ ಇನ್ನೊಂದು ಕಡೆ, ತನ್ನ ದುಡ್ಡೆಲ್ಲ ಪರರ ಪಾಲಾಯಿತೆಂದು ವಾಸನಾಮಯ ಜೀವವು ಭೂತವಾಗಿ ಹೇಗೆ ಮಿಡುಕುತ್ತಿದೆ !

ಭೂತ:—(ಗಹಗಹಿಸಿ ನಕ್ಕು, ಆಶ್ಚರ್ಯ-ಗಂಭೀರ ಸ್ವರದಿಂದ) ದುಡ್ಡು !.... ಒಂದಲ್ಲ ! ಎರಡಲ್ಲ !! ಬೆಳ್ಳೀ ರೂಪಾಯಿ ತುಂಬಿದ ಎರಡು ಚೀಲ ! ಗಸ್‌ಗಾರಾತು — ಮಟಾಮಾಯ ಆತು — ಮನಸ್ಯಾನ ಮೋಸಕ್ಕ ಆಹುತಿ ಆತು !.... ಏನು ? ಹ್ಯಾಂಗರೆ ಮಾಡಿಕೊಂಡು ಸುಮ್ಮನೆ ಇರಬೇಕೆ ?.... ಹ್ಯಾಂಗ ಸುಮ್ಮನೆ ಇರೂದು ಅದೀತು ! ಎಲ್ಲಿ ವಿಶ್ವಾಸಾ ಅಂತ ನಂಬಿದೆ; ಅಲ್ಲಿ ವಿಶ್ವಾಸಘಾತ ಆಗಬೇಕ ? ದೊಡ್ಡ ವಕೀಲರು-ಮಂದಿಗೆ ಬುದ್ಧೀ ಹೇಳಾವರು—ಲಕ್ಷಾಂತರ ಗಳಿಸಿದವರು —ಹೀಂಗ ಮಾಡಬೇಕ ?....ಏನಂದ್ರಿ ? ಹೀಂಗ ಮಾತಾಡಿದರ ಬುದ್ಧಿಗಿದ್ಧಿ ಹೋಗಿ ಹುಚ್ಚು ಹಿಡಿದೀತೂ ಅಂತ ಅಂತೀರಾ ?.... (ನಿಶ್ಚಿತಸ್ವರದಿಂದ) ನನ್ನ ಬುದ್ಧಿ ಹೋಗೇದ. ನನ್ಹಾಂಗೆ ಮಂದೀ ಬುದ್ಧೀನೂ ಹೋದೀತಲಾ ಅಂತ, ಅವರನ್ನು ಎಚ್ಚರಿಸಬೇಕಾಗೇದ. ಅಂತೇ ಹೀಂಗ ಅಂತೀನಿ..... ಈ ದುಡ್ಡು ಹೋಗೂದರ ಬದಲಿ, ನನ್ನ ಜೀವವೇ ಹಾರಿಹೋಗಿದ್ದರ ನೆಟ್ಟಗಾಗತಿತ್ತು ! ಹೆಂಡತಿ-ಮಕ್ಕಳು ವಂಶಪರಂಪರ ಸುಖದಿಂದರೆ ಇರತಿದ್ರು..... ಏನ ಅದ ಈ ಜಗತ್ತಿನಾಗ ? ದುಡ್ಡೂ ಅಂದ್ರ ದೊಡ್ಡಪ್ಪ !—ದೇವರೂ ಅಂದೆ !....ದೇವರು ಹ್ಯಾಂಗ ಒಬ್ಬನಲ್ಲಿ ನಿಂತು ನುಡಿಸ್ತಾನ, ಇನ್ನೊಬ್ಬನಲ್ಲಿ ನಿಂತು ಮಾಡಿಸ್ತಾನ, ಮತ್ತೊಬ್ಬನಲ್ಲಿ ನಿಂತು ನೋಡತಾನ! ಹಂಗss ಈ ದುಡ್ಡು ಮಾಡಿಸ್ತದ ಭೂಮೀಮ್ಯಾಲ ! ' ಕರ್ತುಮಕರ್ತುಂ ಅನ್ಯಥಾ ಕರ್ತುಂ ' ಶಕ್ತಿಯುಳ್ಳ ಈ ದೇವರನ್ನು, ಅಂದರ ಈ ದುಡ್ಡು—ಕಳಕೊಂಡು ಬದುಕೂಮ ಹ್ಯಾಂಗ ?....ಏ ರಾಮರಾಯಾ, ಏ ವಕೀಲಾ, ಏ ರಾಮ್ಯಾ ನಮ್ಮಲ್ಲಿ ಕುಟುಂಬ ಕಾಶೀಯಾತ್ರಾ ಅದ ಅಂತ, ಕಾಶೀಗೆ ಹೋಗೂಮುಂದ, ನಿನ್ನ ಹತೀಲೆ ಸುರಕ್ಷಿತ ಇರಲೀ ಅಂತ, ನನ್ನ ಎರಡು ಚೀಲ ರೂಪಾಯಿ ಇಟ್ಟು, ಯಾತ್ರಾ ಮುಗಿಸಿಕೊಂಡು ಬಂದಮ್ಯಾಲ ' ನನ ರೂಪಾಯಿ ಚೀಲ ಎಲ್ಲಿ ಅವ ?' ಅಂತ ಕೇಳಿದರ, ' ಛೆ! ಛೆ!! ಛೆ!!! ಏನು ? ನನ್ನಲ್ಲಿ ?.... ರೂಪಾಯಿ ಚೀಲ ?.... ಅಮೂಲಾಗ್ರ ಸುಳ್ಳು! ತಲೀಗಿಲೀ ತಿರಿಗೇದೇನ್ನಿಂಬ್ದು ?' ಅಂತ ಹಾರಿಸಿಕೊಂಡಿಯಲ್ಲ! ಪರದ್ರವ್ಯಾಪಹಾರದ ಫಲಾ ಹ್ಯಾಂಗದss ಅಂತ ಅಂಬೂದು ತಿಳದೆ ತಿಳೀಲಿ ನಿನಗ!....ಥೂ ನಿನ ಬದಕss! ನೀ ತಿನ್ನೂ ಅನ್ನದ ಅಗಳು, ಹುಳ್ಳಾಂಗ ಕಾಣಿಸತಾವಲs ?....ಕಾಣಿಸದೆ ಏನ್ಮಾಡ್ಯಾವು !....ಕಾಲಾಗ ಹುಳಾಸಹಿತ ಬಿದ್ದೂ !....ಕಣ್ಣು ಮುಚ್ಚಿದೀ ಅಂದ್ರ, ಮಾಡಿದ ಪಾಪದ ಫಲದ ಚಿತ್ರ ಕಣ್ಮುಂದ ಬಂದು ನಿಂತು ನಿದ್ದೀ ಹಾರಿಹೊಡಿತಾವಲs?...

ನ್ನೂ ಎಂತೆಂಥಾ ಅನರ್ಥ ಅನುಭೋಗಿಸೂದದನೋ ಏನೊ ನಿನ್ನ
ವೈಭವಾಗ!.... 'ದುಡ್ಡು ನುಂಗಿದ ಪಾಪ ಹೋಗಲೀ' ಅಂತ ದೇವರ
ಗುಡೀ ಕಟ್ಟಿಸಿದಿ. ಆದರ ಆದರಾಗ ದೇವರು ಹ್ಯಾಂಗ ಇದ್ದಾನು?
ಗುಡ್ಯಾಗ ಇರೂ ಮೂರ್ತಿ ಅಂದರ, ನಿನ್ನ ಪಾಪದ ಮೂರ್ತಿಮಂತ
ನ್ತಳಿ! ನಿನ್ನ ಬಾಳಿನ ಯಮರಾಯ! ನಿನ್ನ ನರಕದ ಯಜಮಾನ!
(ಹುಚ್ಚನಗೆ)

ಮೃ. ಜೀವ :— ಮಗುದೊಂದು ಕಡೆ.

ಪಿಶಾಚಿ :— (ವೈಶಾಚಿಕ ನಗೆ ನಕ್ಕು ನಿಶ್ಚಿತಧ್ವನಿಯಿಂದ)
ಕೌದು ಮೂರನೇ ಅಂತಸ್ತಿನ ಮೇಲಿಂದ ಜಿಗಿದು ಜೀವಾಕೊಟ್ಟಿ—
ಲ್ಲಾ! ದೇಹ ಬಿಟ್ಟಿ; ಪಿಶಾಚಿ ಆದಿ. ಒಂದು ರೀತಿಯಿಂದ ನೆಟ್ಟ-
ಗಾತೂ ಅಂತ ಅನಿಸ್ತದ. ಭೂಮೀಮ್ಯಾಲ ಬದಿಕಿ ಬಾಳೀ ಮಾಡೂದೂ
ಂದರ, ಮುಂಗಲಿಗೆ ಮುರಿಗೀ ಹೊಡೆದು ಹಾವು ಬದಿಕಿಧಾಂಗ!—
ಮಡುವಿನಾಗ ಬಿದ್ದು, ಜೀವಂತ ತೇಲಿ ಬರೂ ಆಶಾ ಹಿಡಿದ್ಹಾಂಗ!
ನದ ಬದಕೂದರಾಗ ಅರ್ಥ?.... ನನ್ನದೂ ಅಂತ ಎದಕ್ಕೂ ಅನ್ನಲಿಕ್ಕೆ
ಬರೂದಿಲ್ಲ! ಮಾಡಿದವನ ಹೊಲಾ! ಇದ್ದವನ ಮನಿ! ಬಳಸಿದವನ
ಗುಡ್ಡು! ಇಷ್ಟೇ ಅಲ್ಲಾ. ನನ್ನ ಮೈ ಮ್ಯಾಲ ಸಹಿತ ಮಂದೀ ಅಧಿಕಾರ!
ಂಪಿಗ ಮೈ ನಂದೂ ಅಂದ್ರ, ಕಾಲ್ಮರಿ ಹೊಲ್ಯಾವ ಕಾಲು ನಂದೂ
ಂತ ಅಂತಾನ! ದುಡಿಸಿಕೊಳ್ಳಾವ ಬುದ್ಧಿ—ಕೈಯಿ ನಂದೂ ಅಂದರ
ಜಾಮ ಅಂತಾನ ತಲೀ ನಂದೂ ಅಂತ! ಏನು ಈ ಕಾಯಿದೇ
ಯುಗದ ಪ್ರತಾಪ! ಮೂರು ದಳ ಇಲ್ಲನ ಬಿಲ್ವಪತ್ರಿ ಸಿಗಬಹುದು.
ದರ ಹೊಸಾ ಕಾಯಿದೇ ಪಾಸಾಗದ ಒಂದು ದಿನಾನೂ ಸಿಗೂದಿಲ್ಲ!
ನಡೀಲಿಕ್ಕೆ ಕಾಯಿದೆ! ಉಣಲಿಕ್ಕೆ ಕಾಯಿದೆ! ಪೂಜಿಗೆ ಕಾಯಿದೆ!
ಘಂಟೇ ಹೊಡೀಲಿಕ್ಕೆ ಸಹಿತ ಕಾಯಿದೆ! ಹೀಂಗ ತಳಕಮಳಕು ಆಗಿ
ಬೆಳಿಯೂ ಕಾಯಿದೇ ಜಾಳಗೀನೇ ಬಿದ್ದತಿದ ಭೂಮಿಮ್ಯಾಲ! ಅಂದ-
ಮ್ಯಾಲ ನಡೆಯೂದು ಹ್ಯಾಂಗ? ನಡದಾಂವ ಬಿದ್ದನೇ ಮುಗ್ಗರಿಸಿ
ಕೊಂಡು!.... ಅಂತೂ ನಾವು ಬದುಕೂದು ಅಂದರ ಮಂದೀ ಸಲು-
ವಾಗಿ!.. ಹೀಂಗಾದ ಮ್ಯಾಲ ನಂದೂ ಅಂತ ಅಂಬೂದು ಉಳೀತೇನು
ಬದಕಲಿಕ್ಕೆ! ಈ ಜೀವ ನಂದೂ ಅಂತ ಸಿದ್ಧಮಾಡಲಿಕ್ಕೆ—ಕತ್ತರೀ
ಪೇಚಿನ ಕಾಯಿದೇದೊಳಗಿಂದ ಪಾರಾಗಲಿಕ್ಕೆ—ಭೂಮಿಮ್ಯಾಲಿನ
ಬಾಳೀ ನೀಗಲಿಕ್ಕೆ—ದೇಹತ್ಯಾಗ ಮಾಡಿಕೊಂಡೆ! ಪಿಶಾಚಿ ಆದೆ
ಇದರಾಗೇನು ತಪ್ಪಾತು? (ಹುಚ್ಚನಗೆ)

ಮೃತಜೀವ :— ಹೀಗೆ ತಮ್ಮಷ್ಟಕ್ಕೆ ತಾವು ಗೊಣಗುವುದೂ,
ಕುನುಸಿಟ್ಟ ಜನರನ್ನು ಕಾಡುವುದೂ ಇದರ ಹೊರತು ಬೇರೊಂದು
ಉದ್ಯೋಗವಿಲ್ಲ ಪಿಶಾಚಿಗಳಿಗೆ!

(Effect :— ಬಿರುಸು-ಬಾಣ ಬಿಟ್ಟಂತೆ ಸುಯ್ಯುಡುವ
ಸಪ್ಪಳ)

ಮೃ ಜೀವ: — (ಆಶ್ಚರ್ಯದಿಂದ) ಎಲ! ಇದೇನು ನಾನು
ಒಮ್ಮೆಲೇ ಮೇಲಕ್ಕೇರಹತ್ತಿದೆನಲ್ಲ!.... ಏನಿದು ಹೊಗೆ? ಎಲ್ಲಿ ನೋಡಿ
ದಲ್ಲಿ ಹೊಗೆ!.... ಅಂ! ನನ್ನ ವೇಗವು ಬೆಳೆಯಹತ್ತಿತು! ಜಡದೇಹ
ಬಿಟ್ಟು ಸೂಕ್ಷ್ಮಶರೀರಧಾರಣ ಮಾಡಿದ್ದರಿಂದ, ನನ್ನ ಗತಿಯು ಹೀಗಾ-
ಯಿತೇನು ಮತ್ತೆ? ನಿಮಿಷಾರ್ಧದಲ್ಲಿ ಹಿಮಾಲಯದಂಥ ಉನ್ನತ
ಗಿರಿಗಳು ಮರೆಯಾದುವು! ಮಹಾಸಾಗರಗಳು ಮಾತ್ರ ಬೆಳ್ಳಿಯ
ತಳಿಗೆಗಳಂತೆ ಮಸುಕಾಗಿ ಕಾಣುತ್ತಿವೆ!.... ಇದೇನು? ಭೂಲೋಕವು
ಕಣ್ಮರೆಯಾಯಿತು! ಮಿನಿಮಿನಿ ಮಿನುಗುವ ಆ ನಕ್ಷತ್ರಗಳು, ಥಳಥಳ
ಹೊಳೆಯುವ ಆ ಗ್ರಹಗಳು, ಜಗಚ್ಚಕ್ಷುವಾದ ಆ ಸೂರ್ಯ! ಎಲ್ಲವೂ
ಮರೆಯಾದುವು! ಎಷ್ಟು ವಿಚಿತ್ರವಿದು! ಈ ಧೂಮಲೋಕದಲ್ಲಿ ಏನೂ
ಕಾಣುವುದಿಲ್ಲವಲ್ಲ!

ನಿವೇದಕ:— ಈಗ ಮೃತಜೀವವು ಧೂಮಲೋಕದೊಳಗಿಂದ
ಮೇಲಕ್ಕೆ ಹೋಗುತ್ತಿದೆ.

ಮೃ. ಜೀವ:— ಏನು ನಿರ್ಜನ! ಎಷ್ಟು ನೀರಸ ಈ ಧೂಮ-
ಲೋಕವು! ಜೀವಿಗಳ ಸಂಚಾರವೇ ಇದ್ದಂತಿಲ್ಲ! ಅತ್ತ ಹೊಗೆ! ಇತ್ತ
ಹೊಗೆ! ನೋಡಿದತ್ತ ಹೊಗೆ! ಒಂದು ವೇಳೆ ಜಡದೇಹಿಯು ಇಲ್ಲಿ
ಬಂದರೆ, ಉಸುರುಗಟ್ಟಿ ಪ್ರಾಣ ಬಿಡುವುದೇ ನಿಶ್ಚಯ!.... ಅಂ! ಇಷ್ಟು
ಹೊತ್ತಿನವರೆಗೆ ಹೆಪ್ಪುಗಟ್ಟಿದಂತಿದ್ದ ಹೊಗೆಯು, ಅಂಗಲಾಗುತ್ತ
ಬಂದಿತು. ಗಾಳಿಯು ಸುಳಿವು ಪ್ರಾರಂಭವಾಯಿತು. ಏನು ಅದ್ಭುತ
ಗಾಳಿಯಿದು!

(Effect:— ಬಿರುಗಾಳಿಯ ಸಪ್ಪಳ)

ನಿವೇದಕ:— ಮೃತಜೀವವು ಈಗ ವಾಯುಲೋಕಕ್ಕೆ ಬಂದಿದೆ.

ಮೃ. ಜೀವ:— ಈ ಗಾಳಿಯು ಹೊಯ್ಲಿಗೆ ಹಿಮಾಲಯವು
ಕೂಡ ಬುಡನೇಲಾಗಬಹುದು. ಇಲ್ಲಿ— ಈ ವಾಯುಲೋಕದಲ್ಲಿ, ಗಿಡ-
ಮರಗಳೂ ಗಿರಿ-ದರಿಗಳೂ ಇಲ್ಲದ್ದೇ ಒಳತಾಗಿದೆ. ಪ್ರಕ್ಷುಬ್ಧ ಸಾಗರದ
ನಡುವೆ ಏರಿಬರುವ ಹೆದ್ದೆರೆಗಳಂತೆ, ಭೋರಿಟ್ಟು ಬೀಸುವ ಬಿರುಗಾಳಿ-
ಯನ್ನು ಕಂಡಿದ್ದಿಲ್ಲ; ಕೇಳಿದ್ದಿಲ್ಲ! ಹತ್ತಿಕ್ಕುವ ಈ ವಾಯುಪಥವನ್ನು
ನಡೆಯುವದೆಂತು?.... ಈ ಸೂಕ್ಷ್ಮಶರೀರಕ್ಕೆ ಹೊಗೆಯ ತಾಪವೂ
ಗಾಳಿಯ ಹೊಯ್ಲೂ ಸೋಂಕಲಿಲ್ಲವಲ್ಲ!.. ಎಲ! ಇದೇನು? ಸಂಧಿ-
ಪ್ರಕಾಶವೂ ದೂರವಾಯಿತು! ಒಂದೇಸವನೆ ಕತ್ತಲೆಯು ಬೆಳೆಯು-
ಹತ್ತಿತು. ಸೂರ್ಯನ ಬೆಳಕನ್ನೂ ನುಂಗಿ ನೀರು ಕುಡಿಯುವ ಕತ್ತಲೆ
ಯಲ್ಲಿ ಒಂದು ವೇಳೆ ದಾರಿ ತಪ್ಪಿದರೆ!— ಎಲ್ಲಿ ಮುಟ್ಟುವೆನೋ
ಏನೊ! ಯಾವುದೂ ತಿಳಿಯದಾಗಿದೆ. ಪರಮಾಣುಶಕ್ತಿಯ
ವಿಮಾನದ ವೇಗವನ್ನು ಮೀರಿದ ಸೂಕ್ಷ್ಮಶರೀರದ ವೇಗವು ಊಹೆಗೂ
ಮೀರಿದ್ದಾಗಿದೆ.... ಹಂಹ್ಹಾ ಎನ್ನುವದರಲ್ಲಿ ವಾಯುಲೋಕವು ಹಿಂದಾ
ಯಿತು! ಆಗಲಿ.. ಇದೇನು? ಯಾರೋ ಸುಸ್ವರದಿಂದ ಗಾಯನ
ಮಾಡುವಂತೆ ಕೇಳುತ್ತದೆ.

(Effect: — 'ಕಣ್ಣು-ಕಣ್ಣಿಗೊಂದೊಂದು ಬಣ್ಣ' ಎಂಬ
ಹಾಡಿನ ಛಾಯೆ ಹಿನ್ನೆಲೆಯಲ್ಲಿ)

ನಿವೇದಕ:— ಮೃತಜೀವವು ಈಗ ಮಾಯಾಲೋಕದ
ಸನ್ನಿಧಿಕ್ಕೆ ಬಂದಿದೆ.

ಮೃ. ಜೀವ:— (ಆಶ್ಚರ್ಯದಿಂದ) ಏನಿದು ಸೋಜಿಗ! ಅಂತ-
ರಿಕ್ಷದಲ್ಲಿಯು ಕೂಡ ಗಾಯನಕಲೆಯು ಹೆಬ್ಬೆರಬಡುದೆ? ಈ ಸೂಕ್ಷ್ಮ-
ಶರೀರವು ಇಲ್ಲಿ ಏಕೆ ನಿಲ್ಲಬಾರದು? ಮತ್ತಿಷ್ಟು ಗಾಯನವು ಸ್ಪಷ್ಟವಾಗ

ಹತ್ತಿತು. 'ಮಾ....ಯೆ' ಎಂದು ಕೇಳಿಸುವುದಲ್ಲ! ಮರ್ತ್ಯಲೋಕವನ್ನು ಸುತ್ತಿಕೊಂಡಿರುವ ಮಾಯೆ ತುಂಬಿಕೊಂಡಿರಬಹುದೆ ಇಲ್ಲಿಯೂ? ಮಾಯಾದೇವಿಯೇ ನಿನಗೆ ನನ್ನ ಅನಂತ ಪ್ರಣಾಮಗಳು!

ನಿವೇದಕ:— ಮೃತಜೀವವು ಕೊನೆಯ ಶಬ್ದವನ್ನು ಉಚ್ಚರಿಸುವಷ್ಟರಲ್ಲಿ ಮಾಯೆಯ ಮುಂದೆಯೇ ಬಂದು ನಿಲ್ಲುವದು. ಮಾಯೆಯ ಪರಿಸರದಲ್ಲಿ ಕುಳಿತ ಮಹಿಳೆಯರು ಮಾಯಾಸ್ತೋತ್ರವನ್ನು ಸರಾಗವಾಗಿ ಹೇಳುವರು.

ಸ್ತೋತ್ರ

ಕಣ್ಣು-ಕಣ್ಣಿಗೊಂದೊಂದು ಬಣ್ಣ! ಸಂಶಯದ ನೂರು ಕಣ್ಣ!
ಕಂಡ ಕಣ್ಣುಗಳ ಗೊಂಬೆಮಾಡಿ ಆಡಿಸುವ ಮೈಯ ಬಣ್ಣ!
ಆಶೆಯಮೃತ ನೋರೆಯಾಶೆ ಹಚ್ಚಿ, ವಿಷ ಕುಡಿಯಕೊಡುವಿ
ಮಾಯೆ!
ಅಹುದು-ಅಲ್ಲಗಳು, ಅಲ್ಲ ಅಹುದು ನಿನ್ನಲ್ಲಿ ನಿತ್ಯಮಾಯೆ!

ಮೃ. ಜೀವ:— ಎಲ್ಲಿ ಬಂದು ನಿಂತಿರುವೆ ನಾನು? ಇದೇನು ಕನಸೊ?

ಮಾಯೆ:— ಇದು ನನಸು. ಮೃತಜೀವನೇ ಇದು ಮಾಯಾಲೋಕವು.

ಮಹಿಳೆಯರು — ನೀನು ನಿಂತಿರುವುದು ಈ ಲೋಕದ ಅಧಿದೇವಿಯಾದ ಮಾಯೆಯ ಮುಂದೆ.

ಮೃ. ಜೀವ:— ದೇವೀ, ಇದೊ ಇನ್ನೊಮ್ಮೆ ಬಾಗುವೆ.

ಮಾಯೆ:— ಮೃತಜೀವನೇ ನಿನಗೆ ಕ್ಷೇಮವಾಗಲಿ.

ಮೃ. ಜೀವ: — ಏನು ನನಗೆ ಕ್ಷೇಮವೆ?

ಮಾಯೆ:— ಹೌದು. ನಿನಗೆ.

ಮೃ. ಜೀವ:— ಅಷ್ಟೈಶ್ವರ್ಯಗಳಿಂದ ತುಂಬಿದ ಆ ಮನೆ. ಮಾರು, ನೆರಿಹೊರೆಯವರು ಥೂಯಿಟ್ಟರೂ ದುಡ್ಡಿನ ಬಲದಿಂದ ಮದುನೆಯಾದ ನನ್ನ ಮೂರನೆಯ ಚಿಕ್ಕ ಹೆಂಡತಿ, ಅವಳಲ್ಲಿ ನನಗೆ ಹುಟ್ಟಿದ ಚಿಕ್ಕ ಮಗುವು, ಆ ಅಧಿಕಾರ, ದರ್ಪ, ಮೊದಲಾದುವುಗಳನ್ನು ಬಿಟ್ಟು ಬಂದ ನನಗೆ ಕ್ಷೇಮವೆ? ಇದು ಸೋಜಿಗದ ಮಾತೇ ಸರಿ!

ಮಾಯೆ: — (ನಿಶ್ಚಿತಸ್ವರದಿಂದ ಗಂಭೀರವಾಗಿ) ಕೃಷ್ಣಪಕ್ಷ, ದಕ್ಷಿಣಾಯನ, ಮಾಸ ಹಾಗು ಪಿತೃಲೋಕಗಳ ಸಂಚಾರವು ಬೇಗನೇ ಮುಗಿಯಿ, ಚಂದ್ರಲೋಕದ ಅಮೃತಜೀವನವು ನಿನಗೆ ಲಭಿಸಲಿ— ಎಂದೆ. ನಿನ್ನ ಪರಿವಾರಕ್ಕೆಲ್ಲಿ ನಾನು ಕ್ಷೇಮ ಕೋರಿದೆ?

ಮೃ. ಜೀವ:— ನನ್ನ ಕ್ಷೇಮ, ನನ್ನ ಮನೆಯವರ ಕ್ಷೇಮ ಒಂದೇ ದೇವಿ! ಅವರನ್ನು ಬಿಟ್ಟು ನಾನು ಕ್ಷೇಮದಿಂದ ಹೇಗೆ ಇರಬಹುದು? (ಶೋಕಿಸುತ್ತ) ಅಯ್ಯೊ! ನನ್ನ ಮನೆಯವರ ನೆನಪಾದ ಕೂಡಲೇ, ನನ್ನ ಚಿರವಿಯೋಗದುಃಖದಿಂದ ಬಳಲುವ ರಮೆ, ರಾಮ, ರಜನಿಯರ ಭಾವಚಿತ್ರಗಳೇ ನನ್ನ ಕಣ್ಣಮುಂದೆ ಕಟ್ಟಿದಂತಾಗುತ್ತವೆ!

(Effect:— ಹಿನ್ನೆಲೆಯಲ್ಲಿ ರಮೆಯು (ಅಳುತ್ತ) ಇ....ನ್ನೇ... ನು.... ಗ....ತಿ?)

ಮೃ. ಜೀವ:— (ಶೋಕಪರವಶವಾಗಿ ಗದ್ಗದಿತ ಕಂಠದಿಂದ ರಮಾ, ನಿನಗೆ ನನ್ನಿಂದ ಪತಿಸೌಖ್ಯವು ದೊರೆಯುವಷ್ಟು ದೊರೆಯಲಿಲ್ಲವೆ? ಅದಕ್ಕೆ ನಾನೇನು ಮಾಡಲಿ? ಇದರಲ್ಲಿ ನನ್ನದೇನು ತಪ್ಪು ಲಗ್ನವಾಗುವ ಮುಂದೆ ನನಗೂ ನಿನಗೂ ಮೂವತ್ತೈದು ವರ್ಷಗಳಷ್ಟು ಅಂತರ! ಒಂದು ಕಾಲು ಮನೆಯಲ್ಲಿ ಇನ್ನೊಂದು ಕಾಲು ಮಸಣದಲ್ಲಿ ಇಟ್ಟ ನನ್ನನ್ನು ಲಗ್ನವಾಗಿ ನೀನು ಏನು ಕಂಡೆ? ನೈಧವ್ಯದ ಗೋಳನ್ನೆ ಅಲ್ಲವೆ?.... ಮತ್ತೇನು? ಸವತಿಯ ಕಾಟ!.... ಹೌದು. ಇದನ್ನೆಲ್ಲ ಗಟ್ಟಿ ಮನಸಿನಿಂದ ನುಂಗಿಕೊಂಡು, ನಿನ್ನ ಪಾಲಿನ ಒಂದು ಲಕ್ಷ ರೂಪಾಯಿಗಳನ್ನು ತಕ್ಕೊಂಡು ಸುರಕ್ಷಿತ ಬಾಳು. ರೀತಿ-ನೀತಿಗಳ ನೆಲೆಗಟ್ಟು ಹಾಳಿದ ಸಮಾಜದಲ್ಲಿ ಬಲು ಜೋಕೆ! ನಿನ್ನ ಮನಸಿಗೆ ಬಂದರೆ ಸ್ತ್ರೀ ಸಮಾಜದ ಪುನರುದ್ಧಾರಕಾರ್ಯವನ್ನು ಕೈಕೊಳ್ಳು. ಆರ್ಯಮಹಿಳೆಯರು ಪುನರಪಿ ಸೀತಾ-ಶಕುಂತಲೆಯರಂತೆ ಆಗಬೇಕು. ಎಂದರೆ ಮಾತ್ರ ಲವ-ಕುಶ-ಭರತರಂತಹ ಸುಕುಮಾರರ ಜನಿಸಿ, ಮತ್ತೊಮ್ಮೆ ಆರ್ಯಕೀರ್ತಿಯನ್ನು ದಿಗ್‌ದಿಗಂತಗಳಲ್ಲಿ ಮೆರೆಸುವರು. 'ನಾನು ಮಾಡಿದುದೆಲ್ಲ ಒಪ್ಪು' ಎಂಬ ಅಹಂಮನ್ಯ ಪುರುಷವರ್ಗವು, ಮಹಿಳೆಯರ ಅನುಕರಣದಿಂದಲಾದರೂ ಎಚ್ಚರಗೊಳ್ಳಲಿ.

(Effect:— ಹಿನ್ನೆಲೆಯಲ್ಲಿ ರಾಮನು ಶೋಕಿಸುತ್ತ—ಅಯ್ಯೊ! ಮುಂ ... ದೇ .. ನು?)

ಮೃ. ಜೀವ:— ರಾಮಾ, ನೀನು ಹಿರಿಯನು; ಕಲಿತವನು; ಎಲ್ಲರ ಯೋಗಕ್ಷೇಮವು ನಿನ್ನನ್ನೇ ಕೂಡಿದೆ. ಹತಾಶನಾಗಬೇಡ ಧೈರ್ಯಗುಂದಬೇಡ! ವಿವೇಕಬುದ್ಧಿಯಿಂದ ಸಂಸಾರಶಕಟವನ್ನು ಗಂಡಾಂತರಗಳಿಲ್ಲದೆ ಸಾಗಿಸುವುದು ನಿನ್ನನ್ನೇ ಕೂಡಿದೆ. ತಾಯಿ, ಮಲತಾಯಿ ಎಂಬ ಭೇದವನ್ನು ಮಾಡಬೇಡ. ದೇಹಕ್ಕೆ ಹೃದಯವು ರುಧಿರವನ್ನು ಪೂರೈಸುವಂತೆ, ಸರ್ವರ ಸುಖವೇ ನಿನ್ನ ಸುಖವಾಗಲಿ!.... ಚಿತ್ರಮಯ ಜಗತ್ತಿನ ವಿಚಿತ್ರವರ್ತನೆಗೆ ಬಲಿ ಬೀಳಬೇಡ! ಡಾಂಭಿಕರ ಮೆಚ್ಚಿಗೆಯ ಮಾತಿಗೆ ಮೋಸಹೋಗಿ, ಸರ್ವಸ್ವವನ್ನು ನಾಶಮಾಡಿಕೊಳ್ಳಬೇಡ..... ಸತ್ಯವು ಸಂಗತಿಯ ಸರ್ವನಾಮವು! ಸತ್ಯನೆಂದರೆ ದೇವರೆಂದು ಹೇಳುವ ಮಾತಿನ ಮಲ್ಲರನ್ನು ನಂಬಬೇಡ. ಸಾಕಷ್ಟು ವೆಚ್ಚ ಮಾಡಿದರೂ ಸವೆಯದಷ್ಟು ದುಡ್ಡಿದೆ. ಮನೆಯಲ್ಲಿ! ನಿನ್ನ ಹಾಗೂ ಮನೆತನದ ಗೌರವವನ್ನು ಕಾಯ್ದುಕೊಂಡು ಬಾಳು. ನೀನು ತರುಣನು. ಸ್ವಾತಂತ್ರ್ಯವನ್ನು ಪಡೆದ ಭರತಖಂಡಕ್ಕೆ ನಿನ್ನಂತಹ ಅನೇಕ ಯುವಕರ ಸೇವೆಯ ಅಗತ್ಯವಿದೆ. ಉಸಿರಿದೆಯೆಂದು ಬದುಕಿರುವ ಜೀವನ್ಮೃತ ಕ್ಷುದ್ರಜಂತುಗಳು ಸಮಾಜದಿಂದ ಮಾಯವಾಗಬೇಕು. ಬಾಳುವ ಗಂಡುಸರೆಲ್ಲ ಪಾಂಡವರಾಗಿ, ಜಾಗತಿಕ ಕಲ್ಯಾಣಕ್ಕೆ ಸರ್ವೋದಯದ ಪ್ರಗತಿಗೆ ಹೆಣಗಬೇಕು. ಅಂತೆಯೇ ಶರೀರ ಬಲ-ಸಂವರ್ಧನೆಯ ಜೊತೆಗೆ ಶೀಲ-ಬಲಸಂವರ್ಧನೆಯ ಪ್ರಚಾರಕಾರ್ಯ ಮಾಡು. ಇದರಿಂದ ಸ್ವಾತಂತ್ರ್ಯದ ತಳಹದಿಯು ಗಟ್ಟಿಮುಟ್ಟಾದೀತು.

(Effect:— ರಜನಿಯು ಶೋಕಾವಿಷ್ಟಳಾಗಿ— ಏ....ನು.... ಮಾ....ಲಿ?)

ಮೃತಜೀವ:— ಪ್ರೀತಿಯ ಮಗಳೇ, ರಜನೀ, ನೀನು ಮಾತ್ರ ಎಚ್ಚರದಿಂದಿರು. ಪರಂಪರಾಗತ ಸಂಪ್ರದಾಯವನ್ನು ಬಿಡಬೇಡ! ಇಂದಿನ ಸಮಾಜಕಂಟಕ ತರುಣರಿಂದ ದೂರಿರು! ತಪ್ಪುಹೆಜ್ಜೆಯನ್ನು ಇಡಿಸುವ ವೈಯ್ಯಾರಿಗಳ ಅನುಕರಣ ಮಾತ್ರ ಮಾಡಬೇಡ! ನಿನ್ನ ಅಣ್ಣನಂತೆ ನೀನೂ ಸಮಾಜಸೇವೆಯನ್ನು ಸಲ್ಲಿಸು; ಸುಖದಿಂದ ಬಾಳು. ಇಷ್ಟೇ ಆಯಿ....ತು. (ಎಂದು ಮೂರ್ಛಿಹೋಗಿ ಧೊಪ್ಪೆಂದು ಬೀಳುವನು)

ಮಾಯೆ:— ಹೇಗಿದೆ ಈ ಮಾಯೆಯ ಆಟ! ಮಾಯಾಕವಚವು ಮೈಯಲ್ಲಿ ಇರುವವರೆಗೂ ಜೀವನಿಗೆ ಜಗತ್ತಿನ ಮೋಹ ತಪ್ಪಿದ್ದಲ್ಲ!.... ಮೃತಜೀವನೇ, ಏಳು ಇದನ್ನೆಲ್ಲ ಮರೆತು; 'ಸಕಾಮ ಕರ್ಮ' ಮಾಡಿದ ನೀನು ಚಂದ್ರಲೋಕಕ್ಕೆ ಹೋಗಬೇಕಾಗಿದೆ.

ಮೃತಜೀವ:— ಅಲ್ಲಿಂದ ಮುಂದೆ ಮೋಕ್ಷಕ್ಕೆ ಹೋಗುವುದೇನು?

ಮಾಯೆ:— ಹುಟ್ಟಿದವರೆಲ್ಲ ಸಾಯುವಂತೆ, ಸತ್ತವರೆಲ್ಲ ಮೋಕ್ಷಕ್ಕೆ ಹೋಗುವುದಿಲ್ಲ. ದುಷ್ಕರ್ಮಿಗಳು ನರಕಕ್ಕೆ ಹೋಗುವರು. ಸಕಾಮಕರ್ಮಿಗಳು ಚಂದ್ರಲೋಕವನ್ನು ಸೇರುವರು. ನಿಷ್ಕಾಮಕರ್ಮಿಗಳು ಮಾತ್ರ ಬ್ರಹ್ಮಲೋಕಕ್ಕೆ ಎಂದರೆ ಮೋಕ್ಷಕ್ಕೆ ಹೋಗುವರು. ನೀನು ಸಕಾಮಕರ್ಮಿಯು. ಆದುದರಿಂದ ಚಂದ್ರಲೋಕಕ್ಕೆ ಹೋಗುವಿ.

ಮೃ. ಜೀವ:— ಅಲ್ಲಿ ನಾನು ಎಲ್ಲಿಯ ವರೆಗೆ ಇರಬೇಕು?

ಮಾಯೆ:— ನಿನ್ನ ಸಂಚಿತಪುಣ್ಯವು ಮುಗಿಯುವರೆಗೆ.

ಮೃ. ಜೀವ:— ಆದು ನನಗೆ ಒಗ್ಗಬಹುದೆ?

ಮಾಯೆ:— ನಿನ್ನ ಸೂಕ್ಷ್ಮಶರೀರಕ್ಕೆ ಹೊಂದಿಕೊಂಡಿರುವ ಹೊದಿಕೆಯನ್ನು ಅರ್ಥಾತ್ 'ಮಾಯಾಕವಚ'ವನ್ನು ಇಲ್ಲಿ ಬಿಡಬೇಕು. ಎಂದರೆ ಭೂಲೋಕದ ಮೋಹವು ಬಿಡುವುದು. ಆಮೇಲೆ ನೀನು ನೀನಾಗಿಯೇ ತೇಜೋರೂಪಕಾಯದಿಂದ ಚಂದ್ರಲೋಕಕ್ಕೆ ಹೋಗಬಲ್ಲೆ. ಅಲ್ಲಿಯವರೊಡನೆ ಸಮಜೀವಿಯಾಗಬಲ್ಲೆ.

ಮೃ. ಜೀವ:— (ಆಶ್ಚರ್ಯದಿಂದ) ಈ ನನ್ನ ಶರೀರಕ್ಕೆ ಇನ್ನೊಂದು ಕವಚವಿದೆಯೆ?

ಮಾಯೆ:— ನಿನಗೊಬ್ಬನಿಗೇ ಏಕೆ? ಭೂಲೋಕದಲ್ಲಿ ಜನಿಸುವ ಯಾವತ್ತೂ ಜೀವಿಗಳಿಗೆ 'ಮಾಯಾಕವಚ'ವು ತಪ್ಪಿದ್ದಲ್ಲ. ಮಾಯಾಕವಚವಿಲ್ಲದಿದ್ದರೆ, ಭಾಸ, ಆಭಾಸ, ತರ್ಕ-ವಿತರ್ಕಗಳೇ ಭೂಮಿಯಲ್ಲಿ ಉಳಿಯುತ್ತಿರಲಿಲ್ಲ.

ಮೃ. ಜೀವ:—ಆ ಮಾಯಾಕವಚವು ನನಗೆ ಕಾಣಿಸುವುದಿಲ್ಲವಲ್ಲ!

ಮಾಯೆ:— ಸಹಜವಿದೆ. ಅದು ದೃಷ್ಟಿಗಿಂತ ತೆಳ್ಳಗಾಗಿಯೂ, ಕಲ್ಪನೆಗಿಂತ ಹಗುರಾಗಿಯೂ ಇದೆ ದೇವರು ಕೂಡ ಭೂಮಿಗವತರಿಸಿದಾಗ ಈ ಮಾಯಾಕವಚದ ಮೋಹಕ್ಕೆ ಬಲಿಬಿದ್ದುದು ಉಂಟು. ಶ್ರೀರಾಮಚಂದ್ರನು ಅವತಾರಪುರುಷನಲ್ಲವೇ? ಅವನಿಗೆ ಕನಕವೃಗದ ಅಸಾಧ್ಯತೆಯ ಅರಿವು ಏಕಾಗಲಿಲ್ಲ? ಆದೆಲ್ಲ ಈ ಮಾಯಾಕವಚದ ಪ್ರಭಾವ. ಇದು ನಿನ್ನ ಸೂಕ್ಷ್ಮಶರೀರದೊಡನೆ ಒಂದಾಗಿದೆ.

ಮೃ. ಜೀವ:— ಎಂದರೆ ನಾನು ಈ ಶರೀರವನ್ನು ಇಲ್ಲಿ ಬಿಡಬೇಕೇ?

ಮಾಯೆ:— ಹೌದು. ಭೂಮಿಯಲ್ಲಿ ಜಡದೇಹ ಬಿಟ್ಟೆ. ಈ ಮಾಯಾಲೋಕದಲ್ಲಿ 'ಮಾಯಾಕವಚ'ವನ್ನು ಬಿದಬೇಕು.

ಮೃ. ಜೀವ:— ಬಿಟ್ಟು ಮಾತುವುದೇನು?

ಮಾಯೆ:— ಭೂಲೋಕದ ಮೋಹವನ್ನು ಸಂಪೂರ್ಣ ತ್ಯಜಿಸುವುದು.

ಮೃ. ಜೀವ:—ಏನನ್ನು ಹೇಳುವಿ ದೇವೀ! ಹೆಂಡತಿ, ಮಕ್ಕಳು, ಮನೆ-ಮಾರು, ಸಮಾಜ, ಧರ್ಮ, ಕರ್ಮ ಎಲ್ಲವನ್ನೂ ಮರೆಯಬೇಕೇ? ನನ್ನ ಮರೆವೇ ನನಗೆ ಆಗುವಂತಹದೇನಾದರೂ ಇದ್ದರೆ, ಅದನ್ನು ನನಗೆ ಕೊಟ್ಟುರೆ ಒಳಿತು.....ಭೂಲೋಕದ ಸಾವಿನೊಡನೆ ಸ್ಮರಣಶಕ್ತಿಯು ಅಳಿದಿದ್ದರೆ ನೆಟ್ಟಗಾಗುತ್ತಿತ್ತು.

ಮಾಯೆ:— ನಿನ್ನಲ್ಲಿದ್ದ 'ಮಾಯಾಕವಚ'ವು ದೂರವಾಗದ ಹೊರತು, ಭೂಲೋಕದ ಮೋಹವು ತಪ್ಪಿದ್ದಲ್ಲ.

ಮೃ. ಜೀವ:— ಇದೇನು ಪೇಚು?.....ದೇವೀ, ವಿಚಾರಕ್ಕೆ ಅವಕಾಶ ಕೊಡು. ಆಮೇಲೆ ನಿಷ್ಕರ್ಷವಾಗಿ ಹೇಳುವೆ.

ಮಾಯೆ:— ಯಾರಲ್ಲಿ? ಈ ಮೃತಜೀವನನ್ನು 'ಸಂಶಯಾಗಾರ'ದಲ್ಲಿ ಇರಿಸಿರಿ.

(Time Gap)

ನಿವೇದಕ:— ಚಂದ್ರಲೋಕದಿಂದ ತೇಜೋಜೀವನೊಬ್ಬನು 'ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ' ಎಂಬಂತೆ ಭೂಲೋಕದಲ್ಲಿ ಜನಿಸಲಿಕ್ಕೆ ಕೆಳಗೆ ಬರಹತ್ತಿದ್ದಾನೆ.

(Effect:— ಸಿಡಿಲಿರಗಿದಂತೆ.)

ತೇಜೋಜೀವ:— ಯಾವಾಗಲೂ ಅನೃತಮಯ ಜೀವನವನ್ನು ಕೊಡುವ ಚಂದ್ರಲೋಕವನ್ನು ಬಿಟ್ಟು ನಾನೆಷ್ಟು ಕಷ್ಟಕ್ಕೆ ಈಡಾದೆನಲ್ಲ! ಭೂಲೋಕಕ್ಕೆ— ದೇವಾಧಿದೇವತೆಗಳು ಅವತರಿಸಿದ ಲೋಕಕ್ಕೆ ಬ್ರಹ್ಮಲೋಕದ ಹೆಬ್ಬಾಗಿಲಿನಂತೆ ಇರುವ ಮರ್ತ್ಯಲೋಕಕ್ಕೆ, ಹೋಗಬೇಕೆಂದು ಮಾಡಿದ ನಾನು, ಕತ್ತಲೆಯಲ್ಲಿ ದಾರಿತಪ್ಪಿ ತಡವರಿಸುವಂತಾಗಿದೆ.....ಏನಿದು ಕತ್ತಲು? ತೇಜೋಜೀವಿಯಾದ ನನಗೆ ಕತ್ತಲೆಯ ತೀವ್ರತೆಯು ಎನಿಸಲಿಕ್ಕಿಲ್ಲವೆಂದು ತಿಳಿದಿದ್ದು ತಪ್ಪಾಯಿತೆಂದು ತೋರುತ್ತದೆ.....ಕಣ್ಣು ಮುಚ್ಚಿ ಕಣ್ಣು ತೆರೆಯುವುದರಲ್ಲಿ ಭೂಲೋಕವು ಬರಬಹುದೆಂದು ಭಾವಿಸಿದ್ದೆ. ಇನ್ನೂ ಭೂಮಿಯ ಸುತ್ತಲೂ ಕಾಣುವ ಆ ಸೂರ್ಯ-ನಕ್ಷತ್ರ-ತಾರಾಪುಂಜಗಳು ಎಲ್ಲಿ? ಆ ತೇಜೋಗೋಲಗಳ ಸುಳಿವೇ ಇಲ್ಲದಂತಾಗಿದೆ....(ಆಶ್ಚರ್ಯದಿಂದ) ಆಂ! ಇದೇನು? ಯಾರೋ ಗಲಿಬಿಲಿ ಎಬ್ಬಿಸುವಂತೆ ಕಾಣುತ್ತಿದೆ!

ನಿವೇದಕ:— ಈಗ ತೇಜೋಜೀವವು ಪಿತೃಗಳ ಲೋಕಕ್ಕೆ ಬಂದಿದೆ. ಪಿತೃಗಳ ಲೋಕದಲ್ಲಿ ಅನ್ನದ ಅಭಾವವಾಗಿದೆ. ಭೂಲೋಕದ

ಜೀವಿಗಳು ಪಿತೃಗಳಿಗೆ ಪಿಂಡದಾನ ಮಾಡುವುದನ್ನು ಬಿಟ್ಟುದ್ದರಿಂದ, ಪಿತೃಗಳು ತಮ್ಮ ಸಂದೇಶವನ್ನು ಭೂಲೋಕಕ್ಕೆ ಕಳಿಸಲು ಹಾತೊರೆಯುತ್ತಾರೆ. ಮತ್ತೂ ಕೆಲವು ಉದ್ದೇಶಗಳಿಂದ ಪಿತೃಗಳು ಭೂಲೋಕಕ್ಕೆ ಪ್ರಯಾಣ ಬೆಳಿಸಿದವರನ್ನು ಕಾಣಲಿಕ್ಕೆ ಮುಂದುವರೆಯುತ್ತಿದ್ದಾರೆ. ಅಷ್ಟರಲ್ಲಿ ತೇಜೋಜೀವವು ಅವರಿಗೆ ಗೋಚರವಾಗುವುದು. 'ನಾನು ಮುಂದೆ ನೀನು ಮುಂದೆ' ಎಂಬ ಗದ್ದಲವೇ ಏಳುವುದು. ಅದೊ! ಅಲ್ಲಿ ಪಿತೃಗಳು.

(Effect :— ಗದ್ದಲ 'ಹೊಂ ನಾನು ಮೊದಲು. ಇಲ್ಲ ನಾನು ಮೊದಲು' ಎಂಬ ನುಡಿಗಳು ಕೇಳಿಸುವವು.

೧ನೆಯ ಪಿತೃ :— ತೇಜೋಜೀವಿಯೇ ನಮಸ್ಕಾರ. ನೀವು ಭೂಲೋಕಕ್ಕೆ ಹೊರಟಂತೆ ಕಾಣುತ್ತದೆ. ಈ ನನ್ನ ಸಂದೇಶವನ್ನು ನನ್ನ ಮಕ್ಕಳಿಗೆ ಮುಟ್ಟಿಸುವಿರಾ? ಬೇಗನೇ ನನ್ನ ಶ್ರಾದ್ಧ ಮಾಡಿರೆಂದು ಆಯ್ತು ಇಷ್ಟೇ!

೨ನೆಯ ಪಿತೃ :-ನಾನು ಸಾಯುವ ಮುಂದೆ ಮೊಟ್ಟ ಮೊದಲಿಗೆ ಮಾತು ನಿಂತದ್ದರಿಂದ ಮನೆಯವರೊಂತನೆ ಹೇಳು. ಕೇಳುವುದಾಗಲಿಲ್ಲ! ದೇವರ ಜಗುಲಿಯ ಕೆಳಗೆ ಬಂಗಾರವನ್ನು ಹೂಳಿಟ್ಟಿರುವೆನೆಂದು ನನ್ನ ಮಗನಿಗೆ ತಿಳಿಸುವಿರಾ?

೩ನೆಯ ಪಿತೃ:- ನೆರೆಮನೆಯ ನಾರಾಯಣಾಚಾರ್ಯರು ನನಗೆ ನಾಲ್ಕು ಆಣೆ ಕೊಡತಕ್ಕದ್ದಿದೆ ಎಂಬುದನ್ನು ಮನೆಯವರಿಗೆ ತಿಳಿಸಿರಿ! ಸಾಕು.

ಎಲ್ಲ ಪಿತೃಗಳು:: (ಆಶ್ಚರ್ಯದಿಂದ ಎಲೇ ಇವನ! ತೇಜೋಜೀವ ನಮ್ಮನ್ನು ಲೆಕ್ಕಿಸಲೇ ಇಲ್ಲವಲ್ಲ! ಹೆರವರ ಅನುವು ಅಪತ್ತುಗಳಿಗೆ ಆಗುವ ಬುದ್ಧಿಯು ಭೂಮಿಯಲ್ಲಷ್ಟೇ ಇರುವುದೇನು?

(Time Gap)

ನಿವೇದಕ: ಈಗ ತೇಜೋಜೀವವು ಮಾಸಲೋಕಕ್ಕೆ ಬಂದಿದೆ. ಮಾಸಲೋಕವೆಂದರೆ ಸದಾ ಸರ್ವದಾ ಸಂತಸದ ಸಮಾರಂಭವಿರುವ ಲೋಕ. ಅಂತೆಯೇ ಅಲ್ಲಿಯವರು ಹೀಗೆ ಆನಂದದಿಂದ ಹಾಡುತ್ತ ಕುಣಿಯುತ್ತಲಿದ್ದಾರೆ:

(Effect:— ಹಾಡಿನ ಸಪ್ಪಳ.)

ಅಲ್ಲಿ ಇಲ್ಲಿ ಎಲ್ಲ ಕಡೆಗು ಸೋಮಪಾನ ಸಂಭ್ರಮಾ।
ಮಾಸಲೋಕದಲ್ಲಿ ನಿತ್ಯ ವೇದಶರಧಿಪೂರ್ಣಿಮಾ॥

ನಿವೇದಕ— ಅದೋ, ತೇಜೋಜೀವವು ಮಾಸಲೋಕದಿಂದ ದಕ್ಷಿಣಾಯನಲೋಕಕ್ಕೆ ಅರ್ಥಾತ್ ಯಮಲೋಕಕ್ಕೆ ಬಂದಿದೆ. ಯಮಲೋಕದಲ್ಲಿ ಯಮರಾಯನ ದರ್ಬಾರಿಗೆ ವಿಶ್ರಾಂತಿ ಇಲ್ಲ. ಚಿತ್ರಗುಪ್ತರ ವಾಸ್ತವ ಕಥಾನಿರೂಪಣೆಯೂ ಮೃತಜೀವಿಗಳ ಕೈಫಿಯತ್ತೂ ಒಂದೇಸವನೆ ನಡೆದಿರುವುದು. ಅದೋ ಕೇಳಿರಿ, ಯಮರಾಯನ ಸಭೆಯ ಒಂದು ಝಲಕು:

ಯಮ— ಹೂಂ. ಹೇಳು. ನೀನು ನಿನ್ನ ಗುರುಗಳನ್ನು ವಿಷಪ್ರಯೋಗದಿಂದ ಕೊಂದು ನೀನು 'ಗುರುವು' ಆಗಲಿಲ್ಲವೇ?

ಜೀವ— ಹೌದು. ನಾನು ಕೂಡ ನನ್ನ ಶಿಷ್ಯನ ವಿಷಪ್ರಯೋಗದಿಂದಲೇ ಇಲ್ಲಿಗೆ ಬಂದಿರುವುದು.

ಯಮ— ಭೂಮಿಯಲ್ಲಿ ಎಷ್ಟು ಅನರ್ಥ ನಡೆದಿದೆಯಲ್ಲ! ಗುರು-ಶಿಷ್ಯರೆಂದರೇನು! ವಿಷಪ್ರಯೋಗವೆಂದರೇನು! ನಿಮ್ಮಂತಹ ಗುರು-ಶಿಷ್ಯರಿರುವ ಧರ್ಮವು ನಾಮಶೇಷವಾಗದೇ ಏನು ಮಾಡೀತು! ನಡೆ, ನಿನಗೆ ತಕ್ಕ ಶಿಕ್ಷೆಯನ್ನು ವಿಧಿಸುವೆ

ಜೀವ— (ಗಾಬರಿಯಿಂದ ನರಳುತ್ತ ಅಹಹ! ಅಯ್ಯೋ! ಇನ್ನೊಮ್ಮೆ ಇಂತಹ ಘೋರಕೃತ್ಯವನ್ನು ಮಾಡುವುದಿಲ್ಲ.

(Time Gap)

ನಿವೇದಕ—ಯಮಲೋಕದಿಂದ ತೇಜೋಜೀವವು ಈಗ ಕೃಷ್ಣ ಪಕ್ಷ ಲೋಕಕ್ಕೆ ಬಂದಿದೆ

ತೇಜೋಜೀವ— ಇದೇನು ತೀರ ವಿಚಿತ್ರ! ಕೃಷ್ಣಪಕ್ಷ ಲೋಕವನ್ನು ದಾಟಿ ಬಂದ ನನ್ನ ಗತಿಯೇ ಕುಂಠಿತವಾಯಿತಲ್ಲ. ನಾನು ನಿಂತಲ್ಲಿಯೇ ನಿಂತಿರುವೆನೇನು? ನನ್ನದು ನನಗೇ ತಿಳಿಯದಹಾಗಾಗಿದೆ....ಬಂದು ನಿಂತದ್ದಾದರೂ ಎಲ್ಲಿ?

ನಿವೇದಕ.— ಕೊನೆಯ ವಾಕ್ಯವನ್ನು ಉಚ್ಚರಿಸುವಷ್ಟರಲ್ಲಿ ತೇಜೋಜೀವವು ಮಾಯೆಯ ಮುಂದೆ ಬಂದು ನಿಲ್ಲುವುದು. ಗಾಬರಿಯಿಂದ ಅತ್ತಿತ್ತ ನೋಡುತ್ತಿರುವಷ್ಟರಲ್ಲಿ ಮಾಯೆಯೇ ಮಾತಿಗೆ ಮೊದಲು ಮಾಡುವಳು.

ಮಾಯೆ ತೇಜೋಜೀವವೇ. ನೀನು ಈಗ ಮಾಯಾಲೋಕದಲ್ಲಿ ಇರುವೆ. ಮಾಯೆಯ ಮುಂದೆ ನಿಂತಿರುವೆ.

ತೇ ಜೀವ:— (ಸಂಶಯ-ಗಾಬರಿಗಳಿಂದ ನಾ....ನು....ಹೊ....ಟ್ಟು ಭೂ ...ಲೋ ...ಕ....ಕ್ಕೆ.

ಮಾಯಾ:— ಬಂದದ್ದು ಮಾಯಾಲೋಕಕ್ಕೆ.

ತೇ. ಜೀವ: – ಇದೇನೋ ನನಗೆ ಅಗಮ್ಯವಾಗಿದೆ. ನಾನು ಭೂಲೋಕದಲ್ಲಿ ಜನಿಸದೇಕೆಂದು ಹೊರಟೆ. ದಾರಿತಪ್ಪಿ ಇಲ್ಲಿಗೆ ಬಂದಂತೆ ಕಾಣುತ್ತದೆ ದಾರಿಯಲ್ಲಿಯ ಕವಿದ ಕಗ್ಗತ್ತಲೆಯಲ್ಲಿ, ಸೂರ್ಯನಿಗೆ ಕೂಡ ದಾರಿ ತಪ್ಪಬಹುದು.

ಮಾಯೆ:— ದಾರಿ ತಪ್ಪಿಲ್ಲನೆಂದು ಖಂಡಿತ ಹೇಳಬಲ್ಲೆ.

ತೇ. ಜೀವ.— ಅಂದರೆ, ಮಾರ್ಗದಲ್ಲಿಯೇ ಮಾಯಾಲೋಕವಿದೆಯೇನು?

ಮಾಯೆ: ಹೌದು

ತೇ. ಜೀವ:— ಇಲ್ಲಿಂದ ಭೂಲೋಕವೆತ್ತ?

ಮಾಯೆ:— ಇಲ್ಲಿಂದ ನೇರವಾಗಿ ಕೆಳಗೆ ಇಳಿಯಬೇಕು.

ತೇ ಜೀವ: ಹೇಗೆ? ಎಲ್ಲಿ? ಎಂಬದನ್ನು ತೋರಿಸಿದರೆ ನೆಟ್ಟಗಾಗುತ್ತದೆ.

ಮಾಯೆ:— ತೋರಿಸುವೆ. ಚಿಂತೆ ಬೇಡ. ನಾನು ಬೆರಳುಮಾಡಿ ತೋರಿಸುವತ್ತ— ಕೆಳಗಡೆ ನೋಡು....ಹೀಗೆ.

ತೇ. ಜೀವ:— ಹೊಗೆ, ಮಂಜು ಇವುಗಳ ಹೊರತು ಏನೂ ಕಾಣುವುದಿಲ್ಲ.

ಮಾಯೆ:— ಸರಿ. ಮುಂದೆ– ಅದಕ್ಕೂ ಸ್ವಲ್ಪ ಮುಂದೆ.

ತೇ. ಜೀವ:— ಏನೂss ಇಲ್ಲ!

ಮಾಯೆ.—ದೃಷ್ಟಿಯನ್ನು ಆತ್ಮಶಕ್ತಿಯಿಂದ ಪ್ರಬಲಗೊಳಿಸಬೇಕು

ತೇ. ಜೀವ:— ಹೌದು. ಒಂದು ದಿವ್ಯ ತೇಜೋಗೋಲವು ಕಾಣುವುದು. ಅದೇನು?

ಮಾಯೆ:— ಆ ದಿವ್ಯ ತೇಜೋಗೋಲವೇ ಸೂರ್ಯನು.

ತೇ. ಜೀವ:— ಆತನ ಸುತ್ತಲು ಒಂದು.... ಎರಡು.... ಮೂರು ...ನಾಲ್ಕು....ಐದು....ಆರು....ಏಳು ಎಂಟು ಚಿಕ್ಕ ಚಿಕ್ಕ ಗೋಲಗಳು ಕಾಣುತ್ತವೆ. ಅವುಗಳಲ್ಲಿ ಪೃಥ್ವಿಯು ಯಾವುದು?

ಮಾಯೆ:— ಆ ಎಂಟು ಗೋಲಗಳು ಸೂರ್ಯನೊಂದಿಗೆ ನವಗ್ರಹಗಳೆಂದು ಹೆಸರಾಗಿವೆ

ತೇ. ಜೀವ — ಒಂದೊಂದು ಗ್ರಹದ ಬಣ್ಣ ಒಂದೊಂದು ವಿಧ ಅಲ್ಲವೇ?

ಮಾಯೆ:— ಹೌದು.

ತೇ. ಜೀವ:—ಸ್ಫಟಿಕಮಣಿಯಂತೆ, ಸ್ಥಿರತೇಜದಿಂದ ಹೊಳೆಯುವ ಆ ಗೋಲವು ಯಾವುದು?

ಮಾಯೆ:— ಅದು 'ಮಂಗಳ' ಗ್ರಹವು. ಎಂದರೆ ಕಲ್ಯಾಣ-ಭೂಮಿಯು

ತೇ. ಜೀವ:— ಅದೇ ಏನು ಮಂಗಳಗ್ರಹವು! ಚಂದ್ರಲೋಕದಲ್ಲಿ ಇರುವಾಗ ಕೇಳಿದ್ದೆ.

ಮಾಯೆ:— ಏನೆಂದು?

ತೇ. ಜೀವ:— ಅಲ್ಲಿಯ ಜೀವಿಗಳು ವಿಜ್ಞಾನನಿಚಕ್ಷಣರೆಂದು; ಅಲ್ಲಿ ಸುಖ-ಶಾಂತಿ-ಸಮಾಧಾನಗಳು ಬೇರೂರಿವೆಯೆಂದು.

ಮಾಯೆ:— ಇರಬಹುದು

ತೇ. ಜೀವ:— ಆಗಲಿ. ಭೂಲೋಕವೆಲ್ಲಿ?

ಮಾಯೆ:— ಅಚಲದೃಷ್ಟಿಯಿಂದ ಮಂಗಳನ ಸಮೀಪದಲ್ಲಿ ನೋಡು.

ತೇ. ಜೀವ:— ಹೂ. ಏನೋ ಒಂದು ಸಾಸಿವೆಯ ಕಾಳಷ್ಟು ಗೋಲವು ಕಾಣಿಸುವುದು.

ಮಾಯೆ:— ಅದೇ ಭೂಲೋಕವು.

ತೇ. ಜೀವ.— ಧನ್ಯನಾದೆನು. ಹುಟ್ಟಲೆಂದು ಹೊರಟ ಭೂಲೋಕವೇ; ನಿನಗೆ ವಂದನೆಗಳು!

ಮಾಯೆ:— ಭೂಲೋಕವು ಮರ್ತ್ಯಲೋಕವು. ಅದರ ಬಗ್ಗೆ ಇಷ್ಟು ಆದರವೇ?

ತೇ. ಜೀವ:— ಭೂಲೋಕವು ಪುಣ್ಯಭೂಮಿಯು ಭಗವಾನ್ ನಾರಾಯಣನ ದಶಾವತಾರಗಳ ಕ್ರೀಡಾಂಗಣವು. ಪುಣ್ಯಪುರುಷರ ಪಾದಧೂಳಿಯಿಂದ ಪವಿತ್ರವಾದ ಸ್ಥಳವು. ಯಾವುದೇ ಜೀವಿಯು ಬ್ರಹ್ಮಲೋಕಕ್ಕೆ ಹೋಗಬೇಕಾದರೆ, ಅಲ್ಲಿ ಜನಿಸಬೇಕು ನಿಷ್ಕಾಮ-ಯೋಗವನ್ನು ಆಚರಿಸಬೇಕು ಇಂತಹ ಭೂಮಿಯಲ್ಲಿ ಜನಿಸುವ ಸುಯೋಗವು ಪ್ರಾಪ್ತವಾದದ್ದಕ್ಕೆ ನಾನು ಧನ್ಯನೇ ಸರಿ!

ಮಾಯೆ— ದೂರದ ಗುಡ್ಡ ಕಣ್ಣಿಗೆ ನುಣ್ಣಗೆ. ಅಲ್ಲಿಂದ ಬಂದವರಲ್ಲಿ ಅದನ್ನು ಹಳಿಯದವರಿಲ್ಲ.

ತೇ. ಜೀವ—ಹಳಿಯುವ ಉದ್ದೇಶದಿಂದ ಹೊರಟರೆ ಬೇಕಾದುದನ್ನು ಹಳಿಯಬಹುದು. ಬೇಡಿದುದನ್ನು ಕೊಡುವ ಕಾಮಧೇನು-ಕಲ್ಪವೃಕ್ಷಗಳನ್ನಿಟ್ಟುಕೊಂಡು ಸಮಾಧಾನದಿಂದ ಬದುಕುವುದರಲ್ಲಿ ಪುರುಷಾರ್ಥವೇನು? ಏನೂ ಇಲ್ಲದಲ್ಲಿ ಎಲ್ಲವನ್ನೂ ಪಡೆದುಕೊಂಡು ಶ್ರೀಹರಿಯ ಇಚ್ಛೆಯಂತೆ ನಡೆದುಕೊಳ್ಳಲು ಬರುವ ಭೂಲೋಕವು ಇಲ್ಲಿಂದ ಎಷ್ಟು ದೂರದ ದಾರಿ?

ಮಾಯೆ—ಒಂದೆರಡು ಗಳಿಗೆಗಳು ಹತ್ತಬಹುದು.

ತೇ. ಜೀವ— ಮತ್ತೆ ಯಾವುವಾದರೂ ಲೋಕಗಳು ತನ್ಮಧ್ಯೇ ಹತ್ತಬಹುದೇನು?

ಮಾಯೆ—ಹೌದು. ಇಲ್ಲಿಂದ ವಾಯುಲೋಕ; ಅಮೇಲೆ ಧೂಮಲೋಕ; ಬಳಿಕ ಮೇಘಲೋಕ; ತದನಂತರ ಪರ್ಜನ್ಯಲೋಕ; ಪಶ್ಚಾತ್ ಔಷಧೀಲೋಕ. ಅದಾದಮೇಲೆ ಜನನಿಯು ಗರ್ಭದಲ್ಲಿ ನವಮಾಸವಿದ್ದು, ಭೂಮಿಯ ಬೆಳಕನ್ನು ಕಾಣಬೇಕು

ತೇ. ಜೀವ—ಭೂಮಿಯಲ್ಲಿ ಜನಿಸಲಿಕ್ಕೆ ಇಷ್ಟೊಂದು ಅವಧಿ ಬೇಕೇ?

ಮಾಯೆ—ಅವಧಿಯೆಂದು ನಮಗೆ ಎನಿಸುತ್ತದೆ ಮರಣದಂತೆ ಜನನವೂ ಸುವ್ಯವಸ್ಥೆಯಿಂದ ಜಾಗೃತವಾದಂತೆ.

ತೇ. ಜೀವ—ದೇವೀ; ತಮ್ಮ ಉಪಚಾರಕ್ಕೆ ನಾನು ಕೃತಜ್ಞನು. ಬೇಗನೇ ಹೊರಡುವೆ ಭೂಲೋಕಕ್ಕೆ. ದೇವೀ, ಬರುವೆ (ಹೊರಡಲು ಪ್ರಯತ್ನಮಾಡಿ ಬಾರದಂತಾಗಲು) ಇದೇನು? ನನ್ನ ದೇಹವೇ ಕೆಳಗಿಳಿಯಲೊಲ್ಲದು ಇದೇನು ಮಾಟ!

ಮಾಯೆ—ಮಾಟವಲ್ಲ. ಇದು ಮಾಯಾಲೋಕವು. ತೇಜೋ ಜೀವಿಯ ಗತಿಯು ಇಲ್ಲಿಗೆ ಬಂದೊಡನೆ ತಪಸ್ವಿಯಾಗುವುದು.

ತೇ. ಜೀವ— ಮುಂದೆ ಗತಿ?

ಮಾಯೆ:— ಇಲ್ಲಿ 'ಮಾಯಾಕವಚ' ಧಾರಣ ಮಾಡಿಕೊಂಡು ಭೂಮಿಗೆ ಪ್ರಯಾಣ ಬೆಳೆಸಬೇಕು.

ತೇ. ಜೀವ: - ಅದನ್ನು ಹೇಗೆ ಧಾರಣ ಮಾಡುವುದು?

ಮಾಯೆ: – ಎಲ್ಲವನ್ನೂ ನಾನು ಹೇಳುತ್ತೇನೆ. ಅದರಂತೆ ಮಾಡಿರಿ. ಇಲ್ಲಿ ಎಡಗಡೆಯಲ್ಲಿ 'ಮಾಯಾವಾಹಿನಿ'ಯು ಹರಿಯುತ್ತದೆ. ಆದರಲ್ಲಿ ಸ್ನಾನಮಾಡಿರಿ; ಮುಳುಗಿರಿ ಏಳುವುದರೊಳಗಾಗಿ ತನ್ನಷ್ಟಕ್ಕೆ ತಾನೇ 'ಮಾಯಾಕವಚ'ವು ಹೊಂದಿಕೊಂಡಿರುವುದು. ಬಳಿಕ ಸಹಜವಾಗಿ ಹೋಗಬಹುದು.

(Effect:- ಬಾಗಿಲ ಸಪ್ಪಳ) ಯಾರವರು?

ಒಳಗಿನಿಂದ:—ಮೃತಜೀವವು ನಿಮ್ಮನ್ನು ಕಾಣಬೇಕೆನ್ನುವುದು.

ಮಾಯೆ:— ಹಾಗಾದರೆ ಕರೆದುಕೊಂಡು ಬಾ.

ತೇ. ಜೀವಃ— ಮೃತಜೀವನೆಂದರೆ ಯಾರು ?

ಮಾಯೆಃ— ಭೂಲೋಕದಿಂದ ಒಂದು ಜೀವವು ತನ್ನ ಭೂಲೋಕದ ಯಾತ್ರೆಯನ್ನು ಮುಗಿಸಿಕೊಂಡು ಬಂದಿದೆ.

ತೇ. ಜೀವಃ— ಯಾಕೋ ನನಗೆ ಭೆಟ್ಟಿಯಾಗಬೇಕೆನಿಸಿದೆ. ಅಪ್ಸರೆಯಾದರೆ.....

ಮಾಯೆಃ— ಆಗಲಿ. (ಅಪ್ಸರಲ್ಲಿ ಮೃತಜೀವವು ಬರುವುದು) ಮೃತಜೀವನೇ, ಇದು ತೇಜೋಜೀವಿಯು ಚಂದ್ರಲೋಕದಿಂದ ಬಂದಿದೆ.

ಮೃ. ಜೀವಃ— ನಮಸ್ತೇ !

ಮಾಯೆಃ – ಇದು ಮೃತಜೀವ.

ತೇ. ಜೀವಃ— ನಮಸ್ತೇ !

ಮಾಯೆಃ— ನಾನು ಇಪ್ಸರಲ್ಲಿಯೇ ಬರುವೆ. (ಹೋಗುವಳು)

ತೇ. ಜೀವಃ– ಮೃತಜೀವಿಯೇ, ನಿಮ್ಮ ಭೆಟ್ಟಿಯಾವುದು ಬಹಳೇ ನೆಟ್ಟಗಾಯಿತು.

ಮೃ. ಜೀವಃ— ನನಗೂ ನೆಟ್ಟಗಾಯಿತು. ತಾವು ಹೋಗುವುದೆಲ್ಲಿಗೆ ?

ತೇ. ಜೀವಃ— ಭೂಲೋಕಕ್ಕೆ.

ಮೃ. ಜೀವಃ— ಏನು ? ಭೂಲೋಕದಲ್ಲಿ....ಜನಿಸಲಿಕ್ಕೆ ಹೊರಟಿರುವಿರಾ ?

ತೇ. ಜೀವ—ಹೌದು.

ಮೃ. ಜೀವ—ಆಶ್ಚರ್ಯ !

ತೇ. ಜೀವ—ಏದೇಕೆ ?

ಮೃ. ಜೀವ—ಜನಿಸುವುದು ! ಭೂಲೋಕದಲ್ಲಿ ಜನಿಸುವುದು !– ಎಂದಕೂಡಲೇ ಮೈ ಜುಮ್ಮೆನ್ನುವುದು. ಅಲ್ಲಿಯ ಅಸ್ತವ್ಯಸ್ತ ಜೀವನಗಳ ಭಾವಚಿತ್ರವೇ ನನ್ನ ಕಣ್ಣಮುಂದೆ ಬರುತ್ತದೆ.

ತೇ. ಜೀವ— ಅಂದರೆ ?

ಮೃ. ಜೀವ—ಅಹ್ಹೊಂದು ಹದಗೆಟ್ಟದೆ ಭೂಲೋಕ.

ತೇ. ಜೀವ—ರಾಮರಾಜ್ಯದ ಭೂಲೋಕವು ಹದಗೆಟ್ಟದೆ ಎಂದು ಅನ್ನುವಿರಾ ?

ಮೃ. ಜೀವ—ಈಗ ಅಲ್ಲಿ ನಡೆದದ್ದು 'ರಾಮರಾಜ್ಯ'ವಲ್ಲ; ಅರಾಮರಾಜ್ಯವು ! ಸ್ವಲ್ಪದರಲ್ಲಿ ಹೇಳಬೇಕಾದರೆ, ಭೂಲೋಕವು ಸುಳ್ಳಿನ ಸಂತೆ ! ಸ್ವಾರ್ಥದ ಕಂತೆ ! ಅಹಂಕಾರದ ಸಾಕಾರ ! ದುರಭಿಮಾನದ ಪ್ರಾಕಾರ ! ಮೋಸದ ಬೀಡು ! ಮತ್ಸರದ ಸಿವುಡು ! ಧರ್ಮಕ್ಕೆ ಅಸರೆಯಿಲ್ಲ ! ನೀತಿಗೆ ಆಧಾರವಿಲ್ಲ !

ತೇ. ಜೀವಃ — ಇದನ್ನೇನು ಹೇಳುವಿರಿ ? ನಾನೊಮ್ಮೆ ಹಿಂದಕ್ಕೆ ಜನಿಸಿದಾಗ, ಭೂಲೋಕವು ಸುಖ-ಶಾಂತಿಗಳ ತವರೂರಾಗಿತ್ತು ! ರೀತಿ-ನೀತಿಗಳ ಕ್ರೀಡಾಂಗಣವಾಗಿತ್ತು ! ವಿಶ್ವಬಂಧುತ್ವದ ತಾಯ್ನೆಲೆಯಾಗಿತ್ತು.

ಮೃ. ಜೀವಃ— ಈಗ ಕಾಯಿದೆಗಳ ರಂಗಮಂಟಪವಾಗಿದೆ. ಒಡಕ್ಕು ಮೋಸ, ಯುದ್ಧಗಳ ರಂಗಸ್ಥಳವಾಗಿದೆ.

ತೇ. ಜೀವಃ— ಧರ್ಮ-ಕರ್ಮಗಳು ನಡೆದು ಜೀವನವು ಸುಗಮವಾಗಿತ್ತು.

ಮೃ. ಜೀವಿಃ — ಧರ್ಮಶ್ರದ್ಧೆಯು ಅಡಗಿ ಜೀವನವು ದುರ್ಗಮವಾಗಿದೆ.

ತೇ. ಜೀವಃ— ರಾಮಾಯಣ-ಭಾರತಕಾಲಗಳ ಪುಣ್ಯ ಪುರುಷರ ವಂಶಜರು ಹೀಗಾದರೆ ? ಅವರ ಯಾವ ಗುಣಗಳೂ ಇವರಲ್ಲಿ ಇಲ್ಲವೇ ?

ಮೃ. ಜೀವಃ— ಒಂದೆರಡು ಉಳಿದಿವೆ.

ತೇ. ಜೀವಃ— ಅವು ಯಾವುವು ?

ಮೃ ಜೀವಃ— ಧೃತರಾಷ್ಟ್ರನ ಕುರುಡತನ ! ದುಶ್ಶಾಸನನ ಶಾಸನ ! ಕಂಸನ ಸ್ವಾರ್ಥ ! ಅಗಸನ ಹೇಡಿತನ ! ರಾವಣನ ಮೋಸತನ !

ತೇ. ಜೀವ— ಇದನ್ನೇನು ಕೇಳುವೆ ! ಶಾಂತಂ ಪಾಪಂ !

ಮೃ. ಜೀವ— ಈಗಲಾದರೂ ಧರ್ಮ, ಕರ್ಮ, ರೀತಿ, ನೀತಿ ಶಾಂತಿ, ಸಮಾಧಾನಗಳು ದೊರೆಯುತ್ತವೆ ....ಬಣ್ಣದ ಮಾತಿನಲ್ಲಿ-ಬರೆದಿಟ್ಟ ಗ್ರಂಥಗಳಲ್ಲಿ ! ಇಂದಿನ ಮಾನವತೆಯ ನುಡಿ ಒಂದು; ನಡೆ ಮತ್ತೊಂದು; ವಿಚಾರ ಮಗುವೊಂದು !

ತೇ. ಜೀವ— ಇದೇನೆಂದಿರಿ !

ಮೃ. ಜೀವ— ಇಂದಿನ ಸಮಾಜಪುರುಷನ ಒಂದೊಂದು ಅಂಗಕ್ಕೆ ಒಂದೊಂದು ಬೇನೆ ! ಸರ್ವಾಂಗಗಳು ಬಲಹೀನವಾಗಿವೆ. ತೇಜೋಹೀನವಾಗಿವೆ. ಸಮತೆಯ ಪೊಳ್ಳುಕಲ್ಪನೆಯಿಂದ ಕಾಲ ತಲೆಯಾಗಬೇಕೆನ್ನುತ್ತದೆ. ಕೈ ಕಣ್ಣುಗಬಯಸಿದರೆ, ಕಿವಿ ಬಾಯಾಗಬಯಸುತ್ತದೆ. ಆ ಆ ಇಂದ್ರಿಯಗಳ ವ್ಯಾಪಾರವು ದೈವದತ್ತವೆಂದೂ ಕರ್ಮಾನುಸಾರವೆಂದೂ ತಿಳಿಯದೆ, ತಮ್ಮ-ತಮ್ಮೊಳಗೆ ಜಗಳವಾಡಹತ್ತಿವೆ. ತಸ್ಮಾತ್ ಪ್ರಗತಿಯು ನಿಂತಿದೆ. ಇಡೀ ದೇಹವೇ ಕೊಳೆತ ನೀರಿನ ಕೊಂಡದಂತಾಗಿದೆ.

ತೇ. ಜೀವ— ಆಶ್ಚರ್ಯ ! ಸಹಸ್ರಾವಧಿ ವರ್ಷಗಳಿಂದ ನಡೆದು ಬಂದ ಸಂಸ್ಕೃತಿಯು ಇಷ್ಟು ಬೇಗನೆ ಅಧೋಗತಿಗೆ ಇಳಿಯಬೇಕೆ ! ಹೀಗಾಗಲಿಕ್ಕೆ ಕಾರಣ ?

ಮೃ. ಜೀವ — ಬಾಲ್ಯದಿಂದಲೂ ಮನಸ್ಸು ಇಂದ್ರಿಯಗಳ ಸ್ವಾಧೀನವಾಗಿದೆ. ಮನೋನಿಗ್ರಹವಿಲ್ಲದ ಆತ್ಮವು, ಜೇಡನ ಬಲೆಯಲ್ಲಿ ಸಿಕ್ಕ ಹುಳದಂತೆ, ಆಶಾಜಾಲದಲ್ಲಿ ಸಿಕ್ಕು ತೊಳಲುತ್ತದೆ. ಅಜ್ಞಾನದ ಅಂಧಂತಮಸ್ಸಿನಲ್ಲಿ ನರಳಾಡುತ್ತಿದೆ. ಬಾಳು ಗೋಳಾಗಿದೆ ! ಗೋಳು ಸಾಕಾಗಿದೆ ! ಸಾವು ಬೇಕಾಗಿದೆ ಭೂಮಿಯಲ್ಲಿ !

ತೇ. ಜೀವಃ— ಅಂ ! ಬುದ್ಧಿಹೇಳಿ ಒಳ್ಳೆಯ ದಾರಿ ಹಿಡಿಸುವ ಸತ್ತ್ವಶಾಲಿಗಳು ಇಲ್ಲವೆ ?

ಮೃ. ಜೀವ— ಸತ್ತ್ವಶಾಲಿಗಳ ಮಾತು ಗ್ರಂಥಸ್ಥವಾಗಿದೆ ಎಲ್ಲಿಯಾದರೂ ಒಬ್ಬಿಬ್ಬರು ಇದ್ದರೆ, ಅವರೆಲ್ಲ ರಾಜಕೀಯರಂಗದ ಸೂತ್ರಗೊಂಬೆಗಳಾಗಿದ್ದಾರೆ.

ತೇ. ಜೀವ— ಅಂತೂ ಸತ್ವಶಾಲಿಗಳ ಸ್ಪೈರಪ್ರಭಾವವು ಇಷ್ಟಗಿದೆಯೆಂದ ಹಾಗಾಯಿತು.

ಮೃ. ಜೀವ— ಆಧ್ಯಾತ್ಮಿಕ ಸಂಶೋಧನೆಯ ಬದಲಾಗಿ ಭೌತಿಕ-ಶಾಸ್ತ್ರ ಸಂಶೋಧನೆಗಳು ಹೆಚ್ಚಾಗಿವೆ. ಅಸಂಖ್ಯ ಮತಗಳು, ಗಣನೆಯಿಲ್ಲದ ರಾಜ್ಯಗಳು ಆಗಿವೆ. ಇಂದಿನ ಸಂಶೋಧನೆಗಳು ಮಾನವತೆಗೆ ಮಾರಕವಾಗತೊಡಗಿವೆ.

ತೇ. ಜೀವ— ಆತ್ಮತೇಜವುಳ್ಳ ಸಾತ್ವಿಕರ ಕೈಯಲ್ಲಿ ಎಲ್ಲ ಸಂಶೋಧನೆಗಳು ತಾರಕವಾಗುವುವು; ತಾಮಸಿಗಳ ಕೈಯಲ್ಲಿ ಮಾರಕವಾಗುವುವು; ಭೌತಿಕ ಸಂಶೋಧನೆಗಳನ್ನು ಎಷ್ಟೋ ಪಾಲು ಮೀರುವ ಆಧ್ಯಾತ್ಮಿಕ ಸಂಶೋಧನೆಗಳಿವೆ. ಅದರೆ ಅವು ತಮೋಗುಣಿಗಳಿಗೆ ಸಾಧ್ಯವಿಲ್ಲ. ಆತ್ಮಸಿದ್ಧಿ, ಮನೋಬಲ ಇವೆರಡರ ಜೋಡಿಯಾದರೆ ಏನು ಬೇಕಾದುದನ್ನು ಮಾಡಬಹುದು. ಒಂದೇ ಸ್ಥಳದಲ್ಲಿ ಕುಳಿತು ಎಲ್ಲ ಜಗತ್ತನ್ನೂ ನೋಡಬಹುದು! ಸಮಾನಶಕ್ತಿಯುಳ್ಳವರೊಡನೆ ಬೇಕಾದಾಗ ಮಾತನಾಡಬಹುದು! ಇಂತಹ ಆಧ್ಯಾತ್ಮಿಕ ಬಲವು ಈಶ್ವರೀಶಕ್ತಿಯನ್ನು ದಂಗುಗೊಳಿಸಬಹುದು! ಪ್ರತಿಸೃಷ್ಟಿಯನ್ನೇ ನಿರ್ಮಿಸಬಹುದು ವಿಶ್ವಾಮಿತ್ರನಂತೆ!

ಮೃ. ಜೀವ— ಆಧ್ಯಾತ್ಮಿಕ ಸಂಶೋಧನೆಗಳ ಬಗೆ ಹೇಗೆ?

ತೇ. ಜೀವ— ಮನಸ್ಸು 'ಯಮ-ನಿಯಮ' ಗಳಿಂದ ಪವಿತ್ರವಾಗಬೇಕು. ಸ್ವಾರ್ಥವು ಅಳಿಯಬೇಕು; ಪರಮಾತ್ಮನಲ್ಲಿ ಶ್ರದ್ಧೆ—ಆತನ ಚಿಂತನೆಯಲ್ಲಿ ಇರಬೇಕು. ಅಖಿಲಜೀವಿಗಳು ತನ್ನ ಹಿತೈಷಿಗಳು. ತಾನು ಸರ್ವಹಿತೈಷಿಯಾಗಬೇಕು. ಇಂತಹ ನಿರ್ಮಲ ಮನಸ್ಸಿನಿಂದ ಐಚ್ಛಿಕ ಜ್ಞಾನದ ನಿಧಿಧ್ಯಾಸಗಳನ್ನು ಮಾಡಿಕೊಂಡಲ್ಲಿ, ಆ ಜ್ಞಾನಜ್ಯೋತಿಯು ಅಂತಃಚಕ್ಷುವಿನ ಮುಂದೆ ಬಂದು ನಿಲ್ಲುವುದು; ಆತ್ಮತೇಜದಲ್ಲಿ ಬೆರೆಯುವುದು; ಬಳಿಕ ಕಲ್ಪನಾಸಾಮರ್ಥ್ಯದೊಡನೆ ಕ್ರಿಯಾರೂಪದಲ್ಲಿ ಇಳಿಯುವುದು ಇದೇ ವಿದ್ಯಾರ್ಜನೆ. ಏಕಲವ್ಯನ ಉದಾಹರಣೆಯು ಇದಕ್ಕೆ ಸಾಕ್ಷಿಯಾಗಿದೆ. ಇಂತಹ ವಿದ್ಯಾಬಲದಿಂದ ಮನುಷ್ಯನು ತ್ರಿಕಾಲಜ್ಞಾನಿಯೂ ಸ್ಥಿತಪ್ರಜ್ಞನೂ, ಅಪರೋಕ್ಷ ಜ್ಞಾನಿಯೂ ಆಗಬಹುದು. ಇಷ್ಟೇ ಅಲ್ಲ, ಅಷ್ಟಸಿದ್ಧಿಗಳನ್ನು ಸ್ಥಾಪಿಸಿಕೊಂಡು, ಪರಲೋಕಗಳ ಸಂಪರ್ಕಸಾಮರ್ಥ್ಯವನ್ನೂ ಪಡೆಯಬಹುದು ಅಂತೆಯೇ ಮಂಗಳಲೋಕದವರು ಮೊನ್ನೆ ಮೊನ್ನೆ 'ಹಾರ್ದಳಿಗೆ' (Flying saucer)ಯಲ್ಲಿ ಕುಳಿತು ಭೂಲೋಕಕ್ಕೆ ಬಂದಿದ್ದರಂತೆ.

ಮೃ. ಜೀವ— ಇದೇನಾಶ್ಚರ್ಯ!

ತೇ. ಜೀವ— ಜ್ಞಾನಜನ್ಯ ಯಂತ್ರಶಕ್ತಿಯಿಂದ ಜ್ಞಾನಶಕ್ತಿಯು ಅಧಿಕವಲ್ಲವೇ?

ಮೃ. ಜೀವ— ಹೌದು.... ತಾವು ಭೂಲೋಕಕ್ಕೆ ಹೋಗಿ ಇದನ್ನೆಲ್ಲ ಮಾಡಬಲ್ಲಿರಾ?

ಪ್ರಕಟವಾಗುವವು! ತೀವ್ರದಲ್ಲಿ ಪ್ರಕಟವಾಗುವವು!!

ಅಭಿನವ ಗಣಿತ

ಲೇ. : ಹರಿಹರ

ಪ್ರಾಥಮಿಕ ಶಾಲೆಗಳ ೧, ೨, ೩ನೆಯ ವರ್ಗಗಳ ಬಗ್ಗೆ ಶಾಸ್ತ್ರೀಯದೃಷ್ಟಿಯಿಂದ ಬರೆದ ಗಣಿತಗಳ ಕೊರತೆಯಿದ್ದು, ಇದನ್ನು ನಿವಾರಿಸಲೆಂದೇ ಹೊಸದಾಗಿ **"ಅಭಿನವ ಗಣಿತ"** ಗಳನ್ನು ಹೊರಡಿಸಲಾಗಿದೆ. ಮಕ್ಕಳ ಪರಿಚಯದ ವಾತಾವರಣವನ್ನೇ ಆಧರಿಸಿ ಲೆಕ್ಕಗಳನ್ನು ಕೊಡಲಾಗಿದೆ. ಹಲವಾರು ಬಾಯಿಲೆಕ್ಕಗಳಿವೆ. ಪುಟಪುಟಕ್ಕೂ ಚಿತ್ರ, ಆಕೃತಿಗಳ ಸೂರೆಯಾಗಿದೆ. ಮುಖ್ಯವಾಗಿ ಗಣಿತಜ್ಞರ ಜೂನದಿಂದ ಬಳಕೆಯಲ್ಲಿ ಬರುವ ಹೊಸ ಅಭ್ಯಾಸಪತ್ರಿಕೆಯನ್ನು ಅನುಸರಿಸಿ ಬರೆದಿರುವುದರಿಂದ ಮಕ್ಕಳಿಗೂ, ಶಿಕ್ಷಕರಿಗೂ ತುಂಬಾ ಸಹಾಯಕವಾಗಬಲ್ಲವು ಗಣಿತ ವಿಷಯವು ನೀರಸ ವಿಷಯವಾಗಿರದೆ, ಸರಸ ವಿಷಯವೇ ಆಗಿಬಿಡಿಯೆಂಬುದನ್ನು ಅಭಿನವ ಗಣಿತಗಳ ಅನುಸರಣೆಯಿಂದ ನೀವೇ ಹೇಳುತ್ತೀರಿ. ಅಂತೇ ಈ ಹೊಸ ಗಣಿತಗಳ ಪ್ರಕಟನೆಯನ್ನು ನೀರೀಕ್ಷಿಸಿರಿ. ವಿವರಗಳಿಗಾಗಿ:—

ಶ್ರೀ ಸಾಯಿಬಾಬಾ ಪಬ್ಲಿಕೇಶನ್ಸ್,
ಧಾರವಾಡ

ತೇ. ಜೀವ— ಪ್ರಯತ್ನವನ್ನಂತೂ ಮಾಡುವೆ; ಯಶಾಪಯಶಗಳು ಭಗವಂತನ ಕೈಸೇರುವವು .... ಅದೋ ಮಾಯಾದೇವಿ ಬರುವಂತೆ ಕಾಣುತ್ತದೆ.

ಮಾಯೆ— (ಬಂದು) ಮೃತಜೀವಿಯೇ, ಏನೆಂಬೆ? ತೇಜೋಜೀವಿಯೇ, ಹೊತ್ತಾಯಿತು.

ಮೃ. ಜೀವ— ತಮ್ಮ ಇಚ್ಛೆ.

ತೇ. ಜೀವ— ತಮ್ಮ ಇಚ್ಛೆ.

ಮಾಯೆ— ಮೃತಜೀವನೇ ನೀನು ಬಲಗಡೆಯಲ್ಲಿದ್ದ 'ನಿರ್ಯಾಯಾವಾಹಿನಿ'ಯಲ್ಲಿ ಮುಳುಗಿ ಏಳು.

(Effect:— ಎರಡೆರಡು ಸಲ ಮುಳುಗಿ ಏಳುವ ಸಪ್ಪಳ.)

ಮೃ. ಜೀವ— ಎಲೆ! ನೀಲಕ್ಕೇರಹತ್ತಿದೆನಲ್ಲ! ದೇವೀ, ನಮಸ್ತೇ!

ತೇ. ಜೀವ— ಆಶ್ಚರ್ಯ! ನಾನು ಅನಾಯಾಸವಾಗಿ ಕೆಳಗೆ ಇಳಿಯಹತ್ತಿದೆನಲ್ಲ! ಮಾಯಾದೇವೀ, ನಮಸ್ತೇ!

ಮಾಯೆ— ನಮಸ್ತೇ! ನಮಸ್ತೇ! ಮನೋಭೀಷ್ಟವು ಸಿದ್ಧಿಯನ್ನು ಪಡೆಯಲಿ.

ಎಲ್ಲಿಹಳೊ ನನ್ನವಳು ?

ಶ್ರೀ. ಬಿ. ಎಸ್. ಕಡಕೋಳ, ಹಾವೇರಿ

೧

ಎಲ್ಲಿಹಳೋ ನನ್ನವಳು; ನನ್ನ ಕೈ ಹಿಡಿದವಳು—
ಯಾವೂರ ಮೂಲೆಯಲಿ ಕಾಯುತಿಹಳು ?
ನನ್ನಂತೆ ಅವಳಲ್ಲಿ, ನನ್ನನೇ ನೆನೆಯುತ್ತ
ಹಗಲಿರುಳು ಮಿಡು-ಮಿಡುಕಿ ಮರುಗುವವಳು!

೨

ನಲ್ಲನೆಂತಿಹನೆಂದು, ದಿನವೆಲ್ಲ ಯೋಚಿಸುತ
ಕನಸಿನಲಿ ನನ್ನನ್ನು ಬರೆಯುವವಳು—
ಕಾಮನನು ಮಿಕ್ಕಿಸುವ ಚಿತ್ರವನು ಚಿತ್ರಿಸುವ
ದೇವಕನ್ನಿಕೆಯಂತೆ ಜೀವ ತುಂಬುವಳು ?

೩

ಮನುಜಲೋಕವ ಬಿಟ್ಟು, ದೇವಲೋಕವನೇರಿ
ಇಂದ್ರಪದವಿಯನೆನಗೆ ಕಟ್ಟುವವಳು—
ನನ್ನ ರಂಜನೆಗಾಗಿ ಅಪ್ಸರೆಯರೊಡಗೂಡಿ
ಗಾನನೃತ್ಯದಿ ಮನವ ತಣಿಸುವವಳು ?

೪

ವಿತಕ್ಕೊ ಮುನಿದಿರಲು, ಅತಿಯಾಗಿ ನೋಯುತ್ತ
ನನ್ನನ್ನು ಒಲಿಸಲಿಕೆ ಕರಗುವವಳು—
"ತಪ್ಪು ಕ್ಷಮಿಸಿರಿ ಎನ್ನ, ನಾ ಮಾಡೆನಿನ್ನೊಮ್ಮೆ"
ಎಂದೆನುತ ದೈನ್ಯದಿಂ ಬೇಡುವವಳು ?

೫

"ಎನ್ನ ಬಾಳಿನ ಚಂದ್ರ ನಿನ್ನೊಲವೆ ನನ್ನುಸಿರು".
ಎನ್ನುತ್ತ, ಈ ಬಾಳ ನೂಕುವವಳು—
ಪತಿಯೆ ದೇವನು ಎಂದು ಹೃದಯದಲಿ ಪೂಜಿಸುವ
ಮನದಿ, ಅಡಿಗಡಿಗೆನ್ನ ನಮಿಸುವವಳು ?

೬

ಕಾರ್ಯಭಾರದಿ ನಾನು ಕಡು ಬಳಲಿ ಬಂದಿರಲು
ನಸುನಗುತ ಬಾಗಿಲಲಿ ಇದಿರಾಗುವವಳು—
ಜಗದ ಜಂಜಡದಿಂದ ಮನವೆನ್ನ ಕದಡಿರಲು
ಮಧುರ ಮಾತುಗಳಿಂದೆ ಮೈಮರೆಸುವವಳು ?

೭

ಎನ್ನ ತಾಯ್-ತಂದೆಗಳ ತನ್ನ ಹಡೆದವರಂತೆ
ಭಕ್ತಿಯಿಂ ಪ್ರೇಮದಿಂ ಸತ್ಕರಿಸುವವಳು—
ಅವರ ಹರಕೆಯೆ ತನಗೆ "ದೇವವರ"ವೆಂದೆನುತ
ಅವರ ಪ್ರೇಮಕ್ಕಾಗಿ ಶ್ರಮಿಸುವವಳು ?

೮

ಎಲ್ಲಿಹಳೋ ನನ್ನವಳು ? ನನ್ನ ಕೈ ಹಿಡಿದವಳು
ಯಾವೂರ ಮೂಲೆಯಲಿ ಕಾಯುತಿಹಳು ?
ನನ್ನಂತೆ ಅವಳಲ್ಲಿ, ನನ್ನನೇ ನೆನೆಯುತ್ತ
ಹಗಲಿರುಳು ಮಿಡು ಮಿಡುಕಿ ಮರುಗುವವಳು ?

ಒಂದಿರುಳು

ಶ್ರೀ. ಮರಕುಂಬಿ ಶಂಕರ, ಬೆಳಗಾಂವಿ

ಮೆಲ್ಲನೆ ಮಾರುತ ಅಲೆದಾಡುತಲಿದೆ
ಮಲ್ಲಿಗೆಹೂಗಳ ಚುಂಬಿಸುತ,
ಜೆಲ್ಲಿದ ತಾರಾಮಂಡಲ ಬೆಳಗುತ
ಬರುತಿಹ ಚಂದ್ರನು ನಗು-ನಗುತ ‖೧‖
ಹಾರಾಡುತಲಿದೆ ಮೋಡವು ಅಗಸ—
ರಮಣಿಯ ಮುಖವನು ಅಡಗಿಸುತ,
ತಾವರೆಕೊಳವೇ ಕನ್ನಡಿಯಾಗಿದೆ
ಸುಂದರ ನೋಟವ ಬಿಂಬಿಸುತ ‖೨‖

ಕಾಡಿನ ಮಧ್ಯದಿ ಜುಳುಜುಳು ಹರಿವಾ
ನೀರಿನ ಗಾನವ ಕೇಳುತಲಿ
ಬಳ್ಳಿಗಳಡಿಯಲಿ ಗಿಡಗಳ ಹೊದರಲಿ
ಮಲಗಿದೆ ಕತ್ತಲೆ ಮೌನದಲಿ ‖೩‖
ಬಿಸಿಲಿಗೆ ಭೂವನ ಬಳಲಿದೆ ಎನ್ನುತ
ಬೆಳುದಿಂಗಳ ಮಳೆ ಸುರಿಸುತಿದೆ;
ಸೃಷ್ಟಿಯ ಸೊಬಗನು ನೋಡುತ ಆತ್ಮವು
ಶಾಂತಿಯ ರಸದಲಿ ಕರಗುತಿದೆ ‖೪‖

ಹಳ್ಳಿಗರ ಸಾಹಿತ್ಯದಲ್ಲಿಯ ಒಂದು ರಸಪರ್ವ

ಶೀ. ಮಿರ್ಜಿ ಅಣ್ಣಾರಾಯರು, ಉಗಾರ

●

ಒಕ್ಕಲಿಗರ ನಿತ್ಯದ ಕಷ್ಟದ ಕಲಸವನ್ನು ಅವರ ರಸದುಂಬಿದ ಸಹಜಸುಂದರ ಕವನಗಳು ಹಗುರುಗೊಳಿಸಬಲ್ಲವು. ಆ ಕವನಗಳನ್ನು ಸಂಗ್ರಹಿಸಿ ಸಂಶೋಧನೆ ಮಾಡಿದರೆ, ಅವುಗಳಿಂದ ಕನ್ನಡ ಜನಸಾಮಾನ್ಯದ ಜೀವನದ ಇತಿಹಾಸವೆಲ್ಲ ಬೆಳಕಿಗೆ ಬರುವುದು.

●

ಹೊಲಗೆಲಸದ ಹಾಡುಗಳು

ನಮ್ಮ ಹಳ್ಳಿಗರ ಎಲ್ಲ ಹಾಡುಗಳಲ್ಲಿ ನಮ್ಮ ಕಾವ್ಯದ ಉಗಮವನ್ನು ನಾವು ಕಾಣುತ್ತೇವೆ. ವೇದಗಳು ಹೇಗೆ ಅಪೌರುಷೇಯವೋ-ಹಾಗೆ ಈ ಹಾಡುಗಳು ಕೂಡ-ಒಂದು ದೃಷ್ಟಿಯಿಂದ ಅಪೌರುಷೇಯವೆಂದು ಹೇಳಬಹುದು. ಇವುಗಳನ್ನು ರಚಿಸಿದ ಕವಿಗಳನ್ನಾಗಲಿ, ಕಾಲವನ್ನಾಗಲಿ, ಗುರುತಿಸಿ ಹೇಳುವುದು ಸಾಧ್ಯವಿಲ್ಲ. ಅದರಿಂದ ಹಳ್ಳಿಗರ ಹಾಡುಗಳಿಗೆ 'ಜಾನಪದವೇದ'ಗಳೆಂದೂ ಎನ್ನುವರು, ಅಲ್ಲದೆ ಈ ಗೀತಸಾಹಿತ್ಯವು ಬಹುದಿನಗಳಿಂದ ಜನರ ಬಾಯಲ್ಲಿಯೇ ಬಾಳಿ ಬಂದಿದೆ. ಒಬ್ಬರಿಂದ ಇನ್ನೊಬ್ಬರು ಕೇಳಿ, ಕಲಿತು ಕಾಯ್ದುಕೊಂಡು ಬಂದುದರಿಂದ, ಇವು ಶ್ರುತಿಗಳಂತೆ ಜೀವಹಿಡಿದುಕೊಂಡು ನಿಂತಿವೆ. ವೇದ-ಸ್ಮೃತಿಗಳು ಬಹುದಿನಗಳ ಹಿಂದೆಯೇ ಲಿಪಿಬದ್ಧವಾದುವು. ಅದರಿಂದ ಅವಕ್ಕೊಂದು ನಿಶ್ಚಿತರೂಪ ಬಂದುಬಿಟ್ಟಿತು. ಆದರೆ ಇನ್ನೂ ಈ ಹಳ್ಳಿಗರ ಗೀತಗಳ ಸಂಗ್ರಹಕಾರ್ಯವು ಆಗಿಲ್ಲ. ಅದು ವಿವಿಧಮುಖಗಳಲ್ಲಿ ಇನ್ನೂ ಬೆಳೆಯುತ್ತಲೂ ಅಳಿಯುತ್ತಲೂ ಇದೆ. ಎಂದರೂ ಅವುಗಳಲ್ಲಿ ಮೂಡಿ ಮೆರೆಯುವ ಸಂಸ್ಕೃತಿಯ ಚಿತ್ರ ನಾತ್ರ ಅನುಪಮವಾಗಿದೆ, ಅಚ್ಚಳಿಯದೆ ಉಳಿದಿದೆ.

ಹಳ್ಳಿಗರ ಹಾಡುಗಳನ್ನು ನಾವು ಅನೇಕ ವಿಭಾಗಗಳಲ್ಲಿ ವಿಂಗಡಿಸಿ, ಅವುಗಳಲ್ಲಿಯ ಸಾಂಸ್ಕೃತಿಕಸ್ವರೂಪವನ್ನು ಅರಿತುಕೊಳ್ಳಬಹುದು. ಅವುಗಳಲ್ಲಿ ಮಕ್ಕಳ ಆಟದ ಹಾಡುಗಳು, ಮದುವೆಯ ಹಾಡುಗಳು, ಮನೆಗೆಲಸದ ಹಾಡುಗಳು, ಹೊಲಗೆಲಸದ ಹಾಡುಗಳು, ಹಬ್ಬದ ಹಾಡು, ಕಥೆಯ ಹಾಡು—ಎಂದು ಮೊದಲಾಗಿ ವಿಂಗಡಿಸುವುದೂ ಒಂದು ಕ್ರಮವಾಗಿದೆ. ಈ ವಿಭಾಗಗಳಲ್ಲಿಯ ಹೊಲಗೆಲಸದ ಹಾಡುಗಳ ಸಾಂಸ್ಕೃತಿಕ ಸ್ವರೂಪವನ್ನು ನಾನು ಈಗ ವಿಸ್ತರಿಸುವೆ.

ನಮ್ಮದು ಒಕ್ಕಲಿಗರ ನಾಡು. ಇಲ್ಲಿ ಬಹುಜನರು ಒಕ್ಕಲಿಗರು. ಅವರ ಕಾರ್ಯವು, ಹನ್ನೆರಡು ತಿಂಗಳೂ ಹೊಲಗೆಲಸ, ಭೂಮಿತಾಯಿಯ ಸೇವೆ. ಈ ಪವಿತ್ರಕಾರ್ಯದಲ್ಲಿ ತೊಡಗಿದಾಗ ದಣಿವನ್ನು ಮರೆಯಲೆಂದೋ, ಹರುಷವನ್ನು ಹೊರಗೆಡಹಲೆಂದೋ, ಸ್ಫೂರ್ತಿಯನ್ನು ಹೊಂದಲೆಂದೋ, ಒಮ್ಮೊಮ್ಮೆ ನೋವನ್ನು ವ್ಯಕ್ತಪಡಿಸಲೆಂದೋ—ಒಕ್ಕಲಿಗರು ಹಾಡನ್ನು ಹೇಳುವರು. ಆ ಹಾಡುಗಳನ್ನು ಎಲ್ಲಿಂದಾದರೂ ಅವರು ಕಲಿತುಬಂದಿರುವುದಿಲ್ಲ ಅವು ಅವರ ಜೀವನದಿಂದ ಮೂಡಿ ಬಂದಂತಹವು. ಅನುಭವದ ಅಳದಿಂದ ಉಕ್ಕಿ ಹೊರಹೊಮ್ಮಿದಂತಹವು; ಅದರಿಂದ ಪ್ರತಿಯೊಬ್ಬ ಒಕ್ಕಲಿಗನೂ ಒಂದು ರೀತಿಯಿಂದ ಕವಿಯೇ ಆಗಿರುತ್ತಾನೆ. ತುಂಬಿ ಬಂದ ಭಾವವನ್ನು ತನಗೆ ಬರುವ ಭಾಷೆಯಲ್ಲಿ ಉಸುರಿಬಿಡುವನು ಅದು ಅವನ ಜೀವನದ ಹಾಡಾಗಿರುವುದು. ಹಾಗೆ ಬಂದ ಹಾಡು ಸ್ವಾಭಾವಿಕವಾಗಿರುತ್ತದೆ. ಅವನ ಹೃದಯದ ನಿಜವಾದ ಪ್ರತಿಬಿಂಬವಾಗಿರುತ್ತದೆ. ಅದಕ್ಕೆ ಕೃತ್ರಿಮತೆಯ ಸೋಂಕಿಲ್ಲ. ನಿಯಮಗಳ ಬಂಧನವಿಲ್ಲ. ಅದರಿಂದಲೇ ಅವು ಸಂಸ್ಕೃತಿಯ ಸ್ವರೂಪವನ್ನು ಬಿತ್ತರಿಸುತ್ತವೆ.

ಸ್ವಲ್ಪ ಸಮಯದಲ್ಲಿ ಸಂಸ್ಕೃತಿಯ ಸ್ವರೂಪವನ್ನು ವಿವರಿಸುವುದು ಕಷ್ಟದ ಕಾರ್ಯ. ಏಕೆಂದರೆ 'ಸಂಸ್ಕೃತಿ' ಎಂಬ ಪದವು ಬಹು ವಿಶಾಲವಾದ ಅರ್ಥವುಳ್ಳದ್ದು. ಅದರಂತೆ ಹಳ್ಳಿಗರ ಗೀತಗಳ—ಅದರಲ್ಲೂ ಹೊಲಗೆಲಸದ ಹಾಡುಗಳ ಕ್ಷೇತ್ರವು ಕೂಡ ಬಹು ವಿಸ್ತಾರವಾದುದು, ವಿಪುಲತೆಯಿಂದ ಕೂಡಿದುದು. ಅಲ್ಲದೆ ನಾಡಿನ ಜನತೆಯಲ್ಲಿ ಎಷ್ಟು ವ್ಯಕ್ತಿತ್ವಗಳ ವೈವಿಧ್ಯವಿದೆಯೋ, ಅಷ್ಟೇ ವೈವಿಧ್ಯವು ಈ ಗೀತಗಳಲ್ಲಿ ಇದೆ. ಆದರೂ ಅವುಗಳಿಗೆಲ್ಲ ಸಾಮಾನ್ಯಸ್ವರೂಪವೆಂಬುದೊಂದು ಇರುತ್ತದೆ. ಒಕ್ಕಲಿಗರು ಹೊಲ ಹರಗುವಾಗ ಹಾಡಲಿ, ಹಂತಿ ಕಟ್ಟುವಾಗ ಹಾಡಲಿ, ಏತ ಹೊಡೆಯುವಾಗ ಹೇಳಲಿ, ಹತ್ತಿ ಬಿಡಿಸುವಾಗ ಅನ್ನಲಿ, ಯಾವಾಗ ಹಾಡಿದರೂ ಕೆಲಸದ ಬದಲಾವಣೆಯೇ ಹೊರತಾಗಿ ಹಾಡಿನ ಸ್ವರೂಪ ಒಂದೇ ಆಗಿರುವುದು. ಹಂತಿಯನ್ನು ಕಟ್ಟುವಾಗ ಕಾಳು ಹುಲುಸು ಆಗಲೆಂದು ಹಾಡಿದರೆ 'ಹುಲುಗೋ' ಎಂದು ಹುಲುಗುಹಾಕುವರು. ಆಗ ಹುಲುಸಾಗಿ ಹಾಡುಗಳು ಬರುವುವು. ಏತ ಹೊಡೆಯುವಾಗ, ನೇಗಿಲ ಹೊಡೆಯುವಾಗ ಬಳಲಿಕೆ ತಗ್ಗಲೆಂದೂ ಬಲವು ಬರಲೆಂದೂ ಕೂಗುವರು. ಅವೇ 'ಬಲೋರಿ'ಗಳೆಂದು ಪ್ರಸಿದ್ಧವಾಗಿವೆ. ಹೆಂಗುಸರು

ಬೇಸಗೆಯ ಬಿಸಿಲಲ್ಲಿ ಹತ್ತಿಯನ್ನು ಬಿಡಿಸುವಾಗ 'ಬಿಸಲ ಹತ್ತಿ'ಯನ್ನಂತೂ ಒಡೆಯನಿಂದ ಹಕ್ಕಿನಿಂದ ಪಡೆಯುವರು. ಪತಿ ಬಿಸಿಲಿನಲ್ಲಿ ಬಳಲಿದ್ದಕ್ಕೆ ಪತಿಯು ಕಾಣಿಕೆಯದು. ಅದರಂತೆ ಹತ್ತಿಯಿಂದ ಬೇಗನೆ ಉಡಿ ತುಂಬಿ ಬರಲೆಂದು ದೇವರ ದೀಸದ ಬತ್ತಿಗೆ—'ದೇವರ ಹತ್ತಿ—' ಎಂದೂ ತೆಗೆದಿಡುವರು. ಬಾಯಾರಿಕೆ ತಗ್ಗಲೆಂದು 'ಹತ್ತಿಯ ಹೂಲ ನೋಡು, ಹಾಸಿದ ಹಚ್ಚಡ ನೋಡು, ಹಯನದ ದನ ನೋಡು' ಎಂದು ಹಾಡುವರು. ಇಲ್ಲಿಯ ಭಾವಸೃಷ್ಟಿ ಬಹು ಮನೋಹರವಾಗಿದೆ. ಹೀಗೆ ವಿವಿಧ ಕೆಲಸಗಳಲ್ಲಿ ವಿವಿಧಮುಖವಾಗಿ ಹೊಲಗೆಲಸದ ಹಾಡುಗಳು ಹೊಮ್ಮಿವೆ. ಅವರ ಸಂಸ್ಕೃತಿಯನ್ನು ಒಡಮೂಡಿಸಿವೆ.

ಒಕ್ಕಲುತನದ ಕೆಲಸ ಬೇಸಗೆಯಲ್ಲಿ ರಂಟೆಹೊಡೆಯುವುದರಿಂದ ಆರಂಭವಾಗುವುದು. ರಂಟೆ—ನೆಗಿಲುಗಳಿಗೆ ಒಕ್ಕಲಿಗರು 'ಜಡಗಳೆ' ಎಂದು ಹೇಳುವರು. ಅದಕ್ಕೆ ಎಂಟು ಹತ್ತು ಎತ್ತುಗಳನ್ನು ಹೂಡುವರು. ಇಂತಹವನ್ನು ಎಳೆಯುವ ಅವರ 'ಬಸವಣ್ಣ' ಎಂಥವನಿರಬೇಕು ನೋಡಿ:—

ಬಸವಣ್ಣನ ಕಾಲೊಳಗ ಕುಶಲದ ಹಾಲ್ಗಡಗ |
ಭೂಮೀ ತೂಕದ ಹುಲಗೆಜ್ಜಿ | ಕಟ್ಟಿಕೊಂಡು |
ಎಂಟೆತ್ತಿನ ರಂಟ ಎಳೆದಾನೋ ||

ಅದೇ ಹಗುರುಗಳೆಯಿಂದ ಮುಂದೆ ಹೊಲವನ್ನು ಹರಗುವಾಗ,—

ಬೆಳ್ಳನ್ನ ಬಿಳಿಯೆತ್ತು | ಬೆಳ್ಳಿಯ ಬಾರಕೋಲು |
ಹಳ್ಳದ ಹೊಲವ ಹರಗ್ಯಾವೋ | ನಮ್ಮೆತ್ತಿನ |
ತೆಳ್ಳನ್ನ ಹೊಟ್ಟಿ ಹಸಿದಾವೋ ||

ನೇಗಿಲಿಗೆ 'ಭೂಮಿತೂಕ'ದ ಗೆಜ್ಜೆ ಕಟ್ಟಿಕೊಳ್ಳುವ ದೊಡ್ಡ ಎತ್ತು ಬೇಕಾದರೆ, ಭೂಮಿಯನ್ನು ಹರಗಲಿಕ್ಕೆ ತೆಳ್ಳನ್ನ ಹೊಟ್ಟಿಯ ಚಪಲ ಹೋರಿಯಾದರೆ ಸಾಕು. ಇದನ್ನೆಲ್ಲ ಒಕ್ಕಲಿಗ ಬಲ್ಲ. ಎಂತಲೇ ಅವನು,—

ಹದನೋಡಿ ಹರಗಣ್ಣ, ಬಿದೆ ನೋಡಿ ಬಿತ್ತಣ್ಣ |
ಹೊಡಿ ನೋಡಿ ದಂಟು ಮುರಿಯಣ್ಣ | ಜೋಡಿಯ |
ಗಡಿ ನೋಡಿ ಕುಸ್ತಿ ಹಿಡಿಯಣ್ಣ |
ಎಂಬ ಅನುಭವದ ಮಾತನ್ನು ಹೇಳುವನು.

ಒಕ್ಕಲಿಗನು ಹದನೋಡಿ ಹೊಲಹರಗಿ, ಬಿದೆನೋಡಿ ಬೀಜ ಬಿತ್ತಲಿಕ್ಕೆ ಸಿದ್ಧನಾಗಿ ಹೊಲಕ್ಕೆ ಹೋಗುವನು. ಆಗ ಅವನ ಉಬ್ಬು ಹೇಳತೀರದು.

ಕೂರಿಗಿ ಕೊಳ್ಳಕಟ್ಟಿ, ನೀರ ವಿಭೂತಿ ಧರಿಸಿ |
ಧೀರದಿಂದುಡಿಯ ತುಂಬಿದ | ಬಸವಯ್ಯ |
ನಡೆಯಪ್ಪ ಸಾಲುಬಡಬ್ಯಾಡ! |

ಎಂದು ಕೂರಿಗೆಯನ್ನೂ ಎತ್ತನ್ನೂ ಪೂಜಿಸಿ, ಸಾಲು ಹಿಡಿದು ಹೋಗುವಂತೆ ಪ್ರಾರ್ಥಿಸಿಕೊಂಡು, ಹೊಲ ಬಿತ್ತಲಿಕ್ಕೆ ಆರಂಭಿಸುವನು. ಅದೆಂತಹ ಬಿತ್ತುವಿಕೆ! ಅದೆಂತಹ ಕೂರಿಗೆ ಹೂಡಿ! ಅವರೇ ಹೇಳಬೇಕು:

ಬಾಗೀ ಗುಡ್ಡದ ಮೇಲೆ ಬೆಳ್ಳೀ ಕೂರಿಗೆ ಹೂಡಿ |
ಬಂಗಾರ ಸೆಡ್ಡಿ ಬಲಗೈಯ | ಹಿಡಕೊಂಡು |
ಹೊಸ್ನ ಬಿತ್ತ್ಯಾರೊ ಹೊಳಿಸಾಲೋ ||

ಒಕ್ಕಲಿಗರ ಮನಸ್ಸೂ ವಾಳೂ ಬಹಳ ಹಿರಿಯವು. ಅವರು ನದಿಯ ತೀರದ ಹೊಲಗಳನ್ನು ಬಿತ್ತಹತ್ತಿದರೆಂದರೆ, ಅವರಿಗೆ ತಾವು ಬಿತ್ತುವುದು ಹಿಡಿ ಕಾಳನ್ನಲ್ಲ; ಹೊನ್ನನ್ನೇ ಇಲ್ಲಿ ಬಿತ್ತುತ್ತಿರುವೆನೆಂದು ನಂಬಿಕೆ. ಅಷ್ಟು ನಿಶ್ಚಿತವಾಗಿ ಅಲ್ಲಿ ಬೆಳೆಬರುವುದೆಂಬ ಭರವಸೆ ಅವರಿಗೆ. ಎಂತಲೇ 'ಬಂಗಾರ ಬಿತ್ತಿ ಬಂಗಾರ ಬೆಳೆಯುವಂತಹ ಭೂಮಿ ನಮ್ಮದು' ಎಂದು ಹುಮ್ಮಸ್ಸಿನಿಂದ ಹೇಳುವರು. ಅವರು ಬಿತ್ತುವ ಕೂರಿಗೆಯಾದರು ಯಾತರದು ಗೊತ್ತೇ? ಬೆಳ್ಳಿಯದು. ಅದರ ಸೆಡ್ಡಿ—ತಾನು ಬಲಗೈಯಲ್ಲಿ ಹಿಡಿದದ್ದು—ಬಂಗಾರದ್ದು. ಅವನ ಸಂಪತ್ತಿಗೇನು ಕೊರತೆ? ಅವನು ಬಿತ್ತುವ ಹೊಳೆಸಾಲಿನ ಭೂಮಿ ಸಾಲ್ಕು ಮೂರಿದ್ದರೂ, ಅದೇ ಬಹಳ ವಿಶಾಲ-ನೆಲವೆಂದ ಅವನ ಭಾವನೆ. ಅದಕ್ಕೇ ಅವನು ತನ್ನ ದೃಷ್ಟಿ ಕೊನೆಮುಟ್ಟುವನ್ನ ಇರುವ ಬಾಗಿಯ ಗುಡ್ಡದ ಮೇಲೆ ನಿಂತು, 'ಬೆಳ್ಳಿಯ ಕೂರಿಗೆಯನ್ನು ಹೂಡಿದೆನೆಂದು ಹೇಳುವನು. ಅಲ್ಲಿಯ ವರೆಗೆ ತಾನು ಬಿತ್ತುವ ಹೊಲದ ಹರವು ಇರುವಂತೆ ಕಲ್ಪನೆ ಅವನದು. ಇದರಲ್ಲಿ ಜನರ ಹಿರಿಯ ಮನೋವೃತ್ತಿಯನ್ನು ನಾವು ಕಾಣುತ್ತೇವೆ. ತಮ್ಮದ ಒಳ್ಳೆಯದೆಂಬ ಭಾವನೆಯು ತಾನೇ ತಾನಾಗಿ ಮೂಡಿ ಬಂದಿದೆ. ಈ ವಿಶಾಲ ಹಾಗೂ ಸದಭಿಮಾನಯುಕ್ತ ಭಾವನೆಗೆ ದೈವಭಕ್ತಿಯು ಸೇರಿ ಇನ್ನೂ ಕಳೆಗೊಡುತ್ತದೆ.

ಗುಡ್ಡದ ವಾರ್ಯಾಗ ಗುಗ್ಗುಳ ಹೊಗೆ ಎದ್ದು |
ಅಪ್ಪುರಾಯನ ಶಿವಪೂಜೀ | ಅಗುವಾಗ |
ಆಕಾಶದ ಗಂಟೆ ನುಡಿದಾವೋ ||

ಗುಡ್ಡದ ಓರೆಯಲ್ಲಿ ಅಪ್ಪುರಾಯ ಶಿವಪೂಜೆ ಮಾಡುವನು. ಪರ್ವತದಲ್ಲಿ ಶಿವನ ವಾಸ, ಅಲ್ಲಿಯೇ ಅವನ ಪೂಜೆ. ಭಕ್ತಿಯಿಂದ ಪೂಜೆ ಮಾಡುವಾಗ, ಆಕಾಶದ ಗಂಟೆ ನುಡಿಯುವುದೇನೂ ಅಚ್ಚರಿಯ ಮಾತಲ್ಲ, ಒಕ್ಕಲಿಗರಿಗೆ ಆಕಾಶವೇ ಅವರ ಶಿವನ ಗುಡಿ. ಅಲ್ಲಿಯ ಚಿಕ್ಕೆ-ತಾರೆಗಳೇ ಅವರ ಕಲ್ಪನೆಯ ಗಂಟೆಗಳು. ಹೀಗೆ ಸೃಷ್ಟಿಯಲ್ಲಿ ದೇವರನ್ನು ಕಾಣುವ ಮನೋವೃತ್ತಿ ಅವರಲ್ಲಿ ಹುಟ್ಟಿ ಬೆಳೆದು ಬಂದಿರುವುದು. ದೇವರ ಋಣ ತಮ್ಮ ಮೇಲೆ ಬಹಳ ಹಿರಿಯದೆಂದು ಅವರು ನಂಬಿರುವರು. ತಮ್ಮ ಉದ್ಯಮಕ್ಕೆ ಎತ್ತು ಬಹಳ ಅಗತ್ಯ. ಎತ್ತೆಂದರೆ ಅವರಿಗೆ ಪಂಚಪ್ರಾಣ. ಆದರೂ ಶಿವನ ಋಣಕ್ಕಾಗಿ ಅವುಗಳನ್ನು ಮಾರಲು ಸಿದ್ಧನಾತ. ನೋಡಿ,—

ಕಾಮಣ್ಣ ಕರಿಯೆತ್ತೋ ಭೀಮಣ್ಣ ಬಿಳಿಯೆತ್ತೊ |
ಮಾಲಿಂಗ ಎಂಬುದು ಮೊದಲೆತ್ತೊ | ಮಾರಿದರ |
ಶಿವ ನಿನ್ನ ಸಾಲಃ ಹರಿಲಿಲ್ಲೋ ||

ಹೀಗೆ ಶಿವನಿಗಾಗಿ ತ್ಯಜಿಸ ಬೇಕಾದ ಎಂದ ಎತ್ತುಗಳನ್ನು, ಅವನು ನೇಯಿಸಿದ ಬಗೆಯನ್ನೂ ಕೇಳಬಹುದು :

ಹಿಂಡುಗಾರನ ಎತ್ತು ಹಿಂಡಿಯ ಮೇದಾವು |
ಗುಂಡದ ನೀರ ಕುಡಿದಾವೋ | ನಮ್ಮೆತ್ತು |
ಬೆಳ್ಳಕ್ಕಿ ನೋಡಿ ಬೆದರ್ಯಾವೊ ! ||

ಳಯಿತು; ಬೆಳಿ ಬೆಳೆಯಿತು. ನಿಲುವು ನಿಂತಿತು. ಭೂಪೂಜೆ ಮಾಡಿದ ಒಕ್ಕಲಿಗ. ಅವನ ಹೊಲದ ಬೆಳೆಯು ಹಣ್ಣಾಯಿತು. ಆಗ,

ಕೆತ್ತೊದಕ ಬಂದಾರು ಸತ್ಯರು ಪಾಂಡವರು |
ಕೆತ್ತಿ ಸೂಡು ಕಟ್ಟಿ ಗೂಡ್ಹಾಕಿ | ಹೊಲವಾಗ |
ಕಣ ಮಾಡಿ ಮೇಟಿ ಹುಗಿದಾರೋ ||

ಸುಗ್ಗಿಯ ಕಾಲವೆಂದರೆ ಒಕ್ಕಲಿಗರಿಗೆ ಹರುಷದ ಹಬ್ಬ. ಆ ವರುಷ ಸಲ್ಲಿ ಹಲವಾರು ಹಾಡುಗಳು ಅವರ ಹೃದಯದಿಂದ ಹೊರಹೊಮ್ಮುವು. ಗೂಡನ್ನು ಮುರಿದು, ಕಣದಲ್ಲಿ ಹಂತಿಯನ್ನು ಕಟ್ಟಿದಾಗ :

" ಮೇಟಿಯ ಎತ್ತೋ ಕ್ವಾಟೆಯ ತೆನಿಯೋ |
ಕಡೆಸುತ್ತಿನೆತ್ತೋ ಕಟ್ಟಾಣಿ ಗುಂಡೋ " |
" ಯಾಕಯ್ಯ ಬಸವಯ್ಯ ಮೆಲ್ಲಕ ನಡಯ್ಯೋ |
ಕಾಡಿಗಿ ಜೋಳ ಕಂಗೆಟ್ಟ ತಿಂದ್ಯೋ " |

ಎಂದು ಹುಲುಗು ಹಾಕುವರು. ತೆನೆರಾಶಿ, ಅಕ್ಕಣಿರಾಶಿ, ಸಿಕ್ಕಣಿ ರಾಶಿ—ಎಂದು ಮೂರು ಮೂರು ಸಲ ರಾಶಿಯನ್ನು ತೆಗೆಯುವರು ಎತ್ತುಗಳ ಅಳತೆಯನ್ನು ಅವರ ಬಾಯಿಂದಲೇ ಕೇಳಬೇಕು:

ಅಕ್ಕಣಿ ಅರ್ ಖಂಡಗ | ಸಿಕ್ಕಣಿ ಮೂರ್ ಖಂಡಗ
ಲೆಕ್ಕ ಇಲ್ಲದ ತೆನಿರಾಸ್ಯೊ | ಒಯ್ವಾಗ |
ಬಂಡಿಯ ಕೀಲಾ ಕಳಚಾವೋ || ನಕ್ಕುನಲಿದಾರೊ ರೈತರೊ! ||

ಇಂಥ ಪ್ರಚಂಡ ಜೋಳದ ರಾಶಿಯನ್ನು ಒಕ್ಕುವುದಕ್ಕೆ ಎಂತೆಂತಹ ಜನರು ಸೇರಿದ್ದರು ನೋಡುವ :

ತೂರುದಕ ಬಂದಾರು ಕ್ವಾರಿಮೀಶಿಯವರು |
ಸರಳು ಹೊಡಿಯುವ ಸರದಾರ | ಇದ್ದರ |
ತುಂಬಿ ಕೊಡುವನ | ಕುಬೇರ |

ಇವರೆಲ್ಲ ಇದ್ದ ಮೇಲೆ, ಆ ಮಣ್ಣಿನ ಗಟ್ಟಿನೆಲವೇ 'ಗಚ್ಚಿನ ಕಣ, ಕಬ್ಬಿನ ಮೇಟಿ' ಎನಿಸಿ 'ಮೊಳದುದ್ದ' ರಾಶಿಯಾಗುವುದರಲ್ಲಿ ಸಂಶಯವಿಲ್ಲ. ಅಂತಹ "ರಾಶಿಯ ಅಳೆದಳೆದು ಬೇಸತ್ತು ನಿಂತಾರೋ! ಆಶೆ ಸಾಕೆನ್ನು ಬಿಡಿರಿಂದೆ | ಜನನಂತೆ ಸೋಸಿ ಭಕ್ತಿಲೇ ನಡಿರೆಂದ ||" ಎಂದು ಒಕ್ಕಲಿಗರ ಮನಸ್ಸು ಸಂಯಮದ ಕಡೆಗೆ ತಿರುಗುವುದು. ತ್ಯಾಗದ ಕಡೆಗೆ ಒಲಿಯುವುದು. ಪಡೆದದ್ದನ್ನು ದೇವರಿಗೆ ನೀಡಿ, ಯೋಗಿಸಲು ಮನಸ್ಸು ಮಾಡುವನು.

ಸಣ್ಣ ಶಾವಿಗೆ ಮಾಡಿ, ಎಣ್ಣೆ ಹೋಳಿಗೆ ಮಾಡಿ |
ಬಣ್ಣದ ದುರುಡಿ ಸವಿಮಾಡಿ | ಬೆಳಗಾಗ |
ಬಸವಣ್ಣಗ ಬಾನ ತರುವರೋ ||



ಭೂಮಿತಾಯಿಯ ಜೊಚ್ಚಲುಮಕ್ಕಳೆಂದರೆ ಒಕ್ಕಲಿಗರು. ಅವರಿಗೆ ಮಣ್ಣಿನ ಮಕ್ಕಳೆಂದರೂ, ಸಲ್ಲುವುದು. ಅವರು ನಿತ್ಯ ನಿಸರ್ಗದ ಉಡಿಯಲ್ಲಿ ಬೆಳೆದವರು, ಬಾಳಿದವರು. ಆದರಿಂದ ಅವರಿಗೆ ಪ್ರಕೃತಿಯ ಮೇಲಿನ ಪ್ರೇಮ ಸ್ವಾಭಾವಿಕವಾದುದು. ಅವರ ನಿರೀಕ್ಷಣಶಕ್ತಿ ಹುಟ್ಟಿನಿಂದ ಬೆಳೆದು ಬಂದುದು:

ಗಿಡದೊಳಗ ಗಿಡ ಚೆಲುವ ಮಾವಿನ ಗಿಡ ಚೆಲುವ |
ಹಕ್ಕಿಪಕ್ಕಾ ಯಿಗ ಗಿಣಿ ಚೆಲುವ | ನನ ಗೆಳೆಯ
ಚಿಕ್ಕಾ ಯಿಗ ಚೆಲುವ ಚಂದ್ರಾಮ ||

ಇಲ್ಲಿ ಗಿಡ ಮರ, ಹಕ್ಕಿ ಪಕ್ಕಿ, ಆಕಾಶಗಳ ನಿರೀಕ್ಷಣೆಯನ್ನು ಗುರುತಿಸ ಬಹುದು. ಇಲ್ಲಿ ಇನ್ನೊಂದು ಪದ್ಯವನ್ನು ಅವತರಿಸಿ, ಅದರ ಸಂಸ್ಕೃತಿಯ ಸ್ವರೂಪವನ್ನು ಅವಲೋಕಿಸಬಹುದು :

ಬಾಳಿಯ ಬನದಾಗ ಬಾಯಿ ಮಾಡವನ್ಯಾರ |
ಬಾಲಿ ನಿನ ಮಗನು ಗಿಡೆರಾಮ | ಕೂಗಿದರ |
ಹಣ್ಣಾದ ಕಾಯಿ ಉದುರ್ಯಾವ ||

ಇಲ್ಲಿ ಗಿಳಿಗೂ ತಮ್ಮ ಮಗನಿಗೂ ಹೊಲಿಸಿಕೊಂಡ ಒಕ್ಕಲಿಗರ ಆತ್ಮೀಯತೆಯನ್ನು ಲಕ್ಷ್ಯಿಸತಕ್ಕುದು. ಅದರೊಡನೆ ಅವರ ಮಗನ ದನಿಯಲ್ಲಿಯ ಶಕ್ತಿ ಇಷ್ಟು : ಅವನು ಕೂಗಿದರೆ ಹಣ್ಣಾದ ಕಾಯಿಗಳು ಕೂಡ ಉದುರಬಲ್ಲುವು |

ಹೀಗೆ ಹೊಲಗೆಲಸದ ಹಾಡುಗಳಲ್ಲಿ ಉದ್ಯೋಗಪ್ರಿಯತೆ, ದೈವಭಕ್ತಿ, ನಾಡಪ್ರೇಮ, ವಿಶ್ವಬಂಧುತ್ವ, ಸಂಯಮ ಪ್ರಕೃತಿ–ಯೊಲುಮೆ, ತ್ಯಾಗಶೀಲತೆಗಳೆಲ್ಲ ಒಡಮೂಡಿದುದನ್ನು ನಾವು ಕಾಣುತ್ತೇವೆ. ಈ ಸಂಪ್ರದಾಯಗೀತಗಳು ಜನರ ಹೃದ್‌ಗೀತಗಳು ಆದರಿಂದ ಅವುಗಳಲ್ಲಿ ಮೂಡಿದುದು ನಾಡಿನ ಸಂಸ್ಕೃತಿ. ಭಾರತೀಯ ಸಂಸ್ಕೃತಿಯ ಹೃದಯ.

ಹೀಗಿದೆ, ಸಂಪ್ರದಾಯಗೀತಗಳ ಸಾಂಸ್ಕೃತಿಕಸ್ವರೂಪ.

ತೆರೆಯ ಮರೆಯಲ್ಲಿ!

(ಸಣ್ಣಕತೆ)

ಕು. ಚಂದ್ರಿಕಾ ಅನಂತರಾವ ಕೊಪ್ಪರ, ಹಳಿಯಾಳ

ದಯೆ-ದಾಕ್ಷಿಣ್ಯಗಳಿಗೆ ಎಡೆಯಿಲ್ಲದಲ್ಲಿ, ದಾರಿದ್ರ್ಯ-ಅಜ್ಞಾನಗಳಿಗೆ ಒಳಗಾದ ಜನರು ಎಂತೆಂತಹ ಶೋಷಣೆಗೆ ಗುರಿಯಾದಾರೆಂಬುದರ ನಿಯಮವಿಲ್ಲ. ಆರ್ಥಿಕಸಮತೆ ಇಂತಹ ಶೋಷಣೆಗಳನ್ನು ನಿಲ್ಲಿಸಲಾರದು. ಹೃದಯ-ಮನಸ್ಸುಗಳ ಸುಸಂಸ್ಕಾರವೇ ಅದನ್ನು ನಿಲ್ಲಿಸಬಲ್ಲದೆಂಬುದು ಭಾರತೀಯಪರಂಪರೆಯ ಅನುಭವವಾಗಿದೆ.

"ರಾಮು,"

"ಏನಮ್ಮ?"

"ಯಮುನೆಯ ಮನೆಗೆ ಹೋಗಿ ಹೇಳು. **ಮನೆಯಲ್ಲಿ.....**"

"ಅಯ್ಯೋ, ಮುಂಜಾನೆಯಿಂದ ಉಲಿದಲೆದು **ಸಾಕಾಯಿತಮ್ಮ.** ಎಲ್ಲರ ಮನೆಯಲ್ಲೂ ಒಂದೇ ಪಾಡು. ಪಾಪ ಅವರದಾದರೂ ಏನು ತಪ್ಪು?"

"ಅದು ನಿಜ ರಾಮು. ಆದರೆ ನಾನಾದರೂ ಏನು ಮಾಡಲಿ? ನಿನ್ನೆ ರಾತ್ರಿಯಿಂದ ನಿಮ್ಮಿಬ್ಬರಿಗೂ ಉಪವಾಸ. ನೀಲಾ ಮುಂಜಾನೆಯಿಂದ ಎದ್ದೇ ಇಲ್ಲ. ನಿನಗೇನು ಹಸಿವಿಲ್ಲವೇ? ನನೆಯ ಸ್ಥಿತಿಯನ್ನು ನೋಡಿ ಸುಮ್ಮಗಿದ್ದಿ. ಆದರೆ ನಾನು ಹೇಗೆ ನೋಡಲಪ್ಪ? ಹೋಗಲಿ, ಆ ಮೂಲೆಯಲ್ಲಿ ಪೆಟ್ಟಿಗೆಯಿದೆಯಲ್ಲ, ಸ್ವಲ್ಪ ಇಲ್ಲಿ ತಂದಿಡು!"

ರಾಮುವಿಗೆ ಅಲ್ಲಿಂದೇಳಲು ಕೂಡ ಆಯಾಸವೆನಿಸುತ್ತಿತ್ತು. ಕಷ್ಟದಿಂದ ಎದ್ದ; ತಲೆ ಸುತ್ತಿದಂತಾಯಿತು. ಪೆಟ್ಟಿಗೆಯನ್ನು ತಾಯಿಯ ಬಳಿ ಸರಿಸಿ ಅಲ್ಲಿಯೇ ಕುಳ್ಳಿರಿಸಿದ.

ಸೀತಾ ಪೆಟ್ಟಿಗೆಯನ್ನು ತೆರೆದು, ಅದರಲ್ಲಿದ್ದ ಚಿಂಡಿಗಳ ಗಂಟನ್ನೆಲ್ಲ ಬಿಚ್ಚಿ ನೋಡಿದಳು. ಒಂದು ಗಂಟಿನಲ್ಲಿ ಎಂದೋ ಜೋಪಾನವಾಗಿ ಇಟ್ಟಿದ್ದ—ಆದರೆ ಕಣ್ಣಿಗೆ ಬೀಳದ—ಎರಡಾಣೆಯಿತ್ತು. ಇನ್ನೊಂದು ಗಂಟಿನಲ್ಲಿ ಸನೆದುಹೋದ ಎರಡುಬಿಲ್ಲೆಯಿತ್ತು. ಕೊನೆಗೆ ಏನೂ ದೊರೆಯದಂತಾಗಲು, ಜೇಸರದಿಂದ ಬಾಗಿಲನ್ನು ಮುಚ್ಚುವಷ್ಟರಲ್ಲಿ, ಮೂಲೆಯಲ್ಲಿದ್ದ ಕೆಂಪುಬಟ್ಟೆಯು ಕಂಡು ಕುತೂಹಲ ಕೆರಳಿತು. ಬಿಚ್ಚಿ ನೋಡಿದಾಗ ಒಮ್ಮೆಲೆ ಅವಳ ಬಾಯಿಂದ ಅಸ್ಫುಟ ಹರ್ಷನಾದವೊಂದು ಹೊರಟಿತು. ಕ್ಷಣಕಾಲ ತಾನೆಲ್ಲಿರುವೆನೆಂದೇ ತಿಳಿಯಲಿಲ್ಲ. ಹಸಿದ ಮಕ್ಕಳು, ಮುರುಕು ಗುಡಿಸಲು, ನಿತ್ರಾಣ ಶರೀರ. ಎಲ್ಲವನ್ನೂ ಮರೆತು ಅವಳ ಮನಸ್ಸು, ಕೈಯಲ್ಲಿದ್ದ ವಸ್ತುವಿನ ಹಿಂದೆ ಅಲೆಯುತ್ತಿತ್ತು. ಅಲ್ಲಿ ನೋಡಿದತ್ತೆಲ್ಲ ಸುಖವಿತ್ತು; ಸಂತೋಷವಿತ್ತು. ಹರಕು ಬಟ್ಟೆಗಳ ಬದಲು ಬಗೆಬಗೆಯ ಬಣ್ಣದ ಬಟ್ಟೆಗಳಿದ್ದುವು. ಹಸಿವೆಯ ಬದಲು ತೃಪ್ತಿಯ ನಗುವಿತ್ತು.. ....

"ಅಮ್ಮಾ!"

ಸೀತಾ ಬೆಚ್ಚಿ ಬಿದ್ದು ಮಲಗಿದ್ದ ನೀಲಳ **ಹೊದಿಕೆಯನ್ನು** ಸರಿಸಿ ನೋಡಿದಳು. ಮಾತನಾಡಲು **ಕೂಡ ಸಾಧ್ಯವಿಲ್ಲದ** ಮಗಳ ಮುಖದಲ್ಲಿಯ ಕ್ಷೀಣನಗುವನ್ನು ಕಂಡು ಅವಳಿಗೆ ಬಲು ಸಂತೋಷವಾಯಿತು.

"**ಈಗ ರಾಮು ಪೇಟೆಗೆ ಹೋಗುತ್ತಾನೆ ನೀಲಾ! ನಿಮ್ಮಿಬ್ಬರಿಗೆ ಬೇಕಾದಷ್ಟು ತಿಂಡಿ ತರುತ್ತಾನೆ.**"

ರಾಮು ತಾನು ದೊಡ್ಡವನೆಂಬ ಅಭಿಮಾನದಿಂದ, ತನ್ನ ಹಸಿವನ್ನು ಮರೆತು ಹೇಳಿದಃ "ಇನ್ನೆರಡು ದಿನಗಳಲ್ಲಿ ಅಪ್ಪ ಬರುತ್ತಾನೆ ನೀಲಾ! ನಿನಗೆ ಒಡೆಯುದ ಗೊಂಬೆ, ಕಡಿಮೆಯಾಗದ ತಿಂಡಿ ಹರಿಯದ ಲಂಗ—ಎಲ್ಲವನ್ನೂ ತರುತ್ತಾನೆ. ನಾನೀಗಲೇ ಹೋಗಿ ಬೇಕಾದ ತಿಂಡಿ ತರುತ್ತೇನೆ. ಅಳಬೇಡ ತಿಳಿಯಿತೇ?"

ರಾಮುವಿಗೆ ತಾನು ಇಷ್ಟು ಜೆನ್ನಾಗಿ ಹೇಗೆ ಮಾತಾಡಿದೆನೆಂದೆ ತಿಳಿಯಲಿಲ್ಲ. ನೀಲಳಿಗಿಂತ ದೊಡ್ಡವನಾದ ಕಾರಣ, ತನ್ನ ಹಸಿವನ್ನು ಅವಳಿಗಿಂತ ಹೆಚ್ಚೆಂದು ಇಷ್ಟು ದಿನ ತಿಳಿದಿದ್ದ; ಆದರೆ ಇಂದ ತಮ್ಮಿಬ್ಬರಿಗಿಂತ ಎಷ್ಟೋ ದೊಡ್ಡವಳಾದ ತಾಯಿ ಸಮಾಧಾನ ಹೇಳಿದುದನ್ನು ಕಂಡು ತಾನೂ ಹೇಳಿಬಿಟ್ಟ.

ಆದರೆ ನೀಲಾ ಮಾತ್ರ ಈ ಆಶ್ವಾಸನೆಗಳಿಂದ ಕೊಂಚವೂ ಆನಂದಗೊಳ್ಳಲಿಲ್ಲ. ತನ್ನ ಪುಟ್ಟ ತಲೆಯನ್ನಲ್ಲಾಡಿಸುತ್ತ ಮೆಲ್ಲಗೆ ಹೇಳಿದಳು "ಆದರೆ ನಿನ್ನೆ ಮಧ್ಯಾಹ್ನದಿಂದ ನೀನು ಏನನ್ನೂ ತಿಂದಿಲ್ಲ ಅಮ್ಮಾ ನನಗೀಗ ಹಸಿವಿಲ್ಲ, ಮೊದಲು ನಿನ್ನ ಊಟವಾಗಲಿ; ರಾತ್ರಿ ರಾಮು ನಾನು ಉಣ್ಣುತ್ತೇವೆ."

ನೀಲಾ ಪುನಃ ಮುಸುಕುಹಾಕಿಕೊಂಡು ಮಲಗಿದ್ದನ್ನು ಕಂಡ ಸೀತಾ ಮುಖ ತಿರುಗಿಸಿದಳು. ಕಣ್ಣೀರಿಳಿದರೂ, ಒರಸಿದರೆ ಅನಂತಾನುಭವ ಕಡಿಮೆಯಾಗಬಹುದೆಂದು ಸುಮ್ಮನೆ ಕುಳಿತುಬಿಟ್ಟಳು. ನೀಲಳ ಒಂದು ಮಾತಿನಿಂದಾದ ಆನಂದ, ತನ್ನೆದುರು ಹಕ್ಕಾನ್ನಗಳ ತಟ್ಟೆಯನ್ನಿಟ್ಟಿದ್ದರೂ ಆಗುತ್ತಿರಲಿಲ್ಲವೆಂದು ಅವಳಿಗೆನಿಸಿತು. ಆ ಕ್ಷಣಕ್ಕೆ ತ

ನಾರಿದ್ರ್ಯವೆಂದರೆ ಶಾಪದ ಬದಲು ವರ–ಎಂದುಕೊಂಡಳು. ಮೂವರ ಹಸಿವನ್ನೂ ಮರೆತು, ಮನಸ್ಸು ಯಾವುದೊ ಸುಖಸ್ವಪ್ನವನ್ನು ಕಾಣ-ತೊಡಗಿತು.....

ಆದರೆ ಎದುರಿಗೆ ನೋಡಿದಾಗ ಸೀತಾ ಬೆಚ್ಚಿಬಿದ್ದಳು. ನೀಲಳಿಗೆ ಸೈರ್ಯ ಹೇಳಿದ ರಾಮು ಒಂದು ಮೂಲೆಯಲ್ಲಿ ಮಲಗಿದ್ದ. ಹನ್ನೆ-ರಡು ವರ್ಷದ ಹುಡುಗನ ಆ ಸಹನೆಯನ್ನು ಕಂಡು ಸೀತಾ, ತನ್ನ ಕೈಯಲ್ಲಿದ್ದ ನೋಟನ್ನು ನೋಡಿಯೇ ನೋಡಿದಳು. ಮುಂದೇನು ಮಾಡಬೇಕೆಂಬುದು ತಿಳಿಯದಾಯಿತು. ಊರಲ್ಲಿಯ ತಮ್ಮ ಮನೆ-ಯನ್ನು ಮಾರಿ ಬಂದ ಹಣವನ್ನು ಮೂವರು ಅಣ್ಣತಮ್ಮಂದಿರು ಪಂಚಿಕೊಂಡಾಗ, ರಂಗಣ್ಣ ತನ್ನ ಪಾಲಿನ ಹಣವನ್ನು ತಂದು ಪೆಟ್ಟಿಗೆಯಲ್ಲಿಟ್ಟಿದ್ದ. ಅದು ಎಷ್ಟರ ನೋಟೆಂದು ಅವಳಿಗೆ ತಿಳಿದಿರಲಿಲ್ಲ. ತಿಳಿದುಕೊಳ್ಳುವ ಗೋಜಿಗೂ ಹೋಗಿರಲಿಲ್ಲ. ಯಾಕೆಂದರೆ ಮನೆಯ ಋಣವನ್ನು ಉಪಯೋಗಿಸಬಾರದೆಂದು ಅವರು ನಿಶ್ಚಯಿಸಿದ್ದರು.

ಆದರೆ ಎರಡು ದಿನಗಳ ಹಿಂದೆ ಸಾಹುಕಾರರು ಕೂಲಿಗಳನ್ನೆಲ್ಲ ಕರೆದುಕೊಂಡು ಊರಿಗೆ ಹೋಗಿದ್ದರು. ಅಲ್ಲಿ ಐದು ದಿನ ನಿಲ್ಲಬೇಕಾದು. ದರಿಂದ ರಂಗಣ್ಣ ಯೋಚಿಸುತ್ತಿದ್ದ. ಅವರೆ ಯಜಮಾನರ ಒತ್ತಾಯ-ದಿಂದ ಹೋಗಲೇಬೇಕಾಯಿತು.

ಸೀತಾ ಕಾಹಿಲೆಯಿದ್ದುದರಿಂದ ಧೈರ್ಯಗೆಟ್ಟಳು. ಎರಡು ದಿನ ಹೇಗೋ ಕಳೆದುವು. ಆದರೆ ಮೂರನೆಯ ದಿನ ಕಳೆಯುವಂತಿರಲಿಲ್ಲ. ಉಪವಾಸದಿಂದ ಬಳಲುವ ಮಕ್ಕಳಿಗಿಂತ ಮನೆಯ ಹಣ ಹೆಚ್ಚಿನದಲ್ಲ ವೆನಿಸಿತು.

ಆದರೆ ನೋಟನ್ನು ರಾಮುವಿನ ಕೈಗೆ ಕೊಡಬೇಕೆನ್ನುವಾಗಲೇ ಹಠಾತ್ತಾಗಿ ವಿಚಾರವೊಂದು ಬಾಧಿಸಿತು. ಯಾಕೆಂದರೆ ಅದು ಎಷ್ಟರ ನೋಟೆಂಬುದೇ ಅವಳಿಗೆ ತಿಳಿದಿರಲಿಲ್ಲ! ಎಷ್ಟೋ ವರ್ಷಗಳ ಹಿಂದೆ ಹತ್ತರ ನೋಟನ್ನು ನೋಡಿದ ನೆನಪು ಅವಳಿಗಿತ್ತು. ಆದರೆ ಇದು ಅದಕ್ಕಿಂತ ಕೊಂಚ ದೊಡ್ಡದಿವ್ದಂತೆನಿಸಿತು. ಕ್ಷಣಕಾಲ–ಅಂಜಿಕೆಯಿಂದ ಅದನ್ನು ಪೆಟ್ಟಿಗೆಯ ಒಳಗಿಡಬೇಕೆಂದಳು. ಅದರೆ ಮರುಕ್ಷಣವೇ ನಿರ್ಧಾರದಿಂದ ಅದನ್ನು ರಾಮುವಿನ ಬೈಗಟ್ಟು ಹೇಳಿದಳು: "ನೋದಲು ಎಲ್ಲಿಯಾದರೂ ಇದರ ಚಿಲ್ಲರೆ ಮಾಡಿಸಿಕೊಂಡು, ಅಂಗಡಿಗೆ ಹೋಗಿ ಎರಡು ದಿನದ ಧಾನ್ಯ ತೆಗೆದುಕೊಂಡು ಬಾ!"

"ಅದರೆ ಇದು ಎಷ್ಟರ ನೋಟಮ್ಮಾ?"

ಸೀತೆಗೆ ಕ್ಷಣಕಾಲ ಏನೆನ್ನಬೇಕೆಂಬುದು ತಿಳಿಯಲಿಲ್ಲ. ಪುನಃ ನೋಟನ್ನು ನೋಡುತ್ತ ಹೇಳಿದಳು: "ಸರಿಯಾಗಿ ಗೊತ್ತಿಲ್ಲ ರಾಮು! ಆದರೆ ಇದರ ಬೆಲೆ ಹತ್ತು ರೂಪಾಯಿಗಳಿಗಿಂತ ಖಂಡಿತ ಹೆಚ್ಚಿಗಿರ-ಬಹುದು. ಮೊದಲು ಇದನ್ನು ಯಾರಾದರೂ ದೊಡ್ಡ ಮನುಷ್ಯರಿಗೆ ತೋರಿಸಿ ಚಿಲ್ಲರೆ ಮಾಡಿಸು!"

ಕೈಯಲ್ಲಿದ್ದ ನೋಟನ್ನು ನೋಡುತ್ತಿದ್ದಂತೆ ರಾಮುವಿನ ಬಳಲಿಕೆ ಕ್ರಮೇಣ ಕಡಿಮೆಯಾದಂತೆನಿಸಿತು. ಮೈಯಲ್ಲಿ ನವಚೇತನ ಸಂಚಾರ ವಾದಂತಾಯಿತು. ಉತ್ಸಾಹದಿಂದ ನೋಟನ್ನು ಭದ್ರವಾಗಿಟ್ಟುಕೊಂಡು ಚೀಲವೊಂದನ್ನು ಹಿಡಿದು ಹೇಳಿದ: "ಈಗಲೇ ಬಂದುಬಿಡುತ್ತೇನಮ್ಮಾ. ನೀಲಳಿಗೆ ತಿಂಡಿ ತರುತ್ತೇನೆಂದು ಹೇಳು!"

ಮುಸುಕು ಕೊಂಚ ಅಲುಗಾಡಿದಂತೆನಿಸಿತು. ರಾಮು ನಗುತ್ತ ಹೊರಟುಬಿಟ್ಟ. ಸೀತಾ ಕ್ಷಣಕಾಲ ನೋಡುತ್ತಿದ್ದು, ನಿಟ್ಟುಸಿರಿಟು ಬಾಗಿಲೆಳೆದು ಮಲಗಿಕೊಂಡಳು.

× × ×

ಸ್ಟೇಶನ್ನಿನ ಜನಸಂದಣಿಯಲ್ಲಿ ರಾಮು ಅತ್ತಿತ್ತ ನೋಡುತ ಹೋಗುತ್ತಿದ್ದ. ಒಮ್ಮೆಲೆ ಯಾರೋ ಅವನನ್ನು ನಿಲ್ಲಿಸಿದಂತಾಯಿತು. ಹಿಂದಿರುಗಿ ನೋಡಿದ.

ರಾಜುವನ್ನು ಕಂಡು ಕ್ಷಣಕಾಲ ಆನಂದವಾದರೂ, ತಾಯಿ ಹೇಳಿದ ಮಾತು ನೆನಪಾಗಿ ಸುಮ್ಮನಾದ. ನೋಟನ್ನು ತೋರಿಸಿ ಅವನ ಸಲಹೆ ಪಡೆಯಬೇಕೆನಿಸಿದರೂ, ಅವನ ಬಗ್ಗೆ ತನ್ನ ಅಭಿಪ್ರಾಯ ಚೆನ್ನಾಗಿರಲಿಲ್ಲವಾದುದರಿಂದ ಸುಮ್ಮನಾದ. ಆದರೆ ರಾಜುವಿನ ಸಂಪೂರ್ಣ ಕೀರ್ತಿ ರಾಮುವಿನ ಕಿವಿಗೆ ಬಿದ್ದಿರಲಿಲ್ಲ. ತಿಳಿದುಕೊಳ್ಳುವ ವಯಸ್ಸೂ ಅವನಿಗಿರಲಿಲ್ಲ ಇಲ್ಲವಾದರೆ ರಾಜುವಿನಂತಹ ಕ್ರೂರ, ನಿರ್ದಯ ಕಳ್ಳ-ನನ್ನು ಮಾತನಾಡಿಸಲು ಜನ ಹಿಂಜುತ್ತಿರುವಾಗ, ರಾಮು ಅವನಿಗೆ ಕೊಂಚವೂ ಅಂಜದೆ ಅವನು ತನ್ನ ಗೆಳೆಯನೆಂದು ಭಾವಿಸಿದ್ದ.

ಜನಜಂಗುಳಿ ಕಡಿಮೆಯಿದ್ದ ಸ್ಥಳಕ್ಕೊಯ್ದು ರಾಜು ಕೇಳಿದ: "ಈಗ ಹೇಳು ರಾಮು, ಇಂತಹ ಮಧ್ಯಾಹ್ನದಲ್ಲಿ ಸ್ಟೇಶನ್ನಿಗೇಕೆ ಬಂದೆ?"

ರಾಮು ಸುಳ್ಳು ಹೇಳಬೇಕೆಂದು ಎಷ್ಟೋ ಯೋಚಿಸಿದ; ಆದರೆ ಒಂದೂ ಅವನ ಕಲ್ಪನೆಗೆ ನಿಲುಕಲಿಲ್ಲ. ತನ್ನ ಮುಂದಬುದ್ಧಿಗೆ ತನ್ನನ್ನೇ ಹಳಿದುಕೊಳ್ಳುತ್ತ ಎಲ್ಲವನ್ನೂ ಹೇಳಿಬಿಟ್ಟ.

ರಾಜು ಒಮ್ಮೆಲೆ ಆನಂದದಿಂದ ಹೇಳಿದ: "ಇಲ್ಲಿ ಕೊಡು ರಾಮು ನಾನು ಚಿಲ್ಲರೆ ಕೊಡುತ್ತೇನೆ!"

ರಾಮು ಅನುಮಾನಿಸುತ್ತ ನೋಟನ್ನು ಹೊರದೆಗೆದು ಅವನ ಕೈಯಲ್ಲಿಟ್ಟ. ರಾಜುವಿನ ಕಣ್ಣರಳಿದುವು. ನಗುತ್ತ ಅದನ್ನು ಜೇಬಿನಲ್ಲಿ ಸೇರಿಸಿ, ಒಳಜೇಬನ್ನು ಹುಡುಕಿ ನಿಶ್ಚಿಂತೆಯಿಂದ ಹೇಳಿದ: "ಏನು ಮಾಡಲಿ ರಾಮು, ಇಂದು ಮುಂಜಾನೆಯಿಂದ ಇಲ್ಲಿ ನಿಂತಿದ್ದೇನೆ. ಒಂದು ಕೂಲಿಯೂ ಸಿಗಲಿಲ್ಲ. ಒಂದು ಆಣೆ ಕೂಡ ಚಿಲ್ಲರೆಯಿಲ್ಲವಲ್ಲ!"

ರಾಮುವಿನ ಕಣ್ಣುಗಳು ಕಂಬನಿದುಂಬಿದುವು. ಮಲಗಿದ ನೀಲಾ, ನರಳುವ ತಾಯಿ, ಚಿಂತೆಯಿಂದ ಊರಿಗೆ ಹೋದ ತಂದೆ ನೆನಪಾದರು. ಏನು ಮಾಡಬೇಕೆಂಬುದು ತಿಳಿಯದಾಯಿತು.

ರಾಜು ಹೊರಟುಹೋಗುವುದನ್ನು ಕಂಡು ರಾಮು, ತನ್ನ ಇದ್ದು ಬಿದ್ದ ಶಕ್ತಿಯೆಲ್ಲವನ್ನುಪಯೋಗಿಸಿ ಅವನ ಹಿಂದೆ ಓಡಿಹೋಗಿ, ಅತ್ಯಂತ ಕಾತರಸ್ವರವಲ್ಲಿ ಹೇಳಿದ: "ಹಾಗೆ ಹೋಗಬೇಡ ರಾಜಣ್ಣ. ತನಿಷ್ಕ ಎಂಟಾಣೆಯನ್ನಾದರೂ ಕೊಡು. ನೀಲಾ ನಿನ್ನೆಯಿಂದ ಮಲಗಿದ್ದಾಳೆ. ಅಸ್ಸ....."

ಅಗುಬಗೆಯಿಂದ ಹೋಗುತ್ತಿದ್ದ ರಾಜು ಗಕ್ಕನೆ ನಿಂತು ಕೇಳಿದ: "ಅಂದರೆ! ರಂಗಣ್ಣ ಎಲ್ಲಿದ್ದಾನೆ?"

"ಅಪ್ಪ ಊರಿಗೆ ಹೋಗಿ ಎರಡು ದಿನವಾಯಿತು; ಇನ್ನೂ ಮೂರು ದಿನ ಬರುವುದಿಲ್ಲವಂತೆ. ಅಮ್ಮನಿಗೆ ತಾಯಿಲೆ, ಅದಕ್ಕಾಗಿ

ಈ ನೋಟು ಕೊಟ್ಟು ಸಾಮಾನು ತರಹೇಳಿದ್ದಾಳೆ.'' ಮುಂದೆ ಮಾತನಾಡಲಾಗದೆ ರಾಮು ಮೆಲ್ಲನೆ ಬಿಕ್ಕಳಿಸಿದ.

ರಾಜು ಕಲ್ಲಿನಂತೆ ನಿಂತು, ದೂರದಲ್ಲಿ ಭಿಕ್ಷುಕಯೊಬ್ಬಳು ತನಗೆ ದೊರೆತ ಅನ್ನದಲ್ಲಿ ಸ್ವಲ್ಪವನ್ನು ಒಬ್ಬ ಮುದುಕಿಗೆ ಕೊಡುವುದನ್ನು ನೋಡುತ್ತಿದ್ದ. ರಾಮು ಕಣ್ಣೊರಸಿಕೊಂಡು ಅವನನ್ನು ನೋಡಿದ. ರಾಜುವಿನ ಆ ಸ್ಥಿತಿಯನ್ನು ಅವನೆಂದೂ ಕಂಡಿರಲಿಲ್ಲ. ನಿತ್ಯ ಅವನ ನಿರ್ಲಕ್ಷ್ಯತನ, ಒರಟುಮಾತುಗಳ ಅಭ್ಯಾಸವಿದ್ದ ಅವನಿಗೆ, ಇಂದು ರಾಜು ಬೇರೆಯಾಗಿಯೇ ಕಂಡ. ತಂದೆ ಅವನ ಜತೆಗೆ ಮಾತಾಡಬಾರದೆಂದು ಅನೇಕ ಸಲ ಕಟ್ಟಪ್ಪಣೆ ವಿಧಿಸಿದ್ದರೂ ರಾಮುವಿಗೆ ಅದೇಕೊ ಅವನನ್ನು ಕಂಡರೆ ಅತ್ಮೀಯತೆಯೆನಿಸುತ್ತಿತ್ತು. ರಾಜು ಕೂಡ ರಾಮುವಿನೊಡನೆ ಮಾತನಾಡುವಾಗ, ತನ್ನ ಸ್ವಭಾವಸಿದ್ಧ ಒರಟುತನವನ್ನು ಕ್ಷಣಕಾಲ ಬದಿಗಿರಿಸುತ್ತಿದ್ದ.

''ಹೀಗೇಕೆ ನಿಂತಿರುವಿ ರಾಮು? ನಿನ್ನ ಮುಖ ನೋಡಿದರೆ, ಮುಂಜಾನೆಯಿಂದ ಉಪವಾಸವಿದ್ದಂತೆ ಕಾಣುತ್ತದೆ. ಮೊದಲು ಹೋಟಲಿಗೆ ಹೋಗೋಣ ಬಾ, ಅಮೇಲೆ.....''

''ಅಯ್ಯೋ, ಬೇತವಪ್ಪಾ! ಮನೆಯಲ್ಲಿ ನೀಲಾ, ಅಮ್ಮ ಹಸಿದಿರುವಾಗ ನನಗೇನವಪರ?''

ರಾಜು ಕ್ಷಣಕಾಲ ಅವನ ಬಾಡಿದ ಮುಖದ ಮೇಲಿನ ಶಾಂತ ಭಾವವನ್ನು ಕಂಡು ನಸುನಕ್ಕ. ಬಳಿಕ ನಿಧಾನವಾಗಿ ರಾಮು ಕೊಟ್ಟ ನೋಟನ್ನು ತನ್ನ ಕೈವಸ್ತ್ರದಲ್ಲಿ ಸುತ್ತಿ ಅವನ ಕೈಯಲ್ಲಿಟ್ಟ. ತನ್ನ ಜೇಬುಗಳನ್ನೆಲ್ಲ ಹುಡುಕಿ, ಇಪ್ಪತ್ತು ಚಿಲ್ಲರೆಯನ್ನು ರಾಮುವಿನ ಜೇಬಿನಲ್ಲಿ ಹಾಕಿ ಜೊಡು.

ರಾಮು ಹೌಹಾರಿ ಅವನನ್ನು ತಡೆದು ಕೇಳಿದ: ''ಇದೇನು ರಾಜಣ್ಣ, ನನ್ನ ನೋಟಿನ ಜತೆಗೆ ನಿನ್ನ ಹಣವನ್ನೇಕೆ ಹಾಕಿದೆ? ಇನ್ನು ಮಧ್ಯಾಹ್ನ ಊಟವೆಲ್ಲಿ ಮಾಡುವೆ?''

''ರಾಮು, ಅದು ತುಂಬಾ ಬೆಲೆಯುಳ್ಳ ನೋಟು. ಅದನ್ನು ಅಮ್ಮನ ಕೈಗೆ ಕೊಟ್ಟು ಭದ್ರವಾಗಿಡಲು ಹೇಳು. ಚಿಲ್ಲರೆಯಿಂದ ಬಂದಷ್ಟು ತಿಂಡಿ ಕೊಂಡುಕೊಂಡು ಮನೆಗೆ ಹೋಗು. ಇನ್ನು ಬೇಗನೆ ಹೋಗಪ್ಪ, ಹೊತ್ತಾಯಿತು. ಹಾಗಾಪರೆ ನಾನು ಹೋಗಲೆ?''

''ಆದರೆ ಈಗ ನೀನೇನು ಮಾಡುತ್ತಿ ರಾಜಣ್ಣಾ?''

''ಎಂಥ ಹುಚ್ಚನೋ ನೀನು! ನಾನೇನು ಕಲ್ಲೆಂದು ತಿಳಿದಿದ್ದೀಯಾ? ನೀನು ಒಂದು ದಿನ ಉಪವಾಸವಿರಬಲ್ಲೆಯಾದರೆ ನಾನು ಮೂರು ದಿನ ಇರಬಲ್ಲೆ. ಇನ್ನು ಹೊರಡು, ತಡಮಾಡಬೇಡ.''

ರಾಜು ಹೊರಟುಹೋದರೂ, ರಾಮು ಅಲ್ಲಿಯೆ ಕದಲದೆ ನಿಂತಿದ್ದ. ರಾಜುವಿನ ಕೊನೆಯ ಮಾತುಗಳು ಅವನನ್ನು ಎಚ್ಚರದಪ್ಪುವಂತೆ ಮಾಡಿದವು. ರಾಜುವಿನ ಸ್ವರ ಅಷ್ಟು ಮೃದುವಾದುದನ್ನು ಅವನೆಂದೂ ಕೇಳಿರಲಿಲ್ಲ. ಇಷ್ಟು ದಿನ ಅವನನ್ನು ಕೇವಲ ಪರರ ಧನ ಅಪಹರಿಸುವವನೆಂದು ತಿಳಿದಿದ್ದ. ಆದರೆ ಇಂದಿನ ಅವನ ವರ್ತನೆ, ಮಾತುಗಳು ಅವನನ್ನು ಮೂಕನನ್ನಾಗಿಸಿದುವು. ರುಕ್ಷ ಮರುಭೂಮಿಯಲ್ಲಿ ಬಾಯಾರಿಕೆಯಿಂದ ಕಂಗೆಟ್ಟು ಸಾಗುತ್ತಿರುವಾಗ, ಒಂದೆಡೆಗೆ ಸಿಹಿನೀರಿನ ಪ್ರವಾಹ ಗೋಚರಿಸುವಂತೆ, ಎಂತಹ ನಿರ್ದಯ ಮನುಷ್ಯನಲ್ಲಿಯೂ ದಯಾಭಾವ ಗುಪ್ತಗಾಮಿನಿಯಾಗಿರುತ್ತದೆಂದು ರಾಮುವಿನ ಬಾಲಬುದ್ಧಿಗೆ ಹೊಳೆಯಲಿಲ್ಲ.

ಜೇಬಿನಲ್ಲಿಯ ಚಿಲ್ಲರೆಯನ್ನೆಣಿಸಿದಾಗ ಆಣೆ,-ಬಿಲ್ಲಿಗಳು ಕೂಡಿ ಎಂಟೂಕಾಲಾಣೆಯಿತ್ತು. ಆದರೆ ಅದನ್ನು ಮುಟ್ಟಲು ರಾಮುವಿಗೆ ಮನಸ್ಸಾಗಲಿಲ್ಲ. ಇನ್ನೊಮ್ಮೆ ರಾಜು ಕಂಡಾಗ, ಉಪಾಯವಾಗಿ ಅವನ ಜೇಬಿನಲ್ಲಿಡಬೇಕೆಂದು ನಿಶ್ಚಯಿಸಿ ಮನೆಗೆ ಹೊರಟ.

ದಾರಿಯಲ್ಲಿ ಒಂದು ಕಾರು ನಿಂತುದನ್ನು ಕಂಡಾಗ, ರಾಮುವಿನ ಆಶಾವೃಕ್ಷ ಪುನಃ ಚಿಗುರಿತು. ಲಗುಬಗೆಯಿಂದ ಹೋಗಿ ನೋಡಿದ. ಕಾರಿನಲ್ಲಿ ಕುಳಿತವರು ದೊಡ್ಡ ಅಧಿಕಾರಿಗಳಂತೆ ಕಾಣುತ್ತಿದ್ದರು. ಹಿಂದಿನ ಸೀಟಿನಲ್ಲಿ ಜವಾನನಿದ್ದ. ಡ್ರೈವರ್ ಎಲ್ಲಿಗೋ ಹೋದದ್ದರಿಂದ, ಇಬ್ಬರೂ ಕಾಯುತ್ತ ಕುಳಿತಿದ್ದರು.

ರಾಮು ಕಾರಿನ ಬಳಿ ಹೋಗಿ ಬಟ್ಟೆಯಲ್ಲಿ ಸುತ್ತಿದ ನೋಟನ್ನು ತೆಗೆದು ಅವರ ಕೈಯಲ್ಲಿಟ್ಟು ಹೇಳಿದ: ''ದಯವಿಟ್ಟು ಇದಕ್ಕೆ ಚಿಲ್ಲರೆ ಕೊಡಿ ಸ್ವಾಮಿ.''

ಸಾಹೇಬರು ಹುಡುಗನನ್ನೂ ನೋಟನ್ನೂ ಕ್ಷಣಕಾಲ ಸಂಶಯದಿಂದ ನೋಡಿದರು. ಆದರೆ ಹುಡುಗನ ಮುಖಭಾವವನ್ನು ಕಂಡು ಇದರಲ್ಲೇನೂ ಕಪಟವಿಲ್ಲವೆಂದು ತಿಳಿದು ಕೇಳಿದರು: ''ಇದು ಎಷ್ಟರ ನೋಟೆಂದು ನಿನಗೆ ಗೊತ್ತಿದೆಯೇ ಮಗು?''

ರಾಮು ತಲೆಯಲ್ಲಾಡಿಸಿದ. ಅವರ ಮೃದುಮಾತನ್ನು ಕೇಳಿ ಅವನಿಗೆ ಬಹಳ ಆನಂದವಾಯಿತು. ಎಷ್ಟು ಒಳ್ಳೆಯವರು ಎಂದುಕೊಂಡ ಅಮ್ಮ ಹೇಳಿದ ದೊಡ್ಡ ಮನುಷ್ಯರು ಇವರೇ—ಎಂದು ಈಗ ಅವನಿಗೆ ಗೊತ್ತಾಯಿತು.

ಸಾಹೇಬರು ತಮ್ಮ ಬಳಿಯಲ್ಲಿದ್ದ ಚಿಲ್ಲರೆಯನ್ನು ಒಂದು ಸುಂದರವಾದ ಚೀಲದಲ್ಲಿ ಹಾಕಿ, ಅವನಿಗೆ ಕೊಡಬೇಕೆಂದು ಮುಂದೆ ಚಾಚಿದರು. ರಾಮು ಕೈನೀಡುತ್ತ ಸಹಜವಾಗಿ ಹೇಳಿದ: ''ಅಮ್ಮ ಹೇಳಿದ ಮಾತು ನಿಜವಾಯಿತು ಸ್ವಾಮಿ! ನೋಟಿನ ಬೆಲೆ ಹತ್ತು ರೂಪಾಯಿಗಿಂತ ಹೆಚ್ಚೆಂದು ಹೇಳಿದ್ದಳು ನೋಡಿ!''

ಸಾಹೇಬರು ಸರಕ್ಕನೆ ಚೀಲವನ್ನು ಹಿಂದೆಳೆದುಕೊಂಡರು. ರಾಮು ಗಾಬರಿಯಾದ. ತನ್ನ ಅವಿವೇಕತನವ ಮಾತುಗಳಿಂದ ಅವರಿಗೆ ನೋವಾಯಿತೇನೊ—ಎಂದು ಮರುಗಿದ. ಆದರೆ ಸಾಹೇಬರು ಪುನಃ ಜೇಬನ್ನು ಹುಡುಕಿ ಚಿಲ್ಲರೆಯನ್ನು ಚೀಲಕ್ಕೆ ಸೇರಿಸುವುದನ್ನು ಕಂಡು ಆಶ್ಚರ್ಯವೆನಿಸಿತು.

''ನಿಮ್ಮ ತಾಯಿ ಹೇಳಿದ ಮಾತು ನಿಜ ಮಗು. ಈ ಚೀಲವಲ್ಲಿ ಹದಿನೈದು ರೂಪಾಯಿಗಳಿವೆ. ಇದನ್ನು ಭದ್ರವಾಗಿಟ್ಟುಕೊಂಡು ಅಮ್ಮನಿಗೆ ಕೊಡು. ಇಗೋ, ಈ ಎಂಟಾಣೆಯ ತಿಂಡಿ ತೆಗೆದುಕೊ! ಅಬ್ಬಾ, ಎಂಥ ಬಿಸಿಲು! ಡ್ರೈವರ್ ಇದ್ದರೆ ನಿಮ್ಮ ಮನೆಗೆ ಬಿಟ್ಟು ಬರುತ್ತಿದ್ದೆ, ಏನು ಮಾಡಲಿ? ನಿಧಾನವಾಗಿ ಹೋಗಪ್ಪಾ!''

(ಕವರ್ ಪುಟದ ಮುಂದುವರಿದ ಭಾಗವನ್ನು ನೋಡಿರಿ)

ಸಾದರ ಸ್ವೀಕಾರ

೭೧ ಭಾರತದ ಸಂಕ್ಷಿಪ್ತ ಚರಿತ್ರೆ (ಭಾಷಾಂತರಿತ ಇತಿಹಾಸ ಗ್ರಂಥ). ಮೂಲ ಇಂಗ್ಲಿಷ್ ಲೇಖಕರು ಶ್ರೀ. ಡಬ್ಲ್ಯೂ. ಎಚ್. ನೋರ್‌ಲ್ಯಾಂಡ್ ಸಿ. ಎಸ್. ಐ., ಸಿ. ಐ. ಇ. ಮತ್ತು ಶ್ರೀಮಾನ್ ಅತುಲಚಂದ್ರ ಚಟರ್ಜಿ ಜಿ. ಸಿ. ಎಸ್. ಐ., ಕೆ. ಸಿ. ಎಸ್. ಐ. ಅವರು. ಭಾಷಾಂತರಕಾರರು ಶ್ರೀ. ಎಂ. ವಾಸುದೇವರಾವ್ ಎಂ. ಎ., ಎಲ್. ಟಿ. ಮುಖ್ಯೋಪಾಧ್ಯಾಯ ವಿದ್ಯಾದಾಯಿನೀ ಹೈಸ್ಕೂಲ್, ಸುರತಕಲ್ಲು (ದ. ಕ.) ಪರಿಶೋಧಕರು ಶ್ರೀಮಾನ್ ವಿ. ರಾಘವೇಂದ್ರ ರಾವ್ ಬಿ. ಎ., ಬಿ. ಟಿ. ಇತಿಹಾಸ ಪ್ರಾಧ್ಯಾಪಕರು, ಮಹಾರಾಜಾ ಕಾಲೇಜ್, ಮೈಸೂರು. ಪ್ರಕಾಶಕರು. ಮದ್ರಾಸ್ ವಿಶ್ವವಿದ್ಯಾನಿಲಯ, ಮದ್ರಾಸ್ ರೊಯಲ್ ೧ಡಿ ೪೨೦ ಪುಟಗಳು. ಬೆಲೆ ೧೫—೦—೦.

೭೨ ಅವ್ಯಕ್ತಮಾನವ (ಭಾಷಾಂತರಿತ ಮಾನವವಿಜ್ಞಾನ. ಗ್ರಂಥ). ಮೂಲ ಇಂಗ್ಲಿಷ್ ಲೇಖಕರು ಡಾ. ಅಲೆಕ್ಸಿಸ್ ಕೆರೆಲ್ ಅವರು. ಕನ್ನಡ ಭಾಷಾಂತರಕಾರರು ಶ್ರೀ. ಉ. ಲಕ್ಷ್ಮೀನಾರಾಯಣಾಚಾರ್ಯ ಬಿ. ಎಸ್ಸಿ. (ಆನರ್ಸ್), ಎಲ್. ಟಿ. ಮತ್ತು ಶ್ರೀ. ಕು. ಶಿ. ಹರಿದಾಸ ಭಟ್ಟ ಎಂ. ಎ., 'ವಿದ್ವಾನ್,' 'ವಿಶಾರದ,' ಪರಿಶೋಧಕರು ಡಾ. ಬಿ. ಎಚ್. ಪದ್ಮನಾಭ ಪೈ ಎಂ. ಡಿ. ಎಗ್ಮೋರ್–ಮದ್ರಾಸ್. ಪ್ರಕಾಶಕರು ಮದ್ರಾಸ್ ವಿಶ್ವವಿದ್ಯಾನಿಲಯ, ಮದ್ರಾಸ್. ರೊಯಲ್ ಆಕ್ಟೇವೊ ೨೫೬ ಪುಟಗಳು (ಸಚಿತ್ರ). ಬೆಲೆ ೬—೦—೦.

೭೩ ಸರಳ ಭೂವಿಜ್ಞಾನ (ಭಾಷಾಂತರಿತ ಗ್ರಂಥ) ಮೂಲ ಇಂಗ್ಲಿಷ್ ಲೇಖಕರು ಪ್ರೊ. ಎಸ್. ಜೆ. ಶ್ಯಾಂಡ್. ಭಾಷಾಂತರಕಾರರ, ಶ್ರೀ. ಎಂ. ವಾಸುದೇವರಾವ್ ಎಂ. ಎ., ಎಲ್. ಟಿ. ಮುಖ್ಯಾಧ್ಯಾಪಕರು ವಿದ್ಯಾದಾಯಿನಿ ಹೈಸ್ಕೂಲ್, ಸುರತಕಲ್ಲು (ದ. ಕ.) ಪರಿಶೋಧಕರು ಪ್ರೊ. ಎಲ್. ರಾಮರಾವ್ ಎಂ. ಎ., ಎಸ್. ಜಿ. ಎಸ್. ಇತ್ಯಾದಿ. ಭೂವಿಜ್ಞಾನ ಮುಖ್ಯೋಪಾಧ್ಯಾಯ, ಸೆಂಟ್ರಲ್ ಕಾಲೇಜ್, ಬೆಂಗಳೂರು ಪ್ರಕಾಶಕರು ಮದ್ರಾಸ್ ವಿಶ್ವವಿದ್ಯಾನಿಲಯ, ಮದ್ರಾಸ್ ರೊಯಲ್ ಅ. ೧೭೦ ಪುಟಗಳು (ಸಚಿತ್ರ). ಬೆಲೆ ೫—೦—೦

೭೪ ರಾಮಚಂದ್ರ (ಕಿರುಕಾದಂಬರಿ) ಬರೆದವರು ಶ್ರೀಮಾನ್ ಗಮಾನಂದ ಅಮೀನ್. ಪ್ರಕಾಶಕರು ಚಂದ್ರಸಾಗರ ಪ್ರಕಾಶನ, ಗವರ್ನ್‌ಮೆಂಟ್ ನ್ಯೂ ಬಿಲ್ಡಿಂಗ್ ೧. ಬ್ಲಾಕ್ ೫. ವರ್ಲಿ, ಮುಂಬಯಿ ೧೮. ಕ್ರೌ. ಅ. ೬೦ ಪುಟಗಳು. ಬೆಲೆ ೦—೪—೦

೭೫ ಸ್ವಪ್ನನೌಕೆ (ಕವನಸಂಕಲನ). ಲೇಖಕರು ಶ್ರೀ. ಉಮಾಮಾಕರ ದೇವರಗೆಣ್ಣೂರ. ಪ್ರಕಾಶಕರು ಪುರೋಹಿತ ಪಬ್ಲಿಶಿಂಗ್ ಹೌಸ್, ಸೊಲ್ಲಾಪುರ. ಕ್ರೌ. ಅ. ೭೨ ಪುಟಗಳು. ಬೆಲೆ ೦—೧೫—೦.

೭೬ ಕನ್ನಡ ಪ್ರಬೋಧ (ಮರಾಠೀ ಭಾಷೆಯಲ್ಲಿ ಬರೆದ ಕನ್ನಡಶಿಕ್ಷಕ) ಲೇಖಕರು ಶಂ. ವಿ. ಜೋಶಿ ಬಿ. ಎ., ಎಲ್‌ಎಲ್. ಬಿ. ಧಾರವಾಡ. ಪ್ರಕಾಶಕರು ದಿ ಸ್ಟೂಡಂಟ್ಸ್ ಓನ್ ಬುಕ್ ಡಿಪೊ, ಧಾರವಾಡ. ಕ್ರೌ. ಅ. ೧೬ + ೨೨೦ ಪುಟಗಳು. ಬೆಲೆ ೩—೨—೦.

೭೭ ಮಹರ್ಷಿ ಅಣ್ಣಾಸಾಹೇಬ ಪಟವರ್ಧನ ಅವರ ಔಷಧ ಪದ್ಧತಿ ಮತ್ತು ಔಷಧಗಳು (ವೈದ್ಯಕ ಗ್ರಂಥ): ಮೂಲ ಮರಾಠಿ ಗ್ರಂಥವನ್ನು ವೈದ್ಯ ನ. ಭಿ. ಸಿದ್ಧಾಂತಿ, ಧಾರವಾಡ ಅವರು ಕನ್ನಡಿಸಿದ್ದಾರೆ. ಪ್ರಕಾಶಕರು ಪ್ರೊ. ವಿ. ಎಂ. ದೀಕ್ಷಿತ ಪಟವರ್ಧನು ಪ್ರಿಮ್‌ರೋಜ್‌ವಿಲಾ, ಧಾರವಾಡ. ಕ್ರೌ. ಅ. ೨೪ + ೨೫೬ ಪುಟಗಳು. ಬೆಲೆ ೩—೪—೦.

೭೮ ವಾರುಣೀದರ್ಶನ (ಮರಾಠಿ ಕವನಸಂಕಲನ), ಲೇಖಕರು ಶ್ರೀ ದಾಮೋದರ ಗೋಪಾಳ ಸಂಗೋರಾಮ. ಪ್ರಕಾಶಕರು ಶ್ರೀ. ಡಿ. ಜಿ. ಸಂಗೋರಾಮು ಬಿ. ಎ. ೧೯೫/೨೨ ಟಿಳಕ ರೋಡ್, ಪುಣೆ, ಕ್ರೌ. ಅ. ೧೪೮ ಪುಟಗಳು. ಬೆಲೆ ೦—೬—೦

೭೯ ನೀಲಾಂಜನ (ಕವನಸಂಕಲನ). ಲೇಖಕರು ಶ್ರೀ. ಜಿನದತ್ತ ದೇಸಾಯಿ. ಪ್ರಕಾಶಕರು ಶ್ರೀ. ಬಾಪಟ ಲಕ್ಷ್ಮಣ ರಾಯರು, ನಂದನ ಪ್ರಕಾಶನ, ಧಾರವಾಡ. ಕ್ರೌ. ಅ. ೬೪ ಪುಟಗಳು. ಬೆಲೆ ?

೮೦ ಆನಂದ ಲಹರಿ (ಲಲಿತ ಲೇಖನ ಸಂಕಲನ) ಬರೆದವರು ಸುಪ್ರಸಿದ್ಧ ಸಣ್ಣ ಕತೆಗಾರ 'ಆನಂದ' ಅವರು. ಪ್ರಕಾಶಕರು ಶಾರದಾ ಪ್ರಕಟನಾಲಯ, ಅರಳೇಪೇಟೆ, ಬೆಂಗಳೂರು ೨. ಕ್ರೌ. ಅ. ೧೩೨ ಪುಟಗಳು. ಬೆಲೆ ೦—೧೨—೦.

೮೧ ಸೀತಾ-ರತ್ನ (ಹನ್ನೊಂದು ಕಥೆಗಳ ಸಂಗ್ರಹ). ಲೇಖಕರು ಶ್ರೀ. ಎಂ. ರಮಾನಂದ ಘಾಟೆಯವರು. ಪ್ರಕಾಶಕರು ಮೇಲಿನ ಶಾರದಾ ಪ್ರಕಟನಾಲಯದವರು. ಕ್ರೌ. ಅ. ೧೨೬ ಪುಟಗಳು. ಬೆಲೆ ೦—೧೨—೦.

(೪೬ನೆಯ ಪುಟದಿಂದ ಬಂದುದು)

ರಾಮು ಕೃತಜ್ಞತೆಯಿಂದ ಕಣ್ಣೀರನ್ನೊರಸಿಕೊಂಡು ಅವರಿಗೆ ನಮಸ್ಕರಿಸಿ ಹೊರಟ. ಮನೆಯಿಂದ ಹೊರಟಾಗ ಅನುಭವಿಸಿದ ತಾಪತ್ರಯಗಳೆಲ್ಲ ಬಿಸಿಲಿಗೆ ಕರಗುವ ಮಂಜಿನ ಕಣದಂತೆ ಕ್ಷಣದಲ್ಲಿ ಕಣ್ಮರೆಯಾದುವು. ಆಗ ಪಸಿವೆಯಿಂದ ನಡೆಯಲಾಗುತ್ತಿದ್ದಿಲ್ಲ; ಈಗ ಮನಸ್ಸು, ಮರಿಗಳನ್ನು ಜ್ಞಾಪಿಸಿಕೊಂಡು ಗೂಡಿಗೆ ಹಾರುವ ಹಕ್ಕಿಯಂತೆ ಪ್ರಾರುತ್ತಿತ್ತು. ಆಗ ಬಿಸಿಲಿನಿಂದ ಕಾಲೂರಲಾಗುತ್ತಿದ್ದಿಲ್ಲ; ಆದರೆ ಈಗ ಜುಳುಜುಳು ಹರಿಯುವ ಚಿಕ್ಕ ಪ್ರವಾಹದಲ್ಲಿ ನಡೆದು-ಹೋಗುತ್ತಿದ್ದಂತೆ ಭಾಸವಾಯಿತು. ಹದಿನೈದು ರೂಪಾಯಿ! ನೋಲೆ ಎಂಟಾಣೆ! ಅಬ್ಬ, ಎಂಥ ವ್ಯಾಪಾರಿಗಳು!! ಒಂದು ಹಸುರು ನೋಟಿನ ಬದಲು ಇಷ್ಟು ಹಣ ಕೊಡುವುದೆಂದರೆ ಸಾಮಾನ್ಯನೇ? ಛೇ!

ಸಾಮಾನುಗಳ ಜತೆಗೆ ಎಂಟಾಣೆಯ ಹಣ್ಣು, ಎಂಟಾಣೆಯ ತಿಂಡಿ ತೆಗೆದುಕೊಂಡು" ಈ ಶುಭಸಮಾಚಾರವನ್ನು ಯಾವಾಗ ಹೇಳುವೆನೋ ಎಂದು ರಾಮು ಲಗುಬಗೆಯಿಂದ ಮನೆಗೆ ಹೊರ..!



ಶ್ರೀ 'ಆನಂದಕಂದ' (ಬೆಟಗೇರಿ ಕೃಷ್ಣಶರ್ಮ) ಇಂಥ ಒಳ್ಳೆಯ ರೂಪಕಗಳನ್ನು ಪುಸ್ತಕರೂಪದಲ್ಲಿ ತಂದ ಕನ್ನಡಿಗರಿಗೆ ಉಪಕಾರಮಾಡಿದ್ದಾರೆ. ಅವರ ಆಕರ್ಷಕ ಸಂಭಾಷಣೆಗೆ, ತಿಳಿಯಾದ ನಗೆಯ ಬುಗ್ಗೆಗೆ, ಮನಮೆಚ್ಚುವ ಪಾತ್ರನಿರೂಪಣೆಗೆ, ಪ್ರತಿಯೊಬ್ಬರೂ ಓದಲೇಬೇಕಾದ ಕೃತಿ 'ಬೆಂಡ-ಹೃದಯ'.

—ಪುಸ್ತಕಪ್ರಪಂಚ (ಸಪ್ಟೆಂಬರ್ ೧೯೫೪)

ಕ್ರೌ. ಅ. ೧೩೦ ಪುಟಗಳು ಬೆಲೆ ೧-೪-೦

ಶರತ್ ಪ್ರಕಾಶನಮಂದಿರ, ವಿಜಯರೋಡ್, ಧಾರವಾಡ.

Printed by N. A. Hoskeri at the Vijaya Press, Dharwar. and published for the Proprietors Jayanti publications, by S. D. Dharmatti at the Jayanti-Office, Dharwar



ಕರ್ಮ-ಯೋಗಗಳ ಸಮನ್ವಯವೇ
ಮಾನವತೆಯ ಪೂರ್ಣತೆ!

ಭೋಗವಿಚಾರವು ಬೇಕು ನೃಪತಿಗಾ-
ಯೋಗವಿಚಾರವು ಬೇಕು...
ರಾಗರಸಿಕನಾಗಬೇಕು — ಭಾವಿಸೆ ವೀತ
ರಾಗರಸಿಕನಾಬೇಕು!

— ಕವಿ ರತ್ನಾಕರಸಿದ್ಧ

* * *

ಎಲ್ಲಿ ಯೋಗೀಶ್ವರ ಶ್ರೀಕೃಷ್ಣನಿರುವನೊ
ಬಿಲ್ಲಾಳು ಪಾರ್ಥನೆಲ್ಲಿಹನೊ
ಅಲ್ಲೆಲ್ಲ ಐಶ್ವರ್ಯ-ವಿಜಯ-ಕುಶಲಗಳು
ಉಲ್ಲಸದಾಟವಾಡುವುವು!

ಯೋಗೀಶ್ವರ ವ್ಯಾಸ

ಭದ್ರಂ! ಶುಭಂ!! ಮಂಗಲಂ!!

ಬೆಲೆ:
ಆಣೆಗಳು

CONTD IN
NEXT ROLL

CONTD IN
NEXT ROLL

END

END

END